

894.814 308 3
RAD N91

# ಬಾನಲ್ಲಿ ಬಂಗಾರ

(ಸಾಮಾಜಿಕ ಕಾದಂಬರಿ)

ಹೆಚ್. ಜಿ. ರಾಧಾದೇವಿ

DEPARTMENT OF PUBLIC LIBRARIES
STATE CENTRAL LIBRARY, BANGALORE
COPY RIGHT
BUREAU
No.

ಕೀರ್ತಿ ಪ್ರಕಾಶನ
2, ಎಸ್.ಡಿ.ಎಂ. ಲೇನ್,
ಮನವಾರ್ತೆಪೇಟೆ, ಬೆಂಗಳೂರು-53

META ENTERED

'BANALLI BANGARA' A Novel by Smt H. G. Radhadevi and Published by Keerthi Prakashana, 2, S. D. M. Lane, Manaverthipet, Bangalore -53 at Price Rs 24—00.

47690CR

| | | |
|---|---|---|
| First Edition | : | 1991 |
| Title of the Novel | : | BANALLI BANGARA |
| Authoress | : | H. G. Radhadevi |
| Rights | : | H. G. Radhadevi |
| Price | : | Rs. 24—00 |

| | | |
|---|---|---|
| ಪ್ರಥಮ ಮುದ್ರಣ | : | 1991 |
| ಕೃತಿಯ ಹೆಸರು | : | ಬಾನಲ್ಲಿ ಬಂಗಾರ |
| ಕೃತಿಕಾರ್ತಿ | : | ಹೆಚ್. ಜಿ. ರಾಧಾದೇವಿ |
| ಹಕ್ಕುಗಳು | : | ಲೇಖಕಿಯದು |
| ಬೆಲೆ | : | ರೂ. 24-00 |

894.814 308 3
RAD N91
ನಾಮ್ಯಾಕರ ಕಾದಂಬರಿ

ಮುದ್ರಕರು :

ಸಾಧನಾ ಮುದ್ರಣಾಲಯ,

2/2, 1ನೇ ಕ್ರಾಸ್, ತೋಟದ ದೇವರ ಗಲ್ಲಿ,
ಅರಳೇಪೇಟೆ, ಬೆಂಗಳೂರು-560 053.

47690 CR

# ಅರ್ಪಣೆ

ಮೂಡಲ ಗಿರಿಯ ಒಡೆಯನು...... ಜೋಡು ಕುಂಡಲ ಧಾರಿಯೂ ಬೇಡಿದ ಭಕ್ತರ ಪಾಲಿಗೆ ಕಾಮಧೇನು, ಕಲ್ಪವೃಕ್ಷವಾಗಿರುವವನು ಆದ ತಿರುಮಲೆ ನಾಡಿನ ರತ್ನದೀಪವಾದ ಶ್ರೀ ಲಕ್ಷ್ಮಿ ವೆಂಕಟೇಶ್ವರ ಗೋವಿಂದಾ..... ಈ ಕೃತಿ ನಿನಗರ್ಪಿಸುವೆ.

ಸೌ|| ರಾಧಾದೇವಿ ಸುದರ್ಶನ್.

DEPARTMENT OF PUBLIC LIBRARIES
COPY RIGHT BUREAU
No.
STATE CENTRAL LIBRARY, BANGALORE.

# ಮುನ್ನುಡಿ

"ಬಾನಲ್ಲಿ ಬಂಗಾರ" — ಹಂಸರಾಗ — ಮಾಸ ಪತ್ರಿಕೆಯಲ್ಲಿ ಹದಿನೈದು ಕಂತುಗಳಾಗಿ ಮೂಡಿ ಬಂದ ಕೃತಿ. ಧಾರಾವಾಹಿ ಬರುತ್ತಿದ್ದಾಗಲೇ ಜನರು ಈ ಕೃತಿಗೆ ಮೆಚ್ಚುಗೆ ವ್ಯಕ್ತ ಪಡಿಸಿದ್ದರು. ವಿರಸ ದಾಂಪತ್ಯಗಳಲ್ಲಿ ಮೂಡಿ ಬಂದ ಕಹಿಯನ್ನು ಸ್ವಲ್ಪ ತಾಳ್ಮೆ, ಪ್ರೀತಿ, ಪ್ರೇಮದಿಂದ ಸಿಹಿಯಾಗಿ ಪರಿವರ್ತಿಸಿ ಸರಸ ಸುಂದರ ಬದುಕನ್ನು ಸವಿಯುವುದು ಹೇಗೆಂದು ಈ ಕಾದಂಬರಿಯಲ್ಲಿ ಚಿತ್ರಿಸಿದ್ದೇನೆ ಈ ಕೃತಿ ನನ್ನ ಓದುಗರಿಗೆ ಪ್ರಿಯವಾಗುವುದೆಂದು ನಂಬಿದ್ದೇನೆ. ಈ ಕಾದಂಬರಿಯನ್ನು ಪುಸ್ತಕ ರೂಪದಲ್ಲಿ ತರುತ್ತಿರುವ ಶ್ರೀ ಕೆ ಶ್ರೀನಿವಾಸನ್ ಅವರಿಗೆ ಗೌರವಪೂರ್ಣ ವಂದನೆಗಳು. ಅಂದವಾಗಿ ಮುದ್ರಿಸಿದ ಸಾಧನಾ ಪ್ರೆಸ್ ಅವರಿಗೆ ನನ್ನ ಹೃತ್ಪೂರ್ವಕ ವಂದನೆಗಳು.

ಇಂತಿ|| ಆತ್ಮೀಯತೆಯೊಂದಿಗೆ ನಮಿಸುವ

ನಿಮ್ಮ ಪ್ರಿಯ ಲೇಖಕಿ

**ಹೆಚ್. ಜಿ. ರಾಧಾದೇವಿ.**

## ನಮ್ಮಲ್ಲಿ ದೊರೆಯುವ ಶ್ರೀಮತಿ
## ಹೆಚ್. ಜಿ. ರಾಧಾದೇವಿಯವರ ಕಾದಂಬರಿಗಳು

| | | |
|---|---|---|
| ಸ್ವಾತಿ ಹನಿ ಸಿಡಿದಾಗ | ರೂ. | 20.00 |
| ಹೃದಯ ಹಾಡಿದ ರಾಗ | ರೂ. | 20-00 |
| ಗೆಲುವಿನ ಹಾದಿ | ರೂ. | 18-00 |
| ಮಧು ತುಂಬಿದ ಪಾಲ್ಲಿಗೆ | ರೂ | 25-00 |
| ಹೊಂಗಿರಣ ಹರಡಿತು | ರೂ. | 18-00 |
| ಬಂಗಾರದ ಮೆಟ್ಟಿಲು | ರೂ. | 22-00 |
| ಜೇನು ಬೆರೆತ ಹಾಲು | ರೂ. | 20-00 |
| ಒಲಿದು ಬಂದ ಅಪ್ಸರೆ | ರೂ. | 25-00 |
| ಒಲವಿನ ಸುಧೆ | ರೂ. | 22-00 |
| ಬಾಸಲ್ಲಿ ಬಂಗಾರ | ರೂ. | 24-00 |

### ಮುಂಬರುವ ಕಾದಂಬರಿಗಳು

ಚೆಲ್ಲಿದ ಪನ್ನೀರು

ಸೌಭಾಗ್ಯ ಸಂಪದ

ವಿವರಗಳಿಗೆ :—

**ಕೀರ್ತಿ ಪ್ರಕಾಶನ**

2, ಎಸ್. ಡಿ. ಎಂ. ಲೇನ್,

ಮನವಾರ್ತಿಪೇಟೆ,. ಬೆಂಗಳೂರು-53.

ವಿಜಯಳ ಊಟದ ಕಾರ್ಯಕ್ರಮ ಕೊನೆಯ ಹಂತಕ್ಕೆ ಬಂದಿತ್ತು. ಮೊಸರನ್ನ, ಹಾಗು ತಾಯಿ ಎರಡು ತಿಂಗಳ ಹಿಂದೆ ಕಳಿಸಿದ್ದ ನಲ್ಲಿಕಾಯಿ ಉಪ್ಪಿನಕಾಯಿ ಸವಿಯುತ್ತ "ಸುಧಾ" ಪತ್ರಿಕೆಯ ಪುಟಗಳನ್ನ ತಿರುವಿ ಹಾಕುತ್ತಿದ್ದವಳಿಗೆ......

"Post" ಎಂಬ ಶಬ್ಧ ಹಾಗು ಟಪ್ ಎಂದು ಬಿದ್ದ ಲಕೋಟೆಯ ಸದ್ದು ಕೇಳಿತು. ಉಳಿದ್ದ ಒಂದೆರಡು ತುತ್ತು ಲಗುಬಗೆಯಿಂದ ತಿಂದು, ಕೈ ತೊಳೆದು, ವಿಜಯ ಹೊರಗೋಡಿ ಬಂದಳು.

ತುಸು ಭಾರವಾದ ದೊಡ್ಡ ಲಕೋಟೆ ನೋಡಿ ಅಚ್ಚರಿ ಆಯಿತು.

ಅಕ್ಕ ಕುಮುದಾ ಬರೆದ ಪತ್ರವಾದರೆ ಇನ್‌ಲೆಂಡ್ ಲೆಟರ್, ತಾಯಿ ಆಗಾಗ ಬರೆದರೆ ಕಾರ್ಡು......ಇಷ್ಟು ದೊಡ್ಡ ಲಕೋಟೆ ...ಯಾರದಿರಬಹುದು? ಯೋಚಿಸುತ್ತಾ ನೋಡಿದರೆ ವಿಳಾಸದ ಮೇಲಿದ್ದ ಕೈ ಬರಹ ಅಕ್ಕನದು.

ಕವರ್ ಒಡೆದಳು. ಎರಡು ಫುಲ್‌ಸ್ಕೇಪ್ ಪುಟಗಳ ದೀರ್ಘಬರಹ, ಏನು ಅಕ್ಕಾ ಇಷ್ಟೊಂದು ಬರೆದಿದ್ದಾಳೆ? ಎಂದು ಕುತೂಹಲದಿಂದ ಓದ ತೊಡಗಿದಳು.

"ಪ್ರೀತಿಯ ತಂಗಿ ವಿಜಯಳಿಗೆ...... ನಿನ್ನ ಕುಮುದಕ್ಕ ಮಾಡುವ ಆಶೀರ್ವಾದಗಳು. ಇಲ್ಲಿ ನಾವೆಲ್ಲರು ಕ್ಷೇಮ, ಅಲ್ಲಿ ನೀನು, ನಿನ್ನ ಪತಿ ಹಾಗು ಅತ್ತೆಯ ಮನೆಯರು ಕ್ಷೇಮಾ ಎಂದು ನಂಬಿರುತ್ತೇನೆ.

"ವಿಜಿ......ಈ ಕಾಗದದಲ್ಲಿ ನಿನಗೆ ಒಂದು ಅನಿರೀಕ್ಷಿತ ಆಶ್ಚರ್ಯದ ಸುದ್ದಿ ತಿಳಿಸುತ್ತಾ ಇದ್ದೇನೆ. ಏನೆಂದು ಊಹಿಸಬಲ್ಲೇಯಾ? ಅಮ್ಮಾ ಒಂದು ಸಿನಿಮಾದಲ್ಲಿ ನಟಿಸುತ್ತಾ ಇದ್ದಾಳೆ. ಈ ಸುದ್ದಿ ಓದಿ ನಿನ್ನ ತಲೆ ಧಿಂ ಎಂದು ತಿರುಗಿರಬಹುದಲ್ಲವೆ? ಇದು ಖಂಡಿತಾ ನಿಜ ಈ ಐವತ್ತೈದನೆಯ ವಯಸ್ಸಿನಲ್ಲಿ ಅಮ್ಮನಿಗೆ ಸಿನಿಮಾ ತಾರೆ ಅನ್ನಿಸಿಕೊಳ್ಳುವ ಚಪಲ ಹೇಗೆ ಹುಟ್ಟಿತೊ? ಏಕೆ ಹುಟ್ಟಿತೋ? ನಿಜಕ್ಕೂ ದೇವರಿಗೆ ಗೊತ್ತು? ಅಣ್ಣನಂತೂ ಸಿಕ್ಕಾಪಟ್ಟೆ

ಓಡಿದಾಡಿದವನಂತೆ, ಅಪ್ಪ ಕಾಶೀಯಾತ್ರೆಗೆ ಎಂದು ಗಂಟು ಕಟ್ಟಿದ್ದಾರಂತೆ, ಇನ್ನು ಮುಂದಿನ ಜೀವನ ಅಲ್ಲೇ ಕಳೆಯುವರಂತೆ.

“ಅಮ್ಮ... ಅಣ್ಣನ ಮೇಲಿನ ಕೋಪಕ್ಕೆ ಬೆಂಗಳೂರಿನಲ್ಲಿ ಒಂದು ಸಣ್ಣ ಮನೆಯನ್ನು ಮಾಡಿದ್ದಾಳಂತೆ. ನಮ್ಮತ್ತೆಯವರಂತೂ......‘ಈ ವಯಸ್ಸಿನಲ್ಲಿ ನಿಮ್ಮ ತಾಯಿಗೆ ಏನು ಬಂತು ಕೇಡು....?’ ಎಂದರು.

“ಮೊನ್ನೆ ನನ್ನ ಮಗಳು ಮುಖಕ್ಕೆ ಸಿಕ್ಕಾಪಟ್ಟೆ ಪೌಡರ್ ಬಳಿದುಕೊಳ್ತಾ ಇದ್ದಳು. ನಮ್ಮತ್ತೆ ನಾಲ್ಕು ವರ್ಷದ ಆ ಮಗುವಿಗೆ—“ನೀನು ನಿಮ್ಮಜ್ಜಿ ಹಾಗೆ ಸಿನಿಮಾ ತಾರೆ ಆಗ್ತಿಯೇನೆ ? ಅದೇನು ಸುಣ್ಣಾ ಬಣ್ಣಾ ಅಲಂಕಾರ.....” ಎಂದು ಬೈದರು. ಅಮ್ಮನ ವರ್ತನೆಯಿಂದ ನಮ್ಮ ತವರು ಮನೆಯ ಮರ್ಯಾದೆಯೇ ಹರಾಜಾಗ್ತಿದೆ ಅನ್ನಿಸತ್ತೆ. ನಿಮ್ಮ ಭಾವ ಅಂತು ತುಂಬಾ ಬೇಸರ ಪಟ್ಟರು.

“ನನಗೂ ಒಂದು ತರಹಾ ಮನಸ್ಸಿಗೆ ಕಿರಿಕಿರಿ ಎನಿಸಿದೆ. ನೀನಂತು ಹೊಸದಾಗಿ ಮದುವೆ ಆದವಳು, ಇನ್ನು ನಿಮ್ಮತ್ತೆ ಮನೆಯಲ್ಲಿ ಏನೇನು ಪ್ರಶ್ನೆ ಏಳುತ್ತೋ ? ಅನಂತ ಅಂತೂ ತುಂಬ ನೊಂದುಕೊಂಡು ಪತ್ರ ಬರೆದಿದ್ದಾನೆ. ನಮ್ಮತ್ತೆಯ ಮನೆಯಲ್ಲಿ ನನಗೆ ತಲೆ ತಗ್ಗಿಸೊ ಹಾಗಾಯಿತು. ಅಮ್ಮನಿಗೆ ಈ ವಯಸ್ಸಿನಲ್ಲಿ ಈ ದುರ್ಬುದ್ಧಿ ಹೇಗೆ ಬಂತೋ ಕಾಣೆ.

ಪ್ರತಿದಿನ ಪದ್ಮಮ್ಮನ ಮನೆಗೆ ಹೊರಟುಬಿಡ್ತೀನಿ ಅಂತ ಹೊರಟು ಬಿಡ್ತೋಳಂತೆ. ಅಣ್ಣನಿಗೆ ಇದೆಲ್ಲದರ ಸುಳಿವೇ ಗೊತ್ತಿಲ್ಲ. ವಸಂತಾ ಅಣ್ಣನ ಹತ್ತಿರ ಜಗಳ ಆಡ್ತೋಳಂತೆ.

“ಪ್ರತಿದಿನ ಹನ್ನೆರಡಕ್ಕೆ ನಿಮ್ಮ ತಾಯಿ ಅಲಂಕರಿಸಿಕೊಂಡು ಹೊರಟರೆ ರಾತ್ರಿ ಹತ್ತು ಗಂಟೆ ಹೊತ್ತಿಗೆ ಬರ್ತಾರೆ. ಮನೆ ಕೆಲಸ ಎಲ್ಲಾ ನನ್ನ ಮೇಲೆ ಬೀಳ್ತದೆ. ನನಗೆ ಸಾಕಾಗಿಹೋಗಿದೆ” ಎಂದು ಗಲಾಟೆ ಮಾಡ್ತೋಳಂತೆ.

“ಅನಂತ ಒಂದೆರಡು ಸಾರಿ ಅಮ್ಮನ್ನ ಕೇಳಿದನಂತೆ, ‘ಪ್ರತಿದಿನ ಪದ್ಮಮ್ಮನ ಮನೆಗೆ ಹೋಗೋ ಕೆಲಸಾ ಏನಿರುತ್ತಮ್ಮ..... ನಿಂಗೆ ? ರಾಜಾಜಿ ನಗರ ಎಲ್ಲಿ ? ಜಯನಗರ ಎಲ್ಲಿ.....? ಏತಕ್ಕೆ ದಿನಾ ಹೋಗ್ತಿ ?’ ಅಂತ ಅಂದ [illegible]

“ಅಮ್ಮ ಗದರಿಸಿದ್ಳಂತೆ [illegible] ‘ಏನ್ಲೋ ನಿನ್ನ ಹೆಂಡತೀನ್ನ ನಾನು

ಅಂಕೆಯಲ್ಲಿ ಇಡಲ್ಲ ಅಂತ ಅವಳೇ ನನ್ನ ಅಂಕೆಯಲ್ಲಿ ಇಡ್ತಾಳೇನು ? ನಾನೇನು ನಿನ್ನ ಅಷ್ಟು ತಿಂತಾ ಇಲ್ಲ. ನಿಮ್ಮಪ್ಪನ ಪೆನ್ಷನ್ ಎಂಟು ನೂರು ರೂ..... ನಮ್ಮಪ್ಪನ ನಾಲ್ಕು ಎಕ್ಕರೆ ಗದ್ದೆಯ ಬತ್ತ ಬರ್ತಿದೆ ಅಂದಳಂತೆ."

ಅಣ್ಣಾ ಅಲ್ಲಿಗೆ ಸುಮ್ಮನಾಗಿಬಿಟ್ಟನಂತೆ. ಚಿತ್ರದ ಜಾಹೀರಾತು ಪತ್ರಿಕೆಗಳಲ್ಲಿ ಪ್ರಕಟವಾದಾಗಲೆ ಅಣ್ಣನಿಗೆ ಶಾಕ್! ಸ್ಥೂಲಕಾಯದ ಅಷ್ಟೇನು ರೂಪವತಿಯಲ್ಲದ ಅಮ್ಮನ ಚಿತ್ರ ವಿಚಿತ್ರ ಫೋಟೋ ತೋಳಿಲ್ಲದ....ಇಳಿಕತ್ತಿನ ಕುಪ್ಪಸಾ ಧರಿಸಿ.....ಎತ್ತಿ ಕಟ್ಟಿದ ಮುಡಿ.....ಹಾಗು ಕಿವಿಯಲ್ಲಿ ತೂಗುಯಾಲೆಗಳು.....

ಅಣ್ಣಾ ಕೋಪದಿಂದ-"ಏನಮ್ಮಾ ಇದು !" ಎಂದಿನಂತೆ. "ಹೌದು ಕಣೋ....ನಾನು ಸಿನಿಮಾದಲ್ಲಿ ಮಾಡ್ತಿದ್ದೀನಿ, ಜೀವಮಾನ ಪೂರ್ತಿ ಈ ಸಂಸಾರದ ಬಂಧನದಲ್ಲಿದ್ದು ಸಾಕಾಗಿದೆ. ನನಗೆ ಅವಕಾಶ ಸಿಕ್ಕಿದೆ ಅಭಿನಯಿಸ್ತೀನಿ ಅಂದಳಂತೆ. ಅಪ್ಪಾ ಅಂತು ಸಿಕ್ಕಾಪಟ್ಟೆ ಹಾರಾಡಿದರಂತೆ. ಜೀವಮಾನ ಪೂರ್ತಿ ಅಪ್ಪನಿಗೆ ವಿಧೇಯಳಾಗಿದ್ದ ಅಮ್ಮ.....ಹದಿನೆಂಟು ಮೊಳದ ಕಚ್ಚೇ ಸೀರೆ ಹದಿನೆಂಟನೆಯ ವರ್ಷದಿಂದ ಉಡಲಾರಂಭಿಸಿದ ಅಮ್ಮ.. ವ್ರತ, ನೇಮ ಏಕಾದಶಿ ಮಾಡುತ್ತಾ ಜೀವಮಾನ ಪೂರ್ತಿ ಕಳೆದ ಅಮ್ಮ ಅಪ್ಪನಿಗೆ ಕಾಣದಂತೆ ಒಂದು ಸಿನಿಮಾದಲ್ಲಿ ನಟಿಸಿರುವುದು ; ಕಡೆಗೆ ಅಪ್ಪನಿಗೆ ತಿರುಗಿ ಬಿದ್ದು ಬಿಟ್ಟು ಹೋಗಿರುವುದು ನನಗಂತು ನಂಬಲಾಗುತ್ತಿಲ್ಲ. ಜಯನಗರದಲ್ಲಿ ಪದ್ಮಮ್ಮನ ಕೋಣೆಯನ್ನು ಬಾಡಿಗೆ ಹಿಡಿದಿದ್ದಾಳಂತೆ.

ನನ್ನ ಮದುವೆಯಾದ ಹೊಸತರಲ್ಲಿ "ಒಂದು ತಿಂಗಳು ನಮ್ಮ ಮನೆಗೆ ಬಾರಮ್ಮ" ಎಂದು ನಾನು ಕರೆದರೆ ಅಮ್ಮಾ ಏನನ್ನುತ್ತಿದ್ದಳು ಗೊತ್ತಾ ?

"ನಾನು ನಿಮ್ಮಪ್ಪನ್ನ ಬಿಟ್ಟು, ಇದುವರೆಗೂ.....ತವರು ಮನೆ, ಹಾಗೆ ಹೀಗೇಂತ ಎಲ್ಲೂ ಸುತ್ತಾಡಿಲ್ಲ, ಎಲ್ಲಿಗೂ ಬರಲ್ಲ ನಿಮಗೆ ತಾಯಿ-ತಂದೆ ನೆನಪಾದಾಗ ನೀವೇ ಬಂದು ಹೋಗಿ" ಎನ್ನುತ್ತಿದ್ದಳು.

ಆಗಂತೂ ನೀನು ಹುಡುಗಿ. ಅಪ್ಪಾ ಎಲ್ಲೂ ಹೋಗಲಿಕ್ಕೆ ಬಿಡ್ತಿರಲಿಲ್ಲ. ಈಗ ಒಂದು ತಿಂಗಳು ನೀನು ಬಂದರೆ ಅಪಾ.....ಇಲ್ಲಿ.... ವಿರಹಾ.....ನೂರು..... ನೂರು ತರಹಾ.....ಅಂತ ಹಾರಾಡಲ್ಲ, ಬಾಮ್ಮ....." ಎಂದಿದ್ದೆ. ಆಗ ಅಮ್ಮ ನಕ್ಕು-

"ಹಾಗಲ್ಲ ಕಣೆ.....ಈಗಲೆ ನಿಮ್ಮ ಅಪ್ಪನ್ನ ಹುಷಾರಾಗಿ ನೋಡ್ಕೊ ಬೇಕು. ವಯಸ್ಸಾದ ಮೇಲೆ ಬಾಯಿಚಪಲ.....ಜಾಸ್ತಿ, ದಿನಕ್ಕೊಂದು ಬಗೆ ತಿಂಡಿ ಅವರಿಗೆ ಮಾಡಿ ಹಾಕಬೇಕು. ನನ್ನ ಹಾಗೆ ರುಬ್ಬಿ. ಕುಟ್ಟಿ, ದೋಸೆ ಇಡ್ಲಿ ಒತ್ತು ಶಾವಿಗೆ ವಸಂತ ಮಾಡ್ತಾಳಾ ? ಕುಕ್ಕರ್ ಮೇಲೆ ಒಂದು ಅನ್ನ ಸಾರು ಬೆಯಿಸೋದ್ರಲ್ಲೇ ಸುಸ್ತಾಗಿರ್ತಾಳೆ, ರಾತ್ರಿ ಅವರಿಗೆ ಕಾಲುನೋವಾದ್ರೆ ಎಣ್ಣೆ ಉಜ್ಜಬೇಕು. ಹಲ್ಲು ನೋವಾದ್ರೆ ಲವಂಗದೆಣ್ಣೆ ಹಾಕಿ ಬಿಸಿ ನೀರು ಮುಕ್ಕಳಿಸಬೇಕು. ರಾತ್ರಿ ಊಟ ಆದ ಮೇಲೆ ಬಾದಾಮಿ ಲೇಹ್ಯ ತಗೊಳ್ಳೋದು ಮರೆತುಬಿಡ್ತಾರೆ. ನಾನಿದ್ರೆ ಅವರಿಗೆ ಕೊಡ್ತೀನಿ ಅದ್ರಿಂದಾ ಎಲ್ಲೂ ಬರಲ್ಲ."

ಅಪ್ಪನ ಸೇವೆ.....ಅಮ್ಮನ ಆರೈಕೆ ಇದರಲ್ಲಿ ಮುಳುಗಿದ್ದ.....ಇಂಥಾ ಅಮ್ಮ... ?

ಅಂಥಾ ಅಮ್ಮ ಈಗ ಬೇರೆ ಇರ್‍ತಾರೆ ಅಂದರೆ ನಂಬಿದ್ದಿಯ್ಯಾ.....ವಿಜಿ ? ಅಣ್ಣಾ, ಅಪ್ಪಾ, ವಸಂತರ ಮನೆಯರು ಎಲ್ಲರಿಗೂ ಅಮ್ಮನ ವರ್ತನೆಯಿಂದ ತುಂಬಾ ಬೇಜಾರಾಗಿದೆಯಂತೆ. ಅಪ್ಪಾ ಅಂತು ತೀರಾ ಹತಾಶರಾಗಿ ಬೆಂಗಳೂರು ತೊರೆದು ಕಾಶಿಗೆ ಹೊರಟು ಹೋಗುತ್ತಿದ್ದಾರೆ.

ವಿಜಿ.....ಅಮ್ಮನಿಗೆ ನೀನು ಮೊದಲಿಂದ ಪ್ರೀತಿಪಾತ್ರಳು. ನೀನು ಕಾಗದ ಬರೆದು ನೋಡು. ಅಪ್ಪನ ಹಣಾ ಒಂದು ಲಕ್ಷ ರೂ. ಇದೆ. ಒಂದು ಇಪ್ಪತ್ತು ಮೂವತ್ತು ಸಾವಿರ ಖರ್ಚು ಮಾಡಿದರೂ ಚಿಂತೆ ಇಲ್ಲ. ಅಮ್ಮನು ನಟಿಸಿದ ಚಿತ್ರದ ಭಾಗಗಳನ್ನು ಸೆನ್ಸಾರಿನಿಂದ ತೆಗೆದು ಹಾಕಲು.....ಕೆಲವು ಅಜ್ಞಾತ ವ್ಯಕ್ತಿಗಳು ಅಣ್ಣನಿಗೆ ಸಹಾಯ ಮಾಡಲು ಸಿದ್ಧರಿದ್ದಾರೆ. ಅಮ್ಮ ಯಾವ ಬಲದ ಮೇಲೆ ಒಂಟಿಯಾಗಿ ಜೀವಿಸಲು ನಿರ್ಧರಿಸಿದ್ದಾಳೋ ದೇವರಿಗೆ ಪ್ರೀತಿ. ಚಿತ್ರ ತೆರೆಕಾಣಲು ಇನ್ನು ಒಂಬು ತಿಂಗಳು ಉಳಿದಿದೆ. ಆ ಚಿತ್ರ ತೆರೆ ಕಂಡರೆ ನಾವೆಲ್ಲಾ ನಮ್ಮ ನಮ್ಮ ಮನೆಯಲ್ಲಿ ತಲೆತಗ್ಗಿಸಬೇಕಾಗುತ್ತೆ. ಅದೇನೋ ಹುಚ್ಚು ಹುಚ್ಚು ಹಾಸ್ಯ ಪಾತ್ರವಂತೆ. ಒಂದು ಸೀನ್ಸ್‌ನಲ್ಲಿ ಸ್ಥೂಲಕಾಯದ ಅಮ್ಮ.....ಚಿತ್ರದ ನಾಯಕಿಯನ್ನು ನಗಿಸಲು.....ಬಾಬ್ ಕೂದಲು ಬಿಟ್ಟು ಕೊಂಡು ಮೊಳಕಾಲ ಮೇಲೆ ಫ್ರಾಕ್ ಹಾಕಿಕೊಂಡು ಸಿಕ್ಕಾಪಟ್ಟೆ ಕುಣಿದ್ದು

ಹೆಜ್ಜೆ ಹಾಕಿ ಡ್ಯಾನ್ಸ್ ಮಾಡುವಳಂತೆ. ಮುನಿಸಿಕೊಂಡು ಇದ್ದ ಚಿತ್ರದ ನಾಯಕಿ ಅಮ್ಮನ ಈ ಅವತಾರ ಕಂಡು ಗಹಗಹಿಸಿ ನಕ್ಕು—

"ನಂಜಮ್ಮ ಐವತ್ತು ವರ್ಷದ ನೀನು ನನ್ನನ್ನು ನಗಿಸಲು ಫ್ರಾಕ್ ಹಾಕಿಕೊಂಡು ರಾಕ್ ಏನ್‌ರೋಲ್ ಮಾಡಿಬಿಟ್ಟೆಯಲ್ಲ" ಎನ್ನುತ್ತಾಳೆ.

ಆಗ ಅಮ್ಮ "ಹೌದು ! ಚಿಕ್ಕ ಒಡತಿ, ನಿನ್ನೆಯಿಂದ ನೀವು ಮುನಿಸಿ ಕೊಂಡಿದ್ರಿ. ಅಮ್ಮಾವರು, ರಾಯರು ನಿಮ್ಮ ಮುಖದಲ್ಲಿ ನಗೆಮಲ್ಲಿಗೆ ಅರಳಿ ದರೆ ಸಾಕೂಂತ ನಿನ್ನೆಯಿಂದ ತಪಸ್ಸು ಮಾಡ್ತಿದ್ದಾರೆ. ನಾನು ನಲವತ್ತು ವರ್ಷದಿಂದ ಈ ಮನೆ ಉಪ್ಪು ತಿಂದಿದ್ದೀನಿ. ಚಿಕ್ಕ ಅಮ್ಮಾವರ ಮುಖದಲ್ಲಿ ನಗೆ ಮಲ್ಲಿಗೆ ಅರಳೋದಾದ್ರೆ ಏನು ಬೇಕಾದರೆ ಮಾಡ್ತೀನಿ ಅಂದೆ, ಮಾಡಿದೆ." ಅನ್ನುತ್ತಾಳಂತೆ.

ಆಗ ಚಿತ್ರದನಾಯಕಿ ನಗುತ್ತಾ "ನಂಜಮ್ಮ ನಿನಗೆ ಇವತ್ತಿನಿಂದ ಸಂಬಳ ದಲ್ಲಿ ನೂರು ರೂ. ಪ್ರಮೋಷನ್. ಆದರೆ ಒಂದೇ ಒಂದು ಹೊಸ ಆರ್ಡರ್" ಎನ್ನುತ್ತಾಳಂತೆ.

"ಏನು ತಾಯಿ !" ಎಂದು ಅಮ್ಮ ಅಂದಾಗ "ಇನ್ನು ಮೇಲೆ ನೀನು ಆ ದಪ್ಪ ಸೀರೆಗಳನ್ನ ಉಟ್ಕೊಂಡು ಮುಸುರೇ ತೊಳೆದು, ಕಸಾ ಗುಡಿಸ ಬೇಡ ಯಾವಾಗಲು ಫ್ರಾಕ್ ಹಾಕಿಕೊಂಡು ಸೋಫಾ, ಕುರ್ಚಿ ಒರೆ ಸೋದು; ನನ್ನ ರೂಂ ಕ್ಲೀನಿಂಗ್ ಮಾತ್ರ ಇಟ್ಕೋ. ನಿನ್ನ ಕೇಳಿದಾಗ ಒಂದು ಡ್ಯಾನ್ಸ್ ಮಾಡು, ನಿನ್ನನ್ನು ಫ್ರಾಕ್‌ನಲ್ಲಿ ಈ ಥರಹಾ ನೋಡೋದು ಅಂದರೆ ನನಗೆ ಒಂದು ತರಹ ಮಜಾ ಅನ್ನಿಸುತ್ತೆ," ಎನ್ನುತ್ತಾಳೆ.

ಅಲ್ಲಿಂದ ಮುಂದೆ ಅಮ್ಮನದು ಚಿತ್ರದಲ್ಲಿ ಹುಚ್ಚುಚ್ಚುಅವತಾರ ಹುಚ್ಚು ಕುಣಿತ, ಇಂಥಾ ಕುಣಿತ ಏಕೆ ಮಾಡಬೇಕಿತ್ತು ?

ಇಂಥಾ ಚಿತ್ರದಲ್ಲಿ, ಈ ವಯಸ್ಸಿನಲ್ಲಿ ಏಕೆ ಮಾಡಬೇಕಿತ್ತು ? ಅಮ್ಮನ ಬುದ್ಧಿ ಹೀಗೇಕೆ ಬದಲಾಯಿತೋ ? ದೇವರಿಗೆ ಗೊತ್ತು.

ಏನಾದರಾಗಲಿ......ನೀನೊಂದು ಪತ್ರ ಹಾಕಿ ನೋಡು ವಿಜಿ,

ನನಗೆ ತುಂಬ ಬೇಜಾರಾಗಿದೆ."

ನಿನ್ನ ಪ್ರೀತಿಯ ಅಕ್ಕ ಕುಮುದ, ಅಕ್ಕನ ಕಾಗದ ಎರಡೆರಡು ಭಾರಿ ಓದಿಕೊಂಡ ವಿಜಯ ಧಿಗ್‌ಭ್ರಾಂತಳಾದಳು.

ಅಮ್ಮ.....ತನ್ನ ಮುದ್ದಿನ ಅಮ್ಮ.....ಚಿತ್ರನಟಿ ಆಗಿದ್ದಾಳೆಯೆ ? ಮದುವೆಯಾಗಿ ಮೊದಲ ಸಲ ತವರಿಗೆ ಎಂದು ಆರು ತಿಂಗಳ ಹಿಂದೆ ತವರಿಗೆ ಹೋಗಿ ಎಂಟುದಿನ ಇದ್ದು ಬಂದಿದ್ದಳು ವಿಜಯ, ಆಗ ಬೀಳ್ಕೊಡುವಾಗ ಮಡಿಲು ತುಂಬಿಸುತ್ತಿದ್ದ ಅಮ್ಮನ ಮುಖ ನೆನಪಿಗೆ ಬಂತು, ಸಣ್ಣ ಜರಿ ಅಂಚಿನ ಹಸಿರು ಸ್ಪನ್‌ಸಿಲ್ಕ್ ಸೀರೆ.....ಹದಿನೆಂಟುಮೊಳದ ಆ ಸೀರೆ ಕಚ್ಚೆಹಾಕಿ ಉಟ್ಟು ಉದ್ದ ತೋಳಿನ ದೊಗಳೆ ಕುಪ್ಪಸ ಧರಿಸಿ ಮೈ ತುಂಬ ಸೆರಗು ಹೊದ್ದ ಅಮ್ಮ.....

ತುಸ ಅಡ್ಡಗಲ ಮೈಕಟ್ಟಿನ ಸ್ಥೂಲ ಕಾಯದ ಅಮ್ಮನ ಬಣ್ಣ ಹೊಂಗೆ ದಿಗೆಯುದು.

ಹೊನ್ನ ಬಣ್ಣದ ಆ ಮುಖದಲ್ಲಿ ಎದ್ದು ಕಾಣುವ ಉದ್ದ ಮಾಟದ ಕೆಂಪು ಕುಂಕುಮಾ.....ಕೆನ್ನೆ ತುಂಬದ ಅರಿಶಿನ.....ಅಮ್ಮನ ಮುಂಗೈ ಮುಂಗಾಲುಗಳು ಸಹ ಅರಿಶಿನದಿಂದ ಥಳಥಳಿಸುತ್ತಾ ಇದ್ದವು. ಅಂಥಾ ಅಮ್ಮಾ ಸಿನಿಮಾ ನಟಿಯಾಗಿ.....ಫ್ರಾಕ್ ಹಾಕಿದ್ದಾಳೆಯೇ ?

ಎಂದಿನಂತೆ ಊಟ ಮುಗಿಸಿದೊಡನೆ ವಿಜಯ ಮಂಚದಮೇಲೆ ಮಲಗಿದಳು.

ಆದರೆ ಈ ದಿನ ನಿದ್ರೆ ಮಾತ್ರ ಸುಳಿಯಲಿಲ್ಲ, ಒಂದೊಂದೇ ಹಳೆಯ ಘಟನೆಗಳು ನೆನಪಿಗೆ ಬರತೊಡಗಿದವು.

“ಅಮ್ಮ ನೋಡಮ್ಮ.....ಹದಿನೆಂಟು ಮೊಳದಲ್ಲಿಯೂ ಈ ಥರ ಹೂವು ಹೂವಿನ ವಾಯಲ್ ಸೀರೆ ಬಂದೆ, ಲಲಿತನ ತಾಯಿ ತಗೊಂಡಿದ್ದಾರೆ. ನೀನ ಬೇಕಾದರೆ ತಗೊ,”

ಆ ದಿನ ಕಾಲೇಜಿಂದ ಬರುವಾಗ ಉತ್ಸಾಹದಿಂದ ಎರಡು ಸೀರೆ ಹಿಡಿದು ತಂದಿದ್ದಳು, ತಾಯಿ ಉತ್ತರಿಸುವ ಮುನ್ನವೆ ತಂದೆ.....ಪೇಪರ್ ಓದುತ್ತಾ ಇದ್ದವರು ಮುಖ ಎತ್ತಿ ಕನ್ನಡಕ ಧರಿಸಿದ ಕಂಗಳಿಂದಲೆ ಆ ಸೀರೆಯತ್ತ ತೀಕ್ಷ್ಣವಾಗಿ ದಿಟ್ಟಿಸಿದರು.

“ತಗೊಂಬಾ.....ಏನು ಸೀರೆ ಅದು ?” ಎಂದರು, ಹೋಗಿ ಆ ಸೀರೆಗಳನ್ನು ತಂದೆಯ ಕೈಗೆ ಕೊಟ್ಟಳು.

ಗುಲಾಬಿ ಬಣ್ಣದ ಒಡಲ ಮೇಲೆ ಪುಟ್ಟ ಪುಟ್ಟ ಬಿಳಿಯ ಹೂಗಳು

ಬಂದಿದ್ದ ನವಿರಾದ ವಾಯಲ್ ಸೀರೆ ಒಂದು......ತಿಳಿ ನೀಲಿಯ ಒಡಲ ಮೇಲೆ ಚಿಕ್ಕ ಚಿಕ್ಕ ಹಸಿರು ಹೂಗಳು ಬಂದಿದ್ದ ವಾಯಿಲ್ ಸೀರೆ ಇನ್ನೊಂದು.

"ನಿಮ್ಮಮ್ಮ ಕಾಲೇಜು ಹುಡ್ಗಿ ಅನ್ಕೊಂಡ್ಯೇನು......ಈ ವಾಯಲ್ ಸೀರೆಗಳು ಉಡಲಿಕ್ಕೆ !?" ಎಂದರು.

"ಕಾಲೇಜು ಹುಡುಗಿಯರು ಯಾರು ವಾಯಲ್ ಸೀರೆ ಉಡಲ್ಲ ಅಪ್ಪಾಜಿ, ಮಿನಿ ಮಿಡಿ, ಮ್ಯಾಕ್ಸಿ, ಸಲ್ವಾರ್ ಕಮೀಜ್, ನಮ್ಮ ಕಾಲೇಜಿಗೆ ಬಂದು ನೋಡಿ, ಎಷ್ಟು ತರಹ ಫ್ಯಾಷನ್, ಮಾಡ್ತಾರೆ ?" ಎಂದಳು.

ತಂದೆ ನಗುತ್ತಾ......

"ಹೋಗ್ಲಿ......ನಿಮ್ಮ ಮೇಡಮ್ಮಗಳಾದರು......ಸೀರೆ ಉಡ್ತಾರೊ ಇಲ್ಲವೊ" ಎಂದರು.

"ಉಡ್ತಾರೆ, ಆದರೆ ಯಾರು ವಾಯಲ್ ಸೀರೆ ಉಡಲ್ಲ, ಶಿಫಾನ್, ಫಾರಿನ್ ನೈಲೆಕ್ಸ್ ಹಾಗು ಇಂಪೋರ್ಟೆಡ್ ಜಾರ್ಜೆಟ್, ಕ್ರೇಪ್‌ಸಿಲ್ಕ್ ಇಂಥ ಸೀರೆ ಉಡ್ತಾರೆ" ಎಂದವಳೆ......

"ಅಮ್ಮಾ ಈ ಸೀರೆ ನೋಡಮ್ಮ ಹದಿನೆಂಟು ಮೊಳದ ಸೀರೆ. ನೀನು ಬೇಕಾದ್ರೆ ಕರಿಸಿಕೊ, ಗಿರಿಯಪ್ಪನವರ ಅಂಗಡಿಗೆ ಬಂದಿದೆ" ಎಂದಳು, ತಾಯಿ ಸಂಕೋಚದಿಂದ

"ಇಂಥಾ ಸೀರೆ ನನಗ್ಯಾಕಮ್ಮ......? ನಾನೇನು ಹದಿನೆಂಟು ವರ್ಷದ ಹುಡುಗೀಂತ ಅನ್ಕೊಂಡೆಯಾ ?" ಎಂದರು, ಆದರೆ ಅವರ ಕಂಗಳಲ್ಲಿ ಆಸೆ ತುಂಬಿತ್ತು ಎಂದು ವಿಜಯಳಿಗನಿಸಿತು.

"ಅಮ್ಮ ಬುದ್ಧಿ ಬಂದಾಗಿಂದ ನಾನು ನಿನ್ನ ಗಮನಿಸುತ್ತಿದ್ದೀನಿ, ಯಾವಾಗಲು ವರ್ಷಕ್ಕೆ ಎರಡು ಸೀರೆ ಸ್ಪನ್‌ಸಿಲ್ಕ್ ಸೀರೆ......ಅದೇ ಹಸಿರು......ಅದೇ ಕಡುನೀಲಿ, ಈ ಯೂನಿಫಾರಮ್ ಸಾಕಾಗಲಿಲ್ಲವೇನಮ್ಮ......? ಲಲಿತಳ ತಾಯಿಯಾ ನಿನಗಿಂತ ಹತ್ತು ವರ್ಷ ದೊಡ್ಡೋರು. ಆಕೇನೆ ಉಡಬಹುದಾದರೆ ನೀನ್ಯಾಕೆ ಉಡಬಾರದು ?" ಎಂದಳು, "ಕೈ ಕಾಲು ತೊಳೆದು ಕಾಫಿ ಕುಡಿದು ನೀನು ಓದಲಿಕ್ಕೆ ಕೂತ್ಕೋಮ್ಮ. ಇಂದೂ......ನೀನು ಗುಡಿಗೆ ಹೋಗಿ ಎಳ್ಳು ದೀಪಾ ಹಚ್ಚಿ ಬಾ......ಆಮೇಲೆ ನಂಗೆ ಬಿಸಿನೀರು ಕಾಸಿ ಕಾಲಿಗೆ ಕಾವುಕೊಡು

ಮಧ್ಯಾಹ್ನದಿಂದ ಕಾಲು ಹಿಡ್ಕೊಂಡಿದೆ." ತಂದೆ ಕೊಂಚ ಗಡುಸಾಗಿ ನುಡಿದಾಗ....ಸೀರೆ ಬಗ್ಗೆ ಚರ್ಚೆ ಅಲ್ಲಿಯೇ ನಿಂತಿತು, ತಾಯಿಯೂ ಒಳಗೆ ನಡೆದರು.

ಪತಿಯ ಕಾಲು ನೋವು ವಾಸಿ ಆಗಲೂ....ಪ್ರತಿ ಶನಿವಾರ ಸಂಜೆ ಅಲ್ಲಿಯೋ ದೇವಸ್ಥಾನಕ್ಕೆ ಹೋಗಿ ನವಗ್ರಹ ದೇವತೆಗಳಿಗೆ ಎಳ್ಳುದೀಪ ಹಚ್ಚಿ ಬರುತ್ತಿದ್ದರು.

ಮನೆ ಹತ್ತಿರವಿದ್ದ ಆ ದೇವಾಲಯ ಬಿಟ್ಟರೆ ತಾಯಿ ಎಂದೂ ಎಲ್ಲಿಗೂ ಒಬ್ಬರೇ ಹೋದವರಲ್ಲ. ಅಂಥಾ ತನ್ನ ತಾಯಿಯೂ, ಎಲ್ಲರಿಂದ ಒಂಟಿಯಾಗಿ ಒಂದು ಕೋಣೆಯಲ್ಲಿ ವಾಸ ಮಾಡುತ್ತಾರೆಂದರೆ ಆಶ್ಚರ್ಯ ಅಲ್ಲವೆ ?

ಯೋಚಿಸುತ್ತಾ ಹೊರಳಾಡಿದ ಅವಳಿಗೆ ಎಷ್ಟೋ ಹೊತ್ತಿನ ನಂತರ ನಿದ್ರೆ ಬಂದಿತು, ಎಚ್ಚರವಾದಾಗ ಸಂಜೆ ಐದುಗಂಟೆ.

ಕೊಂಚ ಗಡಬಡಿಸಿ ಎದ್ದು ಅವಳು ಮುಖ ತೊಳೆದು.... ಜಡೆ ಹೆಣೆದುಕೊಂಡಳು. ಕಸಾ ಗುಡಿಸಿ....ಕಾಫಿಗೆ ನೀರಿಡುವಷ್ಟರಲ್ಲಿ ಸುರೇಶ ಪ್ರತ್ಯಕ್ಷನಾದ.

"ಏಕೆ ಹೀಗಿದ್ದಿ ಮರಿ ? ಸೀರೆ ಸಹ ಬದಲಾಯಿಸಿಲ್ಲ....ದಶರಥನಮೇಲೆ ಮುನಿದ ಕೈಕೆಯ ಇದ್ದಾಗಿದ್ದಿ ?" ಎಂದ.

"ಸಾಕ್ಹೋಗಿ, ನೀವೋ....ನಿಮ್ಮ ಆ ಕಾವ್ಯಮಯ ಭಾಷೆಯೊ ?" ಎಂದು ಒಳಗೆಓಡಿದಳು. ಅವನು ಕಾಲು ತೊಳೆದು ಹಜಾರಕ್ಕೆ ಬಂದು ಕೂಡುವಷ್ಟರಲ್ಲಿ ಹೇಗ್ಹೇಗೊ ಕಾಫಿ ಮುಗಿಸಿ ತಂದಳು. ಮನಸ್ಸಿನ ತುಂಬ ತುಂಬಿದ್ದ ವಿಷಯ....ಅಮ್ಮನ ವಿಷಯ ಇವರಿಗೆ ಹೇಗೆ ಹೇಳುವುದು ? ಗಂಡಾ ಏನೋ ಪ್ರಶ್ನೆ ಕೇಳಿದಾಗ ತಡಬಡಿಸಿ,

"ಹ್ಞ ! ಏನಂದ್ರಿ !" ಎಂದಳು.

"ಏನಂಥಾ ? ಆಬ್ಸೆಂಟ್ ಮೈಂಡೆಡ್ ವಿಜಿ ? ಏಕೆ ಹಾಗಿದ್ದಿ ? ಏನು ವಿಷಯಾ ?" ಎಂದ, ವಿಜಯ ತಡವರಿಸುತ್ತಾ—

"ಅಕ್ಕನಿಂದ ಬೆಳಿಗ್ಗೆ ಒಂದು ಪತ್ರ ಬಂತು, ಒಂದು ವಿಚಿತ್ರ ಸಮಾಚಾರ ನೋಡಿ, ನಮ್ಮಮ್ಮ ಸಿನಿಮಾಗೆ ಸೇರಿದಾರಂತೆ ?" ಎಂದಳು.

ಕಾಫಿ ಲೋಟಾ ಕೈಗೆ ಪಡೆದ ಸುರೇಶ ಕಾಫಿ ಕುಡಿಯುವುದನ್ನು ಮರೆತು—

"ನಿಮ್ಮಮ್ಮ ಸಿನಿಮಾಕ್ಕೆ ಸೇರಿದ್ದಾರೆ! ಏನು ಇದರ ಅರ್ಥ !" ಎಂದ.

"ಎಂಥಾ ಚಿತ್ರ ಅನ್ನಿಸುತ್ತೆ ಅಲ್ಲವಾ ? ಅಕ್ಕನ ಪತ್ರ ಓದಿದಾಗಿನಿಂದ ನನಗೂ ಮನಸ್ಸಿಗೆ ತಳಮಳ ಎನ್ನಿಸಿತು. ನಮ್ಮಮ್ಮಂಗೆ ಈ ವಯಸ್ಸಿನಲ್ಲಿ ಸಿನಿಮಾದಲ್ಲಿ ನಟಿಸೋ ಆಸೆ ಏಕೆ ಹುಟ್ಟಿತೋ ?" ಎಂದಳು.

"ಇರ್ಲಿ ಬಿಡು ವಿಜಿ, ಏಕೆ ತಲೆಯ ಮೇಲೆ ಆಕಾಶ ಕಳಚಿ ಬಿದ್ದಾಗೆ ಆಡ್ತಿ ? ಈಗಿನ ಕಾಲದಲ್ಲಿ ಕೆಲವು ನಿರ್ಮಾಪಕರು "ತಾಯಿ" ಪಾತ್ರ ಪ್ರಧಾನ ಮಾಡಿ ಚಿತ್ರ ತೆಗೆಯುವುದುಂಟು.

"ನಿಮ್ಮಮ್ಮ ಮೂರ್ತಿವೆತ್ತ ತಾಯ್ತನದ ಪ್ರತೀಕದಂತಿದ್ದಾರೆ. ಯಾರೋ ನಿರ್ಮಾಪಕ ಅವರನ್ನು ಹಾಕಿಕೊಂಡಿರಬಹುದು, ಅಂತಾ ತಪ್ಪೇನು.....!" ಎಂದ.

"ಆದರೆ ತಾಯಿಯ ಪಾತ್ರ ವಹಿಸಿರುವುದು ಅಥವಾ ತಾಯ್ತನದ ವಾತ್ಸಲ್ಯ ಹಿರಿಮೆ ಬಿಂಬಿಸುವಂತಾ ಚಿತ್ರವಲ್ಲ..........." ಮುಂದೆ ಹೇಳಲಾರದೆ ತಡವರಿಸಿದಳು.

ಒಂದು ಗುಟುಕು ಕಾಫಿ ಗುಟುಕರಿಸಿದ ಸುರೇಶಾ.....'ಥೇ.....ಥೇ ಕಾಫಿಗೆ ಸಕ್ರೆ ಹಾಕುವುದೇ ಮರೆತ್ತಿದ್ದಿ, ಹೋಗು ಸಕ್ರೆ ತಗೊಂಬಾ..... ನಿಮ್ಮಮ್ಮ ಎಂಥಾ ಸಿನಿಮಾದಲ್ಲಾದರದ ನಟಿಸಿರಲಿ.....ನಾನೇನೂ ನಿನ್ನನ್ನು ಡೈವೋರ್ಸ್ ಮಾಡುವುದಿಲ್ಲ" ಎಂದ.

ಎಷ್ಟು ಗಡುಸಾದ.....ಸ್ವರ ಎಂಥಾ ತಿರಸ್ಕಾರವಾದ ವಾಕ್ಯಗಳು, ಚಾಟಿ ಏಟು ತಿಂದವಳಂತೆ ಮಿಡುಕುತ್ತಾ, ವಿಜಯಾ ಹೋಗಿ ಸಕ್ಕರೆ ತಂದು ಹಾಕಿದಳು, ಅನಂತರ ಪತಿಯನ್ನು ಮಾತಾಡಿಸಲು ಅವಳಿಂದ ಸಾಧ್ಯವಾಗಲಿಲ್ಲ. ಏನೋ ನೆಪ ಮಾಡಿ ಅಡಿಗೆ ಮನೆಯಲ್ಲಿ ಕುಡಿದು.....ಅಲ್ಲಿಯೆ ಉಳಿದಳು.

"ವಿಜಿ....." ಗಂಡ ಕೂಗಿದಾಗ ಹೊರಗೆ ಬಂದಳು. "ಮಿಸ್ಟರ್ ಜೋಷಿ ವಾಚ್ ತಗೋತಿದ್ದಾರೆ, ಹೋಗಿಬರ್‍ತೀನಿ ವಿಜ" ಬಿಚ್ಚಿದ ಶೂಸನ್ನು ಮತ್ತೆ ಕಾಲಿಗೆ ಬಿಗಿಯುತ್ತಿದ್ದ ಸುರೇಶ.

"ಹೋಗಿ ಬನ್ನಿ." ಸಣ್ಣ ಸ್ವರದಲ್ಲಿ ನುಡಿದಳು ವಿಜಯ.

"ಏನೇನೊ ಹುಚ್ಚುಚ್ಚು ಆಲೋಚನೆ ಮಾಡ್ತಾ ಕೂತ್ಕೊಬೇಡಾ,

ನನ್ನ ಮುಂಗೋಪಾ ನಿಂಗೆ ಗೊತ್ತೇ ಇದೆ. ಬಾಯ್ತಪ್ಪಿ ಏನೋ ಅಡ್ಡೆ, ಆ್ಹ ! ಎಕ್ಸ್‌ಕ್ಯೂಸ್‌ಮಿ. ಈಗ ನಿನ್ನ ಸಮಾಧಾನ ಪಡಿಸಲಿಕ್ಕೂ ಸಮಯವಿಲ್ಲ ಸಂಜೆ ಹೊತ್ತು ಮುಂಬಾಗಿಲು ಹಾಕಿದರೆ ಬೈತಿಯಲ್ಲಬಾ ? ಅದಕ್ಕೆ ರಾತ್ರಿ ಎಂಟು ಗಂಟೆಗೆ ನಿನ್ನ ಸಮಾಧಾನ ಮಾಡ್ತೀನಿ, ನಿನ್ನ ಅಚ್ಚುಮೆಚ್ಚಿನ ಕರಿದ ಗೋಡಂಬಿ ಬಾದಾಮಿ ಹಲ್ವಾ......ಸಮೇತ ಕಾಣಿಕೆ ಒಪ್ಪಿಸಿ ಸಮಾಧಾನ ಮಾಡೋದು ಗೊತ್ತಿದೆಯಲ್ಲ." ಎಂದು ಹೇಳಿ ಅವಳ ಕೆನ್ನೆ ತಟ್ಟಿ ಹೊರಟ. ಅವನು ಸಮಾಧಾನ ಪಡಿಸುವ ವೈಖರಿ ನೆನೆದೇ ಅವಳ ಮೈ ರೋಮಾಂಚನ ಗೊಂಡಿತು, ಕೆನ್ನೆ ತುಟಿಗಳು ಅವನ ಧಾಳಿಗೆ ಸಿದ್ಧವಾಗಲೂ ಎಂಬಂತೆ ಈಗಲೇ ಕೆಂಪೇರಿದವು.

ಸುರೇಶಾ......ತುಂಬಾ ಮುಂಗೋಪಿ, ವಧು ಪರೀಕ್ಷೆಗೆ ಬಂದಾಗಲೆ ತನ್ನ ಆ ಅವಗುಣವನ್ನು ಮುಚ್ಚಿಟ್ಟುಕೊಳ್ಳದೆ ಹೇಳಿಬಿಟ್ಟಿದ್ದ. ಒಂದು ಕ್ಷಣಾ...... ತಾಯಿಯಾ ; ತಾಯಿ ನಟಿಸುತ್ತಿರುವ......ಸಿನಿಮಾ . ಎಲ್ಲಾ ಮರೆತು......ತನ್ನ ಸುರೇಶನ ಪ್ರಥಮ ಭೇಟಿ ನೆನಪಾಯಿತು. ಒಂದು ವರ್ಷದ ಹಿಂದೆ ......ಬಿ.ಎ. ರಿಸಲ್ಟ್ ತಿಳಿದು......ಒಂದು ತಿಂಗಳಾಗಿತ್ತು. ಕೆಲಸಕ್ಕೆ ಸೇರುವುದು......ಅಥವ ಎಂ. ಎ. ಓದುವುದು. ಎರಡೂ ಆ ಕುಟುಂಬದಲ್ಲಿ ಸಾಧ್ಯವಿರಲಿಲ್ಲ.

"ಹುಡುಗಾ......ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಲೆಕ್ಚರರ್ ಆಗಿದ್ದಾನಂತೆ. ಹುಡುಗನ ತಂದೆ ತಾಯಿ, ಅಣ್ಣ, ಅತ್ತಿಗೇ ಎಲ್ಲಾ ನಂಜನ ಗೂಡಿನ ಹತ್ತಿರದ ಒಂದು ಹಳ್ಳೀಲಿದ್ದಾರಂತೆ. ಹಳ್ಳೀಲಿ ಹೊಲಗದ್ದೆ, ಮನೆ ಎಲ್ಲಾ ಇದೆಯಂತೆ."

ತಂದೆ......ತಾಯಿಗೆ...... ಮಾರನೆಯ ದಿನ ಬರಲಿರುವ ವರನ ಬಗ್ಗೆ ವಿವರಿಸುತ್ತಿದ್ದರು.

"ಅಂದರೆ ಹಳ್ಳಿವಾಸ ......ಅಂದರೆ ವಿಜಯಾ ಒಪ್ತಾಳಾ ?" ತಾಯಿ ಇಂದಿರಮ್ಮ ಕೊಂಚ ಅನುಮಾನಿಸುತ್ತ ಕೇಳಿದರು.

ತಂದೆ ಗಡುಸಾಗಿ "ಅವಳ್ಯಾಕೆ ಹಳ್ಳೀಲಿ ಇರ್ತಾಳೆ, ಮೈಸೂರಲ್ಲಿ ಗಂಡನ ಜೊತೆ ಇರ್ತಾಳೆ. ಹುಡುಗ ಮೈಸೂರಲ್ಲಿ ಮನೆ ಮಾಡ್ತಾನೆ" ಎಂದರು.

"ಸರಿ ಜಾತಕಾನೂ ಪ್ರಶಸ್ತವಾಗಿದೆ ಅಂತೀರಿ. ನಾಳೆ ಹುಡುಗ

ಬರಬೇಕನಲ್ಲ, ವಿಜಯಾನೂ ಒಪ್ಪಿ; ನೀವೆಲ್ಲಾ ಒಪ್ಪಿದರೆ ನನ್ನದೇನು ಅಭ್ಯಂತರ ವಿಲ್ಲ" ತಾಯಿಯಾ ಅಲ್ಲಿಗೆ ಮಾತು ಮುಗಿಸಿದರು.

* * * * *

ನಾಳೆ ಬರಲಿರುವ ಹುಡುಗನ ಬಗ್ಗೆ ಕನಸು ಕಾಣುತ್ತಾ ಮಲಗಿದಳು ವಿಜಯ ಅತ್ತಿಗೆ ವಸಂತ......ನಾದಿನಿಯನ್ನು ಏನೇನೋ ಹಾಸ್ಯ ಮಾಡು ತ್ತಿದ್ದಳು.

"ಮನೆ ಸ್ವಲ್ಪ ಚೆನ್ನಾಗಿ ಅರೇಂಜ್ ಮಾಡಮ್ಮ ನಿಮ್ಮತ್ತೆ ತಿಂಡಿ, ಕಾಫಿ ವಿಭಾಗ ನೋಡಿಕೊಳ್ಳಲಿ. ನೀನು ನಿನ್ನ ನಾದಿನಿಗೆ ಒಳ್ಳೇ ಸೀರೆ ಉಡಿಸಿ ಚೆನ್ನಾಗಿ ಅಲಂಕಾರ ಮಾಡು" ತಂದೆ ಗಡುಸಾಗಿ ನುಡಿದಾಗ ವಸಂತ ವಿನಯದಿಂದ "ಆಗಲಿ ಮಾವಾ......" ಎಂದಳು.

ಅತ್ತಿಗೆ ವಸಂತಳ ತಿಳಿಗುಲಾಬಿಯ ಶಿಫಾನ್ ಸೀರೆಯನ್ನು ಉಟ್ಟು ಗುಲಾಬಿ ದಂಡೆಯನ್ನು ಮುಡಿದು, ವಾಲೆ ಜುಮುಕಿ ಇತ್ಯಾದಿ ಆಭರಣ ಗಳಿಂದ ಅಲಂಕೃತಳಾದಳು.

ತಂದೆ ಹೈಸ್ಕೂಲ್ ಮಾಸ್ತರಾಗಿ ನಿವೃತ್ತರಾದರು. ಅಣ್ಣ ಕಾಲೇಜಿ ನಲ್ಲಿ ಲೆಕ್ಚರರ್ ಆಗಿದ್ದ, ಅಕ್ಕ ಕುಮುದಳ ಗಂಡನೂ ಕಾಲೇಜಿನಲ್ಲಿ ಕನ್ನಡ ರೀಡರ್ ಆಗಿದ್ದರು. ತಾಯಿ ಕೇಸರಿಬಾತ್, ಬೋಂಡಾ, ಕಾಫಿ ಮಾಡಿ ದರು, ವಸಂತಳ ನೇತೃತ್ವದಲ್ಲಿ ಮನೆ ಸುಂದರವಾಗಿ ನಳನಳಿಸಿತು.

ಸಂಜೆ ಸುರೇಶ ಹಾಗೂ ಅವನ ಅಕ್ಕ ಭಾವ ಬಂದರು. ಸುರೇಶನ ಅಕ್ಕ ಸುಜಾತ ಬಾಯ್ತುಂಬಾ ಮಾತಾಡಿದಳು. "ಸುರೇಶನ ಒಪ್ಪಿಗೇನೇ ಮುಖ್ಯ. ಸುರೇಶ ಒಪ್ಪಿಬಿಟ್ಟರೆ ನಮ್ಮ ಅಪ್ಪ, ಅಮ್ಮಾ ಹಾಗೂ ಅಣ್ಣಾ ಅತ್ತಿಗೆ ಯಾರದೂ ತಕರಾರಿಲ್ಲ" ಎಂದರು.

"ನಾನು ಸ್ಕೂಲ್ ಮಾಸ್ತರ್ ಆಗಿ ರಿಟೈರ್ ಆದೋನಮ್ಮ. ನನ್ನ ಮಗನಿಗೆ ಅವನದೇ ಆದ ಸಂಸಾರವಿದೆ. ಮಗನ ಮೇಲೆ ಯಾವ ಭಾರ ಹೊರಿಸಲಿಕ್ಕೂ ನನಗೆ ಇಷ್ಟವಿಲ್ಲ. ಮಗಳ ಮದುವೆಗೆಂದು ನಾನು ಇಟ್ಟಿರು ವುದೇ ಇಪ್ಪತ್ತೈದುಸಾವಿರ ರೂಗಳು. ಅಷ್ಟರಲ್ಲೇ ಎಲ್ಲಾ ಖರ್ಚು ಮುಗಿಯಬೇಕು.

ಕಾಲ ಚೆನ್ನಾಗಿದ್ದಾಗ ಒಂದಿಷ್ಟು ಚಿನ್ನಾ ಬಣ್ಣಾ ತೆಗೆದಿದ್ದೆ. ದೊಡ್ಡ ಮಗಳಿಗೆ ಐದು ತೊಲ ಹಾಕಿದ್ದೆ, ಇವಳಿಗೂ ಐದು ತೊಲ ಹಾಕ್ತೀನಿ" ಎಂದರು ತಂದೆ.

"ಅದೆಲ್ಲಾ ನಮ್ಮ ತಂದೆ ನಿಮ್ಮ ಹತ್ತಿರ ಮಾತಾಡ್ತಾರೆ. ಪ.ಗ ಒಪ್ಪಿದ ಹುಡುಗಿ ಒಳ್ಳೆ ಸಂಪ್ರದಾಯಸ್ಥರ ಮನೆ ಹುಡುಗಿ ಅಂದ್ಮೇಲೆ ದುಡ್ಡು ಕಾಸಿನ ವಿಷಯಕ್ಕೆ ನಮ್ಮ ತಂದೆ ಜಾಸ್ತಿ ಡಿಮ್ಯಾಂಡ್ ಮಾಡಲ್ಲ. ನನ್ನ ತಮ್ಮಾ ಅಂತೂ ವರದಕ್ಷಿಣೆ ವಿರೋಧಿ ಸಂಘದ ಸದಸ್ಯ" ಎಂದು ನುಡಿದಳು ಸುಜಾತ.

ಸುರೇಶ ಅಕ್ಕನ್ನ ಕರೆದು ಏನೋ ಪಿಸುಗುಟ್ಟಿದ.

"ನೋಡಿ ನಮ್ಮ ತಮ್ಮನಿಗೆ ನಿಮ್ಮ ಮಗಳ ಮೇಲೆ ಇಷ್ಟ ಇದೆಯಂತೆ. ಒಂದು.....ಹತ್ತು ನಿಮಿಷ ಮಾತಾಡ್ತಾನಂತೆ" ಎಂದಳು.

ರಾಯರು ಕೊಂಚ ಯೋಚಿಸಿ ನಂತರ "ಆಗ್ಲಿ, ಮುಂದುಗಡೆ ವರಾಂಡದಲ್ಲಿ ನನ್ನ ಕೋಣೆ ಇದೆ; ಅಲ್ಲಿ ಹೋಗಿ ಇಬ್ಬರೂ ಮಾತಾಡಲಿ" ಎಂದರು.

ಸುರೇಶ ಆ ಕೋಣೆಯೊಳಗೆ ಹೋದ. ಹತ್ತು ನಿಮಿಷದಲ್ಲಿ ವಿಜಯ ಕಾಫಿ ಲೋಟಾ ತಂದಳು.

"ಕಾಫಿ ತಗೊಳ್ಳಿ........" ವಿಜಯ ಅವನ ಮುಂದೆ ಕಾಫಿ ಲೋಟಾ ಹಿಡಿದಳು.

"ಥ್ಯಾಂಕ್ಸ್......" ಎಂದ ಸುರೇಶ.

ಕೂತ್ಕೊಳ್ಳಿ ಮಿಸ್ ವಿಜಯ. ಬಿ.ಎ. ಪಾಸಾಗಿದ್ದೀರಿ ನೀವು. ಎಂ.ಎ. ಓದಲಿಕ್ಕೆ ಇಷ್ಟವಿಲ್ಲವಾ ?" ಎಂದ.

ವಿಜಯ ಸುಮ್ಮನಿದ್ದಳು.

"ನಿಮಗೆ ಕೆಲಸಕ್ಕೆ ಸೇರಬೇಕೂಂತ ಆಸೆ ಇದೆಯಾ ?"

ಅವನ ಪ್ರಶ್ನೆಗೆ ಉತ್ತರಿಸುವ ಬದಲು ವಿಜಯಳ ಮನಸ್ಸು ತನ್ನ ಯೋಚನೆಯಲ್ಲಿ ಮುಳುಗಿತು. ಅತ್ತಿಗೆ ವಸಂತ ಬಿ.ಕಾಂ. ಪಾಸಾಗಿದ್ದಳು. ಅವಳ ತಂದೆ, ಇಬ್ಬರು ಅಣ್ಣಂದಿರು ಎಲ್ಲಾ ಬ್ಯಾಂಕಿನಲ್ಲಿ ಕೆಲಸದಲ್ಲಿದ್ದರು.

ವಸಂತ ಬಿ. ಕಾಂ. ಫಸ್ಟ್ ಕ್ಲಾಸ್ ಪಾಸಾದ್ದರಿಂದ ಅವಳಿಗೆ ಕೆಲಸ ಸಿಗುವುದು ಕಷ್ಟವಿರಲಿಲ್ಲ. ಆದರೆ ತಮ್ಮ ಮನೆಯಲ್ಲಿ ತಂದೆ, ಅಣ್ಣ ಇಬ್ಬರಿಗೂ ಹೆಣ್ಣು ಮಕ್ಕಳು ಉದ್ಯೋಗಕ್ಕೆ ಹೋಗಿ ಹೊರಗೆ ದುಡಿಯುವುದು

ಬೇಕಾಗಿರಲಿಲ್ಲ. ಹೀಗಾಗಿ ವಸಂತ ತನ್ನ ಮನದ ಆಸೆ ಅದುಮಿಕೊಂಡು ಸುಮ್ಮನೆ ಇದ್ದಳು. ಆಗಾಗ ಗಂಡನ ಜೊತೆ ಜಗಳ ಕಾಯುತ್ತಿದ್ದಳು

"ಏನು ನೀವೇ ಯಾವುದೋ ಯೋಚನೆಯಲ್ಲಿ ಮುಳುಗಿದ್ದೀರಿ" ನನ್ನ ಯಾವ ಪ್ರಶ್ನೆಗಳಿಗೂ ಉತ್ತರ ಕೊಟ್ಟಿಲ್ಲ" ಕಾಫಿ ಕುಡಿದು ಲೋಟ ಕೆಳಗಿಟ್ಟು ಸುರೇಶ ಕೇಳಿದ.

"ನನಗೆ ಓದು, ಉದ್ಯೋಗ ಈ ಎಲ್ಲಾ ವಿಷಯಗಳಲ್ಲಿ ಅಂಥಾ ಅಭಿರುಚಿ ಏನಿಲ್ಲ, ತೀರ ಬೇಡಾ ಅಂತಲೂ ಇಲ್ಲ" ಎಂದಳು. ಸುರೇಶಾ ನಕ್ಕು,

"ಸರಿ ನಾನು ನನ್ನ ಅಭಿಪ್ರಾಯ ಹೇಳಿಬಿಡ್ತೀನಿ, ಕೇಳಿ. ಕೋಪಬಂದರೆ ಲಟ್ಟಣಿಗೆ ತಗೊಳ್ಳಲ್ಲ ತಾನೆ ?" ಎಂದ.

-"ಇಲ್ಲ ಹೇಳಿ....." ಎಂದಳು ಕುತೂಹಲದಿಂದ.

"ನನಗೆ ಬಿ.ಎ ಓದಿರೋ ಹುಡುಗಿ ಸಾಕು, ಜೊತೆಗೆ ಹೆಂಡ್ತೀನ್ನ ಕೆಲಸಕ್ಕೆ ಕಳಿಸಲು ಇಷ್ಟವಿಲ್ಲ. ಆಮೇಲೆ ನಾನು ತುಂಬ ನಾಲಿಗೆ ಚಪಲದ ಮನುಷ್ಯ. ನನಗೆ ಅಡಿಗೆ, ಊಟ, ತಿಂಡಿ ತುಂಬ ಪರಮಾಯಿಷಿ ಇರಬೇಕು. ಗೋಪಭಟ್ಟರು ನಿಮ್ಮ ಬಗ್ಗೆ ಹೇಳುವಾಗ ಹುಡುಗಿ ತುಂಬ ಚೆನ್ನಾಗಿ ಬಗೆಬಗೆ ಅಡಿಗೆಗಳು, ತಿಂಡಿಗಳು ಮಾಡ್ತಾಳೆ ಅಂದಿದ್ದರು. ಅದು ನನ್ನ ಪಾಲಿನ ಪ್ಲಸ್ ಪಾಯಿಂಟ್......ಒಳ್ಳೆ ಗೃಹಿಣಿ ಆಗಿದ್ದು ಗಂಡನ ಬೇಕು ಬೇಡಗಳನ್ನು ನೋಡಿ ಕೊಂಡಿದ್ರೆ ಸಾಕು, ಅಂಥಾ ಹುಡುಗಿ ನನಗೆ ಬೇಕು."

ಎಂದವನು ಅವಳ ಕಡೆ ನೋಡಿ—"ಏಕೆ ಕೋಪ ಬಂತಾ ನಿಮಗೆ ?" ಎಂದ.

"ಕೋಪ ಏನಿಲ್ಲ. ನಿಮ್ಮ ಅಭಿರುಚಿ.....ನಿಮ್ಮದು" ಎಂದಳು. ಅವನು ಎದ್ದು ನಿಂತು—

"ಓ......ಕೆ. ಇನ್ನೊಂದು ನನ್ನ ದುರ್ಗುಣ ಅಂದರೆ ನನಗೆ ಮುಂಗೋಪ ತುಂಬ ಜಾಸ್ತಿ. ಮೊದಲು ಸಣ್ಣ ವಿಷಯಕ್ಕೂ ಸಿಟ್ಟು ಮಾಡಿಕೊಂಡು ಹಾರಾಡಿಬಿಡ್ತೀನಿ. ಆಮೇಲೆ ಮನಸ್ಸು ತಿಳಿಯಾದಮೇಲೆ ಸಮಾಧಾನವಾಗಿ ಯೋಚಿಸಿ, ತಪ್ಪು ನನ್ನದಿದ್ರೆ ಕ್ಷಮಾಪಣೆಯನ್ನು ಕೇಳಲಿಕ್ಕೆ ಹಿಂಜರಿಯಲ್ಲ. ನಾಲಿಗೆ ಚಪಲ, ಮುಂಗೋಪಾ, ಎರಡೂ ನನ್ನ ದುರ್ಗುಣಗಳು" ಎಂದು ನುಡಿದನು.

"ಅಂದಹಾಗೆ ಬರೀ ನನ್ನ ವಿಷಯವೆ ಆಯಿತು, ನಿಮ್ಮದೇನಾದರೂ ವಿಷಯಾ ಇದ್ದರೆ ಹೇಳಿ ?" ಅಂದ.

"ನನ್ನ ಬಗ್ಗೆ ನಾನೇ ಗುರುತಿಸಿಕೊಳ್ಳೋಂಥಾ ಸದ್ಗುಣಾ, ದುರ್ಗುಣಾ, ಎರಡೂ" ಎಂದಳು.

ಸುರೇಶ ನಕ್ಕು "ಓ.....ಕೆ. ನಾವು ಹೊರಗೆ ಹೋಗೋಣ್ವಾ, ನಾನಂತು ಅಕ್ಕನ ಮುಂದೆ ಹುಡುಗಿ ನನಗೆ ತುಂಬ ಇಷ್ಟವಾಗಿದ್ದಾಳೆ ಅಂತ ಹೇಳಿಬಿಡ್ತೀನಿ. ಅಕ್ಕಾ ಇನ್ನೊಂದೆರಡುಹೆಣ್ಣು ತೋರಿಸ್ಬೋಳಿದ್ದಳು. ನಿಮ್ಮ ಕಡೆಯಿಂದ ಓ.ಕೆ. ಅಂತಬರೆದರೆ ನಾವು ಬೇರೆಹುಡುಗಿಯನ್ನ ನೋಡೋದೆ ಇಲ್ಲ" ಎಂದ. ವಿಜಯ ಸುಮ್ಮನಿದ್ದಳು.

"ಸರಿ. ಹೊರಗೆ ಹೋಗೋಣ್ವಾ......?" ಎಂದು ಹೇಳಿ ಅವನು ಕೋಣೆಯಿಂದ ಹೊರಗೆ ನಡೆದ. ಆ ದಿನದ ವಧುಪರೀಕ್ಷೆಗೆ ಗೆಳತಿ ಲಲಿತಳೂ ಹಾಜರಾಗಿದ್ದಳು.

ಲಲಿತಾ ಕಾಲೇಜಿನಲ್ಲಿ ಕೊಂಚ ಕ್ರಾಂತಿಕಾರಿ ಎಂದು ಹೆಸರಾಗಿದ್ದವಳು. ಹುಡುಗನ ಕಡೆಯವರು ಹೊರಟಮೇಲೆ ವಸಂತ ನುಡಿದಳು.

"ಹುಡುಗಾ ಹೇಗಿದ್ದಾನೆ ?" ಅವಳ ಸ್ವರದಲ್ಲಿ ಹೆಮ್ಮೆ ತುಂಬಿತ್ತು. ಲಲಿತ ಕೊಂಚ ಅಸೂಯೆಯಿಂದ "ತುಂಬ ಸೊಗಸುಗಾರ ಪುಟ್ಟಸ್ವಾಮಿ..... ಅನ್ನಿಸತ್ತೆ" ಎಂದಳು.

"ಮತ್ತೆ ಚಿಕ್ಕ ವಯಸ್ಸು......ಈಗಿನ ಕಾಲದ ಹುಡುಗಾ......ಅಲಂಕಾರ ಮಾಡ್ಕೊತಾನೆ ಆದರೆ ರೂಪವಲ್ಲಿ ಹೇಗಿದ್ದಾನೆ ಅಂತ ಕೇಳಿದ್ದು ಫಸ್ಟ್‌ಕ್ಲಾಸ್ ಹುಡುಗಾ.....ಅವನ ರೂಪದ ಮುಂದೆ ಇನ್ನು ನಮ್ಮ ವಿಜಯಾನೆ ಕೊಂಚ ಕಡಿಮೆ ಬೀಳ್ತಾಳೆ" ಎಂದಾಗ ಇಂದಿರಮ್ಮ,

"ಹೌದು ! ಹುಡುಗಾ ಒಳ್ಳೆ ದೊರೆಮಗಾ ಇದ್ದಾಗೆ ಇದ್ದಾನೆ. ಬಲು ಚೆಲುವಾ" ಎಂದರು ಹುಡುಗನ ರೂಪಾ ವಿಜಯಳಿಗೂ ತುಂಬಾ ಇಷ್ಟವಾಗಿತ್ತು. ಒಳ್ಳೆ ಬಂಗಾರಬಣ್ಣದ ಎತ್ತರ ನಿಲುವಿನ ಕಡು ಚೆಲುವ. ಹಣೆಯನ್ನು ದಟ್ಟವಾಗಿ ಕವಿದ ಕಪ್ಪು ತಲೆಗೂದಲ ಕ್ರಾಪ್, ಚುರುಕಾದ ತೀಕ್ಷ್ಣ ಕಂಗಳು, ಅಲೆಅಲೆಯಾಗಿ ನಗೆ ಚೆಲ್ಲುವಾಗಿ ಆ ಕಂಗಳ ಹೊಳಪುಹೆಚ್ಚುತ್ತಿತ್ತು.

ತುಂಬುಗೆನ್ನೆ, ಕೆಂಪಾದ ತುಟಿ, ಸಾಲಾಗಿ ಜೋಡಿಸಿದ ಮುತ್ತಿನ ಸಾಲಿನಂಥಾ ಹಲ್ಲುಗಳು, ಅತ ಚೆಲುವಾ ನಿಜಕ್ಕೂ ಚೆಲುವಾ.

"ಬಾರೆ ಮರಿ ನಿನ್ನ ಜೊತೆ ಪ್ರೈವೇಟಾಗಿ ಮಾತಾಡ್ಬೇಕು" ಲಲಿತ ತನ್ನ ಮನೆಗೆ ಕರೆದೊಯ್ದಳು. ಲಲಿತಳ ಕೋಣೆಯಲ್ಲಿ ಇಬ್ಬರೂ ಕುಳಿತಾಗ ಲಲಿತ ಕೊಂಚ ಕುತೂಹಲದಿಂದ ಕೇಳಿದಳು

"ಆ ರಾಜಕುಮಾರ ನಿನ್ನನ್ನು ಕೋಣೆ ಒಳಗೆ ಕರೆದುಕೊಂಡು ಹೋದಾಗ ಏನೇನು ಕೇಳ್ದಾ......?" ಆಪ್ತ ಗೆಳತಿ ಆದ್ದರಿಂದ ವಿಜಯ ಏನು ಮುಚ್ಚಿಟ್ಟುಕೊಳ್ಳದೇ ಎಲ್ಲಾ ಹೇಳಿದಳು ಲಲಿತಾ ಎಲ್ಲಾ ಕೇಳಿ ಮೂಗು ಮುರಿದಳು. "ಅಂತು ತುಂಬ ದಬ್ಬಾಳಿಕೆ ಪ್ರವೃತ್ತಿಯವನು ಅನಿಸತ್ತೆ. ಅವನ ಕಂಗಳಲ್ಲಿ ಅಹಂಕಾರ ಕುಣೀತಾ ಇತ್ತು" ಎಂದಳು.

"ನಿಜಾ ಅಂತೀಯಾ....? ಅತ್ತಿಗೆ ಅವನನ್ನ ರಾಜಕುಮಾರಾಂತ ಹೊಗಳಿದರು" ಎಂದಳು.

"ನಿಮ್ಮತ್ತಿಗೆ ಬಿಡು. ನೀನು ಮದುವೆ ಆಗಿ ತೊಲಗಿಹೋದರೆ ಸಾಕೊಂತ ಕಾದಿರಬಹುದು. ಎಲ್ಲಾ ಅತ್ತಿಗೆಯರ ಹಣೆಬರಹಾನು ಅಷ್ಟೆ. ಬಾಯಲ್ಲಿ ಬೆಣ್ಣೆ......ಕೈಯಲ್ಲಿ ದೊಣ್ಣೆ" ಎಂದಳು. ವಿಜಯ ಆತಂಕದಿಂದ,

"ಇಲ್ಲ, ಅತ್ತಿಗೆ ವಿಷಯಾ ಇರಲಿ. ನೀನು ಆ ಹುಡುಗನ ಬಗ್ಗೆ ನಿನ್ನ ಅಭಿಪ್ರಾಯ ತಿಳಿಸು. ನಿಜಕ್ಕೂ ಅವನನ್ನ ವಿವಾಹವಾದರೆ ನಾನು ಸುಖವಾಗಿರಲ್ಲ ಅಂತೀಯಾ ?"

ಲಲಿತಳ ಮಾತೆಂದರೆ ವೇದವಾಕ್ಯ ಎಂದೇ ನಂಬಿದ್ದಳು, ಆ ದಿನಗಳಲ್ಲಿ ವಿಜಯ.

"ಅಂಥಾ ದಬ್ಬಾಳಿಕೆ ಮನೋಭಾವದವರನ್ನ ಮಾಡಿಕೊಂಡರೆ ಖಂಡಿತ ನೀನು ಸುಖವಾಗಿರಲ್ಲ. ಹೊರಗೆ ಕೆಲಸಕ್ಕೆ ಕಳಿಸಲ್ಲಾಂತಾನೆ. ಬರಿ ಅವನ ನಾಲಿಗೆ ಚಪಲಕ್ಕೆ ದಾಸಿಯಾಗಿ ದಿನಕ್ಕೊಂದು ಬಗೆ ಅವನಿಗೆ ಮಾಡಿ ಹಾಕೋದು ; ಅವನು ಎಲ್ಲಕ್ಕು ಮುಂಗೋಪಾ ಅಂತ ಕಾರಣ ಹೇಳಿ ಸಿಡಿಮಿಡಿಗುಟ್ಟುತ್ತಾ ಇದ್ದರೆ ಗದರಿಸಿಕೊಳ್ಳೋದು, ಹೆರಿಗೆ ಯಂತ್ರವಾಗಿ ವರ್ಷಕ್ಕೊಂದೋ, ಎರಡು ವರ್ಷಕ್ಕೊಂದೋ ಹೆರ್ತಾ ಇರೋದು......"

ಲಲಿತಾ ಕಾತ್ಸಾರದಿಂದ ಹೇಳಿದಾಗ ಏಕೊ ವಿಜಯಳಿಗೆ ಅಪಮಾನ ವಾಯಿತು.

"ಥೂ......ಥೂ, ಆ ಥರ ಲೈಫ್ ನನಗೆ ಖಂಡಿತಾ ಇಷ್ಟಇಲ್ಲಪ್ಪ. ನಾನು ಅವನನ್ನ ಖಂಡಿತಾ ವಿವಾಹ ಆಗಲ್ಲ. ಕುರಿ ಹಾಗೆ ತಲೆ ತಗ್ಗಿಸಿ ನಾನು ಹೆದರಿ ಕೊಂಡು ವಿವಾಹವಾಗಲ್ಲ. ತಂದೆ, ಅಣ್ಣಾ ಎಲ್ಲರನ್ನ ಪ್ರತಿಭಟಿಸ್ತೀನಿ" ಎಂದಳು

"ಭೇಷ್ ! ನನ್ನ ಗೆಳತಿ ಆದದ್ದಕ್ಕೆ ಸಾರ್ಥಕ. ಹೆಣ್ಣು ಮಕ್ಕಳಿಗೆ ಸ್ವತಂತ್ರ ಪ್ರವೃತ್ತಿ ಹಾಗು ಸ್ವತಂತ್ರ ಆಲೋಚನೆ ಇರಬೇಕು. ಕುರಿ ಅಲ್ಲ ನೀನು ಅಂತ ತಿಳಿದು ಸಂತೋಷವಾಯ್ತು. ವಿವಾಹವೊಂದೇ ಹೆಣ್ಣು ಮಕ್ಕಳ ಬಾಳಿನ ಪ್ರಧಾನ ಗುರಿಯಲ್ಲ : ಇನ್ನು ಇಪ್ಪತ್ತು ವರ್ಷ ನಿಂಗೆ, ಈಗಿನಿಂದ ಅವನಿಗೆ ಅಡಿಗೆ ಬೇಯಿಸಿ ಹಾಕಿಕೊಂಡಿರಲಿಕ್ಕೆ ಏಕೆ ಹೋಗ್ತಿ ? ತವರು ಮನೆಯಲ್ಲಿ ಹಾಯಾಗಿ ಇದ್ದುಬಿಡು ಬೆಚ್ಚಗೆ ಮಲಗಿಕೊಂಡು ಕಾಲ ಕಳೆ ಒಳ್ಳೆ ಮನೋಭಾವದ ಯುವಕ ಸಿಗಬಹುದು. ಹೆಣ್ಣಿಗೂ ಮನಸ್ಸು, ಹೃದಯದ ಭಾವನೆಗಳಿವೆ ಅನ್ನೊ ವಿಶಾಲಹೃದಯದ ಯುವಕನೊಬ್ಬ ಸಿಕ್ಕಿದಾಗ ವಿವಾಹ ಆಗು" ಎಂದಳು.

"ಆಗ್ಲಿ ಕಣೆ ಥ್ಯಾಂಕ್ಸ್......" ಎಂದು ಹೇಳಿ ಮನೆಗೆ ಬಂದಳು.

ತನಗೆ ಆ ಹುಡುಗ ಇಷ್ಟವಿಲ್ಲ......ಎಂದು ಹಠಾ ಹಿಡಿದಾಗ ತಂದೆ ಗದರಿಸಿ ನೋಡಿದರು.

"ಮದುವೆ ಅವಳ ವೈಯಕ್ತಿಕ ವಿಷಯ ಅಪ್ಪಾ......ಅವಳು ಏಕೊ ಇಷ್ಟವಿಲ್ಲ ಅಂತಾಳೆ, ಬಿಟ್ಟುಬಿಡಿ. ಈಗೇನು ಅವಳಿಗೆ ಅಂಥಾ ಕೊಳೈಹೋಗೋ ವಯಸ್ಸಾಗಿದೆ" ಎಂದು ಅಣ್ಣಾ ಅನಂತನ ವಾದಿಸಿದ. ತಂದೆ ಸುಮ್ಮನಾದರು. ಅಲ್ಲಿಗೆ ವಿಷಯ ಮುಕ್ತಾಯವಾಯಿತು.

ಆದರೆ ತುಂಬಾ ಪೇಚಾಡಿಕೊಂಡವಳು ವಸಂತ. "ಬಂಗಾರದಂಥಾ ಹುಡುಗಾ, ನೋಡ್ಲಿಕ್ಕೆ ಫಿಲಂ ಆಕ್ಟರ್ ಇದ್ದಾಗೆ ಇದ್ದಾನೆ. ಓದು, ವಿದ್ಯಾ, ಸಂಬಳಾ ಎಲ್ಲದರಲ್ಲಿಯೂ ಹೈ ಕ್ಲಾಸ್. ಆ ಹುಡುಗಿ ಕಾಲೇಜ್ ಪ್ಲಾಟ್ ಫಾರಮ್ ಮೇಲೆ ಮಾತಾಡಿದ್ದಾಗೆ ಏನೊ ತಲೆ ಕೊರೆದು ನಿನ್ನ ಮನಸ್ಸು ಹಾಳು ಮಾಡಿದ್ದಾಳೆ" ಎಂದು ಬೈದಳು.

"ಬಿಡಿ ಅತ್ತಿಗೆ, ಹುಡುಗಾ ಚೆನ್ನಾಗಿದ್ದಾನೆ, ಆದರೆ ರೂಪಾ ಅರ ಕೊಂಡು ಕುಡಿಯಲಿಕ್ಕಾಗುತ್ತಾ ? ಅವನ ಮುಂಗೋಪಾ ಎದುರಿಸ್ತಾ ಬಾಳಲಿಕ್ಕೆ ನನ್ನ ಕೈಲಿ ಆಗಲ್ಲ" ಎಂದಳು.

"ಬೇಡಾ ಮಹಾತಾಯಿ..... ಬೇಡಾ, ನಿನಗೆ ಅಷ್ಟು ಬೇಡದಿದ್ದರೆ ಬೇಡೇ ಬೇಡಾ. ಬಂಗಾರದಂಥಾ ಹುಡುಗ, ನೀನು ಮಾಡಿಕೊಳ್ಳದಿದ್ದರೆ ಏನು ? ಯಾವ ಹುಡುಗಿ ಪುಣ್ಯಾ ಮಾಡಿದ್ದಾಳೋ ಮಾಡ್ಕೋತಾಳೆ......" ಎಂದಳು ವಸಂತ.

ಜಯನಗರದಲ್ಲಿ ವಸಂತಳ ತವರುಮನೆಯ ಪಕ್ಕವೇ ಸುರೇಶನ ಅಕ್ಕ ಸುಜಾತಾಳ ಮನೆ. ಒಂದು ವಾರ ಅಕ್ಕನ ಮನೆಗೆಂದು ಸುರೇಶ ಬಂದಾಗ ವಸಂತಳ ತಂದೆ ಹಾಗೂ ಅಣ್ಣಂದಿರು ಆಸಕ್ತಿವಹಿಸಿ ಈ ಸಂಬಂಧಾ ತೋರಿಸಿದ್ದರು.

ಹುಡುಗನಿಗೆ ಆ ಹುಡುಗಿಯ ಮೇಲೆ ತುಂಬಾ ಇಷ್ಟವಿದೆ. ಎರಡು ಬಾರಿ ತಮ್ಮ ಮನೆಗೆ ಬಂದು ವಿಚಾರಿಸಿದ್ದ, ಎಂದು ವಸಂತಳ ಅಣ್ಣಾ ಬಂದು ಹೇಳಿದ್ದ.

ಒಂದು ತಿಂಗಳ ನಂತರ ವಿಜಯಳಿಗೆ ತೀಪ ಸಮಾಚಾರ ಕೊಂಚ ವಿಚಿತ್ರವಾಗಿತ್ತು. ಸುರೇಶನ ಅಕ್ಕನ ಮನೆಗೆ ಲಲಿತಳ ತಂದೆ ಎರಡೆರಡು ಬಾರಿ ಹೋಗಿ ವಿಚಾರಿಸಿ ತಮ್ಮ ಮಗಳನ್ನು ತೋರಿಸಿದ್ದರು, ಐವತ್ತು ಸಾವಿರ ರೂ. ಕ್ಯಾಷ್ ಹುಡುಗನಿಗೆ ಕೊಡುತ್ತೇವೆ. ಇಪ್ಪತ್ತು ತೊಲ ಚಿನ್ನ ಕೊಡುತ್ತೇವೆ. ಮದುವೆ ಅದ್ದೂರಿಯಾಗಿ ಮಾಡಿಕೊಡುತ್ತೇವೆ, ಎಂದು ಆಶೆ ತೋರಿಸಿದ್ದರು. ಹಳ್ಳಿಗೆ ಎರಡೆರಡು ಸಲ ಹೋಗಿ ಸುರೇಶನ ತಂದೆ ತಾಯಿ ಕಣ್ಣಿಗೂ ಮಗಳನ್ನು ಹಾಕಿ ಅಲ್ಲಿಯೂ ವ್ಯವಹರಿಸಿದ್ದರು. ಶ್ರೀಮಂತರ ಮಗಳು ಎಂಬುದಕ್ಕೆ ಸುರೇಶನ ತಂದೆ ತಾಯಿಗಳಿಗೂ ಇಷ್ಟ ಇತ್ತು. ಅಕ್ಕ ಭಾವ ಅಣ್ಣ ಅತ್ತಿಗೆ ಎಲ್ಲರು ಈ ಶ್ರೀಮಂತರ ಹುಡುಗಿ ಇರಲಿ ಎಂದು ಸುರೇಶನಿಗೆ ಒತ್ತಾಯಿಸುತ್ತಿದ್ದರು.

ಆದರೆ ಸುರೇಶ ಒಪ್ಪಿರಲಿಲ್ಲ. ಅಕ್ಕ ಚಿಂತೆಯಿಂದ ಪಕ್ಕದಮನೆಯವರಾದ ವಸಂತಳ ತಾಯಿ ರತ್ನಮ್ಮಳ ಮುಂದೆ—

"ನಿಮ್ಮ ಬೀಗರ ಮನೆ ಹುಡುಗಿಯನ್ನು ನೋಡಿ ಮನಸಾರೆ ಇಷ್ಟ

ಪಟ್ಟಿದ್ದ ಆಮೇಲೆ ಯಾವ ಹುಡುಗಿಯನ್ನು ನೋಡಿದ್ರೂ ಬೇಡ ಅಂತಾನೆ. ಏನು ಮಾಡಲಿ ? ಈಗ ಒಳ್ಳೇ ಶ್ರೀಮಂತರ ಮನೆ ಹುಡುಗಿ ಬಂದಿದೆ, ಆದರೆ ಅವನು ಒಪ್ತಿಲ್ಲಾ......" ಎಂದು ಎಲ್ಲಾ ಹೇಳಿದಳು.

ವಸಂತ ಪ್ರತಿ ಗುರುವಾರ ರಾಯರ ಮಠದಲ್ಲಿ ತಾಯಿಯನ್ನು ಭೇಟಿ ಆಗುತ್ತಿದ್ದಳು. ಮಗಳ ಮೂಲಕ ತಾಯಿಗೆ ವಿಷಯಗಳು ತಿಳಿಯಿತು. ಹುಡುಗಿ ಊರಿನ ಪ್ರಖ್ಯಾತ ಶ್ರೀಮಂತನ ಮಗಳು. ಗಾಂಧೀನಗರದಲ್ಲಿ ಅವರ ಎಲೆಕ್ಟ್ರಾನಿಕ್ಸ್ ಉಪಕರಣಗಳ ಅಂಗಡಿ ಇದೆ. ಹುಡುಗಿ ತಂದೆ ಹೆಸರು ಜಯರಾಂ ಎಂದಾಕ್ಷಣ ವಸಂತಳಿಗೆ ಮಿಂಚು ಹೊಳೆದಂತಾಯಿತು.

ಬಂದು ನಾದಿನಿಯ ಮುಂದೆ ಒದರಾಡಿ "ನೋಡು! ನಿನ್ನ ಗೆಳತಿ ನಿನ್ನ ಕಣ್ಣಿಗೆ ಮಣ್ಣೆರಚಿದ್ದಾಳೆ. ಈಗ ಒಂದು ತಿಂಗಳಿಂದ ಜಯರಾಮರು ಅವರ ಹೆಂಡತಿ ನೂರಾರು ಆಸೆಗಳಿಂದ ಆ ಹುಡಗನ್ನ ಕಟ್ಟಿ ಹಾಕಲಿಕ್ಕೆ ಪ್ರಯತ್ನಿಸ್ತಿದ್ದಾರೆ. ನಮಗೆ ಸುಲಭವಾಗಿ ಆಗೋದ್ರಲ್ಲಿತ್ತು. ನೀನಾಗಿ ಬೇಡಾ ಅಂದೆ" ಎಂದಳು.

ವಿಜಯ ದಿಗ್ಭ್ರಾಂತಳಾಗಿ

"ನಿಜವಾ ಅತ್ತಿಗೆ ? ಲಲಿತಾ ಇಂಥ ವಂಚಕಳೂಂತ ನನಗೆ ತಿಳಿದಿರಲಿಲ್ಲ" ಎಂದಳು. ನಂತರ ಗೆಳತಿಯ ಮನೆಗೆ ಬಂದಳು. ಏನೂ ಅರಿಯದವಳಂತೆ—

"ಯಾವಾಗ ನಿನ್ನ ಮದುವೆ ಊಟ ಹಾಕಸ್ತೀಯಾ?" ಎಂದಾಗ ಲಲಿತೆ ನಿರಾಳವಾಗಿ—

"ನಾನು ಮದುವೆ ಮಾಡ್ಕೊಂಡ್ರೆ ತಾನೇ ನಿನಗೆ ಮದುವೆ ಊಟಾ....." ಎಂದಳು.

"ಏಕೆ ಸುರೇಶ್ ಇನ್ನು ಒಪ್ಪಿಗೇ.....ತಿಳಿಸಿಲ್ಲವಾ ? ಒಂದು ಲಕ್ಷ ರೂಗಳ ವರೆಗೆ ವರದಕ್ಷಿಣೆ ಕೊಡ್ತೀನಿ ಅಂವರಂತೆ, ನಿಮ್ಮ ತಂದೆ ?" ಎಂದಳು.

ಈ ಮಾತಿನ ಒಳಗುಟ್ಟು ಗೊತ್ತಿಲ್ಲದ ಲಲಿತಳ ತಾಯಿ—

"ಹೌದು ! ನೋಡಮ್ಮ, ಮನೆ ಸಹಾ ಕೊಡ್ತೀವಿ ಅಂದಿದ್ದೀವಿ. ಆದರೆ ಅವನು ಒಪ್ಪಿಗೆ ತಿಳಿಸಿಲ್ಲ ಇವಳು, ನೋಡಿದರೆ ಆ ಹುಡುಗನ ರೂಪಕ್ಕೆ ಮರುಳಾಗಿದ್ದಾಳೆ. ಹುಡುಗಾ ಒಳ್ಳೆ ಮನ್ಮಥ ಇದ್ದಾಗೆ ಇದ್ದಾನೆ.

ಈಗಲೆ ಮದುವೆ ಬೇಡಾಂತ ಹಠಾ ಹಿಡಿದಿದ್ದಾನೆ" ಎಂದು ಏನೇನೋ ಹೇಳಿದರು.

"ಹೌದಂತೆ ಆಂಟಿ, ಆ ಹುಡುಗನ ಅಕ್ಕನ ಮನೆಯು ಹತ್ತಿರವೇ ನಮ್ಮ ಅತ್ತಿಗೆಯ ತಾಯಿ ಮನೆ ಇದೆ. ಅವರಕ್ಕಾ ಅಂದರಂತೆ, ಆ ಹುಡುಗಿಯ ತಂದೆ ತಾಯಿ ಬಂಧು ಎಷ್ಟು ದುಡ್ಡಿನ ಆಸೆ ತೋರಿಸಿದರೂ ಹುಡುಗನಿಗೆ ಹುಡುಗಿಯ ಮೇಲೆ ಆಶೆ ಇಲ್ಲ......ಏನು ಮಾಡೋದು ? ಅಂತ ಪೇಚಾಡಿದರಂತೆ" ಎಂದಳು.

ಲಲಿತಳ ಮುಖ ಕಪ್ಪಿಟ್ಟಿತು. ಲಲಿತಳ ತಾಯಿ ಸ್ವಾಭಾವಿಕವಾಗಿ ಎಂಬುವಂತೆ—

"ಹೌದಮ್ಮ ನಾನೂ ಅದೇ ಹೇಳ್ದೆ. ಹುಡುಗನಿಗೆ ಇಷ್ಟವಿಲ್ಲ ಅಂತ ಕಾಣುತ್ತೆ, ಅದಕ್ಕೆ ದುಂಬಾಲು ಬಿದ್ದು ಅದೇ ಹುಡುಗನಿಗೆ ಕೊಡೋದೇನು? ಬೇರೆ ನೋಡಿ ಅಂದೆ. ಆವರೆ ನಮ್ಮ ಲಲಿತಳ ಹಠ ಹುಡುಗಾ ಒಳ್ಳೆ ಫಿಲಂ ಆಕ್ಟರ್ ಇದ್ದಹಾಗಿದ್ದಾನೆ......ಅದೇ ಹುಡುಗನೇ ಇರಲೀ ... ಅಂತಾಳೆ" ಎಂದವರೆ,

"ಕೊಂಚ ಕಾಫಿ ತರ್ತೀನಿ ತಾಳು" ಎಂದು ಒಳಗೆ ನಡೆದರು.

"ಈಗಲೂ ನಿನಗೆ ಅಷ್ಟು ಇಷ್ಟ ಇದ್ದರೆ... ನಾನೇ ನಿನ್ನ ಪರವಾಗಿ ಸುರೇಶನ ಸಂಧಾನ ಮಾಡ್ತೀನಿ ಕಣೆ" ಎಂದಳು.

ಲಲಿತ ತಲೆ ತಗ್ಗಿಸಿ—

"ಅಟ್ಟದಿಂದ ಬಿದ್ದಿರೋರನ್ನ ಒನಕೆ ತಗೊಂಡು ಹೊಡೀಬಾರದೂಂತ ಗಾದೆ ಇದೆ" ಎಂದಳು.

ವಿಜಯ ಸಿಡಿದು -

"ಥೂ ! ನೀನಿಷ್ಟು ವಂಚಕಳೂಂತ ನನಗೆ ಗ್ಗೊತ್ತಿರಲಿಲ್ಲ. ನನ್ನ ಹತ್ತಿರ ಕ್ರಾಂತಿಕಾರೀ ಹಾಗೆ ಮಾತಾಡಿ ಈಗ ಹಣದ ಆಸೆ ತೋರಿಸಿ ಅವನನ್ನೆ ವಿವಾಹವಾಗಲಿಕ್ಕೆ ಹೊರಟಿದ್ದಿ" ಎಂದಳು.

"ನಿನಗೆ ಅಷ್ಟು ಇಷ್ಟ ಇದ್ದರೇ ನನ್ನ ಮಾತು ಏಕೆ ಕೇಳ್ತಾ ಇದ್ದಿ ? ಆ ಹುಡುಗಾ ನಿನ್ನನ್ನ ಬೇಡಾ ಅಂದ ಮೇಲೆ ನಾವು ವ್ಯವಹರಿಸಿದ್ದು, ಹುಡುಗನ ಅಕ್ಕ ಬಾವ ಯಾರಿಗೂ ಆ ದಿನ ನಿನ್ನ ಮೇಲೆ ಇಷ್ಟ ಇರಲಿಲ್ಲವಂತೆ. ನಿಮ್ಮ

ಹಂಡೆ ಥಂಥರಾ ಕಡ್ಡಿ ಮುರಿದ್ಹಾಗೆ ಮಾತಾಡಿ ಇಪ್ಪತ್ತೈದು ಸಾವಿರದಲ್ಲಿ ಎಲ್ಲಾ ಮುಗಿಸ್ತೀನಿ ಅಂತ ಖಡಾಖಂಡಿತವಾಗಿ ಹೇಳಿದ್ದು ಅವರಿಗೆಲ್ಲಾ ಕೋಪಾ ಬಂತಂತೆ. ಈ ದರಿದ್ರ ಸಂಬಂಧ ಬೇಡಾ ಅಂತ ಅವರೆಲ್ಲ ಅಂದರಂತೆ." ಎಂದಳು.

ವಿಜಯ ಕೋಪದಿಂದ

"ಹೌದು ! ಮತ್ತೆ ನಾವು ದರಿದ್ರದವರೆ ನಿನ್ನ ಹಾಗೆ ಎಂಟು ದಿನ ಕ್ಕೊಂದು ಸಲ ಹೋಗಿ ಐವತ್ತು ಐವತ್ತು ಸಾವಿರ ರೂಗಳ ಹೆಚ್ಚಿನ ಆಸೆ ತೋರಿಸಿ ಹುಡುಗನ್ನ ಬಲೆಗೆ ಹಾಕೊಳ್ಳಬೇಕೇನು ?" ಎಂದಳು.

"ನಮಗೆ ದುಡ್ಡಿದೆ, ದುಡ್ಡಿನ ಆಸೆ ತೋರಿಸ್ತೀವಿ. ಅವಕ್ಕೇನೀಗ ?" ಎಂದಳು ಲಲಿತ.

ವಿಜಯಳ ಮೈ ಉರಿಯಿತು. ತಪ್ಪು ಮಾಡಿ ಸಿಕ್ಕಿ ಹಾಕಿಕೊಂಡಾ ಗಲೂ.....ಎಷ್ಟು ಅಹಂಕಾರ ! ಎನ್ನಿಸಿತು. ಏಕೋ ಮನೆಗೆ ಹೋಗಲು ಮನಸ್ಸು ಬರಲಿಲ್ಲ. ಸೀದಾ ಬಸ್ ಹಿಡಿದು ಜಯನಗರ ನಾಲ್ಕನೇ ಬ್ಲಾಕಿಗೆ ಬಂದಳು. ಅತ್ತಿಗೆಯ ತವರುಮನೆ, ಎಂದಾದರೂ ವರ್ಷಕ್ಕೊಮ್ಮೆ ಏನಾದರೂ ಸಮಾರಂಭಾ ಇದ್ದರೆ ಬರುತ್ತಿದ್ದಳು.

ಇದ್ದಕ್ಕಿದ್ದ ಹಾಗೆ ಅತ್ತಿಗೆಯ ತಾಯಿ ತನ್ನನ್ನು ಕಂಡರೆ ಏನೆಂದು ಕೊಳ್ಳಬಹುದು ? ಏನು ಹೇಳಬೇಕು ಅವರಿಗೆ ? ಯಾವುದೋ ಗುಂಗಿಗೆ ಒಳಗಾದವರಂತೆ.....ನಾನೇಕೆ ಬಂದೆ ಇಲ್ಲಿಗೆ ? ಒಂದೇ ಕಾಂಪೌಂಡಿನಲ್ಲಿ ವಸಂತಳ ತಾಯಿ ಮನೆಯು ಪಕ್ಕದ್ದೇ ಸುರೇಶನ ಅಕ್ಕನ ಮನೆ, ಆಕೆಯ ಕಣ್ಣಿಗೆ ನಾನು ಬಿದ್ದರೆ ಏನು ಅನ್ನಬಹುದು ?

ನೂರಾರು ಚಿಂತೆಯಲ್ಲಿ ಮುಳುಗಿ—

ಹೆಜ್ಜೆ ಹಾಕುತ್ತಿದ್ದವಳಿಗೆ ಎದುರಿಗೆ ಬಂದ ವ್ಯಕ್ತಿ ಅವಳ ಸಮೀಪ ನಿಂತು,

"ಹೋ ! ಇದೇನು ನೀವಿಲ್ಲಿ ?" ಎಂಬ ಸ್ವರ ಕೇಳಿ ತಲೆ ಎತ್ತಿದಳು.

ಸುರೇಶ್....ಸೊಗಸುಗಾರ ಪುಟ್ಟಸ್ವಾಮಿ ಮನಸ್ಸಿನ ರಾಜಕುಮಾರ ನಂತಿರುವ ಕಣ್ಣು ಚೆಲುವ ಸುರೇಶ ಅಹ್ ! ಇವನ ಈ ರೂಪ ನೋಡ್ತೇ

ಲಲಿತಾ ಮರುಳಾಗಿ ತನಗೆ ವಂಚನೆ ಮಾಡಿದ್ದಳು ತಿಳಿಹಸಿರು ಸಫಾರಿಯಲ್ಲಿ ಎಷ್ಟು ಚೆನ್ನಾಗಿ ಕಾಣುತ್ತಿದ್ದಾನೆ.

"ನಮ್ಮ ಸೆಂಟರ ಮನೆಗೆ ಬಂದಿದ್ದೆ" ಎಂದಳು. "ಒಂದು ಹತ್ತು ನಿಮಿಷ ನಿಮ್ಮ ಜೊತೆ ಮಾತಾಡಬೇಕಿತ್ತು. ಮಿಸ್ ವಿಜಯ. ಆ ಕಡೇ ಪಾರ್ಕಿಗೆ ಬರ್ತೀರಾ......? ಎರಡು ನಿಮಿಷ ?" ಎಂದ.

"ಬನ್ನಿ ಹೋಗೋಣ" ಎಂದು ನುಡಿದು ಮುಂದಾಗಿನಡೆದಳು, ಅವಳು ಏನೂ ಪ್ರತಿಭಟಿಸದೆ ಬಂದದ್ದು ಅವನಿಗೆ ಆಶ್ಚರಿ ಆಯಿತು.

ಇಬ್ಬರು ಅಲ್ಲೇ ಇದ್ದ ಪಾರ್ಕಿನ ಒಂದು ಮರದ ನೆರಳಿಗೆ ಬಂದರು.

"ಮಿಸ್ ವಿಜಯ ನೀವು ನನ್ನ ಏಕೆ ನಿರಾಕರಿಸಿದಿರಿ, ಕಾರಣ ಹೇಳ್ತೀರಾ?" ಕೊಂಚ ಉದ್ವೇಗದಿಂದ ಕೇಳಿದ.

ಅವಳು ಉತ್ತರಿಸುವಷ್ಟರಲ್ಲೇ,

"ಪ್ರತಿಯೊಬ್ಬ ಮನುಷ್ಯನಿಗೂ ತನ್ನದೇ ಆದ ವೈಯಕ್ತಿಕ ಅಭಿಪ್ರಾಯಗಳಿರುತ್ತೆ ಎಂದು ನಾನು ಬಲ್ಲೆ. ಆದರೆ ಒಬ್ಬ ಮಧ್ಯಮವರ್ಗದಹುಡುಗಿ ನನ್ನ ತಿರಸ್ಕರಿಸಿದಳೆಂದರೆ ನನಗೆ ಕೊಂಚ ಕುತೂಹಲವಿದೆ. ರೂಪಾ, ವಿದ್ಯಾ, ಓದು ಶ್ರೀಮಂತಿಕೆ ತಕ್ಕಮಟ್ಟಿಗೆ ನನಗಿದೆ ಅಂತ ಭಾವಿಸಿದ್ದೇನೆ. ಒಂದು ಒಳ್ಳೆ ಉದ್ಯೋಗವೂ ನನಗಿದೆ. ಆದರೂ ಒಂದು ಹುಡುಗಿಯನ್ನು ನಾನು ಮೆಚ್ಚಿಸಲಿಲ್ಲ ಅಂದರೆ ಅಪಮಾನಕ್ಕಿಂತ ಹೆಚ್ಚಾಗಿ ಆಶ್ಚರ್ಯ ಇದೆ. ನೀವು ಏಕೆ ನನ್ನ ನಿರಾಕರಿಸಿದಿರಿ ಅಂತ ತಿಳಿದರೆ ನನ್ನ ಕುತೂಹಲ ತಣಿಯುತ್ತೆ" ಎಂದ. ಅವಳು ತಲೆತಗ್ಗಿಸಿ,

"ಅದಕ್ಕೆ ನನ್ನ ಮೂರ್ಖತನ ಕಾರಣ. ಅವರಿವರ ಮಾತು ನಂಬೋ ಸ್ವತಂತ್ರ ಆಲೋಚನೆ ಇಲ್ಲದ ಹೆಣ್ಣು ನಾನು" ಎಂದು ಪ್ರಾರಂಭಿಸಿ ಸಾಧ್ಯಂತವಾಗಿ ಎಲ್ಲಾ ವಿವರಿಸಿದಳು.

"ಈಗ ನನಗೆ ಪಶ್ಚಾತಾಪವಾಗಿದೆ ಆದರೆ ಚೆಲ್ಲಿ ಹೋದ ಹಾಲಿಗೆ ಅತ್ತು ಫಲವೇನು ?" ಎಂದು ಹತಾಶಳಾಗಿ ನುಡಿದಳು.

"ಸುರೇಶ ನಗುತ್ತಾ —

"ಆದರೆ ಹಾಲು ಚೆಲ್ಲಿಲ್ಲ ವಿಜಯ ನನ್ನ ಹೃದಯ ಇನ್ನೊಬ್ಬ ಳಿಟ್ಟಿಲ್ಲ

ನಿಮ್ಮ ಬಗ್ಗೆ ತುಂಬಿರೊ ಪ್ರೀತಿ ಅನ್ನೋ ಹಾಲು ಹಾಗೆಯೇ ಇದೆ" ಎಂದ. ವಿಜಯ ಲಜ್ಜೆಯಿಂದ ತಲೆತಗ್ಗಿಸಿದಳು.

"ನಾಳೆ ನಿಮ್ಮ ತಂದೆಯವರ ಹತ್ತಿರ ಬಂದು ಮಾತಾಡಲಾ ? ಬೇಗ ಮುಹೂರ್ತ ನಿಶ್ಚಯಿಸಲಿಕ್ಕೆ ಹೇಳಲಾ ?" ಎಂದ.

"ನಿಜಕ್ಕೂ ನೀವು ತುಂಬ ಸಹೃದಯರು......" ಎಂದಳು ವಿಜಯ. ಅವಳ ಧ್ವನಿ ಗದ್ಗದವಾಗಿತ್ತು.

"ನಮಗೆ ಬೇಕಾದ ವಸ್ತುವನ್ನು ಪಡೆಯಬೇಕಾದರೆ ನಾವು ಸಹೃದಯರಾಗಲೇಬೇಕಲ್ಲ" ಎಂದು ನಕ್ಕ ಸುರೇಶ, ನಗುವಾಗ ಎಷ್ಟು ಸುಂದರನಾಗಿ ಕಾಣುತ್ತಾನೆ......ಅವನನ್ನೇ ನೋಡುತ್ತಾ ಮೈಮರೆತಳು ವಿಜಯ.

* * * * *

ಮುಂದಿನ ಎರಡು ತಿಂಗಳಲ್ಲೇ ಅವಳ ಮದುವೆ ಸುಲಲಿತವಾಗಿ ಸುರೇಶನೊಂದಿಗೆ ನೆರವೇರಿತು. ವಿವಾಹವಾದ ಎರಡನೆಯ ದಿನವೇ ಗಂಡಿನ ಕಡೆಯವರು ಮನೆ ತುಂಬಿಸಿಕೊಂಡು ಹಳ್ಳಿಗೆ ಕರೆದೊಯ್ದರು. ಒಂದು ವಾರ ಹಳ್ಳಿಯಲ್ಲಿದ್ದು, ಸುರೇಶನ ಜೊತೆ ಸಂಸಾರ ಹೂಡಲು ಮೈಸೂರಿಗೆ ಬಂದಳು.

ದಿನಗಳುಸುಮಧುರವಾಗಿ ಕಳೆಯುತ್ತಿದ್ದವು. ತಾನು ಯಾವ ದಬ್ಬಾಳಿಕೆಯನ್ನು ಎದುರಿಸುತ್ತಿದ್ದೇನೆಂಬ ಅನುಭವ ಅವಳಿಗಾಗಲಿಲ್ಲ. ರುಚಿರುಚಿಯಾಗಿ ಅಡಿಗೆ ತಿಂಡಿ ಮಾಡಿ ಹಾಕುತ್ತಿದ್ದಳು. ಪಾತ್ರೆ ಬಟ್ಟೆ, ಕಸಾ ಇತ್ಯಾದಿ ಶುಚಿ ಮಾಡಲು ಒಬ್ಬ ಕೆಲಸದವಳಿದ್ದಳು. ಗ್ಯಾಸ್, ಕುಕ್ಕರ್, ಇತ್ಯಾದಿ ಸಾಧನಗಳಿದ್ದವು.

ಸಾಕಷ್ಟು ಸಮಯ ವಿಶ್ರಾಂತಿ ಇರುತ್ತಿತ್ತು. ಸಂಜೆ ದೇವಸ್ಥಾನ ಶಾಪಿಂಗ್ ಎಂದು ಹೊರಗೆ ಹೋಗಿ ಬರುತ್ತಿದ್ದರು. ಹಣ್ಣು, ಹೂವು, ತರಕಾರಿ ಅಥವಾ ದಿನಸಿ ಸಾಮಾನು ಏನೇ ತರುವುದಿರಲಿ ಗಂಡನ ಜೊತೆ ಅಲಂಕರಿಸಿಕೊಂಡು ಅಡ್ಡಾಡುವುದು ಎಂದರೆ ಅವಳಿಗೆ ಅತಿಯಾದ ಆಸೆ.

ಆರು ತಿಂಗಳು ತವರು ಮನೆಗೆ ಹೋಗಿ ಎಂಟು ದಿನ ಇದ್ದು ಬಂದವಳು. ಗೌರಿಹಬ್ಬಕ್ಕೆ ಹಳ್ಳಿಗೆ ಅತ್ತೆಮನೆಗೆ ಹೋಗಿ ಬಂದಳು.

ಸುರೇಶನ ಮುಂಗೋಪಾ ಅವನು ಹೇಳಿಕೊಂಡಷ್ಟು ಪ್ರಮಾಣದಲ್ಲಿ ಇಲ್ಲ ಎನಿಸಿತ್ತವಳಿಗೆ. ಆಗಾಗ ಜೋರು ಮಾಡುತ್ತಿದ್ದ.

ಅವಳು ಕಣ್ಣಲ್ಲಿ ನೀರು ಕಂಡೊಡನೆ ಕರಗಿ ನೀರಾಗಿ ಪರಿಪರಿಯಾಗಿ ಮುದ್ದು ಮಾಡಿ ಸಂತೈಸುತ್ತಿದ್ದ. ಸಣ್ಣಪುಟ್ಟ ಕಾಣಿಕೆಗಳು......ಸೀರೆಗಳಿಗಂತೂ ಲೆಕ್ಕವೇ ಇರಲಿಲ್ಲ. ಸುರೇಶ ಟ್ಯೂಷನ್ ಎಲ್ಲಾ ಸೇರಿ ತಿಂಗಳಿಗೆ ಎರಡು ಸಾವಿರದವರೆಗೆ ಸಂಪಾದಿಸುತ್ತಿದ್ದ.

ತಮ್ಮನ ಓದು, ತಂಗಿಯ ಮದುವೆ ಇತ್ಯಾದಿ ಯಾವ ಜವಾಬ್ದಾರಿ ಇಲ್ಲ. ಬಂದ ಸಂಬಳಾ ಖರ್ಚು ಮಾಡಿಕೊಂಡು ಆರಾಮವಾಗಿರುತ್ತಿದ್ದರು.

ಆಗಾಗ ಹತ್ತಿರದ ಹಳ್ಳಿಯಿಂದ ಅವನ ತಾಯಿ ಅಥವಾ ಅಣ್ಣ ಬಂದರೆ ಎರಡು ದಿನ ಮಾತ್ರ ಇದ್ದು ಹೋಗುತ್ತಿದ್ದ ತಾಯಿ ಬಂದರೆ ಎಂಟು ದಿನ ಇದ್ದು ಹೋಗುವಳು.

ಯಾರೇ ಬರಲಿ......ಒಂದು ಬುಟ್ಟಿ ತನಿಯಾದ ಬಗೆಬಗೆ ತರಕಾರಿ ಬಾಳೆ ಗೊನೆ, ಏಳೆಂಟು ತೆಂಗಿನಕಾಯಿ ಅಥವಾ ಗಿಟಕು, ಹಲಸಿನ ಹಣ್ಣು, ಉಪ್ಪಿನ ಕಾಯಿ, ತೊಕ್ಕು, ಹಪ್ಪಳಾ, ಸಂಡಿಗೆ ಒಳ್ಳೆ ತುಪ್ಪಾ, ತರಕಾರಿ ಎಲ್ಲಾ ತರುತ್ತಿದ್ದರು.

ವಿಜಯ ಸಂಕೋಚದಿಂದ—

"ನಾವು ಇರೋದು ಇಬ್ಬರು, ಇಷ್ಟೆಲ್ಲಾ ಏಕೆ ತರ್ತೀರಿ?" ಎಂದರೆ ಆಕೆ ನಗುತ್ತಾ—

"ನನ್ನ ಮಗನಿಗೆ ನಾಲಿಗೆ ಚಪಲ ಜಾಸ್ತಿ, ಚೆನ್ನಾಗಿ ಮಾಡಿಹಾಕಮ್ಮ" ಎನ್ನುವರು.

ಅಣ್ಣಾ ಒಮ್ಮೆ ಬಂದಾಗ ಎರಡುಮೂಟೆ ಸಣ್ಣಕ್ಕಿ ಹಾಕಿಸಿದ್ದ, ತಮ್ಮನ ಕೈಗೆ ಎರಡು ಸಾವಿರ ರೂಗಳನ್ನು ಹಾಕಿ,

"ಭತ್ತ ಮಾರಿದ ಹಣಾ ಬಂದಿದೆ, ನನಗೂ ಅಪ್ಪಾ ಎರಡು ಸಾವಿರಾ ಕೊಟ್ಟಿದ್ದಾರೆ. ಇದು ನಿನ್ನ ಪಾಲು ವಿಜಯಮ್ಮಂಗೆ......

ಏನಾದರೂ ಚಿನ್ನಾ ತೆಗೆಯಬೇಕಂತೆ......" ಎಂದ. ಅದೇ ಸಮಯದಲ್ಲ ಸುರೇಶನಿಗೆ ಪೇಪರ್ ಕರೆಕ್ಷನ್ ಹಣಾ ಬಂದಿತ್ತು.

ಕೊಂಚ ಉಳಿತಾಯದ ಹಣವೂ ಬ್ಯಾಂಕಿನಿಂದ ಸೇರಿಸಿ ಎರಡು

ತೊಲಕ್ಕೆ ಒಂದು ನೆಕ್ಲೆಸ್ ಮಾಡಿಸಿದ್ದ. ತಂದೆಯ ಮನೆಯಿಂದ ಕೊಂಡ ವಾಲೆ ಜುಮುಕಿ ಎರಡೆಳೆ ಮಾಂಗಲ್ಯದ ಚೈನ್ ಇತ್ತು.

ಗಂಡನ ಮನೆಯಲ್ಲಿ ನಾಲ್ಕು ನಾಲ್ಕು ಮೆಣಸಿನಬಳೆಗಳು......ಎರಡೆಳೆಯ ಅವಲಕ್ಕಿ ಸರಾ......ಎರಡು ಉಂಗುರಾ ಹಾಕಿದ್ದರು. ಇದೆಲ್ಲದರ ನಡುವೆ ಇನ್ನೊಂದು ಹೊಸ ಒಡವೆ ಬಂದದ್ದು ಆನಂದವಾಗಿತ್ತು.

ಈ ಮಧ್ಯೆ ಅಕ್ಕನಿಂದ ಬಂದ ಈ ಪತ್ರ......ಅವಳಿಗೆ ಗೊಂದಲ ಉಂಟು ಮಾಡಿತ್ತು. ಸುರೇಶ ಹೇಗೆ ರೇಗಿದ್ದ.

ನಾನೇನು ನಿನ್ನ ಡೈವೋರ್ಸ್ ಮಾಡುವುದಿಲ್ಲ ಎಂಬ ಪದ ನೆನಪಿಗೆ ಬಂದಾಗ ಅವಳಿಗೆ ತೀರ ಅಹಿತವೆನಿಸಿತು.

'ಛೆ......ಡೈವೋರ್ಸ್ ಎಂಬ ಪದಾ ಏಕೆ ಬಳಸಬೇಕು? ಇದರಲ್ಲಿ ನನ್ನ ತಪ್ಪೇನಿದೆ......' ಎಂದುಕೊಂಡು ಹಲ್ಲು ಕಚ್ಚಿದಳು.

ಗಡಿಯಾರ ಎಂಟು ಬಾರಿಸಿದಾಗ ಅಡಿಗೆ ಸಹ ಮಾಡಿಲ್ಲ. ಯೋಚನೆಗಳಲ್ಲಿ ತಾನು ಮೈಮರೆತಿದ್ದೆ ಎಂದು ನೆನಪಾಯಿತು.

ಎದ್ದು ಅನ್ನಕ್ಕಿಟ್ಟಳು. ಏನು ಮಾಡಿದರೂ ಉತ್ಸಾಹವಿಲ್ಲ. ಪಲ್ಯ, ಚಟ್ನಿ ಯಾವುದೂ ಮಾಡಲಿಲ್ಲ. ಇನ್ನೊಮ್ಮೆ ಮುಖ ತೊಳೆದು ಸೀರೆ ಬದಲಾಯಿಸಿದಳು. ಸುರೇಶ ಬಂದ.

ತನಗೀಗ ಏನೇನು ತಂದಿದ್ದಾನೊ? ಯಾವ ರೀತಿ ಓಲೈಸಿ ಸಮಾಧಾನ ಪಡಿಸುತ್ತಾನೊ ಎಂದು ಕಾದಳು.

ಸುರೇಶಾ ಬೂಡ್ಸ್ ಬಿಚ್ಚಿ—

"ಯಾವ ಸಿನಿಮಾ ನಿಮ್ಮ ತಾಯಿ ಆಕ್ಟ್ ಮಾಡ್ತ ಇರೋದು?" ಎಂದ.

ಹೆಸರು ಹೇಳಿದಳು.

"ಈ ಮ್ಯಾಗ್‌ಜೈನ್‌ನಲ್ಲಿ ಅದರ ಚಿತ್ರಾ......ಬಂದಿದೆ ನೋಡು......" ಎಂದ.

ಅವನು ಕೈಕಾಲು ತೊಳೆಯಲು ಬಚ್ಚಲಮನೆಗೆ ನಡೆದನು. ಅವಳು ಆ ಮ್ಯಾಗ್‌ಜೈನ್ ತೆರೆದಳು. ಒಟ್ಟು ಚಿತ್ರಕಥೆ ಜೊತೆಗೆ......ತಾಯಿಯ ಎರಡು ವಿಶೇಷ ಭಂಗಿಯ ಚಿತ್ರಗಳಿತ್ತು. ಫ್ರಾಕ್ ಹಾಕಿಕೊಂಡು ಹಲ್ಲು ಕಿರಿಯುತ್ತ

ನೃತ್ಯಭಂಗಿಯಲ್ಲಿ ನಿಂತ ಚಿತ್ರ ಒಂದು, ಬಾಬ್ ಕೂದಲು ಸೆಲ್ವಾರ್‌ಕಮೀಜ್ ಧರಿಸಿದ ವಿಕಾರಚಿತ್ರ ಒಂದು. ಅರ್ಧ ಮುಖ ಆವರಿಸಿದ ಕೂಲಿಂಗ್ ಗ್ಲಾಸ್.

"ಅದನ್ನ ಎಷ್ಟು ಹೊತ್ತು ನೋಡ್ತಿ ? ಊಟಾ ಹಾಕು" ಗದರಿಸಿದಂತೆ ನುಡಿದ.

"ತಿಂಡಿ ಏನು ತಂದಿಲ್ಲವೆ ?" ನಿನಗೆ ಇಷ್ಟವಾದ ತಿಂಡಿಗಳು ತರುತ್ತೇನೆ. ಸಮಾಧಾನ ಮಾಡುತ್ತೇನೆ, ಎಂದವನು ಇವನೇನೆ ?

ಯೋಚಿಸುತ್ತಾ ತಟ್ಟೆ ಇಟ್ಟು ಅನ್ನಾ ಹಾಕಿ ಬೆಳಗಿನ ಹುಳಿ ಮಾತ್ರ ಬಡಿಸಿದಳು.

"ಏನು ಅಡಿಗೆ ಇದು ವಿಜಿ ? ರಾತ್ರಿಗಾಗಿ......ಏನೂ ಮಾಡಲಿಲ್ಲವೆ ?" ಎಂದ.

"ಥೆ......ಥೇ, ಏನು ಊಟವೊ ಇದು, ಸ್ವಲ್ಪ ಹಪ್ಪಳಾ ಸಂಡಿಗೆ ಆದರೂ ಕರಿಯಬಾರದಾ ?" ಎಂದ.

"ಈಗ ಕರೀಲಾ ?" ಎಂದು ಹೆದರುತ್ತಾ ಕೇಳಿದಳು.

"ಈಗ ನನ್ನ ಎಲೆಯ ಮುಂದೆ ಕೂರಿಸಿ ಕರೀತಿಯೇನು ?" ಎಂದು ಗದರಿದ.

"ಒಂದಿಷ್ಟು ಮೊಸರು ಹಾಕು" ಎಂದು ಊಟದ ಶಾಸ್ತ್ರ ಮುಗಿಸಿದ.

ಅವಳಿಗೆ ತುಂಬ ದುಃಖವಾಯಿತು. ಊಟಾ ಮುಗಿಸಿ......ತಾನು ಎಲೆ ಗೋಮೆ ಮಾಡಿ, ಹಾಲಿಗೆ ಹೆಪ್ಪು ಹಾಕಿ...... ಮಲಗಲು ಕೋಣೆಯ ಒಳಗೆ ಬಂದಳು.

ಅದೇ ಮ್ಯಾಗ್ಜೈನ್ ಹಿಡಿದು ಅದೆ ಪತ್ರಿಕೆ ನೋಡುತ್ತಾ ಮಲಗಿದ್ದಾನೆ ಸುರೇಶ. ಏನೂ ಮಾತಾಡದೇ ತಾನು ಹಾಸಿಗೆಯ ಅಂಚಿನಲ್ಲಿ ಮಲಗಿದಳು.

"ನಿಮ್ಮ ತಾಯಿಯಾ ಇಂಥಾ ಕೆಲಸಾ ಏಕೆ ಮಾಡಿದರು ವಿಜಿ ?" ಎಂದ.

"ಅವರನ್ನೆ ಕೇಳ್ಹೋಗಿ......" ಬೇಸತ್ತು ನುಡಿದಳು, ಅಳತೊಡಗಿದಳು. ಸುರೇಶ ಬೇಸರದಿಂದ ನುಡಿದ.

"ನೀವೇನು ಹೆಂಗಸರು ಎಲ್ಲದಕ್ಕೂ ಅತ್ತು ಪರಿಹಾರ ಕಂಡ್ಕೋತೀರಿ. ಆದರೆ ನಂಗೆ ಇವತ್ತು ಎಷ್ಟು ಇನ್‌ಸಲ್ಟ್ ಆಯ್ತು ಗೊತ್ತಾ ?" ಎಂದ

"ಗೆಳೆಯನ ಜೊತೆ ಬರ್‍ತಾ ಇದ್ದೆ. ಅದ್ಯಾರೊ ನಿಮ್ಮ ತವರುಮನೆ ಕಡೆ

ಬಳಗಾಂತ...... ಒಂದು ಸಲ ಪರಿಚಯ ಮಾಡಿಸಿದ್ದಿಯಲ್ಲ ಆ ಕೃಷ್ಣಮೂರ್ತಿ ಪುರಂ ನಿವಾಸಿ...... ರಾಮರಾವ್...... ಆತ ಸಿಕ್ಕಿ ಸಾಧ್ಯಾಂತವಾಗಿ ವಿಷಯ ವಿವರಿಸಿ ಪತ್ರಿಕೆ ಕೊಟ್ಟ. 'ಹೇಗೆ ಹೀಗುಂಟಾ ಸಾರ್! ಎಂಥಾ ಮನೆತನ? ಈಯಮ್ಮ ಮಾಡೋದಾ? ಈಕೆ ಅಜ್ಜೀನೂ ಒಮ್ಮೆ ಹೀಗೆ ಮಾಡಿದಳು...... ಹೆರಡೇಟೀಸ್ ಅಂದರೆ ಇದೆ ನೋಡಿ......' ಎಂದು ಏನೇನೋ ಬೊಗಳಿದ. ನನಗೆ ಗೆಳೆಯನ ಎದುರಿಗೆ ಮುಖ ಮುಚ್ಚಿಕೊಳ್ಳೋ ಹಾಗಾಯ್ತು. ಎಂಥಾ ಕೆಲಸ ಮಾಡಿದ್ದಾರೆ......ಈ ವಯಸ್ಸಿನಲ್ಲಿ ನಿನ್ನ ತಾಯಿ? ನಿನ್ನ ಅಜ್ಜೀನು ಅದೇನೊ...... ಹರಿಕಥೆ ಅಂತ ಊರೂರಿಗೆ ಹೋಗಿ ವಾದ್ಯ ಆಡಿಕೊಂಡು ಹರಿಕಥೆ ಮಾಡೋರಂತೆ...... ಹೌದಾ?" ಎಂದ.

ವಿಜಯ ದಿಗ್ಭ್ರಾಂತಳಾಗಿ ಸುಮ್ಮನೆ ಇದ್ದಳು.

"ಮದುವೆಯಲ್ಲಿ ಈ ಥರ ನಿಮ್ಮನೆಯ ಕಥೆ ಎಲ್ಲಾ ಗೊತ್ತಿದ್ದರೆ ಮದುವೇನೇ ಆಗ್ತಾ ಇರಲಿಲ್ಲ" ಎಂದ.

ವಿಜಯ ಬೇಸತ್ತು—

"ಹೋಗ್ಲಿ ಡೈವೋರ್ಸ್ ಮಾಡಿಬಿಡಿ ನನ್ನ?" ಎಂದಳು. ಸುರೇಶಾ ಕೋಪದಿಂದ

"ವಿಜಿ......" ಎಂದು ಕಿರುಚಿದ. ಅವನ ಆ ಶೈಲಿಯ ಕೋಪದ ಗರ್ಜನೆ ಅಂದೇ ಮೊದಲ ಬಾರಿ ಕೇಳಿದ್ದು.

ಪ್ರೀತಿ ಪ್ರೇಮವನ್ನೇ ಯಥೇಚ್ಛವಾಗಿ ಅನುಭವಿಸುತ್ತ ಸಾಗಿದ ನಮ್ಮ ಬಾಳಿಗೆ ಏನು ಕವಿಯಿತು?

ಅವನ ಗರ್ಜನೆಯ ಆ ಶೈಲಿಗೆ ಹೆದರಿ ವಿಜಯ ಮರುಮಾತಾಡಲಿಲ್ಲ. ಅವಳ ಮೌನ ಕಂಡು ಅವನು ಈಗ ಸಿಡಿಲಿನ ಸ್ವರದಲ್ಲಿ ರೇಗಾಡತೊಡಗಿದ.

"ಡೈವೋರ್ಸ್ ಮಾಡ್ತಾಳಂತೆ...... ಡೈವೋರ್ಸ್! ನಿಮ್ಮಜ್ಜಿ......ನಿಮ್ಮ ತಾತನಿಂದ ಬೇರೆಯಾಗಿ......ಹರಿಕಥೆ ನಾಟ್ಯ ಮಾಡ್ತಾ ಊರೂರು ತಿರುಗಿ ರಿಕಾರ್ಡ್ ಮಾಡಿದರೂ......ನಿಮ್ಮ ತಾಯಿ ಈ ವಯಸ್ಸಿನಲ್ಲಿ ಸಿನಿಮಾ ಸೇರಿ ಫ್ರಾಕ್ ಹಾಕಿಕೊಂಡು ರಿಕಾರ್ಡ್ ಮಾಡಿದರು. ನೀನು ನನ್ನ ಡೈವೋರ್ಸ್ ಮಾಡಿ ರಿಕಾರ್ಡ್ ಮಾಡು." ಎಂದು ಏನೇನೋ ಕೂಗಾಡಿದ......ಹಾರಾಡಿದ.

ವಿಜಯ ಮೌನವಾಗಿದ್ದಳು. ನಂತರ ಎದ್ದು ಹೋಗಿ ಅಡಿಗೆ ಮನೆ ಕೆಲಸಾ ಮಾಡತೊಡಗಿದಳು. ಕಣ್ಣಿನಲ್ಲಿ ನೀರು ಬರುತ್ತಿರಲಿಲ್ಲ.

ಆದರೆ ಹೃದಯ ಸುಡುತ್ತಿತ್ತು. ಈ ಗಂಡಸು ಎಂಥಾ ಸ್ವಾರ್ಥಿ. ಹೆಣ್ಣಿನಲ್ಲಿ ಒಂದು ಚೂರು ತಪ್ಪು ಕಂಡೊಡನೆ ಹೇಗೆ ರೇಗಾಡುತ್ತಾನೆ ? ಇವನ ಕುಟುಂಬದಲ್ಲೇ ಇಂಥಾ ಘಟನೆ ನಡೆದಿದ್ದರೆ ತಾನು...... ಹೀಗಾಡುತ್ತಿದ್ದನೆ ? ತಾಯಿ ಸಿನಿಮಾ ನಟಿ...... ಆಗಿರಬಹುದು ? ಅಜ್ಜಿ ಹರಿಕಥೆ ಮಾಡಿರಬಹುದು ಅಜ್ಜಿ ತಾನು ಹುಟ್ಟಿದ್ದ ಐದನೆಯ ವರ್ಷಕ್ಕೆ ಸತ್ತಿದ್ದಳು.

ತಂದೆಯ ಕಟ್ಟುನಿಟ್ಟಾದ...... ಆಡಳಿತದಲ್ಲಿ ತಾಯಿಗಾಗೆ ತವರುಮನೆಯ ಸಂಪರ್ಕವೇ......ಇರಲಿಲ್ಲ. ಹೀಗಾಗಿ ಅಜ್ಜಿಯ ವಿಷಯ ಗಂಡಾ ಹೇಳುವವರೆಗೆ ತನಗೆ ಗೊತ್ತೇ ಇಲ್ಲ.

ಆಗಲೆ ವಿಜಯಳಿಗೆ ಹಿಂದೆ ಎಂದೋ ತಾನು ಚಿಕ್ಕವಳಿದ್ದಾಗ ನಡೆದ ಒಂದು ಘಟನೆ ನೆನಪಿಗೆ ಬಂತು.

ಅವಳಿಗೆ ಮುಸುಕಾಗಿ ನೆನಪಿಗೆ ಬಂತು. ಅದೆಂದರೆ ಒಮ್ಮೆ ತಂದೆ ಮನೆಗೆ ಬಂದು ಕನ್ನಡಿ ಬೀರು ಮಾಡಿಸಿ ತಂದಾಗ ತಾಯಿಯ ಉತ್ಸಾಹಭರಿತರಾಗಿ ಪ್ರತಿಕ್ರಿಯೆ ವ್ಯಕ್ತಪಡಿಸಿದರು.

ಏನು ತಂದರೂ ತಮಗೆ ಸಂಬಂಧವೇ ಇಲ್ಲ ಎನ್ನುವಂತೆ ನಿರ್ಲಿಪ್ತರಾಗಿ ಇರುತ್ತಿದ್ದ ತಾಯಿಯ ಈ ಕನ್ನಡಿ ಬೀರು ತಂದಾಗ ಅತ್ಯಂತ ಸಂತಸ ತಾಳಿ "ಎಷ್ಟು ಚೆನ್ನಾಗಿದೆ. ಈ ಕಡೆ ಷೆಲ್ಫಿನಲ್ಲಿ ಕುಂಕುಮಾ, ಬಾಚಣಿಗೆ, ಕಾಡಿಗೆ ಎಲ್ಲಾ ಜೋಡಿಸಿಕೊಳ್ಳಬಹುದು. ಆ ಕಡೆ ಒಳಭಾಗದಲ್ಲಿ ಬಾಗಿಲು ತೆರೆದರೆ ಬಟ್ಟೆ ಬರೆ ಎಲ್ಲಾ ಇಟ್ಕೋಬಹುದು" ಎಂದು ಹಿಂದೆ ಮುಂದೆ ಅದನ್ನು ಪರಿಶೀಲಿಸಿ ತಮ್ಮ ಸಂತೋಷ ವ್ಯಕ್ತಪಡಿಸಿದರು.

ತಂದೆ ಬೇಸರದಿಂದ—

"ಥೆ.....ಥೆ...... ಏನು ನಾಟ್ಯವೇ ಶುರುಮಾಡಿಬಿಟ್ಟೆಯಲ್ಲ, ಏನು ಕುಣಿದಾಡ್ತಿ ? ನೀನು ನಿಮ್ಮಮ್ಮನ ಹಾಗೆ ನಾಟ್ಯವಾಡಿಕೊಂಡು ಊರೂರು ಸುತ್ತಾಡ್ತಿ ಏನು ?" ಎಂದರು. ತಾಯಿ ಕೊಂಚ ಅಪಮಾನಿತರಾದಂತೆ ತಲೆ ತಗ್ಗಿಸಿದರು. ಮುಖಾ ಕಪ್ಪಿಟ್ಟಿತು.

"ಏನೊ ಚೆನ್ನಾಗಿದೆ ಅನ್ನಿಸಿತು, ತುಂಬಾ ಉತ್ಸಾಹ ಬಟ್ಟೆ" ಎಂದರು.

"ನೀನು ಅಷ್ಟೊಂದು ಉತ್ಸಾಹ ಪಡಬೇಡಾ .. ಇದು ನಿನಗಾಗಿ ತಂದಿದ್ದಲ್ಲ. ನಮ್ಮ ಆನಂದರಾಯರ ಹೆಂಡತಿ ಹೇಳಿದ್ದರು, ಅವರಿಗಾಗಿ ತಂದೆ. ಅವರಿಗಾದರೋ...... ದುಡ್ಡು ಎಣಿಸಿ ಬೀಜ. ನಮಗಾದರೋ ಓದುವ ಇಬ್ಬರು ಗಂಡು ಮಕ್ಕಳು......ಮದುವೆ ಮಾಡೊ ಇಬ್ಬರು ಹುಡುಗಿಯರು ಇದ್ದಾರೆ" ಎರಡು ಗದರಿಸಿದರು.

ತಾಯಿಾ ನಿರಾಸೆಯಿಂದ,

"ನನಗೇನು ಗೊತ್ತು ? ನೀವಿಲ್ಲಿ ತಂದು......ಅಚ್ಚುಕಟ್ಟಾಗಿ ಜೋಡಿಸಿದ್ದು ನೋಡಿದರೆ ನಾನು ನನ್ನದಿರಬಹುದು ಅಂದ್ಕೊಂಡಿದ್ದೆ" ಎಂದರು. ತಂದೆ ನಿರಾಳವಾಗಿ,

"ಹೂಂ, ಅವರು ಉತ್ತರ ಭಾರತದ ಪ್ರವಾಸ ಹೋಗಿದ್ದಾರೆ. ಮುಂದೆ ಎಂದಾದರೂ ಬರಲಿ, ಈಗ ಹರಾಜಲ್ಲಿ ಐನೂರು ರೂ......ಗಳಿಗೆ ಸಿಕ್ಕಿತ್ತು. ಅದಕ್ಕೆ ತಂದೆ" ಎಂದರು.

ಮುಂದಿನ ತಿಂಗಳು ಆ ಬೀರು ಮನೆ ಬಿಟ್ಟು ಹೋಯಿತು.

ಈಗ ಆ ಘಟನೆ ನೆನೆದಾಗ ಅವಳಿಗೆ ತುಂಬ ದುಃಖ ಆಯಿತು, ತಂದೆ ಎಂತಹ ಸ್ವಾರ್ಥಿ. ತಾಯಿಾ ಅಷ್ಟು ಇಷ್ಟ ಪಡುತ್ತಾರೆಂದ ಮೇಲೆ ಅದನ್ನು ಆತ ಏಕೆ ತಾವೇ ಇಟ್ಟುಕೊಳ್ಳಬಾರದಿತ್ತು. ಸಾವಿರದಿನ್ನೂರು ರೂಗಳ ವಸ್ತು, ಕೇವಲ ಐದುನೂರು ರೂಗಳಿಗೆ ಸಿಕ್ಕಿತು. ಐನೂರು ರೂಗಳು ತಂದೆಯ ಪಾಲಿಗೆ ಅಂಥಾ ದೊಡ್ಡ ಮೊತ್ತವೂ ಅಲ್ಲ. ದುಃಖ ಉಕ್ಕುಕ್ಕಿ ಬಂದಿತು. ತಾಯಿಾ ಮನಸ್ಸನ್ನು ಎಷ್ಟು ತುಳಿದು ಹಾಕಿದ್ದರು ತಂದೆ. ಎಂಟು ಬಾರಿ ಗರ್ಭ ಧರಿಸಿ ನಾಲ್ಕು ಮಕ್ಕಳನ್ನು ಮಾತ್ರ ಉಳಿಸಿಕೊಂಡಿದ್ದರಾಕೆ. ಎರಡು ......ಅಬಾರ್ಷನ್‌ಗಳದು ಲೆಕ್ಕಾ ಹಿಡಿದರೆ ಹತ್ತು ಬಾರಿ ಗರ್ಭಿಣಿ ಆಗಿದ್ದರು.

ಚಿೊಚ್ಚಲ ಮಗ ನಾಗೇಂದ್ರನನ್ನು ತುಂಬ ಪ್ರೀತಿಸುತ್ತಿದ್ದರು. ಅದೇನು ಕಾರಣವೋ ತಂದೆ ಅವನನ್ನು ತುಂಬ ದ್ವೇಶಿಸುತ್ತಿದ್ದರು.

"ನೀನು ತುಂಬ ಮುದ್ದು ಮಾಡಿ... ಮಾಡಿ......ಅವನು ಹಾಳಾಗಿದ್ದಾನೆ"

ದಿನಕ್ಕೆ ಹತ್ತು ಭಾರಿ ......ಈ ಸ್ಲೋಗನ್. ಆಗಾಗ ಅವನಿಗೆ ತಂದೆಯ ಕೈಯಿಂದ ಬಾರು ಕೋಲಿನ ಏಟು ಸಿಗುತ್ತಿತ್ತು. ಅವನು ಎಸ್ಸೆಲ್ಸಿ ಫೇಲಾದಾಗ ತಂದೆ ಚಾವಟಿಯಿಂದ ಹೊಡೆದು, ಹೊಡೆದು, ಹಣ್ಣು ಮಾಡಿದ್ದರು.

ಆದರೆ ಅವನು ತಿರುಗಿ ಬಾರದಂತೆ ಓಡಿ ಹೋಗಿದ್ದ. ಮೊದಲು ಬಾವಿ, ಕೆರೆ ಎಲ್ಲಾ ಹುಡುಕಿಸಿದ್ದರು. ಆದರೆ ಒಂದು ತಿಂಗಳ ನಂತರ ಕಾಯಿಲೆ ಆಗಿ ಆಸ್ಪತ್ರೆ ಸೇರಿದ್ದ ಮಡದಿಗಾಗಿ ಚಿಕಿತ್ಸೆಗೆಂದು ಆಕೆಯ ಅಡ್ಡಿಕೆ ಅಡವಿಡಲು ತಂದೆ ಪೆಟ್ಟಿಗೆ ತೆಗೆದಾಗ ಅಡ್ಡಿಕೆ......ಹಾಗು ಎರಡೆಳೆ ಅವಲಕ್ಕಿ ಸರ ಮಾಯ ವಾಗಿತ್ತು.

ಅಲ್ಲಿ ಅಣ್ಣನ ಕೈ ಬರಹದ ಒಂದು ಚೀಟಿಯು ಇತ್ತು, "ಅಮ್ಮ, ನಿನ್ನ ಅಡ್ಡಿಕೆ ಹಾಗು ಅವಲಕ್ಕಿ ಸರಾ ತೆಗೆದುಕೊಂಡು ಹೋಗುತ್ತಿದ್ದೇನೆ. ಈ ಅಪ್ಪನ ಕೈಲಿ ಬಾಳಲಾರೆ. ನಾನು ಓದು ವಿದ್ಯೆಯಲ್ಲಿ ದಡ್ಡನಾದರೂ ವ್ಯಾಪಾರ ಮಾಡಿ ಮುಂದೆ ಬಂದಾಗ ನಿನ್ನ ಚಿನ್ನಾ ಬಣ್ಣಾ ತಂದೊಪ್ಪಿಸುವೆ, ನಾಗೇಂದ್ರ" ಎಂದು ಬರೆದಿದ್ದ. ತಂದೆ ಆ ಪತ್ರ ಕಂಡು ಕಿಡಿಕಿಡಿ ಆದರು. ಅವರ ಕೃತಕವಾದ ಪಶ್ಚಾತ್ತಾಪ ಆರಿಹೋಯಿತು. ಕಾಯಿಲೆ ಮಲಗಿದ್ದ ಹೆಂಡತಿಯ ಬಳಿ ಬಂದು ಹಾರಾಡಿದರು.

"ಅವನು ಸತ್ತ ಎಂದು ನೀನು ಇಲ್ಲಿ ಕೊರಗ್ತಾ......ಮಲಗಿದ್ದಿ. ಆದರೆ ಆ ಅಯೋಗ್ಯ ಸತ್ತಿಲ್ಲ. ನಿನ್ನ ಬಂಗಾರ ಹಾರಿಸಿಕೊಂಡು ಓಡಿ ಹೋಗಿದ್ದಾನೆ ಇಪ್ಪತ್ತು ತೊಲ ಬಂಗಾರ ಹಾರಿಸಿಕೊಂಡು ಹೋಗಿದ್ದಾನೆ......ಇಪ್ಪತ್ತು ತೊಲ......" ಎಂದು ಘಟ್ಟಿಸಿ ಹೇಳಿದರು.

ಅಂದಿನಿಂದ ಮಗನಿಗಾಗಿ ದುಃಖಿಸುವ ಸ್ವಾತಂತ್ರ್ಯವೂ ಆಕೆಗೆ ಇರಲಿಲ್ಲ ತಮ್ಮ ಮಗ ಕ್ರೂರ ವರ್ತನೆಯಿಂದ ಹತಾಶನಾಗಿ......ಪ್ರಾಣ ತೊರೆದಿದ್ದಾನೆ ಎಂದಾಗಿ ಅವರಲ್ಲಿ ಕೃತಕ ಪಶ್ಚಾತ್ತಾಪವಿತ್ತು. ಕಾಯಿಲೆ......ಮಲಗಿದ ಹೆಂಡತಿಯ ಎದುರು......ಅಪರಾಧಿಯಂತೆ ವರ್ತಿಸಿ ವೈದ್ಯಕೀಯ ಚಿಕಿತ್ಸೆ ಕೊಡಿಸುತ್ತಿದ್ದರು.

ಈಗ ಅವನು ಬದುಕಿದ್ದಾನೆ ಎಂಬುದು ಖಚಿತವಾದಾಗ ಅವರ ಕ್ರೂರತೆ ಮೊದಲಿಗಿಂತ ಅಧಿಕವಾಯಿತು.

"ಏಳು......ಏಳು......ಎಷ್ಟು ದಿನ ನಿನ್ನ ಕಾಯಿಲೆಯ ನಾಟಕ? ನೀನು ಇಷ್ಟು ಹಂಬಲಿಸಿ ಹಾಳು ಮಾಡೋ ಹೊತ್ತಿಗೆ......ಆ ಅಯೋಗ್ಯ ಕೆಟ್ಟು ಹಾಳಾಗಿರೋದು, ಕಳ್ಳ......ಎಸ್ಸೆಲ್ಸಿ ಫೇಲಾಗಿದ್ದಲ್ಲದೇ......ಇಪ್ಪತ್ತು ತೊಲ ಬಂಗಾರ ಹಾರಿಸಿಕೊಂಡು ಹೋಗಿದ್ದಾನೆ –" ಎಂದು ಗುಡುಗಾಡಿದ್ದರು.

ಮಗ ಬದುಕಿದ್ದಾನೆ......ಹಿರಣ್ಯಕಶಿಪುವಿನಂಥಾ ಕ್ರೂರ ತಂದೆಯ ಬಳಿ ಇರುವುದಕ್ಕಿಂತ ಎಲ್ಲೋ......ಸುಖವಾಗಿ ತನ್ನ ಪಾಡಿಗೆ ತಾನಿರುತ್ತಾನೆ. ಇಂಥ ಕ್ರೂರ ವ್ಯಕ್ತಿ ಹೊರಗೆಲ್ಲೂ ಇರಲಾರರು......ಯಾರ ಬಳಿಯೂ ಹೊರಗೆ ಸುಖವಾಗಿರುತ್ತಾರೆ. ಹೀಗೆ ಸಮಾಧಾನ ಮಾಡಿಕೊಂಡ ತಾಯಿ ನಿಧಾನ ವಾಗಿ ಚೇತರಿಸಿಕೊಂಡರು. ತಾಯಿ ಆಗಿನ್ನು ಹೊಸದಾಗಿ ಕಾಯಿಲೆಯಿಂದ ಚೇತರಿಸಿಕೊಂಡಿದ್ದಳು.

"ಬಿಸಿಬೇಳೆ ಹುಳಿ ಅನ್ನ ಮಾಡೇ......ಈ ದಿನ......?" ಎಂದರು.

"ಇನ್ನು ನಿಶ್ಶಕ್ತಿ ಇದೆ, ಪುಡಿ ಕುಟ್ಟಿಕೊಂಡು ಮಾಡ್ಲಿಕ್ಕಾಗಲ್ಲ. ಏನಾದರೂ......ಕುಟ್ಟಿ, ರುಬ್ಬಿ ಮಾಡ್ಲಿಕ್ಕೆ ಹೋದರೆ......ಎದೆ..... ಧಡಧಡಾಂತ ಹಾರಿದ ಹಾಗಾಗುತ್ತೆ" ಎಂದರು.

"ಏನು ಹದಿನಾರು ವರ್ಷದ ಚೊಚ್ಚಲ ಬಾಣಂತಿ ಆಡಿದ ಹಾಗೆ ಆಡ್ತಿ? ಈಗಿನ ಕಾಲದಲ್ಲಿ ಚೊಚ್ಚಲ ಬಾಣಂತಿಯರು ಸಹಾ ಎರಡುತಿಂಗಳಲ್ಲಿ ಎದ್ದು ಮನೆ ಕೆಲಸಾ ಪ್ರಾರಂಭಿಸ್ತಾರೆ. ಮೂರು ಮೂರು ತಿಂಗಳು ಆರಾಮ ವಾಗಿ ಬಾಣಂತನ ಮಾಡಿಸಿಕೊಳ್ತಾ ಕೂಡಲ್ಲ. ಒಂದು ನಾಲ್ಕು ದಿನಾ...... ಜ್ವರಾ ಬಂದು ಮಲಗಿದ್ದುದ್ದಕ್ಕೆ ಎಷ್ಟು ಹಾರಾಡ್ತಿಯೆ?" ಎಂದು ಗದರಿದರು.

ತಾಯಿಗೆ ಎಷ್ಟು ಹಿಂಸೆ ಇತ್ತೋ ಆ ದಿನ.....ಆಕೆ ಬಿಸಿಬೇಳೆ ಹುಳಿಅನ್ನ ಮಾಡಿದ್ದರು. ತುಂಬ ಕ್ರೂರಿ ಇದ್ದರು......ತನ್ನ ತಂದೆ....

ಯೋಚಿಸುತ್ತಿದ್ದಂತೆಯೆ ಸುರೇಶನ ಗುಡುಗಿನ ಧ್ವನಿ ಕೇಳಿಸಿತು.

"ಏನು ಇಡೀ ರಾತ್ರಿ ಅಡಿಗೆಯ ಮನೆ ಕೆಲಸಾ ನಡೆದಿದೆಯೇನು?" ವಿಜಯ ಬೇಗ ಎಚ್ಚೆತ್ತು ಉಳಿದ ಕೆಲಸಾ ಮುಗಿಸಿದಳು.

"ಒಂದು ತುತ್ತು ಅನ್ನವೂ ಹೊಟ್ಟೆಯಲ್ಲಿ ಇಳಿದಿರಲಿಲ್ಲ. ಹಸಿದ ಹೊಟ್ಟೆ, ವ್ಯಾಕುಲಗೊಂಡ ಮನಸು, ಹಾಗೆಯೆ ಬಂದು......ಹಾಸಿಗೆಯಲ್ಲಿ ಮಲಗಿದಳು.

ಸುರೇಶ ನಿಯಾನ್ ದೀಪಾ ಆರಿಸಿ......ಜೀರೊ ಕ್ಯಾಂಡಲ್‌ನ ತಿಳಿಹಸಿರು ಬಲ್ಬ್ ಬೆಳಗಿಸಿದ. ದಿನವೂ ಆ ಬಲ್ಬ್ ಬೆಳಗಿದೊಡನೆ ಅವರ ಸರಸ ಸಲ್ಲಾಪ ಪ್ರಾರಂಭವಾಗುತ್ತಿತ್ತು.

ಆದರೆ ಈ ದಿನ ಹಾಗಾಗಲಿಲ್ಲ. ಸುರೇಶ ಬೆನ್ನು ತಿರುಗಿಸಿ ಮಲಗಿಸಿದ. ಉಕ್ಕಿ ಬಂದ ದುಃಖ ತಡೆ ಹಿಡಿದು ಅವಳು ಉಸಿರು ಬಿಗಿ ಹಿಡಿದು....ಮಲಗಿ

ದಳು. ಸುಮಾರು ಅರ್ಧಗಂಟೆಯ ನಂತರ ಸುರೇಶಾ ನಿಧಾನವಾಗಿ......ಅವಳ ಬೆನ್ನು ಸವರಲಾರಂಭಿಸಿದ. ಅವಳು ಸುಮ್ಮನಿದ್ದಳು. ಮೃದುವಾಗಿ ಬೆನ್ನ ಮೇಲೆ ತಟ್ಟಿ—

"ನಿದ್ದೆ ಬಂತಾ ವಿಜಿ ?" ಎಂದ.

"ಇಲ್ಲ....." ಉಮ್ಮಳಿಸಿ ಬಂದ ದುಃಖ ತಡೆಹಿಡಿದು ಹೇಳಿದಳು. ಅವಳನ್ನು ತನ್ನತ್ತ ತಿರುಗಿಸಿಕೊಂಡು......ತಲೆ ನೇವರಿಸುತ್ತ ಹೇಳಿದ

"ನನ್ನದು ತಪ್ಪಾಯಿತು ವಿಜಿ, ನನ್ನನ್ನು ಕ್ಷಮಿಸು. ನಿನ್ನ ಅಜ್ಜಿ ಹೇಗಿದ್ರೇನು ? ನಿನ್ನ ತಾಯಿ ಏನು ಮಾಡಿದರೇನು ? ನನಗೆ ಬೇಕಾದ್ದು ನೀನು. ನೀನು ನನ್ನ ಆತ್ಮೀಯಳಾಗಿದ್ದು, ನನಗೆ ಬೇಕಾದ ಹಾಗೆ ನಡೆದುಕೊಳ್ತಿ, ಅಷ್ಟು ಸಾಕು" ಎಂದು ಅವಳ ಕೆನ್ನೆ ಚುಂಬಿಸಿದ. ವಿಜಯಳಿಗೆ ದುಃಖ ಉಕ್ಕಿ ಬಂತು. ಬಿಕ್ಕಿ ಬಿಕ್ಕಿ ಅಳತೊಡಗಿದಳು. ಅವನು ತುಂಬ ಸಮಾಧಾನ ಮಾಡಿದ.

ಅವಳ ನಡುಗುವ ತುಟಿಗಳನ್ನು ಒತ್ತಿ ಚುಂಬಿಸಿ......ಬಿಗಿಯಾಗಿ ಅಪ್ಪಿಕೊಂಡ.

"ನೀನಿಲ್ಲದೇ ನಾನು ಬದುಕಲಾರೆ ವಿಜಿ"

ಅವನ ಮಾತಿಗೆ ಬೇಸರದಿಂದ—

"ಒಂದೊಂದು ಸಲ ಹೇಗೆ ರೇಗಾಡ್ತೀರಿ ? ಈ ದಿನ ಊಟಾ ಸಹ ಸರಿಯಾಗಿ ಮಾಡಲಿಲ್ಲ ಗೊತ್ತಾ ?" ಎಂದು ಮೂದಲಿಸಿದಳು.

"ನನ್ನ ಕ್ಷಮಿಸು ವಿಜಿ. ನಾನೊಂದು ಮುಂಗೋಪದ ಮೊಟ್ಟೆ, ನನ್ನ ಫ್ರೆಂಡ್ ಎದುರಿಗೆ ಏನೋ ಒಂಥರ ಇನ್‌ಸಲ್ಟ್ ಆಯಿತೂಂತ ನಾನು ಹಾಗಿ ರೇಗಾಡಿದೆ. ಹಾಳಾದ್ದು ನಿನ್ನ ತವರುಮನೆ ಕಡೆಯ ಆ ರಾಮರಾವ್ ಅನ್ನುವ ವ್ಯಕ್ತಿ ಸಿಕ್ಕದೇ ಇದ್ದಿದ್ದರೆ ಚೆನ್ನಾಗಿತ್ತು" ಎಂದ.

ವಿಜಯ ಮೃದುವಾಗಿ—

"ಯಾರು ಸಿಕ್ಕಿ ಏನೆ ಹೇಳಲಿ, ನೀವು ತಲೆ ಕೆಡಿಸಿಕೊಳ್ಳಬಾರದಲ್ಲವಾ ? ನಾನಂತು ಪರ್ಸನಲ್ಲಾಗಿ ಏನೊಂದು ತಪ್ಪು ಮಾಡಿಲ್ಲ" ಎಂದಳು.

"ಹೌದು ವಿಜಿ, ಐಯ್ಯಾಮ್ ವೆರಿ ಸಾರಿ." ಗಂಡನ ತೀವ್ರ ಪಶ್ಚಾತ್ತಾಪ

ದಲ್ಲಿ ಆವನ ಚುಂಬನ, ಆಲಿಂಗನಗಳಲ್ಲಿ ಅವಳು ಕೇಲಿಹೋದಳು. ಗಂಡ ಹೆಂಡಿರ ಜಗಳ ಉಂಡು ಮಲಗುವ ತನಕ ಎಂಬ ಗಾದೆ ನಿಜವಾಗಿತ್ತು.

ಕೇವಲ ಈತ ತನ್ನ ಮೇಲೆ ಆಕಾಂಕ್ಷೆ ಕೆರಳಿ ದೈಹಿಕ ಬಯಕೆಯನ್ನು ತೀರಿಸಿಕೊಳ್ಳಲು ಬಂದಿರಬಹುದೆ.... ?

ಈ ಯೋಚನೆ ಬಂದಾಗ......ದೈಹಿಕವಾಗಿ ಆಯಾಸಗೊಂಡಿದ್ದ ವಿಜಿ...... ಮಾನಸಿಕವಾಗಿಯೂ ಘಾಸಿಗೊಂಡಳು. ಅಯ್ಯೋಗ್ಯಾ......ಎಂದು ಚೀರಿತು ಅವಳ ಮನಸ್ಸು. ಆತ ನಿಶ್ಚಿಂತನಾಗಿ ಗೊರಕೆ ಹೊಡೆದ. ಆದರೆ ಅವಳಿಗೆ ಬಹು ಹೊತ್ತು ನಿದ್ರೆ ಬರಲಿಲ್ಲ. ಬೆಳಗಿನ ಜಾವಾ......ಐದು ಗಂಟೆಯ ಸುಮಾರಿಗೆ ಆತ ಅವಳನ್ನು ಜೋರಾಗಿ ಅಲುಗಿಸಿದ. ಎಚ್ಚೆತ್ತ ಅವಳು,

"ಏನ್ರೀ......?" ಎಂದಳು.

"ವಿಜಿ......ನಿನ್ನೆ ರಾತ್ರಿ ಊಟಾ ಒಂದು ಚೂರೂ ಸರಿಯಾಗಿರಲಿಲ್ಲ. ಸರಿಯಾಗಿ ಊಟಾ ಮಾಡದೆ ನಾಲಿಗೆ ಚುರುಗುಟ್ತಾ ಇದೆ. ಎದ್ದು ಏನಾದರೂ ಮಾಡ್ತೀಯಾ ?" ಎಂದ. ವಿಜಯ ಪಕ್ಕಕ್ಕೆ ಹೊರಳಿ —

"ನೀವು ಏನಾದರೂ ತಿಂಡಿ ತರ್ತೀರಿ ಅಂತ ನಾನು ಯೋಚಿಸಿದೆ" ಎಂದಳು.

"ತಲೆಯೇ ಕೆಟ್ಟುಹೋಗಿತ್ತು. ಇನ್ನು ತಿಂಡಿ ತರೋದೇನು ? ಇಲ್ಲಿ ಊಟವೂ ಸರಿ ಇರಲಿಲ್ಲ. ನನ್ನ ಹೊಟ್ಟೆ ಈಗ ಚುರುಚುರು ಅಂತಿದೆ. ಏನಾದರು ತಿಂಡಿ ಮಾಡು ಮರಿ" ಎಂದ.

ವಿಜಯ ಆಯಾಸದಿಂದ—

"ನಿಮ್ಮ ಹೊಟ್ಟೆ ಏನು ? ನನ್ನ ಹೊಟ್ಟೆಯೂ ಚುರುಚುರು ಅಂತಿದೆ. ಬೆಳಿಗ್ಗೆ ಎದ್ದು ಹೋಟೆಲ್ ವಿಲಾಸ್‌ನಿಂದಾ......ಮಸಾಲುದೋಸೆ ತಗೊಂಬನ್ನಿ ತಿಂದು ಅನಂತರ ಅಡಿಗೆ ಪ್ರಾರಂಭಿಸ್ತೀನಿ."

ಅವನು ವಿಜಯಳ ರೆಟ್ಟೆ ಹಿಡಿದು ಕೂರಿಸಿದ. "ಎಚ್ಚರ ಮಾಡ್ಕೋ ಮರಿ, ಹೋಟೆಲ್ ರಂಗವಿಲಾಸ್ ದೋಸೆ___ಮನೆಯವರೆಗೆ ಬರಬೇಕಾದರೆ ಎಂಟುಗಂಟೆ ಆಗತ್ತೆ. ಅದುವರೆಗೆ ನಾನು ತಾಳಲಾರೆ."

"ನಾನು ಹಸಿವು ತಾಳಲಾರೆ ಅಂತ ನಿನಗೆ ಗೊತ್ತಿದೆ" ಎಂದು ಸಣ್ಣಗೆ

ಮುಲುಗಿದ. ವಿಜಯಳ ನಿದ್ರೆ ಹಾರಿಹೋಗಿತ್ತು. ಈ ರಾತ್ರೀಲಿ ಏನು ಮಾಡಲಿ ?" ಎಂದಳು.

"ಇದು ರಾತ್ರಿ ಅಲ್ಲ ಮರಿ, ಬೆಳಗಿನ ಜಾವ ಐದು ಗಂಟೆ. ಎದ್ದು ಉಪ್ಪಿಟ್ಟು, ಉಪ್ಪೇರಿ ಮಾಡು. ಇನ್ನರ್ಧ ಘಂಟೇಲಿ......ತಿನ್ನಲಿಕ್ಕೆ ಏನೂ ಸಿಕ್ಕದಿದ್ದರೆ ನಿನ್ನನ್ನೇ ತಿಂದುಬಿಡ್ತೀನಿ" ಎಂದ.

ವಿಜಯ ಮಂಚದಿಂದ ಕೆಳಗೆ ಇಳಿದು ಕೋಣೆಯಿಂದ ಹೊರಗೆ ನಡೆದಳು. ನಿಜಕ್ಕೂ ಚಿಕ್ಕಂದಿನಿಂದ ವಿಜಯಾ ಒಳ್ಳೆ ಪಾಕ ಕುಶಲೆ, ಸೊಗಸಾಗಿ ಅಡಿಗೆ, ತಿಂಡಿ ತಯಾರಿಸುತ್ತಿದ್ದಳು.

ಆ ದಿನವೂ ಉಪ್ಪಿಟ್ಟು, ಉಪ್ಪೇರಿಯ ಜೊತೆಗೆ ತನಗೆ ಬರಿ ಕಾರ ಸೇರುವುದೇ ಇಲ್ಲವೆಂದು ಕೇಸರಿಭಾತ್ ಕೊಂಚ ತಯಾರಿಸಿದಳು. ತಿಂಡಿಯ ಕಾರ್ಯಕ್ರಮ ಮುಗಿದಾಗ ಆರೂವರೆ.

ತಂದೆ ಏಕಾದಶಿಯ ಉಪವಾಸ ಆಚರಿಸುತ್ತಿದ್ದರು. ಉಪವಾಸ ಎಂದರೆ ಕಟ್ಟುನಿಟ್ಟಾದ ಉಪವಾಸವಲ್ಲ. ಉಪ್ಪಿಟ್ಟು, ಸಜ್ಜಿಗೆ ಬಾಳೆಹಣ್ಣು ಅಥವಾ ಮಾವಿನ ಕಾಲದಲ್ಲಾದರೆ ಮಾವಿನ ಹಣ್ಣು, ಉಪ್ಪಿಟ್ಟು ಮಾಡಿದರೆ ಅವಳ ತಂದೆಗೆ ಅದರ ಜೊತೆಯಾಗಿ ತಿನ್ನಲು ಅಕ್ಕಿಯ ಹಪ್ಪಳಾ......ಹಾಗು ಅರಳು ಸಂಡಿಗೆ ಇರಬೇಕು.

ಇಷ್ಟೆಲ್ಲಾ ತಿಂದಿದ್ದರೂ ತಾಯಿ ಹೆದರಿ—"ಅವರು ಏಕಾದಶಿಯ ಉಪವಾಸ ಮಾಡಿದ್ದಾರೆ: ನಾಳೆ ಬೇಗ ಅಡಿಗೆಆಗಬೇಕು" ಎಂದು ದ್ವಾದಶಿ ನಾಲ್ಕು ಗಂಟೆಗೆ ಎದ್ದು ಸ್ನಾನದ ಶಾಸ್ತ್ರ ಮುಗಿಸಿ......ನೀರು ಕಾಯುವವರೆಗೆ ಅಡಿಗೆ ಮನೆ ಗುಡಿಸು......ತಳಿಸಿಕಟ್ಟಿ ಸಾರಿಸುವುದು......

ಏನೇನೋ ಕೆಲಸಾ ಮಾಡುತ್ತಿದ್ದರು. ಆರು ಗಂಟೆಯ ಹೊತ್ತಿಗೆ ತಂದೆ ಸ್ನಾನ ಹಾಗು ದೇವರ ಪೂಜೆ ಮುಗಿಸಿ ಊಟದೆಲೆಯ ಮುಂದೆ ಕೂಡುತ್ತಿದ್ದರು.

ಒಂದು ಒಗ್ಗರಣೆ ಬಾಕಿ ಇದ್ದರೂ......ತಂದೆ ಸಿಡಿದಾಡಿಬಿಡುತ್ತಿದ್ದರು. ತಂದೆ ಐದು ಗಂಟೆಗೆ ಎದ್ದು ಸ್ನಾನ, ದೇವರ ಪೂಜೆ ಮುಗಿಸಿದರೆ ತಾಯಿ ನಾಲ್ಕು ಗಂಟೆಗೇ ಎದ್ದು ಎರಡು ಬಗೆ ಪಲ್ಯ, ಸಾರು ತೊವ್ವೆ ಗೊಜ್ಜುಗೆಸಾಯಸ ಅಂಬೊಡೆ ಎಲ್ಲಾ ಮಾಡುತ್ತಿದ್ದರು.

ದ್ವಾದಶಿ ಮಾತ್ರ ತಂದೆಗೆ......ಗಸಗಸೆ ಪಾಯಿಸಾ, ಅಂಬೊಡೆ ಇರಲೇ ಬೇಕು. ಅಷ್ಟು ಬೇಗ ಎದ್ದು ಅಡಿಗೆ ಮಾಡುವ ತಾಯಿಯ ಬಗ್ಗೆ ಅವಳಿಗೆ ಮರುಕವಾಗಿತ್ತು.

ಆ ದಿನಗಳಲ್ಲಿ ವಿಜಯಾ ಎಂಟು ಗಂಟೆಗೆ ಏಳುತ್ತಿದ್ದಳು. ಈಗಾ......? ದಿನಾ ಆರು ಗಂಟೆಗೆ ಏಳಲೇಬೇಕು. ಈ ದಿನವಂತು ಐದು ಗಂಟೆಗೆ ಅಡಿಗೆ ಪ್ರಾರಂಭಿಸಿದ್ದೇನೆ. ತನ್ನ ಬಿ.ಎ. ಪದವಿ......ಎಲ್ಲಿ ಗಂಟುಕಟ್ಟಿಎಸೆದಿದ್ದೇನೋ?

ಈ ದಿನವಂತು ಗಂಡಾ ಹಸಿವು ಎಂದದ್ದಕ್ಕೆ ಐದು ಗಂಟೆಗೆ ಎದ್ದು ತಿಂಡಿ ಪ್ರಾರಂಭಿಸಿ ಆಗಿತ್ತು. ವಿಜಯ ಆರೂಕಾಲಿಗೆ ಗಂಡನ ಬಳಿ ಬಂದು ಎಬ್ಬಿಸಿ "ಏಳಿ, ತಿಂಡಿ ಆಗಿದೆ" ಎಂದಳು.

"ಇನ್ನೊಂದು ಹತ್ತು ನಿಮಿಷಾ ವಿಜಿ, ಒಳ್ಳೆ ಸುಖನಿದ್ರೆ ಆಗ್ತಿದೆ" ಎಂದು ಪಕ್ಕಕ್ಕೆ ಹೊರಳಿದವನು ಚೆನ್ನಾಗಿ ನಿದ್ರಿಸಿ, ಏಳೂಕಾಲಿಗೆ ಎದ್ದ.

ಅಲ್ಲೇ ಪೇಪರ್ ಓದುತ್ತಾ ಕುಳಿತಿದ್ದ ವಿಜಯಳಿಗೆ

"ತಿಂಡಿ ಆಯ್ತಾ ವಿಜಿ, ಹೊಟ್ಟೆ ಚುರುಗುಟ್ತಿದೆ" ಎಂದ.

ಏಳೂಕಾಲುಗಂಟೆಗೆ ಆರಾಮವಾಗಿ ಏಳೋದಿದ್ದ ಮೇಲೆ ನನ್ನ ಏಕೆ ಅಷ್ಟು ಬೇಗ ಎಬ್ಬಿಸಿ-ತಿಂಡಿ ಮಾಡಲಿಕ್ಕೆ ಹೇಳಿದಿರಿ? ಏಳಿ......ತಿಂಡಿ ಆರಿ ಅಕ್ಷತೆ ಆಗಿದೆ. ಎದ್ದು ಮುಖಾ......ತೊಳೆದು ಬನ್ನಿ" ಎಂದು ಸಿಡುಕಿದಳು.

"ಗೃಹಿಣಿ ನಗ್ತ ನಗ್ತಾ ತಿಂಡಿ ಕೊಟ್ಟರೆ ಗಂಡನಿಗೆ ಪ್ರೈ ಹಿಡಿಯುತ್ತೆ ಮರಿ. ಒಂದು ದಿನ ಐದು ಗಂಟೆಗೇ ಎದ್ದರೆ ಏಕೆ ಅಂತಾ ಕೋಪಾ? ನಮ್ಮ ಅತ್ತಿಗೆ ದಿನಾ ನಾಲ್ಕು ಗಂಟೆಗೆ ಏಳ್ತಾರೆ" ಎಂದು ಹೇಳಿದ.

ಸ್ವಾರ್ಥಿ ಗಂಡಸಿನ ಕೈಗೆ ಸಿಕ್ಕಿ ನರಳುವ ಒಬ್ಬೊಬ್ಬ ಹೆಂಗಸಿನ ಪಾಡು ಹಾಗೇ ಆಗಿದೆ......ನಿಮಗಿಂತ ನಿಮ್ಮಣ್ಣ ಸ್ವಾರ್ಥಿ......ಎಂದು ಬೈದುಕೊಂಡಳು.

ಅವಳ ಮನಸ್ಸಿನ ತುಮುಲು ಅರಿಯದ ಅವನು.

"ವಿಜಿ ತಿಂಡಿ ಬಿಸಿ ಮಾಡು......ಆರಿದ್ರೆ ನನಗೆ ಸೇರಮು" ಎಂದ.

ವಿಜಯ ಅಡಿಗೆ ಮನೆಗೆ ನಡೆದಳು. ತಾಯಿಯಿಂದ ಕಲಿತ ಒಂದು ವಿಧಾನ ಉಪಯೋಗಕ್ಕೆ ಬಂದಿದೆ—ಅಗಲವಾದಪಾತ್ರೆಯಲ್ಲಿ ಚೆನ್ನಾಗಿ ಕಾಸಿದ ಬಿಸಿನೀರಿನಲ್ಲಿ ತಿಂಡಿಮಾಡಿದ ಪಾತ್ರೆ ಮುಚ್ಚಿಟ್ಟಿದ್ದಳು. ಸಣ್ಣಗೆ ಉರಿಯುತ್ತಿದ್ದ ಸ್ಟೋವಿನ ಮೇಲೆ ಆ ನೀರಿನ ಪಾತ್ರೆ ಇತ್ತು.

ಆ ನೀರಿನ ಪಾತ್ರೆಯ ಒಳಗೆ ಕಲ್ಲು ಹಾಕಿ ಅದರ ಮೇಲೆ ಉಪ್ಪಿಟ್ಟು ಉಪ್ಪೇರಿ ಮುಚ್ಚಿಟ್ಟಿದ್ದಳು.

ಹೀಗಾಗಿ ಸುರೇಶ ಏಳುವವರೆಗೆ ಡೈನಿಂಗ್ ಟೇಬಲ್ ಮೇಲೆ ಕೂತರೂ ಹಬೆಯಾಡುವ ಉಪ್ಪಿಟ್ಟು, ಗರಿಗರಿ ಉಪ್ಪೇರಿ ಬಡಿಸುವಂತಾಯಿತು. ಪೇಪರ್ ಮುಖಕ್ಕೆ ಹಿಡಿದು ತಿಂಡಿ ತಿನ್ನತೊಡಗಿದ. ಅವನ ಒಂದು ಪ್ರತಿಕ್ರಿಯೆಗೆ ಹಂಬಲಿಸುವುದು ಅವಳ ಇತ್ತೀಚಿನ ತಪಸ್ಸಾಗಿತ್ತು.

ತಿಂಡಿ, ಅಡಿಗೆ ರುಚಿಯಾಗಿ ಮಾಡುವುದರಲ್ಲಿ ಅವಳು ಪರಿಣತೆ, ಗೆಳತಿಯರೊಂದಿಗೆ ಪಿಕ್‌ನಿಕ್ ಹೊರಟಾಗ ಅವಳು ಮಾಡಿ ತಂದ ಬಿಸಿಬೇಳೆಬಾತ್ ವಿವಿಧ ಗೆಳತಿಯರು "ನಿನ್ನ ಕೈ ಬಿಸಿ ಬೇಳೆ ಭಾತ್, ಹೀರೆಕಾಯಿ ಬೋಂಡಾ ಅಂದರೆ ಸ್ಟಾರ್ ಹೋಟೆಲ್ ಊಟವೂ ರಿಜೆಕ್ಟ್ ಮಾಡೋಣ ಅನ್ನಿಸುತ್ತೆ ಕಣೆ" ಎನ್ನುವರು.

ತಂದೆಯೂ ಆಗಾಗ ನಿಮ್ಮಮ್ಮನ ಕೈ ಅಡಿಗೆ ಬೆ ಜಾರಾಗಿದೆ ನೀನು ಈ ದಿನ ಅಡಿಗೆ ಮಾಡಮ್ಮ" ಎನ್ನುತ್ತಿದ್ದರು.

ಅಕ್ಕಾ ಭಾವ ಬಂದಾಗಂತೂ ಭಾವ, ವಿಜಯ, ನಿನ್ನ ಕೈಯಿನ ಸಾರು, ನಿನ್ನ ದಮರೂಟ್ ನೆನಸಿಕೊಂಡೇ ಬಂದೆ" ಎನ್ನುವರು.

ಇಲ್ಲಿ ಗಂಡನ ಮನೆಗೆ ಬಂದಾಗ ಒಂದೆರಡು ಮೂರು ತಿಂಗಳು ಸುರೇಶ ಹೊಗಳುತ್ತಾ ತಿಂದಿದ್ದ. ಗಂಡ ಹೆಂಡತಿ ಒಟ್ಟಿಗೆ ಕುಳಿತು ತಿನ್ನುತ್ತಾ ಒಬ್ಬರಿಗೊಬ್ಬರು ಲೋಲಾಪ್ತಿ ಮಾಡಿದ್ದು ಒಂದೆರಡು ತಿಂಗಳು ಮಾತ್ರವೆ ಆಮೇಲೆ ಯಾಂತ್ರಿಕ ದಿನಗಳು. ಅವಳು ಶುದ್ಧ ಗೃಹಿಣಿ.

ಅವನು ತಿಂಡಿ ಮುಗಿಸಿ ಎದ್ದಾಗ "ಹೇಗಿತ್ತು ಉಪ್ಪಿಟ್ಟು ?" ಎಂದಳು. ಅವನು ತಿರಸ್ಕಾರದಿಂದ "ಉಪ್ಪಿಟ್ಟಿಗೂ ವಿಮರ್ಶೆ ಬೇಕೇನು ?" ಎಂದು ನುಡಿದು ಎದ್ದು ಹೋದ.

ಅದನ್ನು ಕೇಳಿ ಎಂಥಹ ತಿರಸ್ಕಾರ? ತನ್ನನ್ನು ಏನೆಂದು ತಿಳಿದಿದ್ದಾನೆ? ರೂಪವಂತ ನಿಜ, ಓದಿದ್ದಾನೆ, ಒಳ್ಳೆ ಕೆಲಸದಲ್ಲಿದ್ದಾನೆ. ಆದರೆ ತನ್ನ ಸ್ವಯಂ ಅಹಂಕಾರದಲ್ಲಿ ಮುಳುಗಿರುವ ಅವನಿಗೆ ಹೆಂಡತಿ ಎಂದರೆ ಬೆಲೆ ಇಲ್ಲ.

"ವಿಜಿ...." ಡ್ರೆಸ್ ಮಾಡಿಕೊಂಡು ಅಡಿಗೆ ಮನೆ ಬಾಗಿಲಲ್ಲಿ ನಿಂತ ಸುರೇಶ ಕೂಗಿದ.

"ಏನು....?" ನೀರಸವಾಗಿ ಕೇಳಿದಳು.

"ಹೇಗಿದ್ದರೂ ಹುರುಳಿಕಾಯಿ ಬಿಡಿಸ್ತಿದ್ದಿ. ಹುರುಳಿಕಾಯಿ ಅನ್ನಾ ಕಲಿಸು. ರಾಜಪ್ಪ ಹಾಗೂ ಗೋಪಾಲಿ ಇವರನ್ನ ಇವತ್ತು ಇಲ್ಲೇ ಕರ್‍ಕೊಂಬರ್‍ತೀನಿ. ಸ್ವೀಟ್ಸ್ ಅಂತ ಜಾಮೂನ್ ಮಾಡು" ಎಂದ.

ವಿಜಯ ಕೆಂಡ ಮಂಡಲ ಕೋಪದಿಂದ "ನನ್ನನ್ನು ಏನೂಂತ ತಿಳಿದಿದ್ದೀರಿ ? ನೀವು ಬಯಸಿದಾಗ ಬೇಕಾದ್ದು ಮಾಡಿಹಾಕೋ ಅಡಿಗೆಯವಳೂಂತಾನಾ ?" ಎಂದಳು.

"ವಿಜಿ...." ಸುರೇಶ ಗದರಿಸಿದ. ವಿಜಯ ತಿರಸ್ಕಾರದಿಂದ—

"ನಾಚಿಕೆ ಆಗಬೇಕು ನಿಮ್ಮ ವರ್ತನೆಗೆ. ಹೆಣ್ಣು ಅಂದರೆ ಏನೂಂತ ತಿಳಿದಿದ್ದೀರಿ ? ನನ್ನ ಐದುಸಾವಿರ ರೂಪಾಯಿ ಕೊಟ್ಟುಬಿಡಿ. ನಾನು ನಮ್ಮ ತಂದೆ ಮನೆಗೆ ಹೊರಟು ಬಿಡ್ತೀನಿ. ಹೋಗ್ಲಿಕ್ಕೆ ಮುಂಚೆ ನಿಮ್ಮ ಕಾಲೇಜಿಗೆ ಬಂದು, ನಿಮ್ಮ ಲೇಡಿ ಲೆಕ್ಚರರ್ಸ್ ಮುಂದೆ ಮಿಸ್ ಸುಲಭಾ, ಮಿಸ್ ರಾಜೀವಿ ಮಿಸೆಸ್ ಜೋಷಿ ಎಲ್ಲರ ಮುಂದೆ ಒಂದು ಭಾಷಣ ಬಿಗಿದೇ ಹೋಗ್ತೀನಿ. ಈ ವ್ಯಕ್ತಿ ನಿಮ್ಮೆದುರಿಗೆ ಸ್ತ್ರೀ ಸ್ವಾತಂತ್ರ್ಯ, ಸ್ತ್ರೀ ಸಮಾನತೆ ಎಂದೆಲ್ಲಾ ಏನೇನೊ ಭಾಷಣ ಬಿಗೀತಾರೆ. ಆದರೆ ಮನೇಲಿ ಹೆಂಡತೀನ್ನ ಚಪ್ಪಲಿಯ ಸ್ಥಾನದಲ್ಲಿ ಇಟ್ಟಿದ್ದಾರೆ ಅಂತ ಹೇಳ್ತೀನಿ" ಅಂತ ದೊಡ್ಡ ಧ್ವನಿಯಲ್ಲಿ ಚೀರಿದಳು.

ಹೆಜ್ಜೆಹೆಜ್ಜೆಗೂ ವಿಧೇಯಳಾಗಿ ನಡೆಯುತ್ತಿದ್ದ ಹೆಂಡತಿ ಈಗ ಒಮ್ಮೆಲೆ ಪ್ರಳಯ ಕಾಳಿಯಂತಾಗಿದ್ದು ಕಂಡು ಸುರೇಶ ಅಧೀರನಾದ. ಅವನ ಕೋಪಾಟೋಪಾ ದೂರವಾಯಿತು.

"ನಾನೇನು ಮಾಡಿದ್ದೆ ವಿಜಿ ? ತಂದ ಸಂಬಳ ನಿನ್ನ ಕೈಗೆ ಹಾಕಿ, ನಿನ್ನ ದಾಸನಾಗಿದ್ದೀನಿ" ಎಂದ.

"ಜಾಣರಿದ್ದೀರಿ ನೀವು. ಮನೆ ಖರ್ಚಿಗೆ ನನಗೆ ಸಾವಿರದ ಐನೂರು ರೂ. ಕೊಡ್ತೀರಿ ಸರಿ. ಅಷ್ಟಕ್ಕೇ ನಿಮ್ಮ ಜವಾಬ್ದಾರಿ ಮುಗಿದುಹೋಯಿತಲ್ಲನೇ ನಿಜಕ್ಕೂ ನೀವು ಸೆಲ್ಫಿಷ್ ಫೆಲೋ. ನಿಮಗೆ ಐಷಾರಾಮದ ಜೀವನ ಬೇಕು, ನಾನು ಸಹ ನಿಮ್ಮ ಐಷಾರಾಮ ಹೆಚ್ಚಿಸೊ ಒಂದು ಸಾಧನ."

ಸುರೇಶ ರೇಗಿ—

"ಇದ್ದಕ್ಕಿದ್ದ ಹಾಗೆ ನಾನು ನಿನಗೆ ಏಕೆ ಅಷ್ಟು ಕೆಟ್ಟವನಾದೆ ? ನಿಮ್ಮ ತಾಯಿ ಹಾಗೆ ನಿನಗೂ ಸಿನಿಮಾ ಹುಚ್ಚು ಹಿಡೀತೇನು ?"

"ಹಿಡಿದಿದೆ. ತಾಯಿ ಹಾಗೆ ಸಿನಿಮಾ ಹುಚ್ಚು ಹಿಡಿದಿದೆ. ಅಜ್ಜಿಯ ಹಾಗೆ ನಾಟಕದ ಹುಚ್ಚು ಹಿಡಿದಿದೆ. ಆದ್ದರಿಂದ ಮೊದಲು ನಿಮ್ಮನ್ನು ಡೈವೋರ್ಸ್ ಮಾಡ್ತೀನಿ. ಅವರೆಲ್ಲ ಸಾಕಷ್ಟು ಸಫರ್ ಮಾಡಿ ಗಂಡಂದಿರಿಂದ ಸಿಡಿದು ದೂರಾ ಆದರು. ನಾನು ಈಗಲೇ ದೂರಾ ಆಗ್ತೀನಿ. ನನ್ನ ಹಾಗೆ ನೊಂದ ಹೆಣ್ಣುಗಳಿಗೆ ಆಶ್ರಯ ಕೊಡ್ತೀನಿ. ಒಂದು ಸಮಾಜ, ನೊಂದವರ ಗೃಹ ಸ್ಥಾಪಿಸ್ತೀನಿ. ಸ್ವಾರ್ಥ ಗಂಡಂದಿರಿಂದ ದೂರವಾಗಿ ಬಂದ ನೊಂದ ಹೆಣ್ಣುಗಳಿಗೆ ಆಶ್ರಯ ಕೊಡ್ತೀನಿ" ಎಂದಳು.

ಅವಳ ರಾಕ್ಷಸಿ ಖಳೆ ಕಂಡು ಅವನು ಅವಾಕ್ಕಾದ" ನಿಜಕ್ಕೂ ಇವಳಿಗೆ ಹುಚ್ಚು ಹಿಡಿದಿರಬಹುದೆ ಎನಿಸಿತು.

"ನಾನೇನು ತಪ್ಪು ಮಾಡಿದ್ದೀನಿ ವಿಜಿ ?" ಎಂದ.

"ಮೊದಲು ನನ್ನ ಎರಡೆಳೆ ಸೈಕಲ್ ಚೈನ್ ನಮ್ಮ ತಂದೆಗೆ ಕೊಟ್ಟು, ಐದು ಸಾವಿರ ರೂ ಗಳು ಕೊಟ್ಟು ಬಿಡಿ. ಸಾಮಾನ್ಯವಾಗಿ ಎಲ್ಲರೂ ವಿವಾಹ ವಾದ ಹೊಸತರಲ್ಲಿ ಹೆಂಡತಿಯನ್ನು ಓಲೈಸಿ ಬೇಕಾದ್ದು ಮಾಡಿಕೊಡ್ತಾರೆ. ನೀವು ನನ್ನ ಆರು ತೊಲದ ಚೈನ್ ಸಹ ಕಿತ್ಕೊಂಡಿದ್ದೀರಿ. ಒಂದೇ ಒಂದು ಹೊಸ ಸೀರೆ ಈ ಒಂದು ವರ್ಷದಲ್ಲಿ ತೆಕ್ಕೊಟ್ಟಿದ್ದೀರಾ ?" ಎಂದು ಏನೇನೋ ಬಡಬಡಿಸತೊಡಗಿದಳು.

ಸುರೇಶ ಬೇಸತ್ತು, "ಮಧ್ಯಾಹ್ನ ನಿನ್ನ ಹಣ ತಂದು ಕೊಟ್ಟುಬಿಡ್ತೀನಿ. ಎಲ್ಲಾದರೂ ಹೊರಟು ಹೋಗು, ಹಾಳಾಗ್ಹೋಗು" ಎಂದು ಕೋಪದಿಂದ ಕಾಲಾಡಿಸಿ ಹೊರಟುಹೋದ.

ವಿಜಯ ಬಂದು ಕೋಣೆಯೊಳಗೆ ಮಲಗಿಕೊಂಡಳು. ಅವನನ್ನು ಬಿಟ್ಟು ಹೊರಟುಬಿಡಬೇಕು ನಿಜ, ಆದರೆ ಎಲ್ಲಿ ಹೊರಟುಬಿಡಬೇಕು ? ತಂದೆ ಬೇಸತ್ತು ಕಾಶಿಗೆ ಹೋದರು. ತಾಯಿ ಮನೆ ಬಿಟ್ಟು ಓಡಿಹೋಗಿದ್ದಾರೆ ಅಣ್ಣಾ ಅತ್ತಿಗೆಯ ಮನೆ ತನ್ನ ಮನೆ ಆಗುವುದೆ ? ಅತ್ತಿಗೆ ಮೊದಲಿನಿಂದ

ಚೂಪುಗಾರಿಕೆಯ ಹೆಂಗಸು. ಆ ದಿನಗಳಲ್ಲಿ ತಂದೆಯ ಕಟ್ಟುನಿಟ್ಟಾದ ಆಡಳಿತದಲ್ಲಿ ಬಗ್ಗಿ ನಡೆಯುತ್ತಿದ್ದಳು ಈಗ ಅವಳ ಸ್ವಭಾವ ಹೇಗೋ ?

ಯೋಚಿಸುತ್ತ ಚಿಂತಾಕ್ರಾಂತಳಾದಳು. ಈಗ ಅವನು ನಿಜಕ್ಕೂ ತನ್ನ ಚಿನ್ನದ ಚೈನ್ ಐದುಸಾವಿರ ರೂ. ಗಳನ್ನು ತಂದುಕೊಟ್ಟುಬಿಟ್ಟರೆ ?, ಎನ್ನಿಸಿ ಗಾಬರಿಯಾಯಿತು. ಈ ಮನೆಯ ಖುಷಾ ತೀರಿಹೋಯಿತೆ ? ಎಂದುಕೊಳ್ಳುತ್ತಿದ್ದಂತೆ ಗಂಟಲು ತುಂಬಿ ಬಂದಿತು. ಯೋಚಿಸುತ್ತಿದ್ದಂತೆಯೆ,

"ಅಮ್ಮಾ.....ವಿಜಯಲಕ್ಷ್ಮಿ ಎಲ್ಲಿದ್ದಿ ?" ಎಂಬ ಗೋಪಾಲನ ಸ್ವರ ಕೇಳಿಸಿತು. ಅವನ ಸ್ವರ ಕೇಳಿ ವಿಜಯ ಲಗುಬಗೆಯಿಂದ ಹೊರಗೆ ಬಂದಳು ಸುರೇಶ ಹಾಗೂ ಅವನ ಅಣ್ಣ ನಿಂತಿದ್ದರು.

"ಯಾವಾಗ ಬಂದ್ರಿ ಭಾವಾ ?" ಆತ್ಮೀಯತೆಯಿಂದ ಸ್ವಾಗತಿಸಿದಳು ಆಳು ಬಂದು ಬುಟ್ಟಿಗಳನ್ನು ಕೆಳಗಿಳಿಸಿದ.

"ಭೂಪಾ ಒಂದು ಕಾಗದಾ ಸಹಾ ಗೀಚದೆ ಬಂದಿದ್ದಾನೆ. ನೋಡು ವಿಜ್ಜು, ನಾನು ರಾಜೇಂದ್ರನ್ನ ಭೆಟ್ಟಿ ಮಾಡಬೇಕೂಂತ ಬಸ್‌ಸ್ಟ್ಯಾಂಡ್ ಕಡೆ ಹಾದು ಹೋಗ್ತಿದ್ದೆ. ಆಗ ನೋಡಿದೆ."

"ನನ್ನ ಅವನು ಗುರುತಿಸಲೆ ಇಲ್ಲಮ್ಮ, ಬಾಳೆಗೊನೆ ನೋಡಿ ನಿಂತುಬಿಟ್ಟ ಈ ತಿಂಡಿ ಪೋತಾ......" ಎಂದು ಹೀಗೆ ಗೋಪಾಲ ಹೇಳುತ್ತಿದ್ದಂತೆ ಆಳು ಬಾಳೆಯ ಗೊನೆ ತಂದಿರಿಸಿದ.

"ಇಷ್ಟು ದೊಡ್ಡ ರಸಬಾಳೆ ಗೊನೆ ? ಇಲ್ಲಿ ಇಷ್ಟೊಂದು ಯಾರು ತಿನ್ಬೇಕು...... ಭಾವಾ..... ? ಅಲ್ಲಾದರೆ ಅತ್ತೆ, ಅಕ್ಕ, ಮಕ್ಕಳು, ಮಾವಾ ನೀವೆಲ್ಲರು ತಿನ್ನಬಹುದಾಗಿತ್ತು, ಎರಡು ಚಿಪ್ಪು ಇಲ್ಲಿ ತಂದಿದ್ದರೆ ಸಾಕಾಗಿತ್ತು" ಎಂದಳು ವಿಜಯ.

"ಈ ತಿಂಡಿಪೋತಾ ಇದ್ದಾನಲ್ಲ, ತಿಂದು ಮುಗಿಸ್ತಾನೆ. ನನ್ನ ತಮ್ಮ ಸಾಕ್ಷಾತ್ ಭೀಮಸೇನ ಎರಡು ದಿನಗಳಲ್ಲಿ ಖಾಲಿ ಮಾಡ್ತಾನೆ ಎಂದು ತಮ್ಮನ ಭುಜದ ಮೇಲೆ ಹೊಡೆದು ವಿಜಯ, ಸುರೇಶ ಇಬ್ಬರೂ ನಕ್ಕರು. ಸುರೇಶ ನಗುತ್ತಾ—

"ಅಣ್ಣನಿಗೆ ಕಾಫಿ ತಂದ್ಕೊಡು ವಿಜ್ಜು. ಇಲ್ಲಿ ಜಟಕಾದಲ್ಲಿ ಕೂತಾಗಿ

ನಿಂದ.....ನಿನ್ನ ಕೈಯಿನ ಕಾಫಿ ನೆನೆಸ್ತಾ ಬಂದಾ.....” ಎಂದ. ಗೋಪಾಲ ನಗುತ್ತಾ—

“ಇಲ್ಲಿ ಜಟಕಾದಲ್ಲಿ ಕೂತ್ಕೊಂಡಾ ಮಾತ್ರ ಅಲ್ಲಪ್ಪಾ.....ಅಲ್ಲಿ ಬೆಳಿಗ್ಗೆ ಬಸ್ಸಿನಲ್ಲಿ ಕೂತಾಗ್ನಿಂದಾ ನೆನೆಸ್ತಿದ್ದೀನಿ. ಈ ಸಲ ಎಂಟು ದಿನಾ ಇದ್ರೆ, ವಿಜಯಮ್ಮನ ಕಾಫಿ ಕುಡಿಯೋ ಯೋಗಾ ಇದೆ ನಂಗೆ. ಮೊದಲು ಕಾಲು ತೊಳೆದು ಕಾಫಿ ಕುಡಿದು ಸುಧಾರಿಸಿಕೊಂಡು ಮಾತಾಡೋಣ” ಎಂದು ಬಚ್ಚಲಮನೆಗೆ ಹೋದ.

ವಿಜಯ ಕಾಫಿ ನೀಡುತ್ತಿದ್ದಂತೆಯೆ ಅವಳ ಸಮೀಪ ಬಂದ ಸುರೇಶಾ ಗೋಗರೆದ.

“ವಿಜಿ, ಅಣ್ಣನೆದುರಿಗೆ ನಮ್ಮ ಜಗಳದ ಹಗರಣ ಬೇಡಾ. ನಾನು ನಿನ್ನ ಕ್ಷಮೆ ಕೇಳ್ತೀನಿ. ಎರಡು ದಿನದಲ್ಲಿ ನಿನ್ನ ದುಡ್ಡು, ಚಿನ್ನದ ಚೈನ್ ತಂದು ಕೊಡ್ತೀನಿ” ಎಂದು ಗೋಗರೆದ.

ವಿಜಯ ಬಿಗುವಾಗಿ “ಇರ್ಲಿ ಬಿಡಿ, ನೆಂಟರು ಬಂದಾಗ ಹೇಗೆ ನಡ್ಕೋಬೇಕೂಂತ ನನಗೆ ಗೊತ್ತಿದೆ. ನೀವು ಆತ್ಮೀಯವಾಗಿ ಸಹಕರಿಸಿ ಸಾಕು. ನಮ್ಮ ಜಗಳಾ, ವಿರಸಾ ಎಂಟು ದಿನದ ನಂತರ ಮುಂದುವರೆಸೋಣಾ” ಎಂದಳು. “ಥ್ಯಾಂಕ್ಸ್ ವಿಜಿ” ಎಂದು ಸುರೇಶಾ ಹೊರಗೆ ನಡೆದ. ವಿಜಯ ಕಾಫಿ ತರುವ ಹೊತ್ತಿಗೆ ಅಣ್ಣಾ ತಮ್ಮ ಕೋಡುಬಳೆ ತಿನ್ನುತ್ತಿದ್ದರು.

“ನನ್ನ ಪಾಲಿನ ಕಾಫೀನು ನೀನೇ ಕುಡಿದುಬಿಡಣ್ಣಾ.....ಕೋಡುಬಳೆ, ರಸಬಾಳೆಹಣ್ಣು ಇದ್ದ ಮೇಲೆ ನನಗೆ ಈ ದಿನದ ಊಟಾ ಸಹ ಕ್ಯಾನ್ಸಲ್.....” ಎಂದ ಸುರೇಶಾ.

“ಕೋಡುಬಳೆ ಜೊತೆ ಕೊಬ್ಬರಿಮಿಠಾಯಿ ಮಾಡಿ ಕೊಡಲಿಲ್ಲಾಂತ ಅಮ್ಮ ಒಪ್ಪಾರಿಡಿದಳು. ನಿಮ್ಮತ್ತಿಗೆ ಹೊರಗಿದ್ದಾಳೆ. ಮೂರು ದಿನ ಅಮ್ಮನದೇ ಎಲ್ಲಾ ಕೆಲಸ. ನಿಮ್ಮತ್ತಿಗೆ ಒಳಗಿದ್ದಿದ್ದರೆ ಅರ್ಧಕ್ಕರ್ಧ ಕೆಲಸ ತೂಗಿಸ್ತಿದ್ದಳು. ಅಲ್ಲದೆ ಅಮ್ಮನಿಗೆ ಆಗಾಗ ಎದೆನೋವು ಬರುತ್ತದೆ” ಎಂದ.

“ಅಮ್ಮ ಈ ನಡುವೆ ತೀರ ವೀಕ್ ಆಗಿದ್ದಾಳೆ ಅನಿಸತ್ತೆ. ಕೆಲವು ದಿನಾ ಇಲ್ಲಿ ಕರ್ಕೊಂಬಂದು ಔಷಧಾ ಕೊಡಿಸಬೇಕೂಂತಿದ್ದೀನಿ” ಎಂದ ಸುರೇಶಾ

“ಹೌದು ! ನಾನು ಅಪ್ಪಾ.....ಅದೇ ಯೋಚಿಸಿದ್ದೀವಿ. ಚಳಿಗಾಲಕ್ಕೆ

ಕೆಮ್ಮು ಶುರುವಾಗುತ್ತೆ. ನಾಲ್ಕೈದು ತಿಂಗಳು ಕೆಮ್ಮಿ, ಕೆಮ್ಮಿ ಆಯಾಸ ಪಡ್ತಾಳೆ. ಆದಕ್ಕೆ ಈ ಸಲ ಆಗಸ್ಟ್‌ನಲ್ಲಿ ಇಲ್ಲಿ ಕರ್‍ಕೊಂಬಂದು ಬಿಟ್ಬಿಡ್ತೀನಿ. ಒಂದಾರು ತಿಂಗಳು ಇಲ್ಲೇ ಇರಲಿ, ವಿಜಯಮ್ಮ ಬಿಸಿಬಿಸಿಯಾಗಿ ಮಾಡಿ ಹಾಕ್ತಾಳೆ, ನೀನೂ ಔಷಧಿ ಕೊಡಿಸು, ಆಗ ಸ್ವಲ್ಪ ಸರಿಯಾಗಬೋದು" ಎಂದ,

ಅಣ್ಣನ ಮಾತು ಕೇಳಿದ ಸುರೇಶಾ......

"ಆಗಸ್ಟ್‌ಗೆ ಅಮ್ಮ ಬರ್‍ತಾಳಂತೆ ವಿಜ್ಜ್ಞ.....?" ಎಂದ ಸುರೇಶ.

"ಹೌದಾ ? ನಂಗಂತೂ ತುಂಬಾ ಸಂತೋಷಾರಿ" ಎಂದಳು ವಿಜಯ.

ಕಾಫಿ ಲೋಟಾ ಕೆಳಗಿರಿಸಿದ ಗೋಪಾಲ, "ವಿಜಯಮ್ಮ ಅಡಿಗೆ ಏನು ಮಾಡ್ತೀಯಮ್ಮ ?" ಎಂದ.

"ನಿಮಗೆ ಏನು ಇಷ್ಟ ಹೇಳಿ ಭಾವಾ ? ಮಾಡ್ತೀನಿ" ಎಂದಳು.

"ಎಳೆ ಹುರುಳಿಕಾಯಿ ತಂದಿದ್ದೀನಿ ಅನ್ನ ಕಲಿಸಿಬಿಡಮ್ಮ" ಎಂದ.

"ಆಗ್ಲಿ ಭಾವಾ" ಎಂದಳು. ಬುಟ್ಟಿಯಿಂದ ಹುರುಳಿಕಾಯಿಯಾ ತೆಗೆದು ಅವನು ಬಿಡಿಸತೊಡಗಿದ. "ಬಿಡಿ ಭಾವಾ ನಾನು ಬಿಡಿಸಿಕೊಳ್ತೀನಿ" ಎಂದಳು.

"ನೀನು ಅನ್ನಾ ಮಾಡಿ, ಪುಡಿಗಿಡಿ ಕುಟ್ಕೋ ಹೋಗಮ್ಮ. ಒಣ ಕೊಬ್ಬರಿ ನಾನು ತುರಿದುಕೊಡ್ತೀನಿ" ಎಂದ.

"ನಮ್ಮತ್ತಿಗೆ ಹೂರಣಾ ಸಹ ನಮ್ಮ ಅಣ್ಣನ ಕೈಯಲ್ಲಿ ರುಬ್ಬಿಸ್ತಾಳೆ."

ಸುರೇಶ್ ಅಣ್ಣನನ್ನು ರೇಗಿಸಲು ನೋಡಿದ. ಗೋಪಾಲ ನಗೆಮುಖದಿಂದ,

"ಮಾಡ್ಬೇಕಪ್ಪಾ.....ಹೋಳಿಗೆ ಅಡಿಗೆ ಹೂಡಿದ ದಿನ ಅವಳಿಗೂ ತುಂಬ ಕೆಲಸ ಇರುತ್ತೆ" ಎಂದ.

ವಿಜಯ ಆತ್ಮೀಯತೆಯಿಂದ—

"ನಿಮ್ಮ ಮನಸ್ಸು ತುಂಬಾ ದೊಡ್ಡದು ಭಾವಾ. ನೀವು ನಿಜವಾಗಿ ಸಹೃದಯರು" ಎಂದಳು.

"ಏನೋ ನಾನು ಪಡ್ತ ಕಣಮ್ಮ. ನಮ್ಮ ಅಪ್ಪಾ ನನ್ನನ್ನ ಓದಿಸ

ಬೇಕಂತ ತುಂಬಾ ಒದ್ದಾಡಿದರು. ಆದರೆ ನನಗೆ ಓದು ಅಂಟಲಿಲ್ಲಪ್ಪ, ನಾಲ್ಕನೆಯ ಕ್ಲಾಸ್ ಸಹಾ ಪಾಸ್ ಮಾಡಲಿಲ್ಲ" ಎಂದ.

"ಇರ್ಲಿ ಬಿಡಿ ಭಾವಾ...... ನಿಮ್ಮ ದೊಡ್ಡ ಗುಣಾ ಉತ್ತಮ ಸಂಸಾರ ಎಂ.ಎ. ಬಿ.ಎ. ಮಾಡಿದೋರಿಗೂ ಬರೋದಿಲ್ಲ" ಎಂದಳು. ಸುರೇಶಾ ನಗುತ್ತಾ,

"ಛೆ.....ಛೇ ... ನೀನು ಅಣ್ಣನ್ನ ಇಷ್ಟು ಹೊಗಳಿದರೆ ನಾನು ಜಲಸ್ ಆಗ್ತೀನಿ" ಎಂದ.

ಅಂತೂ ವಿಜಯ ಒಳಗೆ ಹೊರಗೆ ಓಡಾಡುತ್ತಾ, ಗೋಪಾಲನೊಡನೆ ಮಾತನಾಡುತ್ತಾ ಹನ್ನೆರಡುಗಂಟೆ ಹೊತ್ತಿಗೆ ಕಲಸನ್ನ ಹೀರೆಕಾಯಿ ಬೋಂಡಾ ಶ್ಯಾವಿಗೆ ಪಾಯಸಾ ಮುಗಿಸಿ, ತಿಳಿಸಾರು ಅನ್ನ ಮಾಡಿದಳು. ಸುರೇಶಾ ಹತ್ತು ಗಂಟೆಗೆ ಕಾಲೇಜಿಗೆ ಹೋಗಿದ್ದ. ಒಂದೂವರೆಗೆ ಬರುವುದಾಗಿ ಹೇಳಿದ್ದ,

"ನೀವು ಊಟಕ್ಕೆ ಎದ್ಬಿಡಿ ಹನ್ನೆರಡು ಗಂಟೆ ಆಯ್ತು" ಎಂದು ಭಾವನನ್ನು ಉಪಚರಿಸಿದಳು.

"ಇಲ್ಲ ನಿಮಗೆ ಬಡಿಸ್ತೀನಿ. ಅವರು ಬಾಳೆಹಣ್ಣು, ಕೋಡುಬಳೇಲಿ ಹೊಟ್ಟೆ ತುಂಬಿಸಿಕೊಂಡಿದ್ದಾರೆ. ಬೆಳಿಗ್ಗೆ ಉಪ್ಪಿಟ್ಟು ಬೇರೆ ಮಾಡಿಕೊಟ್ಟಿದ್ದೆ" ಎಂದಳು.

"ನಾನು ಬೆಳಿಗ್ಗೆ ಗಡದ್ದಾಗಿ ಉಪ್ಪಿಟ್ಟು ತಿಂದು ಬಂದಿದ್ದೆನಮ್ಮ. ಇಲ್ಲಿ ನೀನು ಎರಡು ಮೂರು ಸಲ ಕಾಫಿ ಬೇರೆ ಕೊಟ್ಟಿದ್ದಿ. ಸುರೇಶನ ಜೊತೆ ಒಂದಿಷ್ಟು ಹಣ್ಣು, ಕೋಡುಬಳೆ ಆಗಿದೆ. ನಿನ್ನ ಅಡಿಗೆಗೆ ನ್ಯಾಯ ಸಲ್ಲಿಸಬೇಕಾದರೆ, ಇನ್ನು ಒಂದು ಗಂಟೆ ಆಗಬೇಕು. ಸುಮ್ಮನೆ ಕೂತು ಎದ್ದರೆ ಏನು ಪ್ರಯೋಜನಾ ?" ಎಂದ.

ಅಡಿಗೆ ಎಲ್ಲಾ ಎತ್ತಿಟ್ಟು, ಅವಳು ಮುಖ ತೊಳೆದು, ವಿಶ್ರಾಂತಿ ಪಡೆದಳು.

ಅವಳು ಕೋಣೆಯಲ್ಲಿ ಮಲಗಿ ಕೊಂಚ ಹೊತ್ತಾಗಿತ್ತು. ಸಣ್ಣಗೆ ಮಂಪರು ಬಂದಿತ್ತು. ಸುರೇಶಾ ಬಂದು ಗಡುಸಾಗಿ, "ವಿಜಿ.....ಅಣ್ಣಾ...... ಗೋಡೆ ಪರಕೆ ಹಿಡಿದು ಧೂಳು ಬಳೀತಾ ಇದಾನೆ. ಬೇಡಾಂತ ಹೇಳ್ಬಕ್ಕಾಗಲ್ಲವಾ ?" ಎಂದ.

ವಿಜಯ ತೀಕ್ಷ್ಣವಾಗಿ ಗಂಡನನ್ನು ದಿಟ್ಟಿಸಿದಳು. ಸುರೇಶ ಪೆಚ್ಚಾದ. ಮೌನವಾಗಿ ಎದ್ದು ಕೋಣೆಯಿಂದ ಹೊರಗೆ ಬಂದಳು.

ಗೋಡೆಗಳ ಇಲ್ಲಣಾ ತೆಗೆಯುತ್ತಿದ್ದ ಗೋಪಾಲನ ಬಳಿ ಬಂದು "ಏನು ಭಾವಾ ? ಹಾಯಾಗಿ ಮಲಗಿ ವಿಶ್ರಾಂತಿ ತಗೋಬಾರದಾ ?" ಎಂದಳು.

"ಇಲ್ಲಮ್ಮ. ಗೋಡೆಗೆ ತುಂಬ ಇಲ್ಲಣಾ ಕಟ್ಟಿದೆ. ಗೋಡೇಲಿ ಇಲ್ಲಣಾ ಇದ್ದರೆ ಗಂಡ ಹೆಂಡತಿಗೆ ಜಗಳಾ ಆಗತ್ತೆ" ಎಂದ. ವಿಜಯ ಬೇಸರದಿಂದ—

"ಗೋಡೆಗೆ ಇಲ್ಲಣಾ ಏನು ಭಾವಾ? ಕೆಲವರ ಹೃದಯಕ್ಕೂ ಸಹ ಇಲ್ಲಣಾ ಕಟ್ಟಿರತ್ತೆ. ಅದರಿಂದಲೂ ಜಗಳಾ ಆಗಬಹುದಲ್ಲವಾ ?" ಎಂದಳು.

"ಹೃದಯಕ್ಕೆ ಇಲ್ಲಣಾ ?" ಗೋಪಾಲ ಆಶ್ಚರ್ಯದಿಂದ ನುಡಿದ.

ಅವಳು ಏನೇನು ಹೇಳಿಬಿಡುವಳೋ ಎಂದು ಸುರೇಶಾ ಮಿಡುಕಿದ. ಆದರೆ ವಿಜಯ ಶಾಂತಳಾಗಿ,

"ನನ್ನ ಗೆಳತಿಯ ಗಂಡಾ ಒಬ್ಬ ಇದ್ದಾನೆ, ತುಂಬ ಅಧಿಕಾರ ಮನೋಭಾವ, ತುಂಬ ಸೆಲ್ಫಿಷ್ ಫೆಲೊ, ಎಲ್ಲಾ ಸುಖ ತನಗೆ ಬೇಕು, ಹೆಂಡ್ತಿ ಆಳಾಗಿ ದುಡಿಯಬೇಕು ಅನ್ನೋ ಮನೋಭಾವ ಅವನದು. ಅವನ ದೈಹಿಕಚಪಲಕ್ಕೆ ಅವನ ನಾಲಿಗೆ ಚಪಲಕ್ಕೆ, ಅವನ ಆಸೆ ಆಕಾಂಕ್ಷೆಗಳಿಗೆ ಸ್ಪಂದಿಸಿ ಸೋತ ನನ್ನ ಗೆಳತಿ, ಕಡೆಗೆ ಅವನನ್ನು ಬಿಟ್ಟು ಒಂಟಿಯಾಗಿ ಜೀವಿಸಲು ನಿರ್ಧರಿಸಿದ್ದಾಳೆ" ಎಂದಳು.

ಕಾಲು ತೊಳೆದು ಬಂದು ಇಬ್ಬರೂ ಊಟಕ್ಕೆ ಕೂತರು. ವಿಜಯ ಬಡಿಸಲಾರಂಭಿಸಿದಳು. ಊಟ ಮಾಡುತ್ತಾ ಗೋಪಾಲ ಹೇಳಿದ : "ನಮ್ಮ ಹಳ್ಳೀಲೂ ನೀನು ಹೇಳಿದ ಥರಹ ಒಂದು ಸಂಸಾರ ಇದೆಯಮ್ಮ. ವಿಶ್ವನಾಥ ನಿನಗೆ ಗೊತ್ತಿಲ್ಲ ಸುರೇಶೂ......ಅವನ ಹೆಂಡತಿ ಅವನನ್ನ ಬಿಟ್ಟು, ಹೊರಟು ಹೋದಳು" ಎಂದ.

ಸುರೇಶನ ಮುಖ ಕಪ್ಪಿಟ್ಟಿತು, "ಏಕಣ್ಣಾ ?" ಎಂದ.

"ಪಾಪ ಅವನ ಹೆಂಡತಿ ತಾನೇ ಎಷ್ಟು ಸಹಿಸ್ತಾಳೆ ? ಏನೋ ಒಂಥರ ಉಗ್ರ ರಾಕ್ಷಸಿ ಆಕಾಂಕ್ಷೆ. ಆ ಹೆಣ್ಣು ಮಗಳು ಅವನ ಬಾಯಿ ಜೋರು ಸಹಿಸ್ಲಿಕ್ಕಾಗಲ್ಲಾಂತ ಹೊರಟುಹೋದಳು" ಎಂದ.

"ಏನೋ ಕೆಲವು ಗಂಡಸರಿಗೆ ಜೋರು, ಅಹಂಕಾರ ಸ್ವಭಾವಗತವಾಗಿ

ಬಂದಿರುತ್ತಣ್ಣಾ, ಅದಕ್ಕೆಲ್ಲ ಹೆಂಗಸರು ಕೋಪ ಮಾಡಿಕೊಂಡರೆ ಹೇಗೆ? ಈಗಿನ ಕಾಲದಲ್ಲಿ ವರದಕ್ಷಿಣೆ ಕೇಳೋದು ತರಲಿಲ್ಲ ಅಂತ ಹಿಂಸೆ ಮಾಡೋದು, ಎಂಥೆಂಥಾ ಕೆಟ್ಟವರಿರ್ತಾರೆ, ಏನೊ ಒಳ್ಳೆ ಗಂಡ ಸಿಕ್ಕಿದಾಗ ಹೆಣ್ಣು ಮಕ್ಕಳು ಜಂಭಾ ಮಾಡಿದ್ರೆ ಲೈಫ್‌ಲಾಂಗ್ ಅವರೇ ಸಫರ್ ಮಾಡ್ಬೇಕು" ಎಂದ.

ಗೋಪಾಲ ಮಾತಾಡಿ—

"ವರದಕ್ಷಿಣೆಯ ಮನೆ ಹಾಳಾಯ್ತು. ಬದುಕಿನುದ್ದ ಕಿರಿಪಿರಿ ಆದರೆ ಹೇಗಪ್ಪಾ? ಆ ಹೆಣ್ಣು ಮಗಳು ಸಹಿಸಿ ಸಾಕಾಗಿ ಓಡಿದಳು. ಅಲ್ಲಿ ಅವಳ ಸೋದರ ಮಾವನ ಮಗನ್ನೇ ಮದುವೆ ಆಗ್ತಾಳಂತೆ. ಡೈವೋರ್ಸಿಗೆ ಅರ್ಜಿ ಹಾಕಿದ್ದಾಳೆ. ಇಲ್ಲಿ ಇವನನ್ನ ಹಳ್ಳೀಲಿ ಥೂ ಅಂತ ಉಗೀತಾರೆ, ಅವನ ಅಟಾಟೋಪ ಎಲ್ಲಾ ಇಳಿದಿದೆ ಹೆಂಡತಿ ಹೋದ ಮೇಲೆ." ಎಂದು ಗೋಪಾಲ ವರ್ಣಿಸಿದ. ಏಕೋ ಸುರೇಶನಿಗೆ ತುಂಬಾ ರೇಗಿತು. "ನಮ್ಮ ಹಳ್ಳೀಲಿ ಒಬ್ಬರ ವಿಷಯದಲ್ಲಿ ಇನ್ನೊಬ್ಬರ ತಲೆ ಇಡೋದು ಜಾಸ್ತಿ ಬಿಡಣ್ಣಾ. ಪಟ್ಟಣದಲ್ಲಿ ಯಾರ ಜೀವನದಲ್ಲಿ ಏನಾದರೂ ಒಬ್ಬರ ಜೀವನದಲ್ಲಿ ಮತ್ತೊಬ್ಬರು ಪ್ರವೇಶಿಸಲ್ಲ" ಎಂದ.

ಈಗ ವಿಜಯಾ ಮಾತಾಡಿ— 47690CR

"ಇಲ್ಲ, ನನ್ನ ಗೆಳತಿ ತನ್ನ ಅನುಭವ ಪೇಪರಿಗೆ ಕೊಡಬೇಕೂಂತಿದ್ದಾಳೆ. ನೊಂದ ಹೆಣ್ಣು ಅನ್ನೋ ಶೀರ್ಷಿಕೇಲಿ ಅವಳು ತನ್ನ ಗಂಡನ ದಬ್ಬಾಳಿಕೆ ಎಲ್ಲಾ ಬರೀತಾಳಂತೆ, ಮೇಲ್ನೋಟಕ್ಕೆ ವಿದ್ಯಾವಂತ, ಆದರೆ ಒಂದು ಚೂರೂ ಬ್ರಾಡ್ ಮೈಂಡೆಡ್ ಇಲ್ಲ. ಆಗಾಗ ಹೆಂಡತಿಗೆ ಒಳ್ಳೆ ಅಡಿಗೆ ಮಾಡ್ಲಿಕ್ಕೆ ಹೇಳಿ ತನ್ನ ಆಫೀಸಿನ ಏಳೆಂಟು ಜನದ ಗುಂಪು ಕರೆತರೋದು ಅವರಲ್ಲಿ ಹೆಣ್ಣುಮಕ್ಕಳ ಜೊತೆ ಸೋಷಿಯಲ್ ನೆಪದಲ್ಲಿ ಹರಟೆ ಹೊಡೆದದ್ದೂ ಹೊಡೆದದ್ದೇ ಏನೇನೋ ಜೋಕ್ಸ್ ಹೇಳಿ ಆ ಹೆಂಗಳೆಯರ ಮುಖದಲ್ಲಿ ನಗೆ ಚಿಮ್ಮಿಸಿದ್ದೂ ಚಿಮ್ಮಿಸಿದ್ದೆ. ಹೆಂಡತಿ ಅಷ್ಟು ಜನಕ್ಕೆ ಅಡಿಗೆ ಮಾಡೋದ್ರಲ್ಲೇ ಸುಸ್ತು ಹೊಡೆದಿರ್ತಾಳೆ. ಅವಳಿಗೆ ಸಹಾಯ ಮಾಡೋಣ ಅನ್ನೋದೇ ಇಲ್ಲ. ಒಂದು ಸಲ ಅವನ ಗೆಳೆಯರ ಪೈಕಿ, ಮೋಹನ್ ಅನ್ನೋ ವ್ಯಕ್ತಿ ನನ್ನ ಗೆಳತಿಯ ಅಡಿಗೆ ಮನಮುಕ್ತ ಹೊಗಳಿ 'ಇಷ್ಟು ಚೆನ್ನಾಗಿ ಅಡಿಗೆಯನ್ನು ಮಾಡೋರು ಲಕ್ಷಕ್ಕೊಬ್ಬರು ವೈನಿ' ಅಂತ ಅಂದನಂತೆ. ಅವಳಿಗೆ ಅವನ

ಬಗ್ಗೆ ಏನೋ ಆತ್ಮೀಯತೆ ಎನಿಸಿ ಅವರಿಗೆ ನಾಲ್ಕಾರು ಭಾರಿ ತಾನಾಗಿ ಉಪಚರಿಸಿ ಬಡಿಸಿದಳಂತೆ, ಅಷ್ಟಕ್ಕೆ ಆ ಗಂಡಾ ಅನ್ನೋ ಪ್ರಾಣಿ ಅಸಹನೆ ತೋರಿ,

'ಅಷ್ಟು ಗುಂಪಿನಲ್ಲಿ ಅವನನ್ನೇನು ಓಲೈಸ್ತೀಯೋ ನೀನು ? ಅವನೊಬ ಬೊಗಳೆ ಆಸಾಮಿ ನಮ್ಮ ಒಟ್ಟು ಗುಂಪಲ್ಲಿ ತಾನಾಗಿ ಬಂದು ಸೇರಿಕೊಳ್ತಾನೆ. ಡರ್ಟಿಫೆಲೊ, ಕಾಲೇಜಿನಲ್ಲಿ ಪಾಠ ಒಂದು ಚೂರು ಚೆನ್ನಾಗಿ ಮಾಡಲ್ಲ, ಬರೀ ಹುಡುಗಿಯರನ್ನು ಓಲೈಸಿಕೊಂಡು ಕಾಲ ಕಳೀತಾನೆ' ಹಾಗೇ ಹೀಗೇಂತ ಅವನ ಬಗ್ಗೆ ಹೀನಾಯವಾಗಿ ಮಾತಾಡಿದನಂತೆ. ಆಗ ನನ್ನ ಗೆಳತಿಗೆ ತನ್ನ ಗಂಡನ ಗುಣಾ ಅರ್ಥವಾಯಿತಂತೆ.

ತಾನು ಹಲವು ಹೆಂಗಳೆಯರನ್ನು ಕರೆದು ತಂದು ಸಹೋದ್ಯೋಗಿ ಗಳೆಂಬ ನೆಪದಲ್ಲಿ ಗಂಟೆಗಟ್ಟಲೆ ಓಲೈಸಬಹುದು. ಅದಕ್ಕೆ ಹೆಂಡತಿ ಅಸೂಯೆ ಪಡುವ ಹಾಗಿಲ್ಲ, ಸೋಷಿಯಲ್ ಎಂದು ಸಹಿಸಬೇಕು. ಆದರೆ ಅವನ ಗೆಳೆಯರ ಪೈಕಿ ತಾನು ಒಬ್ಬ ವ್ಯಕ್ತಿಯ ಜೊತೆ ಗೃಹಿಣಿಯಾಗಿ ಆತ್ಮೀಯವಾಗಿ ಎರಡು ಮಾತಾಡಿದರೆ, ಉಪಚರಿಸಿದರೆ ಅವನೆಷ್ಟು ಅಸೂಯೆ ತೋರಿಸುತ್ತಾನೆ ಎಂದರಿವಾಯಿತು. ಮೇಲ್ನೋಟಕ್ಕೆ ಅವನು ವಿದ್ಯಾವಂತ, ಎಂ.ಎ. ಪದವೀಧರ" ಎಂದು ನಿಲ್ಲಿಸಿದಳು.

ಸುರೇಶನಿಗೆ ಚುಚ್ಚಿದಂತಾಯಿತು.

ಎಲ್ಲಾ ತನ್ನ ಸಂಸಾರದ್ದೇ ಹೇಳುತ್ತಿದ್ದಾಳೆ. ಇವಳು ಮೋಹನನಿಗೆ ಆತ್ಮೀಯವಾಗಿ ಆದರಿಸಿ ಬಡಿಸಿದ ದಿನ ತಾನು ಏನೇನೊ ಅಂದಿದ್ದು ನಿಜ. ಆದರೆ ಆಗ ಇವಳು ಪ್ರತಿಭಟಿಸಲಿಲ್ಲ. ಮಳ್ಳಿಯಂತೆ ಅಪರಾಧಿ ಮುಖಭಾವ ಮಾಡಿ ಸುಮ್ಮನಿದ್ದಳಲ್ಲ ಎನ್ನಿಸಿತು.

ತಮ್ಮನ ಮನಃವಿಪ್ಲವ ಅರಿಯಲಾರದ ಗೋಪಾಲ ಸರಾಗವಾಗಿ ನುಡಿದ.

"ಅಯ್ಯೊ ! ನಮ್ಮ ಹಳ್ಳೀಲಿ ವಿಶ್ವನಾಥನ ಗುಣವೂ ಹಾಗೇಮ್ಮ ತಾನು ಹೊಲಕ್ಕೆ ಹೋದಾಗ ನೂರೆಂಟು ಹೆಂಗಳೆಯರ ಜೊತೆ ಚೆಲ್ಲಾಟಾ ಆಡಿ ಬರ್‍ತಾನೆ, ಎಲ್ಲಾ ಅವಳ ಕಿವಿಗೆ ಬಿದ್ದರೂ ಸಹಿಸಿಕೊಂಡು ಸುಮ್ಮನೆ ಇರ್‍ತಾಳೆ. ಅದ್ಕೇ ಆ ಹುಡುಗಿಯ ತವರುಮನೆ ಕಡೆಯಿಂದ ತಾಯಿಯ ತಮ್ಮ ಬಂದಾಗ

ನನ್ನ ಸೋದರ ಮಾವಾಂತ ಅವಳು ಒಳ್ಳೆ ಅಡಿಗೆ ಮಾಡಿ ಬಡಿಸಿದ್ರೆ ಅವನಿಗೆ ಹೊಟ್ಟೆಉರಿ, 'ಇವತ್ತೇನು ಅಡಿಗೆ ಇಷ್ಟು ಚೆನ್ನಾಗಿ ಇದೆ, ಓಹೋ ! ನಿಮ್ಮ ಮಾವ ಬಂದಿದ್ದಾರೇಂತ ಹೌದಾ ? ವರ್ಷಪೂರ್ತಿ ಕದಾನ್ನ ತಿಂದು ಸಾಕಾಗಿ ರತ್ತೆ, ನಾಲ್ಕು ದಿನ ನಿನ್ನ ಕೈ ನಿಜವಾದ ಊಟಾ ಸಿಕ್ತು. ಅಧೂ ನಿಮ್ಮ ಮಾವನ ಪುಣ್ಯದಿಂದ' ಹೀಗೆಲ್ಲಾ ಹೊಗಳ್ತಾ ಇದ್ದ. ಆ ಹುಡುಗಿ ಕೊನೆಗೆ ತಿರುಗಿ ಬಿದ್ದು ಜಗಳಾ ಆಡಲಾರಂಭಿಸಿದಳು. ಕಡೆಗೆ ಈ ಜಗಳಾ......ಕದನ ಗಳಿಂದ ಬೇಸತ್ತು ತವರುಮನೆಗೆ ಓಡಿಹೋದಳು" ಎಂದ.

ಸುರೇಶನಿಗೆ ಕೋಪಾ ಉಕ್ಕೇರಿತು. "ಗಂಡನ ಬಗ್ಗೆ ಸೌಹಾರ್ದ, ಸಹನೆ ಇಲ್ಲದವಳನ್ನು ಅವನೇ ಓಡಿಸಿಬಿಡಬೇಕು. ಗಂಡಸಿಗೇನು ಹೆಣ್ಣಿಗೆ ಬರವೆ ?"

ಒಂದಲ್ಲ ನಾಲ್ಕು ಮದುವೆ ಮಾಡಿಕೊಂಡು ಹಾಯಾಗಿರಬಹುದು." ಎಂದ.

ಗೋಪಾಲ ಸರಳವಾಗಿ—

"ಈಗ ಕಾಲ ಬದಲಾಗಿದೆ ತಮ್ಮ, ಅಷ್ಟು ಸುಲಭವಾಗಿ ಹೆಣ್ಣು ಸಿಕ್ಕಲ್ಲ. ಈಗ ವಿಶ್ವನ ಅವಸ್ಥೆಯೇ ನೋಡು, ಹಳ್ಳೀಲಿ ಎಲ್ಲರು ಉಗಿದು ಝಾಡಿಸ್ತಾರೆ, ಅವನ ಹೆಂಡತಿಯೇನೊ ತವರುಮನೆಗೆ ಹೋಗಿ ಆ ಸೋದರ ಮಾವನ ಮಗನ್ನೇ ವಿವಾಹವಾದಳು. ಇವನ ಪಾಡೇ ನಾಯಿಪಾಡಾಗಿದೆ" ಎಂದ.

ಸುರೇಶ ಮತ್ತಷ್ಟು ಕೆರಳಿ "ವಿಶ್ವ ಒಬ್ಬ ಲೋಫರ್ ಕುರೂಪಿ, ಅವಿದ್ಯಾವಂತ, ಎರಡೆಕ್ಕರೆ ಗದ್ದೆ ಒಡೆಯ. ಹಳ್ಳಿವಾತಾವರಣ. ಅವನಿಗೆ ಬಂದ ಗತಿ ಎಲ್ಲರಿಗೂ ಬರಲ್ಲಣ್ಣಾ..... ಕೆಲವರಿಗೆ ಆಫರ್ಸ್ ಇರತ್ತೆ" ಎಂದ. ಈಗ ವಿಜಯ ಮಾತಾಡಿ "ನನ್ನ ಗೆಳತಿಯ ಗಂಡಾ ಹ್ಯಾಂಡ್‌ಸಮ್, ಎಂ.ಎ. ಪದವೀಧರ, ಮೂರು ಸಾವಿರ ರೂ. ಸಂಬಳಾ ತರೊ ಉದ್ಯೋಗ ಇದೆ. ಆದರೂ ಅವನು ಸುಲಭವಾಗಿ ವಿವಾಹ ಆಗೋ ಹಾಗಿಲ್ಲ. ನನ್ನ ಗೆಳತೀನೂ ಬುದ್ಧಿವಂತೇನೇ. ಅವನಿಗೆ ಎಲ್ಲಾದರೂ ವಿವಾಹ ಗೊತ್ತಾದರೆ ಸ್ತ್ರೀ ವಿಮೋಚನ ಸಂಘದವರನ್ನ ಕರೆದುಕೊಂಡು ಹೋಗಿ ಹೆಣ್ಣಿನೋರ ಮನೆಯ ಮುಂದೆ ಗಲಾಟೆ ಮಾಡಿ ತಾನೇ ಹೋಗಿ ಹುಡುಗಿ ಜೊತೆ ಮಾತಾಡಿ ತಾನು ಅವನಹೆಂಡತಿ ಆಗಿದ್ದಾಗ ಅನುಭವಿಸಿದ್ದೆಲ್ಲಾ ಹೇಳ್ತಾಳಂತೆ. ಹೆಂಡತಿ ಬದುಕಿದ್ದೋನಿಗೆ ಹೆಣ್ಣು ಕೆಲವರು

ಕೊಡೋರೆ ಇಲ್ಲ! ಕೆಲವರು ಕೊಡಲಿಕ್ಕೆ ಹೋದರೂ ತಾನೇ ನಿಂತು ಮದುವೆ ಕೆಡಿಸ್ತಾಳಂತೆ. ಅವನು ಲೈಫ್ ಲಾಂಗ್ ಹೆಣ್ಣಿಲ್ಲದೆ ಒಂಟಿಯಾಗಿ ಹೋಟಲ್ ಊಟಾ ಮಾಡಿಕೊಂಡು ವಿರಹಿಯಾಗಿ ಕಂಗೆಡಬೇಕು. ಇದು ನನ್ನ ಸೇಡು ಅಂತಾಳೆ" ಎಂದ ಸುರೇಶನ ಮುಖ ನೋಡಿದಳು, ಸುರೇಶ ಮುಖದ ಬೆವರೊರೆಸಿಕೊಂಡ.

ಅಣ್ಣಾ ತಮ್ಮ ಇಬ್ಬರ ಊಟಾ ಮುಗಿಯಿತು. ವಿಜಯ ತನ್ನ ಊಟಾ ಮುಗಿಸಿ ಅಡಿಗೆ ಮನೆಯೆಲ್ಲಾ ಶುಚಿ ಮಾಡತೊಡಗಿದಳು. ತನ್ನ ಕೋಣೆಗೆ ಬಂದಳು. ಹಜಾರದ ಸೋಫಾವನ್ನೇ ಹಾಸಿಗೆಯಾಗಿ ಪರಿವರ್ತಿಸಿ ಮಲಗಿದ್ದ ಗೋಪಾಲ ಗೊರಕೆ ಹೊಡೆಯುತ್ತಿದ್ದ.

ಕೋಣೆಗೆ ಬಂದಾಗ ಸುರೇಶಾ ಹೊರಳಾಡುತ್ತಿದ್ದ. ವಿಜಯ ಚಾಪೆ ಎಳೆದುಕೊಂಡು ಮಂಚದಿಂದ ದೂರವಾಗಿ ಮಲಗಿದಳು. ಬಂಗಾರ ಬಣ್ಣದ ನೀಳವಾದ ದೇಹ ಉದ್ದನೆಯ ಜಡೆ, ಥಳಥಳಿಸುವ ಆ ಕಂಗಳು, ತುಂಬುಗೆನ್ನೆ ಹೊಂಬಣ್ಣದ ಮೃದುವಾದ ಆ ತುಂಬುಗೆನ್ನೆಯನ್ನು ಚುಂಬಿಸುತ್ತಾ ತಾನೆಷ್ಟು ಭಾರಿ ಪರವಶನಾಗಿಲ್ಲ. ಆ ಕೆಂದುಟಿ ನಕ್ಕಾಗ ಮುತ್ತಿನ ಸಾಲಿನ ಹಲ್ಲು...... ಯಾವಾಗಲೂ ಮೃದುವಾದ ಮೋಹಕನಗೆ ಚೆಲ್ಲುತ್ತಿದ್ದ ಇವಳು ಹೃದಯದಲ್ಲಿ ಇಷ್ಟು ವಿಷಾ ತುಂಬಿಕೊಂಡಿದ್ದಳೆ? ತನ್ನ ಬಗ್ಗೆ ಇವಳ ಹೃದಯದಲ್ಲಿ ಇಷ್ಟು ಕೊಳಕು ತುಂಬಿತ್ತೆ? ಯೋಚಿಸುತ್ತಾ ನಿಟ್ಟುಸಿರು ಬಿಟ್ಟ.

"ವಿಜಿ, ನಿಜವಾಗಿ ನಾನೊಂದರೆ ಒಬ್ಬ ವಿಲನ್ ಅನ್ನಿಸುತ್ತಾ ನಿಂಗೆ ?" ತಡೆಯದೆ ಕೇಳಿದ, ಓಡಿಹೋಗಿ ಅವನ ಎದೆಯಲ್ಲಿ ಮುಖ ಮರೆಸಬೇಕೆನಿಸಿತವಳಿಗೆ, ಹೇಗೋ ತಡೆದುಕೊಂಡಳು.

"ನಿಜಾ ಹೇಳು ವಿಜಿ ? ನಾನಷ್ಟು ಕೆಟ್ಟವನಾ ?" ದೈನ್ಯದಿಂದ ಕೇಳಿದ

"ನೀವು ಕೆಟ್ಟವರೂಂತ ಹೇಳಲಾರೆ"

"ತುಂಬ ಸ್ವಾರ್ಥಿ ನೀವು, ಮದುವೆ ಆಗಿ ಒಂದು ವರುಷ ಆಯಿತು. ನೀವು ನನ್ನ ಹೇಗೆ ನೋಡ್ಕೊಂಡಿದ್ದೀರಿ ?" ಎಂದಳು. "ಹೇಗೆ ನೋಡ್ಕೊಂಡಿದ್ದೀನಿ, ನನ್ನ ಕೈಲಾದಮಟ್ಟಿಗೆ ಚೆನ್ನಾಗೇ ನೋಡ್ಕೊಂಡಿದ್ದೀನಿ. ತಿಂಗಳಿಗೆ ಸಾವಿರದೈನೂರು ರೂ. ನಿನ್ನ ಕೈಗೆ ಹಾಕ್ತೀನಿ, ತಿಂದುಂಡು ಸುಖವಾಗಿಲ್ವಾ ?" ಎಂದ. ವಿಜಯ ಬೇಸರದಿಂದ –

"ಹೊರನೋಟಕ್ಕೆ ಅತ್ಯಂತ ಸುಖಿ ನಾನು. ಎಂಟನೂರು ರೂ. ಬಾಡಿಗೆಯ ಈ ಮನೆ ನಾನು ಒಪ್ಪ ಮಾಡಿ ಅಲಂಕರಿಸೋದ್ರಲ್ಲಿ ಸೋತು ಸೋತು ಸೊಪ್ಪಾಗಿದ್ದೀನಿ. ಕಾಲೇಜ್ ಲೆಕ್ಚರರ್ ಸುರೇಶ್ ಮನೆ ಎಷ್ಟು ಚೆನ್ನಾಗಿದೆ" ಎಂದು ನಿಮ್ಮ ಗೆಳೆಯ ಗೆಳತಿಯರು ಪ್ರಶಂಸೆ ಮಾಡ್ತಾರೆ. ಆ ವಾಕ್ಯಗಳಿಗೆ ನನ್ನ ಬಲಿ ಕೊಡ್ತಿದ್ದೀರಿ ನೀವು. ಇನ್ನು ಉಳಿದ ಏಳುನೂರು ರೂ. ನಿಮ್ಮ ನಾಲಿಗೆ ಚಪಲಕ್ಕೆ ಖರ್ಚಾಗುತ್ತೆ, ತಿಂಗಳಿಗೆ ಎರಡುಸಲವಾದರು ನಿಮ್ಮ ಗೆಳೆಯರ ಗುಂಪು ತಂದು ಇಲ್ಲಿ ಪಾರ್ಟಿ ಅಂತ ಮೇಯಿಸಿ ಹೋಗ್ತೀರಿ. ಸುರೇಶ್ ಒಳ್ಳೆ ಹೋಸ್ಟ್ ಅವರ ಅದೃಷ್ಟ ದೊಡ್ಡದು. ಎಷ್ಟು ಸೊಗಸಾಗಿ ರುಚಿಯಾಗಿ ಅಡಿಗೆ ಮಾಡೊ ಹೆಂಡ್ತಿ ಸಿಕ್ಕಿದ್ದಾಳೆ. ಈ ಕಾಂಪ್ಲಿಮೆಂಟ್ಸ್‌ಗಾಗಿ ನೀವು ಮರುಳಾಗ್ತೀರಿ ನಾನು ನನ್ನ ಜೀವಾನೇ ತೇಯಬೇಕು, ಪ್ರತಿಭಟಿಸಿದರೆ ಜಗಳಾ ವಿರಸಾ ಅಂತ ನಾನು ಎಲ್ಲಕ್ಕೂ ಒಪ್ಪಿ ಮೂಕ ಬಸವನ ಹಾಗೆ ದುಡೀತಿದ್ದೆ. ನಿಮ್ಮ ಸಹೋದ್ಯೋಗಿ ಮಿಸ್ ಸುಲಭಾ ಸ್ಕೂಟರ್ ತೆಗೆದು ಕೊಳ್ಳಲು ನನ್ನ ತಂದೆಯ ಮನೆಯಿಂದ ಕೊಟ್ಟ ಹಣ, ನನ್ನ ಚೈನ್ ತಗೊಂಡೋದ್ರಿ. ಒಬ್ಬ ಬೀದಿ ಹೆಂಗಸನ್ನ ತೃಪ್ತಿ ಪಡಿಸಲಿಕ್ಕೆ ಕೈ ಹಿಡಿದ ಹೆಂಡತಿಯ ಒಡವೆ ಏಕೆ ಕೊಡಬೇಕು?" ಕಡೆಯ ವಾಕ್ಯ ಕೇಳಿದಾಗ ಸುರೇಶ ಚಡಪಡಿಸಿ "ನೀನು ಎಜುಕೇಟೆಡ್ ಆಗಿ ಹಾಗೆಲ್ಲಾ ಅವರ ಬಗ್ಗೆ ಮಾತಾಡಬೇಡ, ಮಿಸ್ ಸುಲಭಾ. ಗೌರವಾನ್ವಿತ ಕುಟುಂಬದ ಹೆಣ್ಣು ಮಗಳು, ಅಕ್ಕ, ತಮ್ಮ ಇಬ್ಬರು ಸೇರಿ ಎರಡು ವರ್ಷದಲ್ಲಿ ಸ್ಕೂಟರ್ ಹಣಾ ಹಿಂತಿರುಗಿಸ್ತಾರೆ. ಈಗಾಗಲೆ ಆರು ತಿಂಳಗಲ್ಲಿ ನಾಲ್ಕು ಸಾವಿರ ಹಿಂದಿರುಗಿಸಿದ್ದಾರೆ. ಇನ್ನು ತಿಂಗಳಲ್ಲಿ ಇನ್ನು ಆರು ಸಾವಿರ ಹಿಂದಿರುಗಿಸ್ತಾರೆ, ಒಟ್ಟು ಎಂಟು ಸಾವಿರಾ ಆಗ್ತಾಲೆ ನೆಕ್ಲೆಸ್ ಬಿಡಿಸಿ ಕೊಡ್ತೀನಿ" ಎಂದ.

"ಪರ ಹೆಂಗಸರ ಬಗ್ಗೆ ಅಂಥಾ ಪ್ರೀತಿಪ್ರೇಮ ಏಕೆ ನಿಮಗೆ? ಆಕೆ ಥಳ್ಳಗೆ ಬೆಳ್ಳಗೆ ಆಕರ್ಷಕವಾಗಿದ್ದಾರೆ, ಮಾತಿಗೊಮ್ಮೆ ಮುಗುಳ್ನಗೆ ಚೆಲ್ಲಿ ನಿಮ್ಮನ್ನ ಮರುಳು ಮಾಡ್ತಾರೆ. ಅದಕ್ಕೆ ಹದಿಮೂರು ಸಾವಿರ ರೂ. ನಗ್ತ ನಗ್ತಾ ಕೊಟ್ಟರಿ" ಎಂದಳು.

ಸುರೇಶ ಕೋಪದಿಂದ—

"ಆಕೆಯ ಬಗ್ಗೆ ಹಾಗೆಲ್ಲಾ ಮಾತಾಡಬೇಡಾ ವಿಜ್ಜಿ, ಏನೊ, ಲೇಡೀಸ್

ಕಳ್ಕೊಸಿ, ಅಂತ ನಾನು ಸಾಲ ಕೊಟ್ಟಿದ್ದುಂಟು. ಆಕೆಗೆ ಮದುವೆಗೊತ್ತಾಗಿದೆ ಬರೋ ಏಪ್ರಿಲ್‌ನಲ್ಲಿ ಮದುವೆ" ಎಂದ.

ವಿಜಯ ಹಠದಿಂದ—

"ಒಬ್ಬ ಮದುವೆ ಗೊತ್ತಾದ ಹುಡುಗಿಗೆ ಹದಿಮೂರು ಸಾವಿರ ರೂ· ಸಾಲ ಏಕೆ ಕೊಟ್ರಿ ? ಆಕೆ ಕಣ್ಣಲ್ಲಿ ನೀವು ಹೀರೋ ಆಗಿ ಬೆಳೆಯಬೇಕೇನು? ಈ ಚಪಲ ನಾನು ದ್ವೇಶಿಸ್ತೀನಿ, ಆಕೆಯ ಹತ್ತಿರ ನಿಮಗೆ ಯಾವ ದೈಹಿಕ ಸಂಬಂಧ ಇಲ್ಲ ಎಂದು ನಾನು ಬಲ್ಲೆ. ಆಕೆ ಗೌರವಾನ್ವಿತ ಕುಟುಂಬದ ಹೆಂಗಸು ನಿಜ. ಆದರೆ ಸದಾ ಚೆಲ್ಲು ಚೆಲ್ಲಾಗಿ ನಗುತ್ತಾ ಗಂಡಸರೊಡನೆಯೇ ಮಾತನಾಡುತ್ತಾ ಇರುವ ಹೆಂಗಸರನ್ನು ಕಂಡರೆ ನನಗೆ ತಿರಸ್ಕಾರ. ಹೀಗೆ ಮಾಡಿ ಗಂಡಸರನ್ನ ಅರೆಬರೆ ಮರುಳು ಮಾಡೋ ಹೆಂಗಸರೆಂದರೆ ಅಸಹ್ಯ" ಎಂದಳು.

ಸುರೇಶನಿಗೆ ತಲೆ ಚಚ್ಚಿಕೊಳ್ಳುವ ಹಾಗಾಯಿತು. ಅವನು ಸೋತು ಸೊಪ್ಪಾಗಿ—

"ಏನೋ ನೀನಿಷ್ಟು ಒಳ ಅಸಮಾಧಾನ ಇಟ್ಕೊಂಡಿದ್ದಿ ಅಂತ ನನಗೆ ಗೊತ್ತಿರಲಿಲ್ಲ ವಿಜಿ. ವಿಜಿ, ಕೈ ಹಿಡಿದ ಹೆಂಡತೀನ್ನ ಸುಖವಾಗಿ ನೋಡ್ಕೊಂಡಿದ್ದೀನಿ ಅಂತ ನಾನು ತಿಳಿದಿದ್ದೆ. ತೃಪ್ತಿಯೇ ಇಲ್ಲದ ನಿಮ್ಮಂತಹ ಹೆಂಗಸರ್ನ ಎಂದಿಗೂ ಸುಖವಾಗಿ ಇಡ್ಲಿಕ್ಕಾಗಲ್ಲ. ಎಂಟು ದಿನ ನೀನು ಇದ್ಬಿಡು, ಅಣ್ಣನ ಎದುರಿಗೆ ಇಲ್ಲದ ವಿರಸ ಬೇಡಾ ಆಮೇಲೆ ಹೊರಟುಬಿಡು" ಎಂದ.

"ಹೊರಡ್ತೀನಿ, ನನ್ನ ಐದು ಸಾವಿರ ಹಾಗೂ ಚೈನ್ ತಂದುಕೊಟ್ಬಿಡಿ" ಎಂದಳು. ಅವಳ ಬಾಯಿಂದ ಪದೇ ಪದೇ....ಆ ಚಿನ್ನದ ಚೈನ್, ಐದು ಸಾವಿರ ರೂಗಳು ಕೊಟ್ಬಿಡಿ ಎಂಬ ಮೂದಲಿಕೆ ಕೇಳಿ ಸುರೇಶನಿಗೆ ತಲೆ ಚಿಟ್ಟು ಹಿಡಿದಿತ್ತು. ಮಂಚದ ಮೇಲೆ ಎದ್ದು ಕುಳಿತು ಅವಳಿಗೆ ಕೈ ಮುಗಿದು "ಅಮ್ಮ ತಾಯಿ ! ಮಹಾ ಮಾಯಿ ! ಎಷ್ಟು ಸಲ ಹೇಳಿದ್ದೀ ಹೇಳ್ತೀ ? ನಿನ್ನ ಚೈನ್ ಹಾಗು ಐದು ಸಾವಿರ ರೂಗಳನ್ನ ನಾಳೆ ಒಳಗೆ ತಂದು ಬಿಸಾಡ್ತೀನೆ. ಇನ್ನು ಒಂದು ಸಾವಿರ ಜಾಸ್ತಿ ತಂದು ನಿನ್ನ ಮುಖದ ಮೇಲೆ ಎಸೀತೀನಿ. ನಾನೇನು ಕುಡಿದು ಬಂದು ಗಲಾಟೆ ಮಾಡಿ ಕಿತ್ಕೊಂಡ್ನಾ ? ಎಲ್ಲಾ ವಿಷಯ ನಿನಗೆ ವಿವರಿಸಿ ನಿನ್ನ ಸಮ್ಮತಿಯಿಂದಲೆ ಇಸ್ಕೊಂಡು ಹೋಗ್ರಿ

ದ್ದೀನಿ. ನಿಜವಾಗಿ ನಿನ್ನ ಮನಸ್ಸಲ್ಲಿ ನನ್ನ ಬಗ್ಗೆ ಇಷ್ಟು ವಿಷಾ ತುಂಬಿ ಕೊಂಡಿದೆ ಎಂದರೆ ನಿನ್ನ ಜೊತೆ ಒಂದೊಂದು ದಿನ ಬಾಳೋದು ನನಗೆ ನರಕ. ಇದುವರೆಗೆ ನಿನ್ನ ಮನಸ್ಸು ನನಗೆ ಗೊತ್ತಿರಲಿಲ್ಲ. ಸುಖ ಸಂಸಾರ ಮಾಡ್ತ ಇದ್ದೀನಿ ಅಂತ ಭಾವಿಸಿದ್ದೆ" ಎಂದು ಹತಾಶನಾಗಿ ನುಡಿದು ಮಂಚದ ಮೇಲೆ ಮಲಗಿದ.

ವಿಜಯ ಚಾಪೆ ಮೇಲೆ ಮಲಗಿ ಹೊರಳಿ ನರಳಿದಳು. ಮನಸ್ಸು ಲಾವರಸದಂತೆ ಕುದಿಯುತ್ತಿತ್ತು. ತಾನೇಕೆ ಮನಸ್ಸನ್ನು ಹೀಗೆ ಹರಿಯ ಬಿಟ್ಟು, ಅವನನ್ನು ಕೆರಳಿಸುತ್ತಿದ್ದೇನೆ.

ಅವಿವಾಹಿತ ಹುಡುಗಿಯರು ಅಸೂಯೆ ಪಡುವಂಥಾ ಒಳ್ಳೆ ಹುಡುಗಾ ತನಗೆ ಸಿಕ್ಕಿದ್ದಾನೆ, ಅತ್ಯಂತ ಸುಖ ಸಂಸಾರ ತನ್ನದು, ಸೊಗಸಾದ ಮನೆ, ಒಳ್ಳೆ ದರ್ಜೆ ಊಟಾ ತಿಂಡಿ ಸುಖ ದಾಂಪತ್ಯ ಎಲ್ಲಾ ತನಗಿದೆ. ಆದರೂ ತಾನು ಹೀಗೇಕೆ ಒಮ್ಮೆಲೆ ಮನಸ್ಸು ಕೆಡಿಸಿಕೊಂಡೆ.

ಲಲಿತ ಆಗಾಗ ಮನಸ್ಸು ತುಂಬಿದ ಸ್ತ್ರೀ ಸ್ವಾತಂತ್ರ್ಯ, ಸ್ತ್ರೀಸಮಾನತೆ ಹೆಣ್ಣು ಪುರುಷ ದಬ್ಬಾಳಿಕೆಯಲ್ಲಿ ನರಳುತ್ತಿದ್ದಾಳೆ. ಇತ್ಯಾದಿ ಭಾವನೆಗಳು ಒಳ ಮನಸ್ಸಿನಲ್ಲಿ ಸುಪ್ತವಾಗಿದ್ದು ಆಗಾಗ ವಿಜೃಂಭಿಸುತ್ತಿದೆಯೆ ?

ಇಲ್ಲ, ತಾಯಿ ಮೊದಲಿನಿಂದಲೂ ತಂದೆಯ ದಬ್ಬಾಳಿಕೆ ಎದುರಿಸುತ್ತಾ ಬಾಳಿದ್ದು ತನಗೆ ಅರಿವಿದೆ. ಆಕೆಯ ಅಸಹಾಯಕತೆಯ ಬಗ್ಗೆ ತುಂಬ ಅನು ಕಂಪವಿತ್ತು. ಆಗ ತಂದೆಯ ರಾಕ್ಷಸ ದಬ್ಬಾಳಿಕೆ ಬಗ್ಗೆ ತಿರಸ್ಕಾರವೂ ಇತ್ತು.

ಅದನ್ನೇ ರಾತ್ರಿಯೆಲ್ಲಾ ಯೋಚಿಸುತ್ತಾ ಮಲಗಿದ ತನಗೆ ಎಲ್ಲಾ...... ಗಂಡಸರು ಹಾಗೆಯೇ ಎನ್ನಿಸಿತ್ತು.

ಸುರೇಶನ ಸಾಮಾನ್ಯ ಪ್ರವೃತ್ತಿಯು ದಬ್ಬಾಳಿಕೆ ಎನ್ನಿಸಿಬಿಟ್ಟಿತ್ತು. ನಿಜಾ ಹೇಳುವುದಾದರೆ ಸುರೇಶ ಅಧಿಕಾರ ಚಲಾಯಿಸಿ ತನ್ನ ಸರಾ ಹಾಗೂ ಹಣ ತೆಗೆದುಕೊಂಡು ಹೋಗಿರಲಿಲ್ಲ.

ಆ ಪ್ರಸಂಗ ಹೀಗಿತ್ತು. ಮೊದಲ ಸಲ ಅವಳು ತವರು ಮನೆಗೆ ಹೋದಾಗ ಎಂಟು ದಿನಗಳ ಕಾಲ ತಂದೆ ತಾಯಿಂದ ಉಪಚಾರ ಪಡೆದಿದ್ದಳು. ಆ ಸಲ ಅವಳ ತಂದೆ ಒಂದು ಮಾತು ಹೇಳಿದ್ದರು.

"ನೋಡಮ್ಮ ನನ್ನದಾದ ಐವತ್ತು ಸಾವಿರ ರೂ.ಗಳನ್ನ ಆರು ವರ್ಷದ

ಹಿಂದೆ ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟ್ ಕೊಂಡಿದ್ದೆ, ಅವು ಡಬ್ಬಲ್ ಆಗಿ ಒಂದು ಲಕ್ಷ ರೂ. ಬಂದಿದೆ. ನಿಮ್ಮಿಬ್ಬರ ಮದುವೆ ಮಾಡಿ ಉಳಿದ ನನ್ನ ಹಣವೆಲ್ಲಾ ಎಂದಿದ್ದರೂ ಅನಂತನಿಗೆ ಸೇರಿದ್ದೇ ಆದರೆ ಈ ಸಲ ನಿನಗೆ ಹಾಗು ಕುಮುದಳಿಗೆ ಅರಿಶಿನ ಕುಂಕುಮಾ ಇಟ್ಟು ಐದೈದು ಸಾವಿರ ರೂ. ಕೊಡಬೇಕೂಂತಿದ್ದೀನಿ. ತವರು ಮನೆಯ ನೆನಪಾಗಿ ಏನಾದರೂ ಮಾಡಿಸಿಕೊ" ಎಂದು ಐದು ಸಾವಿರ ರೂಗಳನ್ನು ಕೊಟ್ಟರು.

ಅವಳು ಆ ಹಣ ಪಡೆದು, ಊರಿಗೆ ಬಂದಾಗ ಗಂಡನೊಂದಿಗೆ ತಿಳಿಸಿದಳು.

"ಸದ್ಯಕ್ಕೆ ಆ ಹಣ ಬ್ಯಾಂಕಲ್ಲಿಟ್ಟಿರೋಣ. ಮೊನ್ನೆ ತಾನೆ ಅಣ್ಣ ಕೊಟ್ಟ ಹಣಕ್ಕೆ ನಿನ್ನಲ್ಲಿದ್ದ ಒದ್ದಹಣ ಹಾಕಿ ಚೈನ್ ಮಾಡಿಸಿದ್ದಾಗಿದೆಯಲ್ಲ" ಎಂದ.

ಅವನ ಮಾತು ನ್ಯಾಯ ಎಂದು ಅವಳು ಒಪ್ಪಿಕೊಂಡಳು. ಏಕೆಂದರೆ ಅವಳು ತವರು ಮನೆಗೆ ಹೋಗುವ ಒಂದು ತಿಂಗಳು ಮುಂಚೆ ಸುರೇಶನ ಅಣ್ಣ ಗೋಪಾಲ ಬಂದ. ಬೆಳೆ ಮಾರಿದ ಹಣದಲ್ಲಿ ಸೊಸೆಗೆ ಏನಾದರೂ ಚಿನ್ನ ತೆಗೆಯಬೇಕೆಂದು ಅಪ್ಪಾ ಕೊಟ್ಟಿದ್ದಾರೆ ಎಂದು ಹಣ ನೀಡಿದ್ದ. ಸುರೇಶ ಹೊಸ ಹೆಂಡತಿಯ ಮೇಲಿನ ಪ್ರೀತಿಗೆ ತನ್ನ ಬಳಿ ಇದ್ದ ಬದ್ದ ಹಣ ಸೇರಿಸಿ ಒಂದು ಚೈನ್ ಮಾಡಿಸಿದ್ದ.

ತವರು ಮನೆಯಿಂದ ತಂದೆ ಕೊಟ್ಟ ಐದು ಸಾವಿರ ರೂಗಳನ್ನು ಬ್ಯಾಂಕಿನಲ್ಲಿ ಹಾಕಿಬಿಟ್ಟಳು. ಒಡವೆ ವಸ್ತ್ರಕ್ಕೂ ಅಂಥಾ ಕೊರತೆ ಏನಿರಲಿಲ್ಲ.

ಮದುವೆಯಲ್ಲಿ ತಂದೆ ಮನೆಯಿಂದ ಹಾಗು ಮಾವನ ಮನೆಯಿಂದ ಬಂದ ಒಟ್ಟು ಹತ್ತು ತೊಲದ ಚಿನ್ನ ಅವಳ ಬಳಿ ಇತ್ತು.

ಸುಮಾರು ಮೂರು ತಿಂಗಳ ಹಿಂದೆ ಒಂದು ದಿನ ಸುರೇಶ ಹೇಳಿದ, "ವಿಜು ನನಗೊಂದು ಸಣ್ಣ ಉಪಕಾರ ಮಾಡಬೇಕು. ಒಪ್ತೀಯಾ ?"

"ಏನು ವಿಷಯ ಹೇಳಿ ?" ಜೇನು ತುಂಬಿದ ಅವನ ದನಿಯ ಪ್ರೀತಿಯ ಓಲೈಸುವಿಕೆಗೆ ಮರುಳಾಗಿ ಕೇಳಿದಳು.

"ನನ್ನ ಸಹೋದ್ಯೋಗಿ ಮಿಸ್. ಸುಲಭಾ ಇದ್ದಾರಲ್ಲಾ....ಆಕೆಯ ತಮ್ಮ ಬಾಂಕಲ್ಲಿ ಕೆಲಸ ಮಾಡ್ತಿದ್ದಾರೆ. ಅಕ್ಕಾ ತಮ್ಮ ಸೇರಿ ಒಂದು

ವೆಹಿಕಲ್ ತಗೊಬೇಕೂಂತ ಎಂಬ ಒದ್ದಾಡ್ತಿದ್ದಾರೆ. ಸಿಟಿ ಬಸ್ ಹಿಡಿದು ಒದ್ದಾಡಿ ಸಾಕಾಗಿದೇಂತ ಸುಲಭಾ ಒದ್ದಾಡ್ತಿದ್ದಾರೆ. ನಾನು ಅವರಿಗೆ ಹದಿನೈದು ಸಾವಿರ ರೂ. ಸಾಲ ಕೊಡ್ತೀನಿ ಅಂತ ಮಾತು ಕೊಟ್ಟುಬಿಟ್ಟಿದ್ದೀನಿ. ಬರೋ ವರ್ಷ ಅವರು ಹಣ ರಿಟರ್ನ್ ಮಾಡ್ತಾರೆ. ಮಂತ್ಲಿ ಒನ್ ಅಂಡ್ ಆಫ್ ಥೌಸಂಡ್ ರಿಟರ್ನ್ ಮಾಡ್ತೀನಿ ಅಂತಾರೆ. ಏನು ಮಾಡಲಿ ?" ಎಂದ.

ಒಳಗೊಳಗೆ ಅವಳಿಗೆ ಅಸಮಾಧಾನವಾಗಿತ್ತು, ಅಸೂಯೆಯಾಗಿತ್ತು ಆದರೂ ಮುಗುಳ್ನಗೆ ನಟಿಸಿ,

"ನಿಮಿಷ್ಟಾ...... ಒಂದ್ವೇಳೆ ಕೊಡಬೇಕೂಂತ ನಿಮಗೆ ಆಸೆ......ಇದ್ದರೆ ಕೊಡಿ" ಎಂದಳು.

"ಖಂಡಿತ ಸಹಾಯ ಮಾಡಬೇಕೂಂತಿದ್ದೀನಿ, ಮಿಸ್. ಸುಲಭಾನ್ನ ಕಂಡರೆ ನನಗೆ ಏನೋ ಒಂದು ಥರಹಾ ಅಫೆಕ್ಷನ್ ಇದೆ. ಆಕೆ ಯಾವ ಜನ್ಮದ ನನ್ನ ಸೋದರಿಯೋ ಏನೋ ? ನಿನ್ನ ಒಡವೆಗಳ ಪೈಕಿ ಚೈನ್ ಇದೆಯಲ್ಲ, ಅದನ್ನು ನೀನು ಯಾವಾಗಲೂ ಹಾಕಿಕೊಳ್ಳಲ್ಲ. ಅದನ್ನು ಒತ್ತೆಯಿಟ್ಟು ಹತ್ತು ಸಾವಿರ ರೂ. ತರ್ತೀನಿ, ಬ್ಯಾಂಕಿನಲ್ಲಿ ಐದು ಸಾವಿರ ರೂ ಇದೆಯಲ್ಲ, ನಿನ್ನದು. ಅದನ್ನು ಸೇರಿಸಿ ಹದಿನೈದು ಸಾವಿರ ರೂ......ಕೊಡ್ತೀನಿ, ಒನ್ ಇಯರಲ್ಲಿ ಅವರು ರಿಟರ್ನ್ ಮಾಡ್ತಾರೆ." ಎಂದ.

ಕೊಡಬೇಡಿ......ಎಂದು ಹೇಳುವಷ್ಟು ಧೈರ್ಯವಿರಲಿಲ್ಲ. ಇದು ಯಾವ ವ್ಯವಹಾರ ? ಬರಿ ವಿಶ್ವಾಸ, ಸ್ನೇಹಕ್ಕೆ ಕಟ್ಟುಬಿದ್ದು ಹದಿನೈದು ಸಾವಿರ ರೂ. ಕೊಡಬೇಕೆ ?

ಈ ಕೊಡುಗೆಯಿಂದ ಪ್ರಭಾವಿತಳಾಗಿ ಅವಳು ಮತ್ತಷ್ಟು ಸ್ನೇಹ ಬೆಳೆಸಿದರೆ ? ನಾನಾ ಆಲೋಚನೆಗಳು ಅವಳ ಮನದಲ್ಲಿ ನುಗ್ಗಿ ಬಂದವು. ಆದರೂ ಗಂಡನ ಮೇಲಿನ ಪ್ರೀತಿಗೆ ತನ್ನ ಮನದ ಅಪ್ರಿಯ ಆಲೋಚನೆ ಮುಚ್ಚಿಟ್ಟು ಅವನ ಯೋಚನೆಗೆ ಸಹಕರಿಸಿದಳು. ಇನ್ನೊಮ್ಮೆ ಸುಲಭಾ ತನ್ನ ಸ್ಕೂಟರ್‌ನಲ್ಲಿ ಸುರೇಶನೊಂದಿಗೆ ಇವರ ಮನೆಗೆ ಬಂದಳು

"ಇದೇನು ... ನಿಮ್ಮ ಸ್ಕೂಟರ್ ಎಲ್ಲಿ ?" ಗಂಡನನ್ನು ಕೇಳಿದಳು.

"ನನ್ನ ಸ್ಕೂಟರ್ ಇವರ ಬ್ರದರ್ ತಗೊಂಡ್ಹೋಗಿದ್ದಾರೆ, ನಾಳೆ

ಕಾಲೇಜು ಹತ್ತಿರ ಕರ್ಸ್ತಾರೆ. ಮಿಸ್ ಸುಲಭ ಅವರ ಸ್ಕೂಟರ್ ಹಣ ಸರಿ ಮಾಡಿ ಕೊಟ್ಟ್ರೋಳು ನೀನು, ನಿನಗೆ ತೋರಿಸಲಿಕ್ಕೆ ತಂದಿದ್ದೆ" ಎಂದ. ಅವಳು ಔಪಚಾರಿಕವಾಗಿ,

"ಚೆನ್ನಾಗಿದೆ......" ಎಂದಳು.

"ಸೆಲೆಕ್ಷನ್ ಎಲ್ಲಾ ನಿಮ್ಮ ಯಜಮಾನರದೆ. ಲೈಸನ್ಸ್ ಓಡಾಟದಿಂದ ಹಿಡಿದು, ಎಲ್ಲಕ್ಕೂ ನಿಮ್ಮ ಹಸ್ಬೆಂಡ್ ಓಡಾಡಿ ತುಂಬಾ ಸಹಾಯ ಮಾಡಿದರು. ನನ್ನ ಬ್ರದರ್‌ಗಂತು ಏನೂ ಗೊತ್ತಾಗಲ್ಲ, ಓಡಾಟಕ್ಕೆ ಪುರಸತ್ತು ಇರಲ್ಲ. ನಿಮ್ಮ ಹಸ್ಬೆಂಡ್‌ಗೆ ಆರ್.ಟಿ.ಓ ಆಫೀಸಿನ ಪ್ರತಿ ಅಧಿಕಾರಿಯೂ ಗೊತ್ತು, ಬೇಗಾ ಕೆಲಸಾ ಮುಗಿಸಿಕೊಟ್ಟರು.

"ನನ್ನ ತಮ್ಮನೇ ಆದರೆ ತಿಂಗಳಾನುಗಟ್ಟಲೆ ಓಡಾಡಬೇಕಿತ್ತು" ಎಂದು ಸುರೇಶನನ್ನು ಹೊಗಳಿದಳು.

ಕಾಫಿ ತಿಂಡಿ ಆಗುವವರೆಗೆ ಯಾವುದೊ ಸಾಹಿತ್ಯಕೃತಿಯ ಬಗ್ಗೆ ಚರ್ಚೆ. ಅವಳು ವಾದ ಮಾಡುವ ರೀತಿ, ವಿಷಯಗಳನ್ನು ಆಳವಾಗಿ ಪ್ರತಿಪಾದಿಸುವ ರೀತಿ ಸುರೇಶನಿಗೆ ತುಂಬ ಮೆಚ್ಚಿಕೆ ಆಗಿತ್ತು.

"ನಿಮ್ಮಂತಹ ಪ್ರತಿಭಾವಂತೆಯ ಬೌದ್ಧಿಕ ಸ್ನೇಹಾ ನನಗೆ ತುಂಬ ಚೇತೋಹಾರಿ ಅನಿಸತ್ತೆ. ಮಿಸ್ ಸುಲಭಾ ಒಂದು ಗಂಟೆ ನಿಮ್ಮ ಜೊತೆ ಮಾತಾಡಿದರೂ ನನ್ನ ಮನಸ್ಸು ಉಲ್ಲಾಸವಾಗಿರುತ್ತೆ" ಎಂದು ಬೀಳ್ಕೊಟ್ಟಿದ್ದ.

ಹೋಗುವಾಗ ಅವಳ ಸ್ಕೂಟರ್‌ನಲ್ಲಿಯೇ ಅವಳನ್ನು ಅವಳ ಮನೆಯ ವರೆಗೆ ಬಿಟ್ಟು ಬಂದಿದ್ದ.

ಪುನಃ ಅವನು ಒಬ್ಬನೇ ಹೊಸ ಸ್ಕೂಟರಿನಲ್ಲಿ ಹಿಂತಿರುಗಿದಾಗ ವಿಜಯ ಬೇಸರದಿಂದ "ಏಕೆ ಒಬ್ಬರೇ ಬಂದಿರಿ? ನಮ್ಮ ಸ್ಕೂಟರ್ ತರಲಿಲ್ಲವಾ? ಅವರ ಮನೆಯವರೆಗೆ ಹೋದಮೇಲೆ ನಮ್ಮದು ತಂದು ಇದನ್ನೇ ಅಲ್ಲೇ ಬಿಟ್ಟು ಬರಬೇಕಾಗಿತ್ತು" ಎಂದಳು.

"ನಮ್ಮ ಸ್ಕೂಟರ್ ಅವರ ಬ್ರದರ್ ತಗೊಂಡು ಎಲ್ಲೋ ಸಿಟಿ ಮಾರ್ಕೆಟ್ ಕಡೇ ಹೋಗಿದ್ದ. ನಾಳೇ ಅಕ್ಕನ್ನ ಕಾಲೇಜುಹತ್ತಿರ ಬಿಡೋಕೆ ಬರ್ತಾನಲ್ಲ. ಅವಾಗ ನಮ್ಮದು ಅಲ್ಲಿ ಬಿಟ್ಟು; ಇದನ್ನ ತಗೊಂಡುಹೋಗ್ತಾನೆ. ಹೊಸ ಸ್ಕೂಟರ್‌ನಲ್ಲಿ ನಾವು ಒಂದು ರೌಂಡ್ ಹೋಗಿ ಬರ್ಲೋಣವೇನು?" ಎಂದ.

“ಇಲ್ಲಪ್ಪ ನನಗೆ ತಲೆ ನೋಯ್ತಿದೆ. ಊಟಾ ಮಾಡಿ ಮಲಗಿ ಬಿಡೋಣಾ......” ಎಂದಳು.

“ಮಲಗಿಬಿಡೋಣಾ......ಓಹೋ ಏನಿವತ್ತು ಇಂಥಾ ರಸಿಕತೆ ಅಮ್ಮಾವರಿಗೆ ?” ಮಲಗಿಬಿಡೋಣಾ ಎಂಬ ಪದ ಒತ್ತಿ ಹೇಳಿದ. ನಂತರ ಕಣ್ಣು ಹೊಡೆದು “ಏನು ವಿಶೇಷಾ ಮರಿ......” ಎಂದ. ಅವನ ಈ ಬಗೆಯ ರೇಗಿಸುವಿಕೆಗೆ ಅವಳ ಮನ ಪ್ರಫುಲ್ಲವಾಗಲಿಲ್ಲ. ಅವನು ರೂಪವಂತ ಎಂಬ ಒಂದೇ ಕಾರಣಕ್ಕೆ ಎಲ್ಲಾ ಹೆಣ್ಣುಗಳನ್ನು ಮರಳು ಮಾಡುತ್ತಿದ್ದಾನೆಯೆ? ತನಗೆ ಅವನನ್ನು ಪ್ರತಿಭಟಿಸಲು ಸಾಧ್ಯವಿಲ್ಲ. ಅವನು ತನಗೆ ಪ್ರೀತಿ ಪ್ರೇಮದಿಂದಲೆ ನೋಡಿಕೊಳ್ಳುತ್ತಾ ಇದ್ದಾನೆ. ತಿಂಗಳಿಗೊಮ್ಮೆ ಸಂಬಳದಲ್ಲಿ ಸಾವಿರದೈನೂರು ರೂ. ತಂದು ಮನೆಗೆಂದು ತನ್ನ ಕೈಗೆ ಕೊಡುತ್ತಾನೆ.

ಒಳ್ಳೆಯ ಗೃಹಿಣಿಯಾಗಿ, ಪ್ರೀತಿಯ ಪತ್ನಿಯಾಗಿ ತಾನು ಚೆನ್ನಾಗಿ ನೋಡಿಕೊಳ್ಳಬೇಕು. ಅವನನ್ನು ಸಂಕುಚಿತ ಭಾವನೆ ಹೊಂದಿ ಸಣ್ಣ ಸಣ್ಣದಾದ ವಿಷಯಗಳಿಗೂ ಜಗಳಾ ತೆಗೆದು ಅವನ ಮನಸ್ಸು ನೋಯಿಸಬಾರದು. ಮನಸ್ಸಿನ ಒಂದು ಭಾಗ “ಅವನು ನಿರಪರಾಧಿ, ಒಳ್ಳೆ ಗೃಹಸ್ಥ. ಇಂಥಾ ಪತಿ ತನಗೆ ದೊರಕಿರುವುದು ತನ್ನ ಅದೃಷ್ಟ ಎನಿಸುತ್ತಿತ್ತು. ಇಂಥಾ ಸೊಗಸಾದ ಮನೆ, ಮನೆಗೆ ಏನೋ ಒಂದು ಅಲಂಕಾರದ ಸಾಮಾನು ಹಿಡಿದು ತರುತ್ತಿದ್ದ.

ಅಲಂಕಾರದ ಆ ಸೊಗಸಾದ ಮನೆಗೆ ಅವಳ ತವರುಮನೆಯ ಕಡೆಯ ಗೆಳತಿಯರು ಅಣ್ಣಾ ಅತ್ತಿಗೆ ಆಕಸ್ಮಿಕವಾಗಿ ಭೇಟಿ ಇತ್ತಾಗ ಅವಳಿಗೆ ಹೆಮ್ಮೆ ಆಗುತ್ತಿತ್ತು.

“ಮದುವೆ ಆಗಿ ಇನ್ನೂ ಒಂದು ವರ್ಷ ಆಗಿಲ್ಲ, ಮನೆಗೆ ಎಲ್ಲಾ ಲಕ್ಷುರಿ ಸಾಮಾನುಗಳು ತಂದಿದ್ದೀರಿ. ಸೋಫಾಸೆಟ್ಟ್, ನೆಲಕ್ಕೆ ಹಾಸೊ ರತ್ನಗಂಬಳಿಯಿಂದ ಎಲ್ಲಾ ತಂದಿದ್ದೀರಿ, ನಾವೇ ನಿಮ್ಮೆದುರಿಗೆ ನಾಚಬೇಕು” ಎಂದು ಅತ್ತಿಗೆ ವಸಂತಾ ಹೊಗಳಿದ್ದಳು.

ತನ್ನ ಗೆಳತಿ ಅಂಜಲಿ ಎಂಬ ಹುಡುಗಿ “ನಿನ್ನ ಅದೃಷ್ಟವೇ ಅದೃಷ್ಟಾ ವಿಜ್ಜೂ. ನಮ್ಮ ಭಾವನಿಗೆ ಎರಡೂವರೆಸಾವಿರ ರೂ. ಸಂಬಳಾ ಬರತ್ತೆ.. ಆದರೆ ಅಕ್ಕನ್ನ ಯಾವಾಗಲೂ ಇನ್ನೂರು ಮುನ್ನೂರು ರೂ. ಗಳ ಬಾಡಿಗೆ ಮನೆಯಲ್ಲೇ ತೊಳಲಾಡಿಸ್ತಾರೆ. ಸಂಸಾರ ಹೂಡಿ ಹತ್ತು ವರ್ಷ ಆಯಿತು.

ನಾನ್ನೂರು ರೂ.ಗಳ ತಕ್ಕಮಟ್ಟಿನ ಅನುಕೂಲದ ಮನೆ ಹಿಡಿಯಲಿಕ್ಕೆ ಅವರಿಗೆ ಇಷ್ಟವಿಲ್ಲ. ಅವರ ಮನೇಲಿ ನೀರು, ಶೌಚಗೃಹ, ಯಾವುದು ಪ್ರತ್ಯೇಕವಿಲ್ಲ. ನಿನ್ನ ಮನೆ ನೋಡಿದರೆ ಜಲಸ್ ಆಗತ್ತೆ. ವರಾಂಡ, ಹಜಾರ, ಡ್ರಾಯಿಂಗ್ ರೂ, ಬೆಡ್ ರೂಂ ಎಲ್ಲಾ ಪ್ರತ್ಯೇಕವಿದೆ. ಸೊಗಸಾದ ಕಾಂಪೌಂಡು, ಹೂವಿನ ಗಿಡ, ಕ್ರೋಟನ್ ಗಿಡಗಳಿವೆ, ಸಂಸಾರ ಹೂಡಿದ ಹೊಸತರಲ್ಲೇ ಎಂಟುನೂರು ರೂ. ಗಳ ಬಾಡಿಗೆ ಮನೇಲಿದ್ದಿ" ಎಂದು ಮನಮುಕ್ತ ಹೊಗಳಿದ್ದಳು.

ಅವಳಿಗೆ ಆ ಕ್ಷಣಗಳಲ್ಲಿ ಸಂತಸಾ ಆಗುತ್ತಿದ್ದದ್ದು ನಿಜ. ಇನ್ನೊಬ್ಬ ಗೆಳತಿ ರೇಣುಕಾ,

"ನಿಜಕ್ಕೂ ನೀನು ಲಕ್ಕಿಫೆಲೊ ಕಣೆ ವಿಜಯ. ಯುವತಿಯರ ಕನಸಿನ ರಾಜಕುಮಾರನಂಥಾ ಗಂಡಾ, ಫಿಲಂಗಳಲ್ಲಿ ನೋಡುವಂಥಾ ಸೊಗಸಾದ ಮನೆ, ಉದ್ಯೋಗ ಮಾಡ್ಕೊಂಡು ತೊಳಲಾಡೋ ನಮ್ಮಂತಹವರಿಗಿಂತ ಗಂಡನಿಂದ ತಿಂಗಳಿಗೊಮ್ಮೆ ಕೂತ ಕಡೆ ಸಂಬಳ ತಗೊಳ್ತಾ ಆರಾಮವಾಗಿದ್ದಿ. ಗೃಹಿಣಿ ಆದರೆ ನಿನ್ನಂಥಾ ಅದೃಷ್ಟವಂತ ಗೃಹಿಣಿ ಆಗಿ ಬದುಕಬೇಕು" ಎಂದಿದ್ದಳು.

ಪಕ್ಕದ ಮನೆಯ ಗೆಳತಿ ಶೈಲಜಾ ಆಗಾಗ "ನಿಮ್ಮನ್ನ ನೋಡಿದ್ರೆ ಅಸೂಯೆ ಆಗತ್ತೆ ವಿಜಯ ನಿನಗೆ, ನಿಮ್ಮ ಹಸ್ಬೆಂಡ್‌ಗೆ ಯಾವ ಜವಾಬ್ದಾರಿ ಇಲ್ಲ. ನಿಮ್ಮ ಗಂಡಾ ಸಂಪಾದಿಸಿದ್ದೆಲ್ಲಾ ನಿಮ್ಮದೆ. ಆದರೆ ನಮ್ಮ ಹಣೆಬರಹ ನೋಡಿ, ಮದುವೆ ಆಗಿ ಹತ್ತು ವರ್ಷ ಆದರೂ, ನಮಗೆ ಜವಾಬ್ದಾರಿ ಹರಿದಿಲ್ಲ. ಮೂರು ಜನ ನಾದಿನಿಯರಲ್ಲಿ ಇಬ್ಬರ ಮದುವೆ ಮಾಡಿದ್ದೀವಿ, ಇನ್ನೊಬ್ಬಳಿಗೆ ನೋಡ್ತಿದ್ದೀವಿ. ಮುದಿ ಅತ್ತೆ, ಮುದಿಮಾವಾ, ಓದ್ತಾ ಇರೋ ಇಬ್ಬರು ಮೈದಂದಿರು ಎಂದಿಗೂ ಹರಿಯದ ಸಮಸ್ಯೆಗಳು. ಸಾಲಾ ಸೋಲಗಳಲ್ಲಿ ಮುಳುಗಿ ನೀರು ಸಾರನ್ನ ತಿಂದು ಒದ್ದಾಡ್ತಾ ಇದ್ದೀವಿ. ಇರೋ ನಮ್ಮ ಎರಡು ಮಕ್ಕಳಿಗೆ ಏನು ಕೊಡಲಾಗದ ಸ್ಥಿತೀಲಿದ್ದೇವೆ. ದಿನ ಅರಹೊಟ್ಟೆ ಊಟಾ ಮಾಡಿಕೊಂಡು ಕಾಲ ಕಳೆಯುವ ಆ ಮಕ್ಕಳಿಗೆ ಮುಂದೆ ನಾವು ಯಾವ ಆಸ್ತಿ ಪಾಸ್ತಿ ಮಾಡಲ್ಲ. ಅದು ಹಾಳಾಗಲಿ ಅಂದರೆ ನಮ್ಮ ಮಕ್ಕಳಿಗೆ ಒಂದು ಒಳ್ಳೆ ಎಜುಕೇಶನ್ ಸಹಾ ಕೊಡಿಸೋ ಹಾಗಿಲ್ಲ. ಎಸ್ಸೆಲ್ಲಿ

ಆಗ್ತಾಲೇ ಟಿ.ಸಿ.ಎಚ್ ಮಾಡಿಸ್ತೀನಿ ಅಂತಿದ್ದಾರೆ ನಮ್ಮ ಮುಕುಂದನಿಗೆ. ಅದಕ್ಕೂ ಸಾಲಾ ಸೋಲಾ ಮಾಡ್ತ ಇದ್ದಾರೆ ನಮ್ಮ ಯಜಮಾನರು. ನಮ್ಮ ಮುಕುಂದಾ ಬುದ್ಧಿವಂತ, ಅವನು ಗ್ರಾಜುಯೇಟ್ ಆಗಬೇಕೂಂತ ನನಗೆ ಆಸೆ ಇತ್ತು"

ಎಂದು ಏನೇನೋ ಹೇಳಿಕೊಳ್ಳುತ್ತಿದ್ದಳು. ಅವರೆಲ್ಲರ ದೃಷ್ಟಿಯಿಂದ ತಾನು ಅದೃಷ್ಟವಂತೆ.

ಸೊಗಸಾದ ಮನೆ ನಿಜ. ಆದರೆ ಅಷ್ಟು ದೊಡ್ಡ ಮನೆ ತಮಗೆ ಅವಶ್ಯ ವಲ್ಲವೆ ? ಗಂಡಾ ಹೆಂಡತಿ ತಾವು ಇದ್ದದ್ದು ಇಬ್ಬರು, ಯಾವ ಕೆಲಸಗಾತಿ ಬಂದರೂ ಎರಡು ತಿಂಗಳು ಮಾಡಿ ಬಿಟ್ಟುಬಿಡುತ್ತಾ ಇದ್ದಳು. ಮುಂದೆ ಒಂದೆರಡು ತಿಂಗಳುಗಳ ಕಾಲ ಅವಳೇ ಆ ಮನೆಗೆ ದುಡಿಯುವಾಗ ಸಾಕು ಸಾಕಾಗಿ ಹೋಗುತ್ತಿತ್ತು.

ತೋಟದ ಒಂದು ಹೂವಿನ ಗಿಡ ಬಾಡಿದರೂ "ವಿಜ್ಜೂ......ಏನಿದು ? ಗಿಡಕ್ಕೆ ನೀರು ಹಾಕಲಿಲ್ಲವಾ ?" ಎಂದು ಗಡುಸಾಗಿ ಕೇಳುತ್ತಿದ್ದ. "ಇಲ್ಲ, ಮರೆತಿದ್ದೆ, ಹಾಕ್ತೇನೆ" ಎಂದು ನೀರು ಹಾಕುತ್ತಾ ಇದ್ದಳು. ಆಗ ಹೆಚ್ಚು ಮಾತಿರಲಿಲ್ಲ. ಆದರೆ ಪ್ರತಿಭಟಿಸಿ ಮಾತಾಡಿದರೆ, ಎದುರು ವಾದಿಸಿದರೆ ಪ್ರಳಯವೇ ಆಗುತ್ತಿತ್ತು.

ಮುಂಗೋಪಿಯಾದ ಸುರೇಶ ಸಿಡಿಲಿನಂತೆ ಅರ್ಭಟಿಸುತ್ತಿದ್ದ. ಅವನ ಆ ಬಗೆಯ ಹಾರಾಟಾ ರೇಗಾಟಗಳಿಗೆ ಸಿಗದಂತೆ ಅವಳು ಜಾಗರೂಕತೆಯಿಂದ ಕತ್ತಿಯ ಮೇಲೆ ಸಾಮು ಮಾಡಿದಂತೆ ನಡೆಯುತ್ತಿದ್ದಳು.

ಅವನೊಂದಿಗೆ ಜಗಳವಾಡುವುದು ಅವಳಿಗೆ ಇಷ್ಟವಿರಲಿಲ್ಲ. ಹೀಗಾಗಿ ಸಾಧ್ಯವಾದಷ್ಟು ಅವನು ಹೇಳಿದಂತೆ ಕೇಳುತ್ತಿದ್ದಳು. ತಾನು ಹೇಳಿದಂತೆ ನಡೆದರೆ ಅವನು ತುಂಬ ಪ್ರಸನ್ನನಾಗುತ್ತಿದ್ದ. ಅವನ ಪ್ರಸನ್ನತೆ ಒಲುವೆ ಕಾಯ್ದಿಟ್ಟುಕೊಳ್ಳುವುದೇ ಅವಳ ಗುರಿಯಾಗಿತ್ತು.

ಹೌದು ! ಸಾಮಾನ್ಯ ಜಗಳ ವಿಕೋಪಕ್ಕೆ ತಿರುಗಿ ಅವನು ಕಿರುಚಾಡಿ ಪ್ರತಿಭಟಿಸಿ ವಿರಸ ಮಾಡಿಕೊಂಡರೆ ತಾನು ಎಲ್ಲಿ ಹೋಗಬೇಕು ?

ಈ ಬಗೆಯ ತೊಳಲಾಟಗಳಲ್ಲಿ ಸಿಲುಕಿದ ಅವಳು ಮೇಲ್ನೋಟಕ್ಕೆ ಸುಖಿ ಗೃಹಿಣಿಯಂತೆ ನಟಿಸುತ್ತಿದ್ದಳು. ಅವನ ಕಾಲೇಜು ವಿಭಾಗದ

ಹಿರಿಯ ಸಹೋದ್ಯೋಗಿ ಕಾಮಾಕ್ಷಮ್ಮ ಎಂಬಾಕೆ, ಸುಮಾರು ಐವತ್ತು ವರ್ಷ ವಯಸ್ಸಿನವರು. ಆಕೆ,

"ನಿಜಕ್ಕೂ ನೀನು ತುಂಬ ಪುಣ್ಯವಂತೆ ವಿಜಯಮ್ಮ. ಸುರೇಶ ಚೊಕ್ಕ ಚಿನ್ನ. ಐದು ವರ್ಷದಿಂದ ಕಾಲೇಜಿನಲ್ಲಿ ಗಮನಿಸಿದ್ದೀನಿ. ಒಂದು ದುರಭ್ಯಾಸ ವಿಲ್ಲ. ನಮ್ಮಲ್ಲಿ ಕೆಲವರಿಗೆ ಸ್ಮೋಕ್, ಡ್ರಿಂಕ್ಸ್, ಹುಡುಗಿಯರ ಹುಚ್ಚು ಏನೇನಿದೆ ? ಆದರೆ ಇಷ್ಟು ಚಿಕ್ಕ ವಯಸ್ಸಿನ ಹುಡುಗನಾದರೂ ಯಾವ ತರಹಾ ದುರಭ್ಯಾಸ ಇಲ್ಲ. ಒಳ್ಳೆ ಕೌಟುಂಬಿಕ ವಲಯದ ಗೆಳೆಯ ಗೆಳತಿ ಸಾಹಿತ್ಯ, ಸಂಸ್ಕೃತಿ, ಚಟುವಟಿಕೆ ಬೌದ್ಧಿಕ ಸಂಗಾತ್ಯಕ್ಕನುಗುಣವಾದ ಕೆಲವು ಗೆಳೆಯ ಗೆಳತಿಯರು ನಿಜಕ್ಕೂ ಚೊಕ್ಕ ಚಿನ್ನ" ಎಂದೇ ಹೊಗಳುತ್ತಿದ್ದರು.

ಸೌ|| ಕಾಮಾಕ್ಷಮ್ಮ, ಎಂ.ಎ. ಪಿ ಎಚ್.ಡಿ, ಅವರು ಹೇಳುವುದು ನಿಜ. ಆದರೆ ಅವರಂತೆ ಅವನನ್ನು ಮೆಚ್ಚಲು ತನಗೆ ಸಾಧ್ಯವಿಲ್ಲ, ಹೋಟೆಲಿಗೆ ಸಹ ಅವನು ಕಾಲಿಡುವುದಿಲ್ಲ ನಿಜ. ಆದರೆ ಸಂಜೆ ಬೆಳಿಗ್ಗೆ ಅಚ್ಚುಕಟ್ಟಾದ ಅವನು ಬಯಸಿದ ಅಡುಗೆ ತಿಂಡಿ ಆಗಲೇಬೇಕು.

ಪೂರಿಸಾಗು ಇಲ್ಲ ಮಸಾಲೆದೋಸೆ. ಎಲ್ಲಾ ತರಕಾರಿ ಹಾಕಿ ಮಸಾಲೆ ಪುಡಿ ಹಾಕಿ ರವೆಯಲ್ಲಿ ತಯಾರಿಸುವ ಖಾರಾಭಾತ್ ಮಾಡಬೇಕು ಆಗಾಗ ಕಾಲೇಜಿನ ಸಂಘದ ಕಾರ್ಯಕ್ರಮ, ಮೀಟಿಂಗ್‌ಗಳು ನಡೆದಾಗ ಸಂಘದ ಮೀಟಿಂಗ್ ಇವರ ಮನೆಯ ಹಜಾರದಲ್ಲೇ ನಡೆಯುತಿತ್ತು. ತಿಂಗಳಿಗೊಮ್ಮೆ ಶನಿವಾರ ಸಂಜೆ ಅಥವಾ ಭಾನುವಾರ ಬೆಳಿಗ್ಗೆ ಈ ಮೀಟಿಂಗ್ ನಡೆಯುತ್ತಿತ್ತು ಆಗ ಸುಮಾರು ಹತ್ತು ಹದಿನೈದು ಜನರಿಗೆ ತಿಂಡಿ ತೀರ್ಥ, ಸ್ವೀಟ್, ಕಾರ, ಕಾಫಿ ಚಹಾ. ಬಂದವರೇನೋ ಹೊಗಳುತ್ತಿದ್ದರು. ಆದರೆ ಕಿಟಕಿ ತೆರೆಗಳು, ಸೋಫಾ ಕವರ್‌ನಿಂದ ಶುಚಿಗೊಳಿಸಿ, ಬದಲಾಯಿಸಿ ಅಲಂಕರಿಸಿ, ತಿಂಡಿ ತೀರ್ಥ ಮಾಡಿ ಅವರನ್ನು ತಣಿಸಲು ಮೂರು ದಿನಗಳ ಕಾಲ ದುಡಿಯುತ್ತಾ ಇದ್ದಳು.

* * * * *

ಒಂದು ಸಲ ಅವನು ಹೇಳಿದ—

"ನಾಳಿದ್ದು ಮೀಟಿಂಗಿದೆ ಮರಿ. ಈ ಸಲ ಏನು ಮಾಡ್ತಿ ?" ಎಂದ

"ಆ ದಿನವೇ ತಿಂಡಿ ಹೂಡಿ, ಐದು ಗಂಟೆಗೆ ತಂದು ಸಪ್ಲೈ

ಮಾತೋಸು ಕಷ್ಟ ಆಗತ್ರೆ, ನಾಳೆ ಜಾಮೂನು, ಚೌಚೌ ಮಾಡಿಟ್ಟಿರ್ತೀನಿ, ಕಾಫಿ ಮಾಡಿ ಅದನ್ನೆ ಹಂಚ್ತೀನಿ" ಎಂದಳು. ಅವನು ನಗುತ್ತಾ ಅವಳ ಕೆನ್ನೆ ಹಿಂಡಿ,

"ಸೋಮಾರಿ, ಮೊದಲು ಅಕ್ಕಿ, ಉದ್ದಿನಬೇಳೆ ನೆನೆಹಾಕು, ನನ್ನ ಹೆಂಡ್ತಿ ಮಸಾಲೆ ದೋಸೆ ಚೆನ್ನಾಗಿ ಮಾಡ್ತಾಳೆ ಅಂತ ಎಲ್ಲರಿಗೂ ಹೇಳಿದ್ದೀನಿ ಹೆಂಚಿಂದಾ ಒಂದೊಂದೇ ದೋಸೆ ನೀನು ತೆಗೆದು ಹಾಕ್ತಿದ್ದ ಹಾಗೆ, ಮಿಸ್ ಸುಲಭಾ ತಂದು, ತಂದು

ನಮ್ಮ ತಟ್ಟೆಗೆ ಹಾಕ್ತಾರೆ, ಒಟ್ಟು ಹದಿನಾರು ಜನ ನೋಡು, ಒಬ್ಬೊಬ್ಬರು ಕಡೇಪಕ್ಷ ಮೂರು ಮಸಾಲೆದೋಸೆನಾದರೂ ತಿಂದು ಹಾಕ್ತಾರೆ. ಅಂದಾಜು ನೋಡಿಕೊಂಡು ಅಕ್ಕಿ ಹಾಕು" ಎಂದ.

"ಇದೆಲ್ಲಾ ಪಾರ್ಟಿ, ಟೀಪಾರ್ಟಿ ಹೊರಗೆ ಇಟ್ಕೋಬೇಕಪ್ಪ......ಅಷ್ಟು ಅಷ್ಟು ಜನಕ್ಕೆ ಮಾಡಿ ಹಾಕಿ ಅಷ್ಟು ಹೊತ್ತು ಒಲೆಯ ಮುಂದೆ ಕೂತಿದ್ದರೆ ಸೊಂಟದ ಗತಿ ಏನು ? ಆರೋಗ್ಯದ ಗತಿ ಏನು ?" ಎಂದಳು.

"ಈ ಸಲ ಒಂದ್ಸಲ ಮಾಡಿಬಿಡಪ್ಪಾ......ಬಂಗಾರ......ನಾನು ಫ್ರೆಂಡ್ಸ್‌ಗೆಲ್ಲ ಮಾತು ಕೊಟ್ಟುಬಿಟ್ಟಿದ್ದೀನಿ, ಮಸಾಲದೋಸೆ ತಿನ್ನಿಸ್ತೀನಿ ಅಂತ" ಎಂದ.

ಅವನ ವಚನ ಪಾಲನೆಗಾಗಿ ಆ ಸಲ ದುಡಿದ ಅವಳು ಮೂರು ದಿನ ಮಲಗಿದ್ದಳು. ಮೂರು ದಿನ ತಾನೇ ಒಂದು ಅನ್ನ ಸಾರು ಮಾಡಿಕೊಂಡು ಕಾಲೇಜಿಗೆ ಹೋಗಿದ್ದ. ಒಂದು ದಿನ ಬಂದಾಗ ರಾತ್ರಿ ಒಂಬತ್ತು ಗಂಟೆ, ಸಂಜೆ ಐದೂವರೆಯಿಂದ ಕಾದು ಹೈರಾಣವಾದ ವಿಜಯ......
"ಏಕೆ ಇಷ್ಟೊತ್ತು ಮಾಡಿದ್ರಿ ? ಬ್ರೆಡ್ ತರ್ತೀರಿ ಅಂತ ಕಾದಿದ್ದೆ, ತುಂಬ ಹಸಿವಾಗಿತ್ತು" ಎಂದಳು.

"ಏನ್ಮಾಡ್ಲಿ ವಿಜಿ ? ಮೂರು ದಿನದಿಂದ ನೀನೇ ಕೈ ಸುಟ್ಟುಕೊಂಡು ಅನ್ನಾ ಸಾರು ಮಾಡ್ಕೋತಾ ಇದ್ದೀ...... ಈ ದಿನ ಬಿಸಿಬೇಳೆ ಹುಳಿ ಅನ್ನ, ಗಸಗಸೆ ಪಾಯಸಾ, ಬೊಂಬಾಯಿ ಬೋಂಡಾ ಎಲ್ಲಾ ಆಗಿದೆ. ಅವರ ಮಗನ ಮದುವೆಯ ಐದನೆಯ ವರ್ಷದ ಆನಿವರ್ಸರಿ ಅಂತೆ, ಡಾ. ಕಾಮಾಕ್ಷಮ್ಮ ಕರೆದರು. ಇಡೀ ಕಾಲೇಜಿನಲ್ಲಿ ಯಾರನ್ನೂ ಕರೆದಿಲ್ಲ,

ನನ್ನ ಅವಸ್ಥೆ ನೋಡಲಾರದೆ ಕರೆದರು. ಮೂರು ದಿನಸದಿಂದ ಅರೆಬರೆ ಉಂಡು ಸಾಕಾಗಿತ್ತು, ಹೋಗಿ ಹೊಟ್ಟೆ ತುಂಬ ಉಂಡು ಬಂದೆ." ವಿಜಯ ಸುಮ್ಮನಿದ್ದಳು.

"ಜ್ವರಾ ಹೇಗಿದೆ ವಿಜಿ ? ಬೆಳಿಗ್ಗೆ ಕಡಿಮೆ ಆಗಿತ್ತಲ್ಲ" ಹಣೆಯ ಮೇಲೆ ಕೈಯಿಟ್ಟ.

"ಬ್ರೆಡ್ ತಂದಿದ್ರೆ ಕೊಡಿ, ಹಾಲು ಬಿಸಿಮಾಡಿಕೊಡಿ, ಹಸಿವಾಗ್ತಿದೆ" ಎಂದಳು.

"ಸಾರಿ, ಬ್ರೆಡ್ ಮರೆತು ಬಂದೆ ವಿಜಿ" ಎಂದ. ವಿಜಯಳಿಗೆ ಅತೀವ ನಿಶ್ಶಕ್ತಿಯಿಂದ ತಾಳ್ಮೆ ಕಳೆದು ಹೋಗಿತ್ತು.

"ಗಂಜಿ ಮಾಡ್ಲಿಕ್ಕೆ ನಿಮಗೆ ಕೈಲಾಗಲ್ಲ. ಒಂದಿಷ್ಟು ಬ್ರೆಡ್ ತಂದು ಬಿಸಾಡಿದ್ರಿ. ಇವತ್ತು ಅದು ಮರೆತುಹೋಯಿತೂಂದ್ರೆ ನಾನೇನು ಸಾಯ ಬೇಕಾ ? ಹಸಿವು ಪ್ರಾಣಾ ಹೋಗ್ತಿದೆ" ಎಂದಳು.

"ಸಾರಿ ಮರೆತುಬಿಟ್ಟೆ ವಿಜಿ, ಇವತ್ತೊಂದಿನ ಹಾಲು ಕುಡಿದು ಮಲಗಿಕೊ ಬೆಳಿಗ್ಗೆ ಎದ್ದು ಓಡಿಹೋಗಿ ಬ್ರೆಡ್ ತರ್ತೀನಿ" ಎಂದ.

ಹಸಿವಿನಿಂದ ಕೆರಳಿದ ವಿಜಯ,

ಕಾಯಿಲೆಯಿಂದ ನರಳ್ತಾ ಇದ್ದ ಹೆಂಡ್ತಿಗೆ ಒಂದು ಬ್ರೆಡ್ ತಂದು ಕೊಡೋದು ಹೇಗೆ ಮರೆಯುತ್ತೆ ನಿಮಗೆ, ಡಾಕ್ಟರ್ ಊಟಮಾಡಬೇಡೀಂತ ಹೇಳಿರೋದು ಗೊತ್ತಿದೆ ನಿಮ್ಗೆ, ಒಂದು ಗಂಜಿ ಮಾಡಿ ಹಾಕೋಷ್ಟು ತಾಳ್ಮೆ ಇಲ್ಲ. ನಾನು ಮಾತ್ರ ನೂರು ಬಗೆಯ ಅಡಿಗೆ ಮಾಡಿ ಬಡಿಸ್ಬೇಕು. ಗಂಜಿ ಮಾಡಿಕೊಡದಿದ್ರೆ ಹಾಳಾಗಲಿ...... ಅಂಗಡಿಯಿಂದ ಬ್ರೆಡ್ ತರಲಿಕ್ಕೆ ಏನು ? ಅವರ ಮನೇಲಿ ಗಡಧ್ದಾಗಿ ರಸಕಳವಾ ಹೊಡೆದಿರಿ. ಯಥಾಪ್ರಕಾರ ಒಬ್ಬ ಬೌದ್ಧಿಕ ಸಂಗಾತಿ ಸಿಕ್ಕಳು ನಿಮಗೆ ಡಾ. ಕಾಮಾಕ್ಷಮ್ಮನ ಸೊಸೆ ಅಮಲ ಅವಳ ಜೊತೆ ಹರಟೆ ಹೊಡಿತಾ ಕೂತಿರಿ. ಹರೆಯದ ಹಾಗು ಚೆಲುವೆಯರಾದ ಹುಡುಗಿಯರೆ ನಿಮಗೆ ಹರಟೆಗೆ ಬೇಕು. ಅದಕ್ಕೆ ಬೌದ್ಧಿಕ ಸಾಂಗತ್ಯ ಅಂತ ದೊಡ್ಡ ಹೆಸರು ಬೇರೆ, ಮಿಸೆಸ್ ಅಮಲ, ಮಿಸ್ ಸುಲಭಾ ಇಂಥಾ ಚೆಲುವೆ ಯರೆ ಏಕೆ ಬೇಕು ? ನಿಮಗೆ ಬೌದ್ಧಿಕ ಸಾಂಗತ್ಯಕ್ಕೆ ? ನಾನು ವಿದ್ಯಾವತಿ ಎಲ್ಲಾ ವಿಷಯ ನಿಮ್ಮ ಜೊತೆ ಚರ್ಚೆ ಮಾಡ್ಲಿಕ್ಕೆ ಆಸೆ......ಅವಕಾಶ ಕೊಡಿ,

ಊಹೂಂ ನಿಮಗೆ ಬೌದ್ಧಿಕ ಸಾಂಗತ್ಯ ಪರಸ್ತ್ರೀಯರೇ ಬೇಕು......ನಾನು ಬರಿಯ ಅಡುಗೆಯಳು"

ಅವಳು ಒದರಾಡಿದಾಗ ಅವನು ಉಗ್ರಕೋಪದಿಂದ ಸಿಡಿದೆದ್ದು ಅವಳು ಕಾಯಿಲೆಯವಳು ಎಂಬುದು ಮರೆತು ಹಾರಾಡಿದ. ಆ ದಿನ ಹಾಲು ಸಹ ಕುಡಿಯದೇ ಮಲಗಿದವಳು ಅವಳೆ. ಅವನು ಕೋಪಾ ಮೈಮೇಲೆ ಹಾಕಿ ಕೊಂಡು ಹಾಲು ಕಾಸಲು ಸಹಾ ಹೋಗಿರಲಿಲ್ಲ.

ಬೆಳಗ್ಗೆ ಅವನು ಕಾಫಿ ಬ್ರೆಡ್ ತಂದಿತ್ತಾಗ ಅವಳೇ ರಾಜಿ ಮಾಡಿ ಕೊಂಡಳು.

"ಕ್ಷಮಿಸಿ, ರಾತ್ರಿ ಜ್ವರದ ಆಯಾಸದಲ್ಲಿ ಏನೇನೋ ಅಂದ್ಬಿಟ್ಟೆ. ನಿಮಗೂ ದಿನಾ ಮಾಡಿಕೊಂಡು ಆಯಾಸ ಆಗಿದೆ. ಬೇಗ ನಾನೆದ್ದು ಎಂದಿಗೆ ಅಡಿಗೆ ಕೆಲಸ ನಿರ್ವಹಿಸ್ತೀನೋ ?" ಎಂದಳು.

"ನಿಧಾನವಾಗಿ ಏಳು, ಇನ್ನು ಎರಡು ದಿನ ವಿಶ್ರಾಂತಿ ತೆಗೋ ವಿಜಿ. ಮನಸು ಸಮಾಧಾನವಾಗಿ ಇಟ್ಕೊ, ಇಲ್ಲದ ಸಂಶಯ ಪಟ್ಟು ಬದುಕು ನರಕಾ ಮಾಡ್ಕೊಬೇಡಾ......ನಾನು ನಿಜವಾಗಿ ಕೆಟ್ಟೋನೆ ಆದರೆ ನೀನು ನನ್ನ ಹೇಗೆ ತಡೆ ಹಿಡಿಯಬಲ್ಲೆ ? ಮನೆಗೆ ಮೂರು ಕಾಸು ಕೊಡದೆ ಬೇರೆ ಹುಡುಗಿಯರ ಹಿಂದೆ ತಿರುಗಾಡೋ ಹೋಪ್‌ಲೆಸ್ ಫೆಲೋಸ್ ನಮ್ಮ ಕಾಲೇಜ್ನಲ್ಲೇ ಇದ್ದಾರೆ. ಏಕೆ ನಮ್ಮ ಬೀದೀಲೇ ಆ ಕೃಷ್ಣಪ್ಪ ಇಲ್ವ ? ತಾನು ಸಂಪಾದಿಸಿ ಕೊಡೋದಿರಲಿ ಹೆಂಡತಿ ಸಂಪಾದಿಸಿದ್ದು ಕಿತ್ಕೊಂಡು ಓಡಿ ಹೋಗ್ತಾನೆ. ನನಗೆ ಅಂಥಾ ಚಾಳಿ ಯಾವುದೂ ಇಲ್ಲ. ನಾಲ್ಲಗೆಯ ಚಪಲ ಜಾಸ್ತಿ ನಿಂಗೆ ಗೊತ್ತಿದೆ. ಮೂರು ದಿನದಿಂದ ನೀರು ಸಾರನ್ನ ಉಂಡು ಸಾಕಾಗಿತ್ತು. ಕರೆದರು ಹೋಗಿದ್ದೆವಿ. ಊಟಾ ಮಾಡಿದ ಮೇಲೆ ಒಮ್ಮೆಲೆ ಓಡಿ ಬರೋ ಹಾಗಿರಲಿಲ್ಲ ಕೊಂಚ ಹೊತ್ತು ಕೂತು ಮಾತಾಡಿ ಬಂದೆವು" ಎಂದ.

"ನನ್ನ ಕ್ಷಮಿಸಿ ಎಂದು ಮತ್ತೆ ಅವಳೇ ಕೇಳಿದಳು. ಕಾಲೇಜಿಗೆ ಹೋಗುವಾಗ ಅವನು,

"ಗಂಜಿ ಬ್ರೆಡ್ ಅಂತ ನನಗೆ ಕಾದಿರಬೇಡ ವಿಜಿ. ಶೈಲಜಾ ಅವರಿಗೆ ಹೇಳು ಆಕೆ ಅಂಗಡಂಗಡಿಗೆ ತಿರುಗುತ್ತಾರೆ ಒಂದು ಐದು ರೂಪಾಯಿ ನೀವು

ತಗೊಳ್ಳಿ ಅನ್ನು ಖುಶ್ ಆಗ್ತಾರೆ. ಬ್ರೆಡ್ ತರಿಸಿಕೋ, ಗಂಜಿ ಮಾಡಿಸಿಕೊ" ಎಂದು ಬುದ್ಧಿ ಹೇಳಿ ಹೋದ.

ಅವಳ ಆಯಾಸ ಹಾಗೂ ಅತೃಪ್ತಿಯಿಂದ ಮಲಗಿದ್ದಳು. ಹಾಗಾದರೆ ಈ ದಿನವೂ ಎಲ್ಲೆಲ್ಲಿ ಔತಣದೂಟಾ ಮುಗಿಸಿ ಬರುತ್ತಾನೋ......? ಎಂದು ಮನಸು ಖಿನ್ನವಾಯಿತು.

ಆದರೆ ಆ ದಿನ ಅವನು ಐದೂವರೆಗೆ ಬಂದಾಗ ಅವಳ ಮನ ಅರಳಿತು. ನಿನ್ನೆ ತಾನು ಜಗಳಾ ಆಡಿದ್ದಕ್ಕೆ ಬೇಗ ಬಂದಿದ್ದಾನೆ ಎಂದುಕೊಂಡಳು.

ಆದರೆ ಐದು ನಿಮಿಷದಲ್ಲೆ ಅವಳ ಭಾವನೆ ಸುಳ್ಳೆನಿಸಿತು. ಅವನು ಕಾಲು ತೊಳೆದು ಯಾವುದೋ ಸಿನಿಮಾ ಹಾಡು ಗುರುಗುತ್ತಾ ಬಂದ "ವಿಜ್ಜೂ, ಕೊಂಚ ಇಳಿದು ಮುಖತೊಳೆದು ಸೀರೆಬದಲಾಯಿಸಿ ಬಾ. ನಾನು ಹಾಸಿಗೆ ಸರಿಯಾಗಿ ಹಾಸಿ; ಬೆಡ್‌ಶೀಟ್ ಬದಲಾಯಿಸಿ ಇಲ್ಲಿ ಕೊಂಚ ಕ್ಲೀನ್ ಮಾಡ್ತೀನಿ" ಎಂದ.

"ಏಕೆ, ಏನು ವಿಶೇಷಾ ?" ಎಂದಳು.

"ಮಿಸ್ ಸುಲಭಾ ನಿನ್ನ ನೋಡ್ಲಿಕ್ಕೆ ಬರ್‍ತಾರೆ" ಅವಳು ತನ್ನ ಮನ ದುಮ್ಮಳಾ ನುಂಗಿ ಆಯಾಸದಿಂದ ಹೆಜ್ಜೆ ಹಾಕುತ್ತಾ ಬಚ್ಚಲ ಮನೆಗೆ ಹೊರಟಳು. ಅವನು ಹಾಸಿಗೆ ಕೊಡವಿ ಹಾಕಿ ಸುಕ್ಕಿಲ್ಲದಂತೆ ಒಪ್ಪವಾಗಿ ಬೆಡ್ ಶೀಟ್ ಹಾಸಿ, ಅಲ್ಲೆ ಅಡಾದಿಡ್ಡಿ ಇಟ್ಟ ಸಾಮಾನುಗಳನ್ನು ಸರಿಯಾಗಿ ಇಟ್ಟ. ಅವಳು ಮುಖ ತೊಳೆದು ಪೌಡರ್ ಹಾಕಿ ಮುಂದಲೆ ಬಾಚಿಕೊಂಡಳು. ಸೀರೆ ಬದಲಿಸಿ ಬರುವ ಹೊತ್ತಿಗೆ ಆಯಾಸವಾಗಿತ್ತು. ಅವನು ಕೋಣೆಯ ರಂಪಾ ಎತ್ತಿಡುತ್ತಿದ್ದ. ಹಾಲು ಬಿಸಿ ಮಾಡಬಾರದಾ ? ಗಂಟಲಾರುತ್ತಾ ಇದೆ ಎನಿಸಿತು.

"ಬ್ರೆಡ್ ತಂದಿದ್ದೀರಾ ?" ಎಂದಳು.

"ತಂದಿದ್ದೀನಿ. ಈಗ ತಿಂತಾ ಕೂತ್ಕೋಬೇಡಾ......ಅವರು ನೋಡ್ಲಿಕ್ಕೆ ಬರ್‍ತಾರೆ ಅಂತ ನಾನು ಹೇಳಿದ್ದೀನಲ್ಲ" ಎಂದು ದನಿ ತುಸು ಗಡುಸಾಗಿತ್ತು.

"ಈ ಒಂದು ನಾಲ್ಕು ಬೆಡ್‌ಶೀಟ್ ಕೂತಲ್ಲೇ ಮಡಸಿಡು. ನಾನು ಹೋಗಿ ಹಜಾರ ಕೊಂಚ ಕ್ಲೀನ್ ಮಾಡಿ ಬರ್‍ತೀನಿ" ಎಂದು ಹಜಾರಕ್ಕೆ ಹೋದ.

ಕಾಯಿಲೆ ವಾಸಿ ಆಗಿ ಇನ್ನು ನಿನ್ನೆ ತಾನೇ ಎದ್ದವಳು. ಎದ್ದರೆ ಶೂಗಾಡುವ ಹಾಗೆ ಆಗುತ್ತದೆ. ಅಂಥಾದ್ದರಲ್ಲಿ ಎಷ್ಟು ಸೀರಿಯಸ್‌ನೆಸ್. ಇಷ್ಟವಿಲ್ಲದಿದ್ದರೂ ಮುಖ ತೊಳೆದು ಸೀರೆ ಬದಲಿಸಿ, ಆಯಾಸದಲ್ಲೇ ಅಲಂಕಾರ ಬೇರೆ. ಅವಳು ಬೆಡ್‌ಶೀಟ್ ಮಡಿಸಲಿಲ್ಲ.

ಆಯಾಸದಿಂದ ಹಾಗೆ ಕಣ್ಮುಚ್ಚಿ ಮಲಗಿಬಿಟ್ಟಳು. ಮುಂದೆ ಹಜಾರದಲ್ಲಿ ಸುಲಭಳ ಸ್ವರಾ ಕೇಳಿಸಿತು.

"ಎಲ್ಲಿದ್ದಾರೆ ನಿಮ್ಮ ಮಿಸೆಸ್ ?"

"ಬನ್ನಿ......ಬನ್ನಿ......ಆ ಕಡೆ ಬೆಡ್‌ರೂಂನಲ್ಲಿ ಇದ್ದಾಳೆ" ಇಬ್ಬರೂ ಬಂದರು.

ಆಯಾಸದಿಂದ ಕಣ್ಮುಚ್ಚಿ ಹಾಗೆಯೇ ಮಲಗಿದ್ದಳು. ಅಂಗತ್ತಳಾಗಿ ಬೆಡ್‌ಶೀಟ್ ಸಹ ಹೊದಿಯದೆ ಮಲಗಿದ್ದ ಅವಳನ್ನು ನೋಡಿ ಅವನಿಗೆ ಕಸಿವಿಸಿ ಆಯಿತು.

"ಹೇಗಿದ್ದೀರಿ ?" ಸುಲಭ ಕೋಮಲವಾದ ಸ್ವರದಲ್ಲಿ ಕೇಳಿದಾಗ ಅವಳು ಕಣ್ತೆರೆದು ಉತ್ತರಿಸಲಿಲ್ಲ.

"ಜ್ವರಾ ನಿನ್ನೆಯಿಂದ ವಾಸಿ ಆಗಿದೆ. ನಿದ್ರೆ ಮಾಡ್ತಿದ್ದಾಳೆ ಅನಿಸತ್ತೆ" ಕುರ್ಚಿಯ ಮೇಲೆ ಅಸ್ತವ್ಯಸ್ತವಾಗಿ ಹಾಕಿದ್ದ ನಾಲ್ಕು ಬೆಡ್‌ಶೀಟ್ ಪಕ್ಕಕ್ಕೆ ಹಾಕಿ "ನೀವು ಕೂಡಿ" ಎಂದ. ಸುಲಭಾ ಅಲ್ಲೆ ಕೂತಳು ಅವನು ಬೆಡ್‌ಶೀಟ್ ಒಂದನ್ನು ಅವಳಿಗೆ ಹೊದಿಸಿ ಉಳಿದ ಮೂರುಬೆಡ್‌ಶೀಟ್ ಮಡಿಸಿಟ್ಟ.

"ಇಷ್ಟು ಬೇಗ ಅವಳಿಗೆ ನಿಜವಾಗಿ ನಿದ್ರೆ ಬಂದಿದೆಯಾ ? ನಾಟಕವಾಡುತ್ತಿದ್ದಾಳೆಯೆ ? ಉಕ್ಕಿಬಂದ ಕೋಪಾ ತಡೆಹಿಡಿದು—

"ಈ ಮ್ಯಾಗ್‌ಜೈನ್ ನೋಡ್ತಿರಿ. ಕೊಂಚ ಕಾಫಿ ಮಾಡಿ ತರ್ತೀನಿ" ಎಂದ.

ನಿಮಗೆ ಅಷ್ಟೊಂದು ತೊಂದರೆ ಕೊಡಲ್ಲ ಮಹಾಸ್ವಾಮಿ. ಈ ಟಿಫನ್ ಬಾಕ್ಸ್ ಒಳಗೆ ಇಟ್ಕೊಳ್ಳಿ. ಎರಡು ಲೋಟಾ ತನ್ನಿ ಸಾಕು" ಪ್ಲಾಸ್ಟಿಕ್ ವೈರ್ ಬ್ಯಾಗಿನಿಂದ ಒಂದೊಂದೇ ತೆಗೆದಳು.

"ಏನ್ರಿ ಸುಲಭಾ ಇದೆಲ್ಲಾ ? ಏನೋ ವೈರ್ ಬ್ಯಾಗಿನಲ್ಲಿ ತಿಮ್ಮನಿಗೆ

ತರಕಾರಿ ತಂದಿದ್ದೀರಾ ಅಂದ್ಕೊಂಡೆ. ಎರಡೆರಡು ಟಿಫನ್‌ಬಾಕ್ಸ್, ಫ್ಲಾಸ್ಕ್ ಏನಿದೆಲ್ಲಾ ?" ಎಂದ.

"ಮಹಾರಾಯ! ನೀವೆ ಅಡುಗೆ ಮಾಡ್ಕೊಂಡು ಕೈಬಾಯಿ ಸುಟ್ಕೊತಾ ಇದ್ದೀರಿ. ನಿನ್ನೆ ಕಾಮಾಕ್ಷಿ ನಿಮ್ಮ ಬಗ್ಗೆ ಒದ್ದಾಡಿದ ಮೇಲೆ ನನಗೂ ನಿಜಾ ಅನಿಸ್ತು. ಅದಕ್ಕೆ ಇವತ್ತು ಬದನೇಕಾಯಿಯ ವಾಂಗಿಭಾತ್, ಮೊಸರನ್ನ ಅಮ್ಮನ ಕೈಲಿ ಮಾಡಿಸ್ಕೊಂಡು ಬಂದಿದ್ದೀನಿ. ಮೇಲಿನ ಬಾಕ್ಸಲ್ಲಿ ಕೊಂಚ ಅಲುಗಡ್ಡೆ ಚಿಪ್ಸ್ ಇದೆ. ಇನ್ನು ನಾನಿಲ್ಲಿ ಬಂದ ಮೇಲೆ ಕಾಫಿ ಅಂತ ಒದ್ದಾಡ್ತೀರಿ. ಅದಕ್ಕೆ ಫ್ಲಾಸ್ಕಲ್ಲಿ ಎರಡುಲೋಟ ಕಾಫೀನು ಮಾಡಿಸ್ಕೊಂಡು ಬಂದಿದ್ದೀನಿ. ಲೋಟಾ ಮಾತ್ರ ತಗೊಂಬನ್ನಿ ಸಾಕು" ಎಂದಳು.

"ಅಲ್ಲಾ......ನೀವು ಇಷ್ಟೆಲ್ಲಾ ಕಷ್ಟಾ ಏಕೆ ತಗೊಂಡ್ರಿ ಮಿಸ್ ಸುಲಭಾ"

"ಬಂದು ರಾತ್ರಿ ಅಡಿಗೆ ಮನೆಯಿಂದ ಒಲೆಯಿಂದ ನಿಮ್ಮನ್ನ ಬಚಾವ್ ಮಾಡ್ಲಿಕೆ" ಎಂದಳು.

"ನಿಮ್ಮನ್ನ ಮದುವೆ ಆಗೋ ವಿಜಯಕುಮಾರ್ ನಿಜಕ್ಕೂ ಅದೃಷ್ಟಶಾಲಿ ಮಿಸ್ ಸುಲಭಾ. ನಿಮಗೆ ತುಂಬ ಮ್ಯೂಚುಯಲ್ ಅಂಡರ್‌ಸ್ಟಾಡಿಂಗ್ ಇದೆ" ಎಂದು ಹೊಗಳಿದ.

"ನನ್ನನ್ನ ಆಮೇಲೆ ಹೊಗಳವಂತ್ರಿ. ಮೊದಲು ಲೋಟಗಳು ತಗೊಂಡ್ ಬನ್ರಿ. ಮುಖದಲ್ಲಿ ಆಯಾಸದ ಕಳೆ ತೇಲ್ತಾ ಇದೆ. ಮೊದಲು ಮುಖ ತೊಳೆದು ಬಂದು ಕಾಫಿ ಕುಡೀರಿ" ಎಂದಳು. ಅವನು ಒಳಗೆ ನಡೆದ.

"ವಿಜಯಾ......ಮಿಸೆಸ್ ವಿಜಯಾ......?" ಇಂಪಾಗಿ ಹಾಡು ಹೇಳುವಂತೆ ಸಣ್ಣಗೆ ಗುನುಗುನಿಸಿದಳು. ಆದರೆ ವಿಜಯ ಏಳಲಿಲ್ಲ. ಸುರೇಶ ಲೋಟಾ ಹಿಡಿದು ಒಳಗೆ ಬಂದ.

"ಇನ್ನು ಏಳಲಿಲ್ಲವ ಇವಳು? ನಾನು ಹೇಳಿದ್ದೆ-ನೀವು ಮಾತಾಡಿಸ್ಲಿಕ್ಕೆ ಬರ್ತೀರಿ ಅಂತ" ಎಂದು ಚಡಪಡಿಸಿದ.

"ಇಲ್ಲ ಬಿಡಿ, ಕಾಯಿಲೆ ಬಿದ್ದು ಎದ್ದ ಮೇಲೆ ತುಂಬ ನಿಶ್ಶಕ್ತಿ ಇರುತ್ತೆ. ಚೆನ್ನಾಗಿ ನಿದ್ರೆ ಬಂದಷ್ಟೂ ಒಳ್ಳೆಯದೆ. ಅವರು ಎದ್ದ ಮೇಲೆ ಮಾತಾಡಿಸಿ ಹೋಗ್ತೀನಿ. ಹೇಗಿದ್ದರೂ ನೀವು ನನ್ನ ಡ್ರಾಪ್ ಮಾಡ್ತೀರಿ."

ಕಾಫಿ ಬಗ್ಗಿಸಿ ಕೊಟ್ಟಿದ್ದಳು.

"ಕಾಫಿ ತುಂಬಾ ಚೆನ್ನಾಗಿದೆ ಮಿಸ್ ಸುಲಭಾ" ಎಂದ. "ಥ್ಯಾಂಕ್ಸ್. ನಮ್ಮಮ್ಮಂಗೆ ನಾನು ಯಾವಾಗಲು ಹೇಳ್ತಿರ್ತೀನಿ, ಸುರೇಶ್‌ಗೆ ನೀನು ಮಾಡೋ ಕಾಫಿ ತುಂಬಾ ಇಷ್ಟಾಮ್ಮ ಅಂತ" ಎಂದಳು.

"ಕಾಲೇಜಿನಲ್ಲಿ ಮಗಳು ಪಾಠಮಾಡಿ ದಣಿದಿರ್ತಾಳೆ, ಮಗಳು ಕುಡೀಲಿ ಅಂತ ಕಳಿಸಿದ್ದಿಲ್ಲ ನಾನೇ ಕುಡಿದಿರ್ತೀನಿ ಅಂತ ಅವರಿಗೆ ಒಳಗೊಳಗೇ ನನ್ನ ಮೇಲೆ ಎಷ್ಟು ಕೋಪಾ ಬರತ್ತೊ ?" ಎಂದ.

"ಅಯ್ಯೋ ! ಒಂದು ಕಾಫಿ ನಿಮಗೆ ನಾವು ಕೊಡೋದು ಹೆಚ್ಚಾ ? ನೀವು ವೆಹಿಕಲ್‌ಗೆ ಸಹಾಯ ಮಾಡಿದ್ದು ಅಮ್ಮನಿಗೆ ತುಂಬ ಸಂತೋಷಆಗಿದೆ. ಇಲ್ಲಿದ್ರೆ ಆ ಸಿಟಿ ಬಸ್‌ಗೆ ಕಾಯೋದು ಸಿಟಿ ಬಸ್ ಪ್ರಮಾಣವಲ್ಲೇ ಅರ್ಧ ಸುಸ್ತು ಹೊಡೀತಾ ಇದ್ದೆ, ಈಗ ಹಾಯಾಗಿದ್ದೀನಿ. ಅಮ್ಮಂಗೆ ಆ ವಿಷ್ಯದಲ್ಲಿ ನಿಮ್ಮನ್ನ ಎಷ್ಟು ಹೊಗಳಿದರೂ ಸಾಲದು. ಎರಡು ವರ್ಷದ ಕಂತಿನಲ್ಲಿ ತೀರಿಸ್ತಾ ಇರೋದು ಮೊದಲ ಆರು ತಿಂಗಳು, ಆ ಮದುವೆ ದುಡ್ಡು ಬೇರೆ ಜಮಾ ಮಾಡ್ತಿದ್ದೀನಿ. ಮೂರು ಕಾಸು ತೀರಿಸ್ಲಿಕ್ಕಾಗಲ್ಲ. ಈಗಿನ ಕಾಲದಲ್ಲಿ ಬಡ್ಡಿ ಗಿಡ್ಡಿ ಏನೂ ಆಸೆ ಇಲ್ಲದೇ ಯಾರು ಹಾಗೆ ಹತ್ತಾರು ಸಾವಿರ ಸಾಲಾ ಕೊಡ್ತಾರೆ ? ಅಮ್ಮ ಮಾತ್ರ ನಿಮ್ಮನ್ನ ತುಂಬ ಹೊಗಳಿ ಹಾಡ್ತಾಳೆ" ಎಂದಳು.

"ಇರಲಿ ಬಿಡಿ. ಬಡ್ಡಿ ತಗೊಳ್ಳಿಕ್ಕೆ ನಾನೇನು ಮಾರ್ವಾಡಿನಾ ? ಮನುಷ್ಯಂಗೆ ಮನುಷ್ಯಾ ಸಹಾಯ ಮಾಡಬೇಕು. ಇದನ್ನ ತಗೊಳ್ಳಿ" ಎಂದ. ಸುಲಭಾ ಆತ್ಮೀಯತೆಯಿಂದ "ಏನ್ರಿ ಸುರೇಶ್, ಇದೆಲ್ಲಾ ಆತಿಥ್ಯ" ಎಂದಳು.

"ಏನಿಲ್ಲ, ನಮ್ಮ ಮಿಸೆಸ್‌ಗೆ ಬ್ರೆಡ್ ತರಲಿಕ್ಕೆ ಬೇಕರಿಗೆ ಹೋಗಿದ್ದೆನಲ್ಲ, ಒಂದಿಷ್ಟು ಕೋಡುಬಳೆ, ಹುರಿಗಾಳು ತಗೊಂಡೆ. ಕುರುಕಲು ತಿಂಡಿಗಳನ್ನ ಕುರುಕುತ್ತಾ ಮಾತಾಡೋಣ" ಎಂದ.

"ನೀವು ನಿನ್ನೆ ಹೇಳಿದ ಮೈಸೂರು ಮಲ್ಲಿಗೆಯ ಗೀತೆಗಳೇ ನನ್ನ ಕಿವಿಯಲ್ಲಿವೆ ಮಿ||ಸುರೇಶ್, ನೀವು ಇಷ್ಟು ಸೊಗಸಾಗಿ ಹಾಡು ಹೇಳ್ತಿರಾಂತ ನನಗೆ ಗೊತ್ತೇ ಇರ್ಲಿಲ್ಲ" ಎಂದಳು.

"ಅಯ್ಯೊ ! ಏನು ಮಹಾ ಬಿಡಿ, ನಿನ್ನೆ ಅವರ ಮ್ಯಾರೇಜ್ ಅನಿವರ್ಸರಿ ದಾಂಪತ್ಯಜೀವನದ ಸುಂದರ ಸುಮಧುರ ಕ್ಷಣಗಳನ್ನ ಮೈಸೂರುಮಲ್ಲಿಗೆ ಕವನ

ದಲ್ಲಿ ಕವಿ ಸೆರೆ ಹಿಡಿದಿದ್ದಾರೆ. ನಾಲ್ಕುಗೀತೆ ಹಾಡಿದೆ. ನಿಮ್ಮಂತಹ ಕೋಮಲ ದನಿಯ ಗಾಯಕಿ ಹಾಡಿದ್ರೆ ಸೊಗಸಿರ್ತಿತ್ತು. ನೀವು ಹಾಡಿದ ದ.ರಾ.ಬೇಂದ್ರೆಯವರ ಎರಡು ಗೀತೆಗಳು ತುಂಬ ಸೊಗಸಾಗಿತ್ತು. 'ಇನ್ನು ಏಕೆ ಬರಲಿಲ್ಲವಾ ಹುಬ್ಬಳಿಯವಾ ?' 'ಮೂಡಲ ಮನೆಯ' ಎರಡು ನನ್ನ ಅಚ್ಚುಮೆಚ್ಚಿನ ಗೀತೆಗಳು" ಎಂದ.

"ಬೇಂದ್ರೆಯವರ ಕುಣಿಯೋಣು ಬಾರಾ......ನೀವು ತುಂಬ ಚೆನ್ನಾಗಿ ಹೇಳ್ತೀರಂತೆ, ಕಾಮಾಕ್ಷಿ ಮೇಡಂ ಹೇಳಿದರು. ನನಗೆ ಯಾವಾಗ ಕೇಳಿಸ್ತೀರಿ?" ಮಿಸ್ ಸುಲಭಾ ಆಸೆಯಿಂದ ಕೇಳಿದಳು.

"ಗೀತೆ ಹೇಗೆ ಹೇಳ್ತೀನೊ ? ಕೊಂಚ ಆಕ್ಷನ್ ಮಾಡ್ತೀನಿ, ಒಂದೆರಡು ಸಲ ಕಾಲೇಜು ಫಂಕ್ಷನ್‌ನಲ್ಲಿ ಹೇಳಿದ್ದೀನಿ. ಸ್ಟೂಡೆಂಟ್ಸ್, ಟೀಚರ್ಸ್ ಎಲ್ಲಾ ತುಂಬಾ ಇಷ್ಟಪಟ್ಟಿದ್ದಾರೆ" ಎಂದ.

"ನನಗೆ ಒಂದ್ಸಲ ಕೇಳಿಸಿ ಮಹಾ ರಾಯರೆ ?" ಎಂದು ಸುಲಭಾ ಗೋಗರೆದಳು.

ವಿಜಯಳಿಗೆ ಈ ಸಂಭಾಷಣೆ ಕೇಳಿಸಿಕೊಳ್ಳುತ್ತ ಮೈ ಬೆವರಿತು. ಮದುವೆಯಾದ ಹೊಸತರಲ್ಲಿ ಒಂದುಸಲ ಕಾಲೇಜ್ ಫಂಕ್ಷನ್‌ನಲ್ಲ ಆ ಕುಣಿಯೋಣು ಬಾರಾ......ಗೀತೆಯನ್ನು ಆಲಿಸಿದ್ದಳು. ಆಲಿಸಿದ್ದಳು ಎನ್ನುವುದಕ್ಕಿಂತ ಕಂಡಿದ್ದಳು ಎಂದರೆ ಸೂಕ್ತ—

ಆ ಗೀತೆ ಹೇಳುವಾಗ ಕಣ್ಣು ತೇಲಿಸುತ್ತ ತಲೆ ತೂಗಾಡಿಸುತ್ತಾ ಕುಣಿಯುತ್ತಾ ತೋಳು ತಿರುಹುತ್ತಾ ವಿಚಿತ್ರ ಅಭಿನಯ ಮಾಡುತ್ತಿದ್ದ. ನಿಜಕ್ಕೂ ಈಗ ಇವಳ ಎದುರು ಆ ಹಾಡು ಕುಣಿಯುತ್ತಾನೆಯೆ ? ಎನಿಸಿ ಅಹಿತವೆನಿಸಿತು.

"ನೋಡಿ ನಿಮ್ಮೆದುರಿಗೆ ಕುಣಿಯೋಣುಬಾರಾ ಅಭಿನಯಿಸ್ತೀನಿ. ಆದರೆ ಒಂದೇ ಒಂದು ಕಂಡೀಷನ್ಸ್ ನೀವು ದ.ರಾ.ಬೇಂದ್ರೆಯವರ 'ನಾನು ಬಡವಿ ಆತ ಬಡವಾ ಒಲುಮೆ ನಮ್ಮ ಬದುಕು......' ಹೇಳ್ತಿ ?" ಎಂದ.

ಸುಲಭಾ ತಮಾಷೆ ಮಾಡಿ—

"ಏಕಪ್ಪಾ ಆ ಹಾಡು ಅಷ್ಟು ಇಷ್ಟ ? ನಾನು ಬಡವಳಿರಬಹುದು, ಆದರೆ ನೀವೇನು ಬಡವರಲ್ಲ" ಎಂದಳು.

"ವಿದ್ಯೆ, ಉದ್ಯೋಗ, ರೂಪದ ಶ್ರೀಮಂತಿಕೆ ಇರೋ ನೀವು ಬಡವರಲ್ಲ ಮಿಸ್ ಸುಲಭ..... ನೀವು ಕಾಲೇಜು ಲೆಕ್ಚರರ್..... ನಾನು ಕಾಲೇಜು ಲೆಕ್ಚರರ್.....ನೀವು ಏಕೆ ನನ್ನೆದುರಿಗೆ ಆಗಾಗ ಇನ್‌ಫೀರಿಯಾರಿಟಿ ಕಾಂಪ್ಲೆಕ್ಸಿಂದ ಬಳಲ್ತೀರಿ ? ಹದಿನೈದು ಸಾವಿರ ರೂ. ಸಾಲಾ ಕೊಟ್ಟ ಮಾತ್ರಕ್ಕೆ ನಾನೇನು ದೊಡ್ಡ ಶ್ರೀಮಂತನಲ್ಲ"

"ನೀವು ಸಾಲ ಕೊಟ್ಟ ಮಾತ್ರಕ್ಕೆ ನಾನು ಹೊಗಳ್ಲಿಲ್ಲ. ಆದರೆ ತೀರಿಸೋ ವಿಷಯದಲ್ಲಿ ನಾನು ಮಾತು ಉಳಿಸಿಕೊಳ್ಳಲಿಲ್ಲ. ಹೋದ ತಿಂಗಳಿಂದ ನಾನು ತಿಂಗಳಿಗೆ ಸಾವಿರ ರೂಪಾಯಿ ಕೊಡಬೇಕಿತ್ತು. ಆದರೆ ಈ ಮ್ಯಾರೇಜ್ ಬಗ್ಗೆ ಆರು ಸಾವಿರ ರೂ. ಗಳ ಅನಿರೀಕ್ಷಿತ ಖರ್ಚು ಬಂತು. ಆರು ತಿಂಗಳು ಕೂಡಿಟ್ಟು ಅನಿವಾರ್ಯವಾಗಿ ಆ ದುಡ್ಡು ಒದಗಿಸಬೇಕಾಗಿದೆ. ನಿಮಗೆ ಡಿಲೇ ಮಾಡಿದೆ" ಎಂದಳು.

"ಇರ್ಲಿ ಬಿಡಿ' ಅದಕ್ಕೆ ಏಕೆ ವರಿ ಮಾಡ್ಕೊಬೇಕು ? ಮದುವೆ ಆದ ಮೇಲೆ ಆರು ತಿಂಗಳು ನಿಮಗೆ ಬೇರೆ ಕೆಲವು ಖರ್ಚು ಬೀಳಬಹುದು. ಅದೆಲ್ಲಾ ಆದಮೇಲೆ ಮುಂದಿನ ವರ್ಷ ತೀರಿಸಿ ಪರವಾಗಿಲ್ಲ" ಎಂದ. "ನೀವು ತುಂಬಾ ಉದಾರ ಹೃದಯಿ ಸುರೇಶ್ ನೀವು..... ನೀವೂ ?' ಎಂದು ತೊದಲಿದಳು.

"ಜಾಸ್ತಿ ಹೊಗಳಬೇಡಿ ಮಿಸ್ ಸುಲಭ..... ನನ್ನ ಜೊತೆ ಶಕುಂತಲ ಆಗಿ ಅಭಿನಯಿಸಬಲ್ಲ ಅಂದಿರಿ. ನನಗೆ ನಿಮ್ಮ ಮೇಲೆ ಕೋಪಾ ಇದೆ. ನೀವು ಸಿಕ್ಕದೇ ಇದ್ದಿದ್ದಕ್ಕೆ ಮಿಸ್ ರಮ್ಯ ಅವರನ್ನ ನಾನು ಶಕುಂತಲೆ ಆಗಿ ಹಾಕ್ಕೊಬೇಕಾಯ್ತು" ಎಂದ ಗಡುಸಾಗಿ. ಸುಲಭಾ ಗೋಗರೆಯುತ್ತಾ.

"ಏನ್ರಿ ಮಾಡೋದು ? ನೀವು ದುಶ್ಯಂತ ಆದಾಗ ನಿಮ್ಮ ಜೊತೆ ನಾನು ಶಕುಂತಲ ಆಗಬೇಕೂಂತ ತುಂಬಾ ಆಸೆ ಇತ್ತು. ಆದರೆ ನಮ್ಮ ತಾಯಿ ಮದುವೆ ಗೊತ್ತಾದ ಹುಡುಗಿ..... ವಿಜಯ ಕುಮಾರ್ ಒಂಥರ ಸೀರಿಯಸ್ ಹುಡುಗಾ..... ನೀನು ನಾಟಕಾ ಪಾಟಕಾ ಕುಣಿಯೋದು ಚೆನ್ನಾಗಿಲ್ಲಾಂತ ಅವಾಯ್ಡ್ ಮಾಡಿದರು. ಹೀಗಾಗಿ ಸುಮ್ಮನಾದೆ" ಎಂದಳು.

"ಇರಲಿ, ಈಗ ನಿನ್ನೆ ಹಾಡಿದ ಆ ಕವನ ಹಾಡಬೇಕ್ರಿ ಯಾವುದು" -

ಎಂಬ ಆಜ್ಞೆ ಮಾಡುವಂತೆ. ಅವಳು ಗಂಟಲು ಸರಿಪಡಿಸಿಕೊಂಡು ಹಾಡಿದಳು.

"ನಾನು ಬಡವಿ ಆತ ಬಡವ...... ಒಲುಮೆ ನಮ್ಮ ಬದುಕು......ಬಳಸಿ ಕೊಂಡೆವದನೆ ನಾವು......ಅದಕು ಇದಕು......ಎದಕೂ"

ಕಣ್ಮುಚ್ಚಿ ಕೇಳುತ್ತಿದ್ದ ವಿಜಯಳ ಕೆನ್ನೆ ಕೆಂಪಾಗಾಯಿತು, ಸಭೆ, ಸಮಾರಂಭ ರೇಡಿಯೋಗಳಲ್ಲಿ ಹಾಡಿದರೆ ಸರಿ. ಆದರೆ ಒಬ್ಬ ಯುವಕನ ಮುಂದೆ ಒಬ್ಬ ಯುವತಿ ಈ ಗೀತೆ ಹಾಡುವುದು ಸರಿಯೆ ?

ದಾಂಪತ್ಯ ಜೀವನದ ಉತ್ಕಟ ಪ್ರೇಮ ಸಾರುವಂತಹ ಈ ಸಾಲುಗಳು ನಲ್ಲ ನಲ್ಲೆಯರಿಗೆ, ಪ್ರಿಯ ಪ್ರೇಯಸಿಯರಿಗೆ ಸರಿ. ಬೌದ್ಧಿಕ ಸಂಗಾತಿ ಗಳೆಂದುಕೊಂಡು ಅಲ್ಲಿ ಹೊಡೆಯುವ ಸರಿ ? ತೋಳುಗಳಿಗೆ ತೋಳು ಬಂದಿ ......ಕೆನ್ನೆ ತುಂಬ ಮುತ್ತು ಮಾಲೆ, ಈ ವಾಕ್ಯ ಕುರಿತು ಸುರೇಶ ವ್ಯಾಖ್ಯಾನ ಬೇರೆ ಮಾಡಿದ.

"ನೀವು ಕುಣಿಯೋಣು ಬಾರಾ ಹಾಡಿ" ಅವಳು ಗಲಾಟೆ ಮಾಡಿದಳು. ತುಂಬ ಹಸಿವಾಗಿದೀರಿ......ನೀವು ತಂದ ವಾಂಗಿಭಾತ್ ತಿಂದು ಹಾಡ್ತೀನಿ." ಎಂದ.

"ಹಾಗೇ ಮಾಡಿ......" ಎಂದಳು. ಅವಳಿಗೆ ಕಂಪನಿಗೆ ಎಂದು ಒಂದು ಚಿಕ್ಕ ಪ್ಲೇಟಲ್ಲಿ ನೀಡಿ ತಾನು ತಿನ್ನತೊಡಗಿದ. "ಫಸ್ಟ್‌ಕ್ಲಾಸಾಗಿದೀರಿ" ಎಂದು ಪ್ರಶಂಸೆ ಮಾಡಿದ.

ವಿಜಯಳಿಗೆ ಹಸಿವಾಗುತ್ತಿತ್ತು. ಆದರೆ ಅವಳ ಹಸಿವು ಕೇಳುವವ ರಾರು ? ಏನೇನೋ ಹರಟೆ ಹೊಡೆಯುತ್ತಾ ತಿಂಮುಂಡ್ಡದ್ದಾಯಿತು. ನಂತರ ಕುಣಿದು ಅಭಿನಯ ಮಾಡುತ್ತಾ "ಕುಣಿಯೋಣು ಬಾರಾ......" ಎಂಬ ಹಾಡು ಹೇಳಿದ. ಹಾಡು ಮುಗಿದ ಮೇಲೆ ಸುಲಭಾ "ರೀ......ನೀವು ಫಿಲ್ಮ್ ಆಕ್ಟರ್ ಆದರೆ ಇವತ್ತಿನ ನಟರೆಲ್ಲಾ ದಿವಾಳಿ ತೆಗೀತಾರೆ ಕಣ್ರಿ" ಎಂದಳು.

"ಫಿಲ್ಮ್ ಆಕ್ಟರ್ ಆಗೋದಿರಲಿ, ನಾಟಕದಲ್ಲಿ ದುಷ್ಯಂತನಾಗಿ ಅಭಿ ನಯಿಸ್ತಾ ಇದ್ದೀನಿ. ನನಗೆ ಬೇಕಾದ ನಟಿ ಸಿಗಲಿಲ್ಲ" ಎಂದು ಮತ್ತೊಮ್ಮೆ ಅಸಮಾಧಾನ ತೋರಿಸಿಕೊಂಡ.

"ಬರಿ ಡೈಲಾಗ್ಸ್ ಆದರೆ ಸೇರ್ತಿದ್ದೆ. ಆದರೆ ಕೆಲವು ಕಡೆ ಅಭಿನಯಾ ತುಂಬಾ ಒಂಥರಾ ಇದೆ. ದುಷ್ಯಂತನ್ನ ಅಪ್ಪಿಕೊಳ್ಳೋದು, ಅವನ ಎದೆಯ ಮೇಲೆ ತಲೆ ಇಡೋದು ಇದೆಲ್ಲಾ ನಂಗೆ ತುಂಬ ನಾಚಿಕೆ ಅನ್ನಿಸತ್ರಿ" ಎಂದು ಮೋಹಕವಾಗಿ ನುಡಿದಳು. ಸುರೇಶ ರೇಗಿ—

"ನೀವಿನ್ನ ಹದಿನಾಲ್ಕನೆಯ ಶತಮಾನದಲ್ಲೇ ಇದ್ದೀರಿ ಸುಲಭಾ, ಬೌದ್ಧಿಕವಾಗಿ ಏನೂ ಬೆಳೆದಿಲ್ಲ. ನೀವು ಕಾಲೇಜ್ ಲೆಕ್ಚರರ್ ಆಗೋ ಬದಲು ಹಳ್ಳಿಯ ಪ್ರೈಮರಿ ಸ್ಕೂಲ್ ಮೇಡಂ ಆಗ್ಬೇಕಿತ್ತು." ಎಂದ. ಅಬ್ಬಾ! ಎಷ್ಟು ರೇಗುತ್ತಾನೆ, ಅಧಿಕಾರ ಚಲಾಯಿಸುತ್ತಾನೆ, ಆದರೂ ಮರುಳಾಗಿ ಇವಳೇಕೆ ಅವನನ್ನು ಅನುಸರಿಸುತ್ತಾಳೆ? ಹದಿನೈದು ಸಾವಿರ ತೆತ್ತಿಲ್ಲವೆ? ಅದಕ್ಕಾಗಿ ಇರಬಹುದು.

ವಿಜಯ ಎದ್ದು ಕೂತಳು. ಸುಲಭಾ ಓಡಿಬಂದು, "ಓ ಎದ್ದಿರಾ? ಮಿಸೆಸ್ ಸುರೇಶ್? ನಾನು ನಿಮಗಾಗಿ ಬಂದಿದ್ದೆ?" ಎಂದಳು.

"ಹೌದಾ.....ನಿದ್ರೆ ಬಂದಿತ್ತು?" ನೀರಸವಾಗಿ ಕಣ್ಣು ತಿಕ್ಕುತ್ತಾ ಹೇಳಿದಳು.

"ನಾನು ಬರ್ತೀನಿ ಮಿಸೆಸ್ ಸುರೇಶ್. ಏಳೂವರೆ ಆಯ್ತು. ನಮ್ಮ ಬ್ರದರ್ ಗಾಬರಿ ಆಗ್ತಾರೆ. ನಿಮ್ಮ ಹೆಲ್ತ್ ಚೆನ್ನಾಗಿ ಕಾಪಾಡಿಕೊಳ್ಳಿ. ಇಲ್ಲ ದಿದ್ದರೆ ಸುರೇಶ್ ತುಂಬ ಅಪ್‌ಸೆಟ್ ಆಗ್ತಾರೆ. ಈ ನಾಕೈದು ದಿನಗಳಿಂದ ಸುರೇಶ್ ಚಿಂತೆ ನೋಡ್ಲಿಕ್ಕಾಗಲ್ಲ. ಬೇಗ ಚೆನ್ನಾಗಾಗ್ಬಿಡಿ" ಎಂದು ಗಿಣಿ ಯಂತೆ ನುಡಿದಳು.

ವಿಜಯಾ ಸುಮ್ಮನಿದ್ದಳು. ಸುಲಭಾ ಆತುರದಿಂದ "ಬನ್ನಿ ಮಿ॥ ಸುರೇಶ್, ನನ್ನ ಮನೆಗೆ ಡ್ರಾಪ್ ಮಾಡಿ, ಹೊತ್ತಾಯಿತು" ಎಂದಳು.

"ಸರಿ ನಡೆಯಿರಿ" ಸುರೇಶ್ ಹೆಲ್ಮೆಟ್ ಹಿಡಿದು ನಡೆದ.

ಅವರಿಬ್ಬರೂ ಅತ್ತ ಹೋದ ತಕ್ಷಣ ಐದು ನಿಮಿಷದಲ್ಲಿ ಹಾಜರಾದರು ಶೈಲಜಾ.....

"ಏನ್ರಿ? ನಿಮ್ಮ ಯಜಮಾನರು ಆಕೆಯ ಜೊತೆ ಸ್ಕೂಟರ್‌ನಲ್ಲಿ ಹೊರಗೆ ನಡೆದರು" ಎಂದು ಪ್ರಾರಂಭಿಸಿದರು.

"ನೋಡಿ, ನನಗೆ ತುಂಬ ಹಸಿವಾಗ್ತಿದೆ, ಕೊಂಚ ಹಾಲು ಕಾಸಿ ಕೊಡ್ತೀರಾ ?" ಎಂದಳು ವಿಜಯ.

ಸಂಜೆ ಹಾಲಿನವನಿಂದ ತೆಗೆದುಕೊಂಡ ಹಾಲು ಹಾಗೆಯೇ ಇತ್ತು. ಆಕೆ ಕಾಸಿದರು.

"ಕೊಂಚ ಗಂಜಿ ಮಾಡಲೇನ್ರೀ ?" ಎಂದರು.

"ಬೇಡಾ, ನಾಳೆ ಬೆಳಿಗ್ಗೆ ಬಂದು ಗಂಜಿ ಮಾಡಿಕೊಡಿ, ಈಗ ಹಾಲು ಸಕ್ಕರೆ ಬೆರೆಸಿ ತಂದುಕೊಡಿ, ಬ್ರೆಡ್ ತಿಂತೀನಿ" ಎಂದಳು.

ಅವಳು ಹಾಲು ಬ್ರೆಡ್ ತಿನ್ನುತ್ತಿರುವಾಗ,

"ವಿಜಯಾ...... ಎರಡು ಸೇರು ಅಕ್ಕಿ ಇದ್ರೆ ಬೇಕಾಗಿತ್ತು" ಎಂದರು. ವಿಜಯ ತಲೆಯೆತ್ತಿ ಅಕ್ಕಿ ತೆಗೆದುಕೊಂಡು ಹೋಗಿ ಶೈಲಜಾ. ಆದರೆ ನಾಳೆ ಬೆಳಿಗ್ಗೆ ಅವರು ಆಫೀಸಿಗೆ ಹೋದಾಗ ಬಂದು ಒಂದಿಷ್ಟು ಗಂಜಿ ಮಾಡಿಕೊಡ ಬೇಕು" ಎಂದಳು.

"ಮಾಡಿಕೊಡ್ತೀನ್ರಿ ವಿಜಯಾ, ಅಡಿಗೆ ಮನೆಯ ಎಲ್ಲಾ ಡಬ್ಬಗಳು ಮುಚ್ಚಳ ತೆಗೆದು ಅಸ್ತವ್ಯಸ್ತವಾಗಿದೆ. ನಾನು ಎಲ್ಲಾ ಮುಚ್ಚಳ ಹಾಕಿ ಜೋಡಿಸಿದ್ದೀನಿ ಬಚ್ಚಲಲ್ಲಿ ತಟ್ಟೆ ಲೋಟ ಎಲ್ಲಾ ಸಿಕ್ಕಾಪಟ್ಟೆ ಬಿದ್ದಿದೆ. ತೊಳೆದು ಇಡ್ತೀನಿ" ಎಂದರು. ವಿಜಯ ಚಿಂತೆಯಿಂದ—

"ನಿಮ್ಮನೆ ಕೆಲಸಾ ?" ಎಂದಳು.

"ನನ್ನ ನಾದಿನಿ ಬಂದಿದ್ದಾಳೆ. ಅಡಿಗೆ ಕೆಲಸ ಅವಳು ನೋಡ್ಕೋತಾಳೆ ಅಕ್ಕಿ ಒಂದು ಕೊಟ್ಟು ಬರ್ತೀನಿ"

ಎಂದು ಅಕ್ಕಿ ತಮ್ಮ ಮನೆಗೆ ಕೊಟ್ಟು ಬಂದ ಆಕೆ ಇಲ್ಲಿ ಅಡಿಗೆಯ ಮನೆ ಶುಚಿ ಮಾಡಿ ಪಾತ್ರೆಗಳೆಲ್ಲಾ ತೊಳೆದು ತಂದು ಬೋರಲು ಹಾಕಿದರು. ಹಜಾರ, ಕೋಣೆ, ವರಾಂಡ ಗುಡಿಸಿದರು.

ಪಾತ್ರೆ, ಕಸಾ ಗುಡಿಸೋಳು ಬಿಟ್ಟಿದ್ದು ಒಳ್ಳೆ ಸಮಯದಲ್ಲಿ ನಿಮಗೆ ತೊಂದರೆ ಆಗಿದೇರಿ ?" ಎಂದು ಸಹಾನುಭೂತಿಯನ್ನು ತೋರಿಸಿದರು. ಸುರೇಶ ಬಂದಾಗ ಒಂಭತ್ತು ಗಂಟೆ. ಶೈಲಜಾ ಎಂಟೂವರೆಯವರೆಗೆ ಇದ್ದು ಮನೆಗೆ ಹೋಗಿದ್ದರು.

"ಡಾರ್ಲಿ ನನ್ನ ಗೆಳೆಯ ಮುಕುಂದ್ ಸಿಕ್ಕಿದ್ದರು ವಿಜ್ಜು.

ಮಾತಾಡಿಸ್ತಾ ನಿಂತುಬಿಟ್ಟರು. ಹೊತ್ತಾಯಿತು. ನಾಳೆ ಅವರ ಮಗುವಿನ ನಾಮಕರಣ ಇದೆಯಂತೆ. ಊಟಕ್ಕೆ ಬನ್ನಿ ಅಂತ ಕರೆದ ಬಿಟ್ಟಿದ್ದಾರೆ" ಎಂದ.

"ಹೋಗಿಬನ್ನಿ ನಿಮಗೂ ಅಡಿಗೆ ಮಾಡೋದು ತಪ್ಪುತ್ತೆ" ಎಂದಳು. ಅವನು ಸಂತಸದಿಂದ,

"ನಾನೂ ಹಾಗೆ ಅಂದ್ಕೊಂಡೆ ಮರಿ" ಎಂದ. ಎಲ್ಲಾ ತನ್ನಂತೆ ನಡೆಯುತ್ತಿದ್ದರೆ ಮರಿ ಕುರಿ ಎಂದು ಓಲೈಸುತ್ತಾನೆ ಸ್ವಾರ್ಥಿ" ಎಂದುಕೊಂಡಳು.

"ವಿಜೂ.....ಸಂಜೆ ನಿನಗೆ ಅಂಥಾ ನಿದ್ರೆ ಏಕೆ ಬಂದಿತ್ತು? ಪಾಪ ನಿನ್ನ ಮಾತಾಡಿಸ್ಲಿಕ್ಕೆ ಬಂದ ಸುಲಭಾ ಏನು ತಿಳಿದುಕೋಡರೊ? ಕೊಂಚ ಫ್ರೆಷ್ಷಾಗಿ ಅಲಂಕರಿಸಿಕೊಂಡು ಮಾತಾಡಿಸಿದ್ದರೆ ನಿನ್ನ ಗಂಟೇನು ಹೋಗುತ್ತಿತ್ತು? ಎರಡು ಮಾತು ಆಡಿಸಲಿಕ್ಕೆ ಗಂಟೆಗಟ್ಟಲೆ ಕಾಯಿಸಿದೆ. ನೀನು ಕೊಂಚವೂ ಎಜುಕೇಟೇಡ್ ಅಲ್ಲಾ ಮರಿ" ಎಂದ."ಎಜುಕೇಟೆಡ್ ಅಂದ್ರೇನು? ಕಾಯಿಲೆ ಮಲಗಿದ ಹೆಂಡತಿ ಹಾಲು ಬ್ರೆಡ್ ಸಹಾ ತಿನ್ನದೇ ಮಲಗಿರುವಾಗ ತಾನು ಇನ್ನೊಂದು ಹುಡುಗಿ ಜೊತೆ ಕುರುಕುಲು ತಿಂಡಿ ತಿಂದು ಹಾಡು ಹಾಡಿ ಕುಣಿದು ಅವಳಿಂದ ದಾಂಪತ್ಯದ ಪ್ರೇಮಗೀತೆ ಕೇಳ್ತಾ ತನ್ಮಯನಾಗೋದಾ? ನಿಮ್ಮ ಸುಲಭಾ ಎಂಥಾ ಎಜುಕೇಟೆಡ್? ಕಾಯಿಲೆ ಬಿದ್ದವರಿಗೆ ನಾಲ್ಕು ಮೂಸಂಬಿ ಹಣ್ಣು ತಂದಿದ್ದಾಳೆಯೆ? ನಿಮಗೆ ವಾಂಗೀಭಾತ್ ಔತಣ ಮಾಡಿಸ್ಲಿಕ್ಕೆ ಬಂದಿದ್ದಾಳೆ. ನಿಮ್ಮಿಬ್ಬರ ನಾಗರೀಕತೆ ನೋಡಿ, ನನಗೆ ತಿರಸ್ಕಾರ ಆಯಿತು" ಎಂದು ನುಡಿದಳು.

ಕೋಪದಿಂದ ಕಿಡಿಕಿಡಿಯಾದ ಸುರೇಶಾ "ನಿನಗೆ ಬುದ್ಧಿ ಕೆಟ್ಟು ಹೋಗಿದೆ ವಿಜಿ. ನಿನ್ನೆ ಕಾಮಾಕ್ಷಿ ಮೇಡಂ ಮನೆಗೆ ಊಟಕ್ಕೆ ಹೋಗಿದ್ದಕ್ಕೆ ರಾಮಾಯಣಾ ಮಾಡಿದೆ. ಇವತ್ತು ಇನ್ನೊಂದು ಥರಹಾ ರಾಮಾಯಣಾ ಥೂ.....ಮೀನ್ ಮೆಂಟಾಲಿಟಿ ಡರ್ಟಿ ಗರ್ಲ್ ನೀನು, ಒಂದು ಚೂರು ಬ್ರಾಡ್ ಮೈಂಡೆಡ್ ಇಲ್ಲ.

ನಾಲ್ಕು ಬೆಡ್‌ಶೀಟ್ ಮಡಿಸಿ, ರೂಮ್ ಕ್ಲೀನಾಗಿಟ್ಟು ಬಂದ ವ್ಯಕ್ತಿಯ ಕೂಡ ನಗ್ತಾ ನಗ್ತಾ ಮಾತಾಡಿದ್ದರೆ ಏನಾಗ್ತಾ ಇತ್ತು ನಿಂಗೆ?" ಎಂದು

ಏನೇನೋ ರೇಗಾಡಿ, ಹಾರಾಡಿ ಕಾಲು ತೊಳೆದು ಬಂದು ಮಲಗಿದ. ಸದ್ಯ ಶೈಲಜಾ ಕೈಯಲ್ಲಿ ಹಾಲು ಬಿಸಿ ಮಾಡಿಸಿಕೊಂಡು, ಹಾಲು ಬ್ರೆಡ್ ತಿಂದದ್ದು ಒಳ್ಳೆಯದಾಯಿತು. ಇಲ್ಲದಿದ್ದರೆ ಇವನ ಕೋಪಕ್ಕೆ ಮತ್ತೆ ನಿನ್ನೆಯಂತೆ ತಾನು ಉಪವಾಸ ಮಲಗಬೇಕಾಗಿತ್ತು” ಎಂದು ಯೋಚಿಸಿದಳು.

ಶೈಲಜಾ ಕೊಂಚ ದುಬಾರಿ.

ಕೊಂಚ ವಿಶ್ವಾಸದಿಂದ ಮಾತಾಡಿಸಿದರೆ ಏನೋ ಒಂದು ಸಾಲ ಕೇಳು ತ್ತಾರೆ, ಆದರೂ ಚಿಂತೆಯಿಲ್ಲ. ಕಾಯಿಲೆ ವಾಸಿ ಆಗುವವರೆಗೆ ಶೈಲಜಳ ನೆರವನ್ನು ಪಡೆಯಬೇಕು ಎಂದುಕೊಂಡಳು.

ಮಾರನೆಯ ದಿನ ಕೋಪ ಮೈ ಮೇಲೆ ಹಾಕಿಕೊಂಡಿದ್ದ ಸುರೇಶಾ ಅವಳನ್ನು ಮಾತನಾಡಿಸಲಿಲ್ಲ. ಅವಳು ತಾನಾಗಿ ಕ್ಷಮೆ ಕೇಳಲಿಲ್ಲ. ಸ್ನಾನ ಒಂದು—ಸ್ವಿಚ್ ಹಾಕಿ ನೀರು ಕಾಯಿಸಿ—ಮಾಡಿ ಹೊರಟುಬಿಟ್ಟ.

ಒಂಭತ್ತು ಗಂಟೆಗೆ ಶೈಲಜಾ ಹಾಜರಾದರು.

“ಹಾಲು ಕಾಯಿಸಿ ಗಂಜಿ ಮಾಡಿಕೊಡಿ. ಇವತ್ತು ಬಿಸಿ ಸಾರು ಅನ್ನ ಮಾಡ್ಬಿಡಿ, ಊಟ ಮಾಡ್ತೀನಿ” ಎಂದಳು. ಶೈಲಜ ಅವಳು ಹೇಳಿದ್ದೆಲ್ಲಾ ಮಾಡಿದರು. “ರೀ......ಐವತ್ತು ರೂಪಾಯಿ ಸಾಲಾ ಕೊಡಿ, ಹೀಗೆ ಒಂದು ಅರ್ಜೆಂಟಿದೆ” ಎಂದು ತೋಂದರೆ ಹೇಳಿಕೊಂಡರು. ಮರು ಮಾತಾಡದೇ ಐವತ್ತು ರೂ. ಕೊಟ್ಟಳು.

ಆ ಸಲ ಕಾಯಿಲೆ ಬಿದ್ದು ಎದ್ದ ಮೇಲೆ ವಿಜಯಳಿಗೆ ಗಂಡನ ಮೇಲೆ ಇದ್ದ ಪ್ರೀತಿ ವಿಶ್ವಾಸ ಮಾಯವಾಯಿತು.

ಕಾಯಿಲೆ ಮಲಗಿದ ಆ ಒಂದು ವಾರದಲ್ಲಿ ಕೋಪದ ನೆಪ ಹಾಕಿಕೊಂಡು ಎರಡು ದಿನ ಉಪವಾಸ ಹಾಕಿದ್ದ. ಮೂರು ದಿನ ಬೇರೆ ಬೇರೆಯ ಔತಣ ಗಳಲ್ಲಿ ಭಾಗವಹಿಸಿದ್ದ. ಬರಿ ಸುಖಾಭಿಲಾಷಿ. ಇನ್ನೊಬ್ಬರ ಕಷ್ಟ-ಸುಖ ಅವನಿಗೆ ಬೇಕಾಗಿಲ್ಲ.

“ವಿಜಿ, ನಾಳೆ ಭಾನುವಾರ ನಾಟಕದ ರಿಹರ್ಸಲ್ ನಮ್ಮನೇಲೆ ಇಟ್ಕೊ ಳ್ಳೋಣ ಅಂದ್ಕೊಂಡಿದ್ದೀನಿ. ಮೂರು ಗಂಟೆಯಿಂದ ಐದು ಗಂಟೆಯವರೆಗ ರಿಹರ್ಸಲ್. ಒಂದೂವರೆಗೆ ಟಿಫನ್ ಏನೇನು ತಿಂಡಿ ಮಾಡ್ತಿ” ಎಂದ.

ಕಾಯಿಲೆಯಿಂದ ಚೇತರಿಸಿಕೊಂಡು ಒಂದು ತಿಂಗಳಾಗಿತ್ತು. ಅವಳು

ಬೇಸರದಿಂದ, "ನಾನು ಜಾಮೂನು, ಚೌಚೌ, ಉಪ್ಪಿಟ್ಟು ಮಾಡ್ತೀನಪ್ಪಾ. ನಂಗೆ ಬೇರೆ ಏನು ಮಾಡ್ಲಿಕ್ಕೂ ಕೈಲಾಗಲ್ಲ. ಮನೆ ಡೆಕೋರೇಷನ್ ನೀವೇ ನೋಡ್ಕೊಬೇಕು" ಎಂದಳು.

"ಆಗಲಿ, ಭಾನುವಾರ ಇರತ್ತಲ್ಲ" ಎಂದವನು ಒಪ್ಪಿದ.

ಲೋಕದ ಕಣ್ಣಿಗೆ ಸುಂದರವಾದ ಸುಖಸಂಸಾರ ತನ್ನದು. ಆದರೆ ತನ್ನ ಮನಸ್ಸು ಒಡೆಯುತ್ತಲೇ ಇತ್ತು. ತಮ್ಮಿಬ್ಬರ ಮಧ್ಯೆ ಆಳವಾದ ಕಂದರ ಸೃಷ್ಟಿಯಾಗುತ್ತಿತ್ತು. ವಿಜಯ ತನ್ನೆಲ್ಲಾ ಆಲೋಚನೆಗಳನ್ನು ಸಿಲ್ಲಿಸಿ ಪಕ್ಕಕ್ಕೆ ಹೊರಳಿ ಮಲಗಿದಳು. ಮಾರನೆಯದಿನ ಸಹ ಗೋಪಾಲನಿಗೆ ತಮ್ಮ ವಿರಸಾ ತಿಳಿಯದಂತೆ ಅವನೊಂದಿಗೆ ಆತ್ಮೀಯವಾಗಿ ಮಾತನಾಡುತ್ತ ಕೆಲಸ ಮಾಡಿದಳು

"ಸಂಜೆ ಸ್ವಲ್ಪ ಬೇಗ ಮನೆಗೆ ಬರ್ಲಿಕ್ಕೆ ಆಗತ್ತೇನಪ್ಪಾ ?" ಎಂದ ಗೋಪಾಲ. ಸುರೇಶಾ ಕುತೂಹಲದಿಂದ "ಏಕೆ" ಎಂದ. ಜೇಬಿನಿಂದ ಒಂದು ವಿಳಾಸ ನೀಡಿದ ಗೋಪಾಲ "ಪಾರ್ವತಿಬಾಯಿ ಅಂತ ಸುಪ್ರಸಿದ್ಧ ರಂಗನಟಿ, ಫಿಲಂಗಳಲ್ಲೂ ಮಾಡಿ ಈ ನಡುವೆ ಫೇಮಸ್ ಆಗಿದ್ದಾಳಲ್ಲ, ಅವಳನ್ನ ಕಂಡು ಮಾತಾಡಿ ಹೋಗಬೇಕು" ಎಂದ.

ಆ ವಿಳಾಸ ನೋಡಿದ ವಿಜಯ ಅಚ್ಚರಿ ಹಾಗು ದಿಗ್ಭ್ರಮೆಯಿಂದ—

"ಪಾರ್ವತಿ ಇವತ್ತಿನ ಫೇಮಸ್ ಫಿಲಂ ಆಕ್ಟರ್. ಅವಳ ಹಾಸ್ಯ ಪಾತ್ರಗಳು ಹಾಗು ವ್ಯಾಂಪ್ ಪಾತ್ರಗಳು ಇದರ ಬಗ್ಗೆ ಪತ್ರಿಕೆಗಳಲ್ಲಿ ತುಂಬ ಟೀಕೆಗಳಿವೆ. ಈ ವರ್ಷ ಅವಳು ಹನ್ನೆರಡು ಚಿತ್ರಗಳಲ್ಲಿ ಮಾಡಿದ್ದಾಳೆ. ಅವಳನ್ನು ನೀವು ಏಕೆ ಭೇಟಿ ಆಗ್ಬೇಕು ಭಾವಾ ?" ಎಂದಳು.

ಗೋಪಾಲ ಉತ್ತರ ನೀಡಿ,

"ಕುರುಕ್ಷೇತ್ರ ನಾಟಕ ಆಡ್ತಿದ್ದೀನಮ್ಮ ನಮ್ಮ ಹಳ್ಳೀಲಿ ಈ ಸಲ. ಅದರಲ್ಲಿ ದ್ರೌಪದಿ ಪಾತ್ರ ಮಾಡೋಕೆ ಆಯಮ್ಮನ್ನ ಹಾಕ್ಕೋಬೇಕೂಂತ ಇದ್ದೀವಿ. ಕಂಡು ಮಾತಾಡಿ, ಅಡ್ವಾನ್ಸ್ ಹಣ ಕೊಟ್ಟು ಹೋಗೋಕೆ ಬಂದಿದ್ದೀವಿ" ಎಂದ.

ವಿಜಯ ಅತ್ಯಂತ ಆಶ್ಚರ್ಯದಿಂದ—

ಬಾವಾ?" ಎಂದಳು. ಗೋಪಾಲ ವಿವರಿಸುತ್ತಾ—

"ಲೋಕದ ಕಣ್ಣಿಗೆ ಅವಳು ಫೇಮಸ್ ನಟಿ ಇರಬಹುದು. ಆದರೆ ಪಾರ್ವತಿ ನಮ್ಮ ದೊಡ್ಡಪ್ಪನ ಮಗಳು. ನಮ್ಮ ದೊಡ್ಡಪ್ಪಾ ಹೋದಮೇಲೆ ಅವರ ತಾಯಿ ಜೊತೆ ನಮ್ಮನೆ ಸೇರಿದಳು. ನಮ್ಮ ಸುಜಾತನ ಜೊತೆ ಮನೆ ಮಗಳಾಗಿ ನಮ್ಮ ತಂದೆ ತಾಯಿಯ ಕೈಯಲ್ಲಿ ಬೆಳೆದವಳು. ಆದರೆ ಗ್ರಹಚಾರ ಕೆಟ್ಟಿತ್ತು ಅವಳದು. ಪಟ್ಟಣದಿಂದ ಆಗಾಗ ಬರ್‍ತಿದ್ದ ನಮ್ಮೂರ ಗೌಡರ ಮಗನ ಸ್ನೇಹಾ ಬೆಳೆಸಿ ಅವನ ಜೊತೆ ಪಟ್ಟಣಕ್ಕೆ ಓಡಿ ಹೋದಳು. ಮುಂದೆ ಏನೇ ನಾಯ್ತೊ? ಗೌಡರು ಮಗನ್ನ ಕರೆಸಿಕೊಂಡು ಎರಡುವರ್ಷದ ಮೇಲೆ ಜಾತಿ ಹುಡುಗಿಯನ್ನು ಮದುವೆ ಮಾಡಿದರು. ಆದರೆ ನಮ್ಮ ತಂದೆ ಮಾತ್ರ ಅವಳನ್ನು ಕ್ಷಮಿಸಲಿಲ್ಲ. ಉಗ್ರ ಕಠೋರರಾಗಿ ನಿಂತರು. ಆಮೇಲೆ ಏನೇನಾಯ್ತೋ? ನಾಟಕಾ, ಸಿನಿಮಾ ಅಂತ ಎಲ್ಲೆಲ್ಲೋ ಸೇರಿಕೊಂಡಳು. ಮೈಸೂರಲ್ಲೇ ಮನೆ ಸಹಾ ಮಾಡಿದ್ದಾಳೆ.

ನಮ್ಮದು ಹೆಸರಿಗೆ ಹಳ್ಳಿ ನಾಟಕಾ ಆದರೂ ಸುತ್ತ ಹತ್ತು ಹದಿನೈದು ಊರು, ಹಳ್ಳಿಗಳ ಜಂಬಲ ಇದೆ. ಪ್ರಖ್ಯಾತ ನಾಟಕ ಕಂಪನಿಯಿಂದ ಡ್ರೆಸ್ ತರ್‍ತೀವಿ, 'ನಂಜುಡೇಶ್ವರ ನಾಟ್ಯ ಶಾಲಾ' ಅಂತ ಸಾವಿರ ಜನ ಕೂಡೊ ಬಯಲು ರಂಗಮಂಟಪಾ ಇದೆ. ಸುತ್ತ ಹತ್ತೂರಿನ ಸಾವುಕಾರರು ಸಹಾಯ ಮಾಡ್ತಾರೆ. ಎರಡು ಸಲ ಐದ್ಮೈದು ಸಾವಿರ ರೂ. ಸಂಭಾವನೆ ಕೇಳಿದ್ದಳು. ಕೊಟ್ಟಿದ್ದೀವಿ. ಈ ಸಲ ಕಾಗದಾ ಬರೆದಾಗ ಹತ್ತು ಸಾವಿರ ಕೇಳಿದಳು. ಅದಕ್ಕೂ ಎಲ್ಲರೂ ಒಪ್ಪಿದ್ದಾರೆ. ನಾನು ಅಡ್ವಾನ್ಸ್ ಹಿಡಿದೇ ಬಂದಿದ್ದೇನೆ. ಮೈಸೂರಿನ ಆ ಹೊರಗಿನ ಬಡಾವಣೆಗಳಲ್ಲಿ ಓಡಾಡಿ ನಂಗೆ ರೂಢಿ ಇಲ್ಲ. ಅದಕ್ಕೆ ಸುರೇಶನ್ನ ಕರೆದುಕೊಂಡು ಹೋಗ್ತೀನಿ" ಎಂದ.

"ಪಾರ್ವತಿಬಾಯಿ ನಿಮ್ಮ ಸಂಬಂಧಿ ಅಂತ ಗೊತ್ತಿರಲಿಲ್ಲ ಬಾವಾ. ಕೆಲವು ಪತ್ರಿಕೆಗಳಲ್ಲಿ ಅವಳ ಬಗ್ಗೆ ತುಂಬ ಹೋಪ್‌ಲೆಸ್ಸಾಗಿ ಬರ್‍ತಾ ಇರುತ್ತೆ. ಏನೇನೋ ಅಸಹ್ಯ ಸುದ್ದಿಗಳು" ಎಂದಳು.

"ನಾವು ಕ್ಷಮಿಸಿ ಮನೆಗೆ ಕರೆದುಕೊಂಡಿದ್ರೆ ಅವಳ ಬದುಕೇ ಬೇರೆ ಇರೋದಮ್ಮ. ಏನು ಮಾಡೋದು ತಂದೆ ಆಗ ಉಗ್ರ ಹಠಾ ಹಿಡಿದರು.

ಹೀಗಾಗಿ ಒಂಟಿ ಹೆಣ್ಣಾಗಿ ಅವಳು ಏನೇನೋ ಅನುಭವಿಸಬೇಕಾಯ್ತು' ಎಂದ.

ಆ ರಾತ್ರಿ ಸುರೇಶ ಒಬ್ಬನೆ ಸಿಕ್ಕಾಗ "ಪಾರ್ವತಿ ಬಾಯಿ ನಿಮ್ಮ ಸ್ವಂತ ದೊಡ್ಡಪ್ಪನ ಮಗಳೇ ಅಂತ ನನಗೆಂದೂ ಹೇಳಿರಲಿಲ್ಲ ನೀವು ?" ಎಂದಳು. ಸುರೇಶಾ ಸಮಾಧಾನದಿಂದ—

"ಅದನ್ನು ತಗೊಂಡು ನೀನೇನು ಮಾಡುವಳಿದ್ದೆ ?" ಎಂದ. ವಿಜಯ ಕ್ರೋಧದಿಂದ—

"ನಮ್ಮ ತಾಯಿ ವಿಷಯ ಎತ್ತಾಡಿದಾಗ ನಿಮ್ಮನ್ನು ಝಾಡಿಸ್ತಿದ್ದೆ" ಎಂದಳು.

"ವಿಜಯ ನನ್ನ ತಾಳ್ಮೆ ಕೆಡಸ್ತಾ ಇದ್ದಿ ನೀನು ?" ಸುರೇಶಾ ಕೋಪದಿಂದ ಅರಚಿದ.

"ಅರಚಬೇಡಿ, ನಮ್ಮ ತಾಯಿನ್ನ ಅನ್ನಿಕ್ಕೆ ನಿಮಗೇನೂ ನೈತಿಕ ಅಧಿಕಾರವಿಲ್ಲ. ಶಕುಂತಲ ನಾಟಕದಲ್ಲಿ ಮಿಸ್ ಸುಲಭ ಅಭಿನಯದ ನೆಪದಲ್ಲಿ ಚುಂಬನಕ್ಕೆ, ಆಲಿಂಗನಕ್ಕೆ ಸಿಗ್ತಾಳೇನೊ ಅಂತ ನೋಡಿದ್ರಿ, ಹದಿನೈದು ಸಾವಿರ ಅವಳ ಮೇಲೆ ಸುರಿದಿರಿ. ಆದರೆ ಹಣ ತಗೊಂಡೂ ಅವಳು ದಾಕ್ಷಿಣ್ಯಕ್ಕೆ ಕಟ್ಟು ಬೀಳಲಿಲ್ಲ. ಇಂಗು ತಿಂದ ಮಂಗನಾದಿರಿ ನೀವು" ಎಂದಳು.

ಸುರೇಶಾ ಕೋಪದಿಂದ —

"ಹುಚ್ಚು ಹುಚ್ಚಾಗಿ ಮಾತಾಡಬೇಡಾ ವಿಜಿ. ನಾನು ಅವಳಿಗೆ ದುಡ್ಡು ಕೊಟ್ಟ ದಿನಗಳಲ್ಲಿ ಶಕುಂತಲ ನಾಟಕದ ಪ್ರಸ್ತಾಪವೇ ಇರಲಿಲ್ಲ. ನಾನು ಅವಳಿಗೆ ಹದಿನೈದು ಸಾವಿರ ರೂ. ದಾನ ಕೊಟ್ಟಿಲ್ಲ. ಸಾಲ ಕೊಟ್ಟಿರೋದು" ಎಂದ.

ವಿಜಯ ಸವಾಲು ಹಾಕುವಂತೆ—

"ಅದೇ ಸಾಲ ಒಬ್ಬ ಮುದುಕಿಗೆ ಕೊಡಿ ನೋಡೋಣ. ಮಿಸ್ ಸುಲಭಾಗಾದರೆ ಮಾತ್ರ ನೀವು ದಾನ ಧರ್ಮ ಮಾಡಬಲ್ಲಿರಿ" ಎಂದಳು.

"ಥೂ, ನಿನ್ನ ಜೊತೆ ಮಾತಾಡೋದು ಒಂದು ಕೆಟ್ಟ ಅನುಭವ ನೀನು ನನ್ನ ಬದುಕಿಂದ ತೊಲಗಿಹೋದರೆ ಸಾಕು" ಎಂದ.

"ನನ್ನ ಹಣ ನನಗೆ ತಂದ್ಕೊಟ್ಟುಬಿಡಿ ಸಾಕು, ಹೊರಟುಬಿಡ್ತೀನಿ. ನಿಮ್ಮಣ್ಣ ಊರಿಗೆ ಹೋಗೋವರೆಗೆ ಸಹ ಕಾಯಲ್ಲ" ಎಂದಳು.

ಈ ಮಾತಿಗೆ ಉತ್ತರವಿಲ್ಲದೆ ಮಲಗಿದ ಸುರೇಶಾ. ಎರಡು ದಿನದಿಂದ ಹಣಕ್ಕಾಗಿ ಎಲ್ಲೆಲ್ಲೋ ಪ್ರಯತ್ನಿಸಿದ್ದ. ಪ್ರಾವಿಡೆಂಟ್ ಫಂಡ್ ಹಾಗ ಇನ್ಷೂರೆನ್ಸ್ ಮೇಲೆ ಸಾಲ ತೆಗಿ ಎಂದು ಕೆಲವರು ಸೂಚಿಸಿದ್ದರು. ಆದರೆ ಅವುಗಳಿಂದ ಹತ್ತು ಸಾವಿರ ರೂ. ಸಿಗುವ ಹಾಗಿರಲಿಲ್ಲ. ತಕ್ಷಣದ ವ್ಯವಹಾರವೂ ಅಲ್ಲ. ಹೀಗಾಗಿ ಸುಮ್ಮನಾಗಿದ್ದ.

ಅವನು ಸುಮ್ಮನೆ ಇದ್ದುದ್ದನ್ನು ಕಂಡು ವಿಜಯ ಮತ್ತೆ ನುಡಿದಳು,

"ನನ್ನ ಪಾಲಿನ ಅತ್ಯಂತ ಕೆಟ್ಟ ಅನುಭವ ಯಾವುದು ಗೊತ್ತಾ ? ನಾವು ಕಾಯಿಲೆ ಮಲಗಿದ ಆ ದಿನಗಳಲ್ಲಿ......ನೀವು ಔತಣದ ಊಟ ಉಂಡು ಬಂದು ಆರಾಮವಾಗಿ ಆಡ್ತಾಡ್ತಾ ಇದ್ದಿರಲ್ಲ ಅದು. ಇಲ್ಲಿ ಒಂದು ಬ್ರೆಡ್. ಹಾಲು ಸಹ ತಿನ್ನದೆ ನಾನು ಆಯಾಸದಲ್ಲಿ ಮಲಗಿದಾಗ ಆ ದಿನ ವಾಂಗಿ ಭಾತ್ ತಿಂದು ಸುಲಭಾ ಎದುರಿಗೆ "ಕುಣಿಯೋಣಾ ಬಾರಾ" ಹಾಡಿಕೊಂಡು ಕುಣಿದ್ರಲ್ಲ ಅದು. ಇಲ್ಲಿ ಕಾಯಿಲೆ ಮಲಗಿದ ನಾನು ಒಂಬತ್ತು ಗಂಟೆಯವರೆಗೆ ಉಪವಾಸ, ಚಡಪಡಿಸ್ತಾ ಕಾದಿದ್ದರೆ ; ಅಲ್ಲಿ ಕಾಮಾಕ್ಷಿ ಮೇಡಂ ಮನೇಲಿ ಲಾಡು ಊಟ ಉಂಡು ; ಮೈಸೂರು ಮಲ್ಲಿಗೆ ಕನವ ಹಾಡ್ತಾ ಕಾಲಕಳೆದಿರಲ್ಲ ಅದು ನನ್ನ ಪಾಲಿನ ಅತ್ಯಂತ ಕೆಟ್ಟ ಅನುಭವ" ಎಂದಳು.

ಸುರೇಶಾ ರೋಷದಿಂದ—

"ನೀನು ಕಾಯಿಲೆಯಿಂದ ಬದುಕಿ ಉಳಿದದ್ದೇ ನನ್ನ ಪಾಲಿನ ಕೆಟ್ಟ ಅನುಭವ ?" ಎಂದ.

ವಿಜಯ ತಿರಸ್ಕಾರದಿಂದ—

"ಅದು ನನಗೆ ಗೊತ್ತಿದೆ. ಅದಕ್ಕೆ ನಿಮ್ಮನ್ನು ಬಿಟ್ಟು ದೂರ ಹೋಗ್ತಾ ಇದ್ದೀನಿ" ಎಂದಳು.

ಕೊಂಚ ಹೊತ್ತು ಆಲೋಚಿಸುತ್ತಿದ್ದ ಸುರೇಶಾ ಮತ್ತೆ ಶಾಂತನಾಗಿ ಕೇಳಿದ,

"ನಿನಗೆ ಏನಾಗಿದೆ ವಿಜಿ ? ನಿನಗೆ ಮೆಂಟಲ್ ಅಪ್‌ಸೆಟ್ ಆಗಿದೆ ಅನಿಸತ್ತೆ, ನಿನಗೆ ನಾನೇನು ಕಡಿಮೆ ಮಾಡಿದ್ದೆ ? ನನ್ನ ಹೃದಯದ ಪ್ರಾಣ

ಪದಕ ಅಂತ ನೋಡ್ಕೋತಿದ್ದೆ. ನೀನು ನನಗಾಗಿ ಒದ್ದಾಡ್ತಿದ್ದಿ, ವಿಧೇಯಳಾಗಿ, ಪ್ರೀತಿ ಪ್ರೇಮಗಳಿಂದ ಇದ್ದ......ನೀನ್ಯಾಕೆ ಹೀಗಾದಿ ? ಒಳ್ಳೆ ಬದ್ಧದ್ವೇಷಿ ಆಡ್ತಾಗೆ ಆಡ್ತಿ ? ಯಾರಾದರೂ ಮಾಟಾ-ಗೀಟಾ ಮಾಡಿಸಿದ್ದಾರಾ ?" ಎಂದ. ವಿಜಯ ಉತ್ತರ ಕೊಡಲಿಲ್ಲ.

ಸುಖ ಇದೆ ನಿಜ. ಸುಖ ದಾಂಪತ್ಯ, ಪ್ರೀತಿಯ ಪತಿ, ಒಳ್ಳೆ ವಾಹಿವಾಟಿನ ಮನೆ, ಒಡವೆ ವಸ್ತ್ರ, ಆದರೆ ಅವನು ಈ ಸುಖ ಸಂತೋಷಗಳ ನಡುವೆ ತನ್ನನ್ನು ಒಂದು ಭೋಗ ಸಾಮಗ್ರಿ ಎಂದೇ ತಿಳಿದಿದ್ದಾನೆ- ತಾನು ಕಾಯಿಲೆ ಬಿದ್ದಾಗಿನ ಅವನ ವರ್ತನೆಗೆ ತನ್ನ ಮನಸು ಮುರಿದಿದೆ. ಯೋಚನೆಗಳ ಭಾರದಲ್ಲಿಯೆ ನಿದ್ರೆ ಹೋದಳು ವಿಜಯ. ಗೋಪಾಲ ಆ ದಿನ ಬೆಳಗ್ಗೆ ಎದ್ದು ಮಾರ್ಕೆಟ್ಟಿಗೆ ಹೊರಟಿದ್ದ. ಇನ್ನೆರಡು ದಿನ ಆದರೆ ಗೋಪಾಲ ಹಳ್ಳಿಗೆ ಹೊರಟುಬಿಡುತ್ತಾನೆ. ಆಮೇಲೆ ತಾನು ಈ ಮನೆಯಿಂದ ದೂರವಾಗಬೇಕು ? ಎಲ್ಲಿ ಹೋಗುವುದು ? ಆ ದಿನ ಅಡಿಗೆ ಮಾಡಿ ಹನ್ನೆರಡು ಗಂಟೆಗೆ ಗೋಪಾಲಂಗೆ ಬಡಿಸಿ ಕಾದಿದ್ದಳು. "ಪೋಸ್ಟ್" ಎಂದು ಪೋಸ್ಟ್‌ಮನ್ ಒಂದು ಪತ್ರ ಒಗೆದು ಹೋದ. ಅಕ್ಕನ ಪತ್ರ ಇರಬಹುದೆಂದು ಅದನ್ನು ಲಗುಬಗೆಯಿಂದ ಬಿಚ್ಚಿ ನೋಡಿದಳು ಆದರೆ ಅದು ತಾಯಿಪತ್ರ, ಕುತೂಹಲದಿಂದ ಓದಿದಳು.

ನನ್ನ ಮುದ್ದು ಮಗಳು ವಿಜಯಳಿಗೆ ನಿನ್ನ ಪ್ರೀತಿಯ ತಾಯಿ ಇಂದಿರಮ್ಮನ ಆಶೀರ್ವಾದಗಳು.

ಪ್ರೀತಿಯ ವಿಜಿ, ಈಗಾಗಲೇ ನನ್ನ ಕುರಿತು ಚಿತ್ರ ವಿಚಿತ್ರ ಸುದ್ದಿಗಳು ಕೇಳಿ ನೀನು ಕಂಗಾಲಾಗಿರಬಹುದು. ನನ್ನ ಅಂತರಂಗವನ್ನೆಲ್ಲಾ ನಿನಗೆ ತೋಡಿಕೊಳ್ಳಬೇಕೆಂಬ ಆಸೆ ಇದೆ. ವಿಜಿ ನೀನು ನನಗಾಗಿ ಬರಲು ಸಾಧ್ಯವೆ ? ಬೆಂಗಳೂರಿನಲ್ಲಿರುವ ಈ ಕೆಳಗಿನ ವಿಳಾಸಕ್ಕೆ ಬಾ. ನಿನ್ನ ಪ್ರೀತಿಯ ತಾಯಿ

ಇಂದಿರಮ್ಮ'

ಈ ಪತ್ರದಲ್ಲಿ ಜಯನಗರದ "ಟಿ" ಬ್ಲಾಕಿನ ಒಂದು ಬಂಗಲೆಯ ವಿಳಾಸವೂ ಇತ್ತು.

ಸದ್ಯಕ್ಕೆ ಇದೇ ತನಗೆ ಶ್ರೀರಕ್ಷೆ ಎಂದುಕೊಂಡಳು. ಎರಡು ದಿನಗಳ ನಂತರ ಗೋಪಾಲ ಹಳ್ಳಿಗೆ ಹೋದ.

"ಎಲ್ಲಿ ನನ್ನ ಹಣ ತಂದುಕೊಡ್ಲಿಲ್ಲ" ಎಂದು ಗಂಡನಿಗೆ ಕೇಳಿದಳು.

"ಏನು ಒಳ್ಳೆ ನಕ್ಷತ್ರಿಕಗಂಟು ಬಿದ್ದ ಹಾಗೆ ಗಂಟು ಬಿದ್ದಿದ್ದಿ. ನಂಗೇನು ಹಣ ಆಕಾಶದಿಂದ ಉದುರಲ್ಲ. ಇನ್ನು ಒಂದು ತಿಂಗಳು ನೀನು ಕುಣಿದರೂ ಹಣ ಸಿಗಲ್ಲ" ಎಂದ ಸುರೇಶ.

"ಸರಿ. ನಾನಿವತ್ತು ಹನ್ನೆರಡು ಗಂಟೆಯ ಬಸ್ಸಿಗೆ ಊರಿಗೆ ಹೋಗ್ತಾ ಇದ್ದೀನಿ. ಒಂದು ತಿಂಗಳ ನಂತರ ಮತ್ತೆ ಹಣಕ್ಕಾಗಿ ಒಂದಿನ ಬರ್ತೀನಿ" ಎಂದಳು.

"ಏನಾದರೂ ಮಾಡ್ಕೊಂಡು ಹಾಳಾಗ್ಹೋಗು......" ಎಂದ ಅತೀವ ಜಿಗುಪ್ಸೆಯಿಂದ ಸುರೇಶ. ಅವನು ಕಾಲೇಜಿಗೆ ಹೊರಟ. ಅರ್ಧ ಗಂಟೆಯ ನಂತರ ವಿಜಯ ಅಲ್ಮೇರ ತೆಗೆದು, ಅತ್ತೆಮನೆಯಲ್ಲಿ ಹಾಗು ತವರುಮನೆಯಲ್ಲಿ ತನಗಿಟ್ಟ ಎಲ್ಲಾ ಒಡವೆ ಹಾಗು ಭಾರಿ ರೇಶ್ಮೆ ಸೀರೆಗಳನ್ನು ಸೂಟ್‌ಕೇಸಿಗೆ ಹಾಕಿಕೊಂಡಳು. ನಾನ್ನೂರು ರೂ. ಗಳಷ್ಟು ಹಣ ಕಾಸು ಇತ್ತು. ಪರ್ಸಿನಲ್ಲಿ ಇಟ್ಟುಕೊಂಡಳು.

ಪ್ರಯಾಣಕ್ಕೆ ಸನ್ನದ್ಧಳಾದಳು. ಮನೆಯ ಬೀಗ ಹಾಕಿ ; ಶೈಲಜಳಿಗೆ ಬೀಗದ ಕೈ ಕೊಟ್ಟು "ಅರ್ಜೆಂಟ್ ನಮ್ಮ ತವರುಮನೆಯಿಂದ ಟೆಲಿಗ್ರಾಂ ಬಂದಿದೆ. ಹೊರಟ್ಟಿದ್ದೀನ್ರಿ, ನಮ್ಮ ಯಜಮಾನರು ಕಾಲೇಜಿಗೆ ಫೋನ್ ಮಾಡಿದ್ದೀನಿ" ಎಂದು ಸುಳ್ಳು ಹೇಳಿದಳು. ಹನ್ನೆರಡು ಗಂಟೆಗೆ ಬಸ್‌ಸ್ಟಾಂಡಿಗೆ ಬಂದ ಅವಳಿಗೆ ಅರ್ಧ ಗಂಟೆಯಲ್ಲಿ ಬೆಂಗಳೂರಿಗೆ ಹೋಗುವ ಬಸ್ ಸಿಕ್ಕಿತು. ಬೆಂಗಳೂರಿನಲ್ಲಿ ಇಳಿದು ರಿಕ್ಷಾ ಮಾಡಿಕೊಂಡು ತಾಯಿ ಕೊಟ್ಟ ವಿಳಾಸಕ್ಕೆ ಬಂದು ಇಳಿದಾಗ ನಾಲ್ಕು ಗಂಟೆ ಆಗಿತ್ತು. ರಿಕ್ಷಾದವನಿಗೆ ಬಾಡಿಗೆ ನೀಡಿದಾಗ ಒಳಗಿನಿಂದ ಒಬ್ಬ ತರುಣಿ ಬಂದು "ಬನ್ನಿ.....ಬನ್ನಿ......" ಎಂದು ಆದರದಿಂದ ಕೈ ಹಿಡಿದು ಒಳಗೆ ಕರೆದುಕೊಂಡು ಹೋದಳು.

ಕಾಂಪೌಂಡಿನ ಇಕ್ಕೆಲದಲ್ಲಿಯೂ ಹೂವಿನ ಗಿಡಗಳು......ಕಾಂಪೌಂಡಿನ ಒಂದು ಬದಿಯಲ್ಲಿ ನಿಂತ ಎರಡು ಫಿಯಟ್ ಕಾರುಗಳು......ವರಾಂಡದ ಪಕ್ಕದ ಹೊರ ಮೆಟ್ಟಲಿಗೆ ಕಟ್ಟಿಹಾಕಿದ ತನ್ನನ್ನು ಕಂಡು ಬೊಗಳುತ್ತಿದ್ದ ಒಂದು ಅಲ್ಸೇಷಿಯನ್ ನಾಯಿ. ತಾಯಿ ಇಷ್ಟು.....ಶ್ರೀಮಂತಿಕೆ ವಾತಾವರಣದಲ್ಲಿ ಹೇಗಿದ್ದಾಳೆ ? ವಯಸ್ಸು, ಯೌವ್ವನ, ರೂಪ ಯಾವುದೂ ಇಲ್ಲ, ಐವತ್ತೈದು

ವರ್ಷದ ಹೆಂಗಸು. ನಟಿಸಿರುವುದು ಒಂದು ಕಾಚಿಪೂಡಿ ಪಾತ್ರ. ಇಂಥಾ ವೈಭವ ಐಶ್ವರ್ಯ ಹೇಗೆ ಬಂತು ? ಎಂದು ಯೋಚನೆ ಅವಳ ಮನಸ್ಸಿನಲ್ಲಿ ತುಂಬಿತು.

"ಮಹಡಿಯ ಮೇಲೆ ಬಂದ್ಬಿಡಿ. ಅಲ್ಲೇ ಅಮ್ಮ ಇದ್ದಾರೆ" ಎಂದು ಆ ಯುವತಿ ಮೃದುವಾಗಿ ನುಡಿದಳು. ತಾಯಿ ಎಂಥಾ ವಾತಾವರಣದಲ್ಲಿ ಇದ್ದಾಳೋ ಏನೋ ? ತಾನು ಹತ್ತು ತೊಲ ಚಿನ್ನದ ಸಮೇತ ಬಂದುದು ಸರಿಯೆ ?

ಎಂದು ಮನದಲ್ಲಿ ಒಂದು ಭಾವನೆ ಮಿಂಚಿತು. ಸುಂದರವಾಗಿ ಅಲಂಕರಿಸಿದ ಹಜಾರದ ಒಂದು ಬದಿಯಲ್ಲಿ ಮಹಡಿಗೆ ಹತ್ತುವ ಮೆಟ್ಟಲು, ಮಹಡಿ ಹತ್ತಿ ಮೇಲೆ ಬಂದಳು.

ಮಹಡಿಮೇಲಿನ ವಿಶಾಲವಾದ ಹಜಾರ ಗೋಡೆಗೆ ತೂಗು ಬಿಟ್ಟ ಅಲಂಕಾರದ ಪರದೆಗಳು ......ಸ್ಯಾಟಿನ್ ಹೊದಿಕೆಗಳಿಂದ ಅಲಂಕೃತವಾದ ಸೋಫಾಗಳು ಹಗಲಿನಲ್ಲಿ ಬೆಳಕೆರಚುತ್ತಿದ್ದ ಬಗೆಬಗೆ ದೀಪಮಾಲೆಗಳು ಗೋಡೆಯಿಂದ ಗೋಡೆಗೆ ನೆಲಮುಚ್ಚುವಂತೆ ಹಾಸಿದ್ದ ಕೆಂಪು ರತ್ನ ಗಂಬಳಿಗಳು.

"ವಿಜಿ...... ಬಂದ್ಯಾ ಕಂದಾ" ಎಂದು ನುಡಿಯುತ್ತ ಧಾವಿಸಿ ಬಂದು ಅಪ್ಪಿದಳು ಇಂದಿರಮ್ಮ. ದೊಡ್ಡ ಜರಿಯಂಚಿನ ಹಸಿರು ರೇಶ್ಮೆಸೀರೆ, ತೋಳನ್ನು ಅಪ್ಪಿದ ಹಸಿರು ರೇಶಿಮೆ ಕುಪ್ಪಸಾ, ಅಗಲವಾಗಿ ತುರುಬು ಕಟ್ಟಿ ಮಲ್ಲಿಗೆ ದಂಡೆ ಅರ್ಧ ಚಂದ್ರಾಕಾರವಾಗಿ ಮುಡಿದು, ಕೊರಳಲ್ಲಿ ಮಾವಿನಕಾಯಿ ಪ್ಯಾಟ್ರನ್ನಿನ ಚಿನ್ನದ ನೆಕ್‌ಲೇಸ್ ಧರಿಸಿದ್ದಳು. ಕಿವಿಗಳಲ್ಲಿ ಅಗಲವಾದ ಚಿನ್ನದ ಕೆತ್ತನೆಯ ಓಲೆಗಳು. ಒಂದು ಕೈಯಲ್ಲಿ ಹಸಿರು ಬಳೆಗಳು. ಅತ್ತೊಂದು ಇತ್ತೊಂದು ಚಿನ್ನದ ಬಳೆಗಳು, ಇನ್ನೊಂದು ಕೈಯಲ್ಲಿ ಚಿನ್ನದ ಚೈನಿನ ವಾಚು.

ತಾಯಿಯ ಮುಖದಲ್ಲಿ ಉಲ್ಲಾಸ ತುಂಬಿತ್ತು. "ಒಂದೇ ಚಿತ್ರದಿಂದ ಎಷ್ಟೊಂದು ಶ್ರೀಮಂತಳಾಗಿದ್ದಿ, ಅಮ್ಮ ಏನು ನಿನ್ನ ರಹಸ್ಯ ?" ಎಂದಳು.

ಇಂದಿರಮ್ಮ ನಗುತ್ತಾ—

"ನನ್ನ ರಹಸ್ಯ ತಿಳಿಸ್ತೀನಿ, ಅಂತೂ ನನ್ನ ನಂಬಿ ಬಂದೆಯಲ್ಲ. ನಿನ

ಗಂಡ ಕಳಿಸ್ಲಿಕ್ಕೆ ಒಪ್ಪಿದನಾ ? ಅನಂತನ ಮನೆಗೆ ಹೋಗಿ ಬಂದೆಯಾ ? ಅನಂತ ನನ್ನನ್ನು ಸಹಸ್ರನಾಮ ಹಾಕಿರಬಹುದು" ಎಂದಳು. ತಾಯಿಯ ಎದುರು ಸೋಫಾದಲ್ಲಿ ಕುಳಿತಳು ವಿಜಯ.

"ನಾನು ಅನಂತನ ಮನೆಗೆ ಹೋಗಿರಲಿಲ್ಲಮ್ಮ. ನೇರವಾಗಿ ಇಲ್ಲಿಗೇ ಬಂದೆ. ಪದ್ಮಮ್ಮನ ಜೊತೆಗೆ ಅವರ ಮನೆ ಒಂದು ಕೋಣೆಯಲ್ಲಿದಾಳೆ..... ಅಮ್ಮ ಅಂತ ಕುಮುದಕ್ಕ ಬರೆದಿದ್ದಳು. ನೀನು ಅಂಥಾ ಚಿತ್ರದಲ್ಲಿ ನಟಿಸಿದ್ದು ಅಕ್ಕಾ, ಅಣ್ಣಾ, ಅಪ್ಪಾ.....ಎಲ್ಲರಿಗೂ ಬೇಸರವಾಗಿದೆ" ಎಂದಳು. ಇಂದಿರಮ್ಮನ ಮುಖದ ಮೇಲೆ ನಗು ಮಾಸಲಿಲ್ಲ.

"ಯಾರಿಗೆ ಬೇಸರವಾಗಿದೆಯೋ? ಯಾರಿಗೆ ಅಸಮಾಧಾನವಾದೆಯೊ? ನನಗಂತು ಆ ಚಿತ್ರದಿಂದ ತುಂಬ ತೃಪ್ತಿ, ಶಾಂತಿ. ಸಮಾಧಾನಗಳು ಸಿಕ್ಕಿವೆ" ಎಂದಳು. ತಾಯಿಯ ಮಾತು ಕೇಳಿ ವಿಜಯ,

"ಒಂದು ಚಿತ್ರದಿಂದ ಅದು ಅಪಭ್ರಂಶ ಆ ಹಾಸ್ಯನಟ ಪಾತ್ರದಿಂದ ಇಷ್ಟು ಐಶ್ವರ್ಯ ಹೇಗೆ ಸಂಪಾದಿಸಿದೆಯಮ್ಮ" ಎಂದಳು.

ಇಂದಿರಮ್ಮ ನಕ್ಕು—

"ಆ ರಹಸ್ಯಕ್ಕೆ ಬೇಗ ಉತ್ತರ ಕೊಡ್ತೀನಿ" ಎಂದವರೇ......ತಮ್ಮೆದುರು ಹಣ್ಣಿನ ರಸದ ಲೋಟ ಹಿಡಿದು ನಿಂತ ಯುವತಿಯನ್ನು ಉದ್ದೇಶಿಸಿ "ಕೃಷ್ಣಾ ಬಂದನಾ ? ಬಂದ ಮೇಲೆ ಕಳಿಸು ರಾಧಾ" ಎಂದಳು.

"ಇಂದ್ರೇಶ್ವರಿ ಕಂಬೈನ್ಸ್ ಅವರಿಂದ ಅರ್ಜೆಂಟ್ ಫೋನ್ ಬಂತು ಅಂತ ಹೋಗಿದ್ದಾರಮ್ಮ. ಒಂದು ಗಂಟೆಯ ಹೊತ್ತಿಗೆ ಬರ್ತೀನಿ ಅಂತ ಹೇಳಿ ಹೋಗಿದ್ದಾರೆ." ಕನ್ನಡ ಮಾತಾಡಿದರೂ ತಮಿಳಿನ ಛಾಯೆ ತುಂಬಿತ್ತು. ರಾಧಾ ಉತ್ತರಿಸಿದಳು.

"ಕೃಷ್ಣಾ ಬಂದರೆ ವಿಷಯ ತಿಳಿಸಿ ಮೇಲೆ ಕಳಿಸು. ನೂರಾರು ವಹಿವಾಟು ಅವನದು. ಮತ್ತೆ ಎಲ್ಲಾದರೂ ಹೊರಟುಬಿಟ್ಟಾನು" ಎಂದರು.

"ಆಗಲಮ್ಮ ಕಳಿಸ್ತೀನಿ, ನಾನು ಕೆಳಗಿರ್ತೀನಿ" ಎಂದು ಆ ಯುವತಿ ಕೆಳಗಿಳಿದು ಹೋದಳು.

"ಯಾರಿರಬಹುದು ಈ ಕೃಷ್ಣಾ?" ಎಂಬ ಸಂಶಯ ತೇಲಿತು, ವಿಜಯಳ ಮನದಲ್ಲಿ.

"ನನ್ನ ಬಗ್ಗೆ ನಿನ್ನ ಅಭಿಪ್ರಾಯ ಏನು ವಿಜಿ ?" ಪತ್ರಿಕಾ ಸಂದರ್ಶನಕ್ಕೆ ಸಿದ್ಧವಾಗಿ ಕುಳಿತಳು, ತಾಯಿ. ವಿಜಯ ತಾಯಿಯನ್ನೇ ದಿಟ್ಟಿಸಿದಳು. ಆತ್ಮವಿಶ್ವಾಸದಿಂದ ಬೆಳಗುತ್ತಿದ್ದ ಆಕೆಯ ಮುಖ, ಜಗತ್ತನ್ನೇ ಗೆಲ್ಲುವೆನೆಂಬ ಛಲದ ಕಣ್ಣುಗಳು. ವಿಜಯ ತಾಯಿಯನ್ನೇ ದಿಟ್ಟಿಸುತ್ತಾ ನುಡಿದಳು.

"ಅಮ್ಮ ನನಗಂತೂ ಏನು ಹೇಳ್ಲಿಕ್ಕೋ ತೋಚ್ತಾ ಇಲ್ಲ ಐವತ್ತೈದರ ಸನಿಹದ ಈ ವಯಸ್ಸಿನಲ್ಲಿ ನೀನು ಚಲನಚಿತ್ರದಲ್ಲಿ ನಟಿಸ್ತಾ ಇದ್ದೀ......ಅಂತ ಅನ್ನೋದು ನನಗೆ ಎಷ್ಟು ಆಘಾತದ ಸುದ್ದೀನೋ......ನಲವತ್ತು ವರ್ಷಗಳ ಕಾಲಾ ಅಪ್ಪನೊಡನೆ ಸಂಸಾರ ಮಾಡಿದ ನೀನು ಅಪ್ಪನ್ನ ಬಿಟ್ಟು ಹೇಗೆ ಇರ್ತಿದ್ದಿ ಒಂಟಿಯಾಗಿ ಅನ್ನೋ ಕುತೂಹಲವಿತ್ತು. ಆದರೆ ಇಲ್ಲಿ ನಿನ್ನ ಇಂಥಾ ಐಷಾರಾಮದಲ್ಲಿ ನೋಡಿದ್ರೆ ತುಂಬ ಆಶ್ಚರ್ಯ ಆಗುತ್ತೆ" ಎಂದಳು.

"ನನಗೆ ಆಶ್ರಯ ಕೊಟ್ಟ ಶ್ರೀಮಂತ ಯಾರಿರಬಹುದು ಹೇಳು ?"

ತಾಯಿ ಪ್ರಶ್ನೆ ಹಾಕಿದರು, ವಿಜಯ ಕೊಂಚ ಬೇಸರದಿಂದ "ಯಾರು ಅಂತ ನಾನು ಹೇಗೆ ಹೇಳಲಿ ಅಮ್ಮ ? ಪ್ರಪಂಚ ಬಹಳ ವಿಚಿತ್ರ ಅಂತ ಮಾತ್ರ ಹೇಳಬಲ್ಲೆ. ಈ ವಯಸ್ಸಿನ ನಿನ್ನ ರೂಪಕ್ಕೆ ಮರುಳಾಗಿ ಇಂಥಾ ಪಾತ್ರ ಕೊಡೋದೇ ಇಂಥಾ ಶ್ರೀಮಂತಿಕೇಲಿ ಇಡೋದೂಂದ್ರೆ ಆಶ್ಚರ್ಯಾನೆ ಆಗತ್ತಮ್ಮ" ಎಂದಳು ಇಂದಿರಮ್ಮನ ಮುಖದ ಮೇಲೆ ನೋವಿನ ನಗೆ ತೇಲಿತು.

"ಫಿಲಂ ಲ್ಯಾಂಡ್ ಅಂತಾಲೆ ಕೆಟ್ಟ ಭಾವನೆಗಳೆ ಏಕೆ ಮೂಡುತ್ತೆ ವಿಜಿ ಎಲ್ಲರಲ್ಲಿ ? ನಾನು ಬೇಕೆಂದೇ ಈಚಲ ಮಲದ ಕೆಳಗೆ ಕೂತಿದ್ದೀನಿ. ಆದರೆ ಕುಡಿತಾ ಇರೋದು ಮಾತ್ರ ಮಜ್ಜಿಗೆ ಎಂದಳು.

"ನೀನು ಏನು ಹೇಳ್ತಿದ್ದಿ......ನನಗೆ ಅರ್ಥ ಆಗ್ತಿಲ್ಲಮ್ಮ" ಎಂದಳು.

ಆ ಹೊತ್ತಿಗೆ ಸುಮಾರು ಮುವ್ವತ್ತೈದು ವರ್ಷ ವಯಸ್ಸಿನ ತರುಣನೋರ್ವ ಮಹಡಿಯ ಮೇಲೆ ಬಂದ.

"ಬಾ...... ಕೃಷ್ಣ, ನಿನ್ನ ತಂಗಿ ವಿಜಯ ಬಂದಿದ್ದಾಳೆ, ಬಹುಶಃ ನಿಮ್ಮ ಅಪ್ಪನ ದಬ್ಬಾಳಿಕೆ ನಾನು ಮೌನವಾಗಿ ಎದುರಿಸ್ತಾ ಇದ್ದಾಗ ಆಗಾಗ ತಂದೆಯನ್ನು ಎದುರಿಸಿ ನನ್ನ ಪರವಾಗಿ ವಾದಿಸ್ತಿದ್ದೋಳು ನನಗಾಗಿ

ಅನುಕಂಪಾ ಕೋರಿಕೊಳ್ಳುತ್ತ ಬಂದೋಳು ಈ ಪಂಗಳು ಇನ್ನು ಅನಂತ, ಕುಮುದ ಮೂಕಬಸವಗಳು, ತಂದೆಗೆ ಹೆದರಿ ನೀರಾಗುತ್ತಿದ್ದ ಹುಡುಗರು" ಎಂದಳು. ವಿಜಯ ಅನಂತನ ಹೋಲಿಕೆಯ ಆ ತರುಣನನ್ನೆ ದಿಟ್ಟಿಸುತ್ತಾ—

"ಅಮ್ಮ ಇವರು....ಇವರು ನನ್ನ ಅಣ್ಣಾ ನಾಗೇಂದ್ರಾನ ?" ಎಂದಳು.

"ಅಮ್ಮ ನಾನು ಮನೆಬಿಟ್ಟು ಹೋದಾಗ ವಿಜಿ ಮೂರುವರ್ಷದ ಮಗು ಅಲ್ಲವಾ ?" ಎಂದ ಆ ತರುಣಾ.

"ಹತ್ತೊಂಬತ್ತುವರ್ಷಗಳ ಹಿಂದೆ ನಿಮ್ಮಪ್ಪನ ಕ್ರೂರ ದಬ್ಬಾಳಿಕೆ ಎದುರಿಸ ಲಾರದೆ, ಮನೆಬಿಟ್ಟು ಹೋದ ನನ್ನ ಮಗ ನಾಗೇಂದ್ರ. ಈಗ ತಮಿಳು ಚಿತ್ರದ ಸುಪ್ರಸಿದ್ಧ ನಿರ್ಮಾಪಕ ಕೃಷ್ಣಪ್ರಸಾದ್ ಆಗಿದ್ದಾನೆ ತಾಯಿ ಪರಿಚಯ ಮಾಡಿಸಿದಳು. ಆ ತರುಣಾ ಮುಂದೆ ಬಂದು ವಿಜಯಳ ಕೈಗಳನ್ನ ಹಿಡಿದು ಕೊಂಡ. ವಿಜಯ ಬಿಕ್ಕುತ್ತ ಅವನೆದೆಯ ಮೇಲೆ ಮುಖ ಇರಿಸಿದಳು.

"ಅನಂತನ್ನ ಬಿಟ್ಟು ನನಗೆ ಇನ್ನೊಬ್ಬ ಅಣ್ಣಾ ಇದ್ದಾನೆ ಎಂಬುದು ಸಹಾ ಗೊತ್ತಿರಲಿಲ್ಲ. ನಮ್ಮ ಮನೆಯಲ್ಲಿ ಅಣ್ಣನ ವಿಷಯವೇ ಯಾರು ನೆನೆಸ್ತಾ ಇರಲಿಲ್ಲವಲ್ಲಮ್ಮ" ಎಂದಳು.

ಇಂದಿರಮ್ಮ ನಿಟ್ಟುಸಿರಿಟ್ಟು......

"ನಿಮ್ಮ ತಂದೆಯ ಕ್ರೂರ ಶಾಸನವೇ ಹಾಗಿತ್ತು. ಆ ದಿನಗಳಲ್ಲಿ ನನ್ನ ಮಗು ಹೆಸರು ತೆಗೆದು ದುಃಖಿಸಿ ಅಳುವುದಕ್ಕೂ ನನಗೆ ಸ್ವಾತಂತ್ರವಿರಲಿಲ್ಲ. ಅವನ ಹೆಸರೆ ಎತ್ತಕೂಡದು, ಕೇಳಿದವರಿಗೆ ಮೂರೆ ಮಕ್ಕಳೂಂತ ಹೇಳ್ಬೇಕು ಅಂತ ಕಟ್ಟುಪಾಡು ಮಾಡಿದರು. ನನ್ನ ಕರಳು ಬೆಂದು ಕರಕಾಗ್ತಾ ಇದ್ದರೂ ನಿಮ್ಮ ತಂದೆಗೆ ಹೆದರಿ ನಾನು ಸುಮ್ಮನಿರ್ತಿದ್ದೆ" ಎಂದರು.

ವಿಜಯ ಕುತೂಹಲದಿಂದ—

"ಆದರೆ ನೀನು ಅಣ್ಣನ ಭೇಟಿ ಆದದ್ದು ಹೇಗಮ್ಮ ?" ನೀವು ತಾಯಿ ಮಗ ಹೀಗೆ ಒಂದಾಗಿರೋದು ಅಪ್ಪನಿಗೆ ಅನಂತನಿಗೆ ಗೊತ್ತಿಲ್ಲವಲ್ಲ" ಎಂದಳು.

"ಅದೊಂದು ದೊಡ್ಡ ಕಥೆ. ಬೇಕೆಂದೇ ಎಲ್ಲಾ ರಹಸ್ಯವಾಗಿರಿಸಿದ್ದೇನೆ" ಎಂದರು ಇಂದಿರಮ್ಮ.

"ಅಂತು ಪತ್ರ ಬರೆದರೆ ವಿಜ್ಜು ಬರ್ತಾಳೆ ಅಂತ ನೀನೂಹಿಸಿದ್ದು, ನಿಜ ವಾಯ್ತಮ್ಮ" ಎಂದು ಕೃಷ್ಣ ಸಂತೋಷ ಸೂಸಿದ.

"ವಿಜ್ಜು ಊರಿಂದ ಬಂದಿದ್ದಿ, ಮೊದಲು ಎಲ್ಲರೂ ಉಪಹಾರ ಮುಗಿಸಿ ಬಿಡೋಣಾ. ಆಮೇಲೆ ನಿನ್ನ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಕೊಡ್ತೀನಿ."

ಅಲ್ಲೇ ಮಹಡಿಯ ಮೇಲಿದ್ದ ಡೈನಿಂಗ್ ಹಾಲಿನಲ್ಲಿ ಪುಷ್ಕಳವಾದ ಉಪಹಾರವಾಯಿತು.

"ನೀನು ಮಲಗಿ ಸ್ವಲ್ಪ ವಿಶ್ರಾಂತಿ ತಗೊ ವಿಜ್ಜು. ನನ್ನ ಅಂತರಂಗ ಯಾರಿಗಾದರೂ ತೋಡಿಕೊಳ್ಳೋಣಾ ಅಂತ ಇದ್ದೆ. ನಿನಗೆ ಬಿಡುವಾದಾಗ ಇದನ್ನ ಓದು" ಉದ್ದ ಮಾಟದ ಕಚೇರಿ ಕಡತದಂತಹ ಪುಸ್ತಕ.

"ಇದೇನಮ್ಮ ಇದು ?" ಎಂದಳು.

"ಇಲ್ಲಿಗೆ ಬಂದ ಮೇಲೆ ನನ್ನ ಮನಸ್ಸಿನ ಎಲ್ಲಾ ಭಾವನೆಗಳು ಇದರಲ್ಲಿ ಬರೆದಿಟ್ಟಿದ್ದೆ, ಓದಿ ನೋಡು" ಎಂದರು. ವಿಜಯ ತನ್ನ ಕೋಣೆಗೆ ಬಂದಾಗ ಐದೂವರೆ. ಒಂದು ಸಣ್ಣ ನಿದ್ರೆ ತೆಗೆದಳು, ಆರೂವರೆಗೆ ಎಚ್ಚರವಾಯಿತು.

ಅಲ್ಲೇ ಕೋಣೆಯಲ್ಲಿದ್ದ ಸಿಂಕಿನಲ್ಲಿ ಮುಖ ತೊಳೆದಳು. "ಬೇಕಾದಾಗ ಬೆಲ್ ಬಾರಿಸು. ಸೇವಕಿ ಕಾಫಿ, ತಿಂಡಿ ತರ್ತಾಳೆ. ನಾನು ಎಂಟೂವರೆಯ ವರೆಗೆ ಮನೆಯಲ್ಲೇಲ್ಲ" ಎಂದು ತಾಯಿ ಹೇಳಿದ್ದು ನೆನಪಿಗೆ ಬಂತು.

ಬೆಲ್ ಬಾರಿಸಿದಳು. ಅಂಜಮ್ಮ ಎಂಬ ಸೇವಕಿ ಬಂದಳು. "ಕಾಫಿ ಮಾತ್ರ ತಗೊಂಬಾ" ಎಂದಳು. ಅಂಜಮ್ಮ ತಂದ ಕಾಫಿ ಕುಡಿದು ಹಾಸಿಗೆಗೆ ಒರಗಿಕೊಂಡೇ ತಾಯಿ ಕೊಟ್ಟ ಪುಸ್ತಕವನ್ನ ತೆರೆದಳು. ಉದ್ದ ಮಾಟದ ನೂರು ಪೇಜಿನ ಪುಸ್ತಕ, ಮುತ್ತಿನಂತಹ ಅಕ್ಷರಗಳು, ಆಸಕ್ತಿಯಿಂದ ಓದ ತೊಡಗಿದಳು.

ಹದಿನಾಲ್ಕನೆಯ ವಯಸ್ಸಿನಲ್ಲಿ ನಾನು ಇವರ ಪತ್ನಿಯಾಗಿ ಇವರ ಮನೆಗೆ ಬಂದೆ. ನನ್ನ ತಂದೆ ತಾಯಿ ಇವರಿಗೇನು ಕಡಿಮೆ ಮಾಡಿರಲಿಲ್ಲ. ಐದು ಎಕರೆ ಸೊಗಸಾದ ನೀರಾವರಿ ಪ್ರದೇಶ ಗದ್ದೆ, ಹಾಗು ಹತ್ತು ತೊಲ ಚಿನ್ನ ಮೈತುಂಬ ಇರಿಸೇ ಕಳಿಸಿದ್ದರು. ಸೊಗಸಾಗಿ ಮದುವೆ ಮಾಡಿದ್ದರು.

ಜೊತೆಗೆ ನಾನು ಕುರೂಪಿ ಏನಲ್ಲ. ನಮ್ಮ ನೆಂಟರಿಷ್ಟರೆಲ್ಲಾ "ಇಂದಿರಾ ಮುದ್ದಾದ ಹುಡುಗಿ, ಒಳ್ಳೆ ಹೊಂಗ್ಯಾದಿಗೆ ಬಣ್ಣ, ಸಮಟ್ಟಾದ ನಿಲುವು..... ತಿದ್ದಿದ ಕಣ್ಣು ಮೂಗು, ಚೆನ್ನಾಗಿದ್ದಾಳೆ" ಎಂದು ನುಡಿಯುತ್ತ ಇದ್ದರು. ಮದುವೆಗೆ ಬಂದ ಇವರ ತಾಯಿ—

"ಇಂದಿರಾ__ಸಾಕ್ಷಾತ್ ಇಂದಿರಾದೇವೀನೆ, ಬಂಗಾರದ ಬೊಂಬೆ ಹಾಗಿದ್ದಾಳೆ" ಎನ್ನುತ್ತಿದ್ದರು.

ಆದರೆ ಆರಂಭದ ದಿನದಿಂದಲೂ ಇವರ ಸ್ವಭಾವವೇ ಇತ್ತು. ಯಾವಾಗಲೂ ಸಿಡುಕು ಮುಖ, ಆಜ್ಞೆ ಅಧಿಕಾರ, ಒಂದು ದಿನ ಉಗಾದಿ ಹಬ್ಬ ದೊಡ್ಡ ಜರಿಯಂಚಿನ ಕೆಂಪು ರೇಶ್ಮೆ ಸೀರೆ ಒಪ್ಪವಾಗಿ ಉಡಿಸಿ, ಜರಿಯ ಅಂಚು ಬಂದಿದ್ದ ಕೆಂಪು ರೇಸಿಮೆ ಕುಪ್ಪಸಾ ತೊಡಿಸಿದ್ದರು. ಅತ್ತೆಯವರೆ ನನಗೆ ಅಲಂಕಾರ ಮಾಡಿದ್ದು. ಎರಡು ತೋಳುಗಳಿಗೂ ಕೆಂಪಿನ ಕಠ್ಯಾಣಿ ಇಟ್ಟಿದ್ದರು. ಬಂಗಾರದ ಹಾರಗಳನ್ನು ಧರಿಸಿ ಮಲ್ಲಿಗೆ ದಂಡೆ ಮುಡಿದು ಅಲಂಕೃತಳಾಗಿದ್ದೆ. ಅತ್ತೆಯ ತಮ್ಮ ನಲವತ್ತು ವರ್ಷದವರು. ನಾಲ್ಕು ಮಕ್ಕಳ ತಂದೆ ತನ್ನನ್ನು ನೋಡಿ......

"ನಿಜವಾಗಿ ರಾಮು ತುಂಬ ಪುಣ್ಯ ಮಾಡಿದ್ದಾನಕ್ಕ. ಹುಡುಗಿ ಒಳ್ಳೆ ಶ್ರೀದೇವಿ ಇದ್ದಾಗೆ ಇದ್ದಾಳೆ" ಎಂದು ಹೊಗಳುತ್ತಿದ್ದರು.

ಆ ರಾತ್ರಿ ಬೆಳ್ಳಿ ಲೋಟದಲ್ಲಿ ಹಾಲು ಹಿಡಿದು ಇವರ ಕೋಣೆಗೆ ಬಂದೆ. ಇವರು ಹಾಲಿನ ಲೋಟ ತೆಗೆದು ಪಕ್ಕಕ್ಕೆ ಕುಕ್ಕಿ ಒರಟಾಗಿ ತೋಳು ಹಿಡಿದೆಳೆದು—

"ಏನಿದು ನಿನ್ನ ಅವತಾರಾ ?" ಎಂದಾಗ ನಾನು ಬೆದರಿದೆ. "ಅಮ್ಮಾನೆ ಅಲಂಕಾರ ಮಾಡಿದ್ದು" ಬಿಕ್ಕುತ್ತಾ ನುಡಿದೆ.

"ಅಮ್ಮ ಅಲಂಕಾರ ಮಾಡಿದರೆ ನೀನು ಬೀದಿ ನರ್ತಕಿ ಹಾಗೆ ಬಳುಕ್ತಾ ಎಲ್ಲರ ಮುಂದೆ ಓಡಾಡಿ ನಿನ್ನ ರೂಪ ಪ್ರದರ್ಶಿಸಬೇಕೇನು ? ಎರಡು ತೋಳು ಬಿಟ್ಕೊಂಡು ಇದೇನು ಅವತಾರಾ. ಇನ್ಮೇಲೆ ಎರಡು ತೋಳು ಮುಚ್ಕೋ ಹಾಗೆ ಸೆರಗು ಹೊದೀದೇ ಇದ್ರೆ ಹಂಡೆಯೊಲೆ ಸೌದೆ ತಗೊಂಡು ತೋಳಿನ ಮೇಲೆ ಬರೆ ಹಾಕ್ತೀನಿ. ಬೆಳಗ್ಗೆ ಎದ್ದು ಹಂಡೆಯೊಲೆ ಉರಿ ಹಾಕೋದು ನಾನೇ__ಗೊತ್ತಿಲ್ಲ ನಿಂಗೆ ?" ಎಂದರು. ಹಂಡೆ ಒಲೆಯಲ್ಲಿ ಉರಿಯುವ ಭೂತಾಕಾರದ ಸೌದೆ ಕೊರಡುಗಳು ನೆನಪಿಗೆ ಬಂದಾಗ ನಾನು ಭೀತಿಯಿಂದ ತಲೆ ಅಲುಗಿಸಿದೆ. ಹಬ್ಬಾ ಹಾಡಿ ಬಂದಾಗ ಅತ್ತೆ ಮುಚ್ಚಟೆಯಾಗಿ ಅಲಂಕರಿಸುತ್ತಿದ್ದರು. ಆದರೆ ಇವರ ಭಯಕ್ಕೆ ನಾನು ಕೊರಳಹಾರ, ಮುಡಿದ ಹೂವು ತೋಳುಗಳ ಕೆಳಗಿಂದ ಕಾಣದಂತೆ ಸೆರಗು ಹೊದಿಯು

ತ್ತಿದ್ದೆ. ಎರಡು ಗಂಡುಮಕ್ಕಳ ತಾಯಿಯಾದ ನನಗೆ ಆಗಿನ್ನೂ ಇಪ್ಪತ್ತು ವರ್ಷ. ಐದು ವರ್ಷದ ಒಂದು ಮೊಮ್ಮಗು, ಮೂರು ವರ್ಷದ ಒಂದು ಮೊಮ್ಮಗು ಎರಡನ್ನೂ ಬಿಟ್ಟು ಅತ್ತೆಯವರು ಸ್ವರ್ಗಸ್ಥರಾದರು. ಈಗಂತು ಮನೆ ಯಜಮಾನಿ ನಾನೆ.

ನಾನು ಮನೆ ಯಜಮಾನಿ ಎನ್ನುವುದಕ್ಕಿಂತ ಮನೆ ಯಜಮಾನನ ಅಧೀನದಲ್ಲಿದ್ದ ಒಂದು ನಾಯಿ. ಅತ್ತೆಯವರಿದ್ದಾಗ ತಾಯಿಯಂತೆ ಅನುಕಂಪ ತೋರುತ್ತಿದ್ದರು. ಮನೆಯ ಸೊಸೆ, ಮನೆಯ ಲಕ್ಷ್ಮಿ ಇದ್ದಂತೆ. ಜಡೆ ಹಾಕು, ಹೂ ಮುಡಿ, ಬಣ್ಣವಾಗಿ ಸೀರೆ ಉಡು ಎಂದು ಬಲವಂತವಾಗಿ ಅಲಂಕಾರ ಮಾಡಿಸುತ್ತಿದ್ದರು.

ಈಗ ಗಂಡನದೇ ಅಧಿಕಾರ. ಜಡೆ ಹಾಕಿಕೊಳ್ಳಲು ಕೂದಲು ಬಿಚ್ಚಿದರೆ "ಎರಡು ಮಕ್ಕಳ ತಾಯಿ ಆಗಿದ್ದಿ, ಇನ್ನೂ ಎಂಥಾ ಅಲಂಕಾರದ ಹುಚ್ಚು ನಿನಗೆ ?" ಎಂದು ಬೈಯುವರು.

ಕಡೆ ಕಡೆಗೆ ಗಂಡನ ಎದುರು ಜಡೆ ಹಾಕಿಕೊಳ್ಳಲೂ ಸಹ ಅಂಜುತ್ತಿದ್ದೆ. "ಇನ್ಮೇಲೆ ಹದಿನೆಂಟು ಮೊಳದ ಸೀರೆ ಉಡೆ, ಸ್ವಲ್ಪ ಮಡಿ ಹುಡಿ ಅಭ್ಯಾಸ ಮಾಡ್ಕೊ. ದಿನ ದೇವರ ಪೂಜೆ ಮಾಡಿ ದೇವರ ನೈವೇದ್ಯ ಮಾಡೋದು ಅಭ್ಯಾಸ ಮಾಡ್ಕೋತಿದ್ದೀನಿ" ಎಂದರು. ಅವರು ದೇವರ ಪೂಜೆ, ನೈವೇದ್ಯ ತಿಂಗಳಲ್ಲಿ ಎರಡು ದಿನ ಮಾಡುತ್ತಿದ್ದರೇನೊ.....? ಆದರೆ ನಾನು ಮಾತ್ರ ದಿನ ಹದಿನೆಂಟು ಮೊಳದ ಸೀರೆ ಉಡುವುದು ಪರಿಪಾಠವಾಯಿತು. ಉದ್ದನೆಯ ಇಳಿ ಬಿದ್ದ ಜಡೆ ಅವರಿಗೆ ಅಸಹನೀಯವಾಗಿತ್ತು. ಈ ಮಧ್ಯೆ ನಮ್ಮ ತಾಯಿ ತಂದೆಯಿಂದ ದೂರವಾಗಿ ಊರೂರು ಹರಕೆಗೆ ಸುತ್ತಲು ಪ್ರಾರಂಭಿಸಿದರು. ಈಗಂತು ನನ್ನ ಮೇಲಿನ ಕಿರುಕುಳಾ ಇನ್ನು ಜಾಸ್ತಿ ಆಯಿತು.

"ನಿಮ್ಮಮ್ಮನ ಹಾಗೆ ನೀನೂ ಎಂದಿದ್ದರೂ ಗಂಡನ್ನ ಬಿಟ್ಟು ಓಡಿ ಹೋಗ್ತೀಳೇ. ನಿನ್ನ ಚಾಳಿ ನೋಡಿದರೆ ಗೊತ್ತಾಗತ್ತೆ. ಗಂಡನ ಜೊತೆ ಬಾಳೋಕಲ್ಲ ನೀನು." ಮಾತಿಗೊಮ್ಮೆ ಇದೇ ಶೈಲಿಯ ಬೈಗಳು. ತವರು ಮನೆಗೆ ಹೋಗುವ ಅವಕಾಶವೂ ನಿಂತುಹೋಯಿತು.

ತವರು ಮನೆಯಲ್ಲಿ ಆಗಿನ ಕಾಲಕ್ಕೆ ಏಳನೆಯ ಕ್ಲಾಸ್ ಓದಿದ್ದೆ.

ದ್ದಂಡಾದ ಅಕ್ಷರಗಳಲ್ಲಿ ಪುರಂದರದಾಸರ ದೇವರ ನಾಮಗಳನ್ನು ಬರೆದಿಟ್ಟು ಕೊಳ್ಳುತ್ತಿದ್ದೆ.

ಆದರೂ ಈ ಮಹಾರಾಯರಿಗೆ ಸಹನೆ ಆಗುತ್ತಿರಲಿಲ್ಲ. ಒಂದು ದಿನ ಭಾನುವಾರ, ಇವರು ಗಡದ್ದಾಗಿ ಊಟ ಮಾಡಿ ಮಲಗಿಕೊಂಡಿದ್ದರು. ನಾನು ಎಲ್ಲಾ ಕೆಲಸ ಮುಗಿಸಿದ್ದರಿಂದ ಬರೆಯುತ್ತಾ ಕುಳಿತೆ.

ತೊಟ್ಟಿಲಿನಲ್ಲಿ ಮಗು ಅಳುತ್ತಿತ್ತು. ಮೂರನೆಯ ನುಡಿ ಬರೆಯುತ್ತಿದ್ದೆ. ಈ ನುಡಿ ಮುಗಿಸಿ ಹೋಗೋಣವೆಂದು ಕುಳಿತಿದ್ದಂತೆಯೇ ಅವರು ರೌದ್ರಾಕಾರವಾಗಿ ಎದ್ದರು.

ಕೈಲಿದ್ದ ಪೆನ್ನು ಕಿತ್ತು ನೂರು ದೂರ ಎಸೆದು ಪುಸ್ತಕ ಚೂರು ಚೂರಾಗಿ ಹರಿದು ಹಾಕಿದರು. "ಶಾನುಭೋಗನ ಮಗಳೇ ಏನು ಬರವಣಿಗೆ ನಿಂದು? ಎಷ್ಟು ಊರು ಹಾಳು ಮಾಡೋ ಬರವಣಿಗೆ, ಮಗು ಅಳ್ತಾ ಇರೋದು ಕಿವಿ ಕೇಳಿಸಲ್ವಾ ನಿಂಗೆ? ಮಹಾ ವಿದ್ಯಾವತಿ? ನೀನು ಬರೆದು ಓದಿ ಯಾರನ್ನು ಉದ್ಧಾರ ಮಾಡ್ತಿ?" ತಾನು ಓಡಿ ಹೋಗಿ ಮಗುವನ್ನು ತಂದು ಮಡಿಲಲ್ಲಿ ಹಾಕಿ ಹಾಲೂಡಿಸಿಕೊಂಡು ಮಲಗಿದಳು. ಗಂಡನ ರೇಗಾಟ ಮುಂದುವರೆಯಿತು.

"ಇನ್ನೇಲೆ ಪೆನ್ನು, ಪುಸ್ತಕ ಹಿಡಿದದ್ದು ನೋಡಬೇಕು. ಇವತ್ತು ಪುಸ್ತಕ ಹರಿದುಹಾಕಿದ್ದೇನೆ. ಇನ್ನೊಂದು ಸಲ ಬೆರಳು ಕತ್ತರಿಸಿ ಹಾಕ್ತೇನೆ" ಎಂದು ಶಾಸನ ವಿಧಿಸಿದರು. ಮುಂದೆಂದು ನಾನು ಪುಸ್ತಕ, ಪೆನ್ನು ಹಿಡಿಯಲಿಲ್ಲ. ಆದರೂ ಅವರ ಪ್ರೀತಿ, ವಿಶ್ವಾಸ, ಪ್ರೇಮ ನಾನು ಗಳಿಸಲು ಸಾಧ್ಯವಾಗಲೇ ಇಲ್ಲ. ಏನಾದರೂ ನೆಪ ಮಾಡಿ ಸಿಡುಕುತ್ತಿದ್ದರು. ನಾನು ತುಟಿ ಕಚ್ಚಿ ಸಹಿಸಿದರೂ ನಿರ್ಲಿಪ್ತಳಾಗಿದ್ದರೂ ಅವರಿಗೆ ಸಮಾಧಾನವಿರಲಿಲ್ಲ ಸಿಕ್ಕಾಪಟ್ಟೆ ಅತ್ತುಬಿಡುತ್ತಿದ್ದೆ.

ಆಗ ಅವರಿಗೆ ಏನೋ ಒಂದು ಥರಹಾ ತೃಪ್ತಿ ಆಗುತ್ತಿತ್ತು. ರೂಪ ದಲ್ಲಂತೂ ಲೋಕದ ಕಣ್ಣಿಗೆ ನಾನು ರೂಪವತಿಯಾಗಿ ಕಾಣಲಾಗುತ್ತಿರಲಿಲ್ಲ. ಹದಿನೆಂಟು ಮೊಳದ ಸೀರೆ ಕಚ್ಚೆ ಹಾಕಿ ಉಟ್ಟು ದೊಗಲೆ ಕುಪ್ಪುಸಾ ಕಾಣ ದಂತೆ ಮೈ ತುಂಬಾ ಸೆರಗುಹೊದ್ದು. ವಿಭೂತಿ ಹಚ್ಚಿ, ದೊಡ್ಡ ಕುಂಕುಮ ಇಡುತ್ತಿದ್ದ ನಾನು... ಯೌವನದ ಸೌಂದರ್ಯ ಹೊರ ಹೊಮ್ಮಿಸಿ ಯುವತಿ

ಎಂದು ಕರೆಸಿಕೊಳ್ಳಲು ಸಾಧ್ಯವಾಗಲೆ ಇಲ್ಲ. ಆದರೆ ರುಚಿಕಟ್ಟಾದ ಅಡಿಗೆ ಯನ್ನು ತಯಾರಿಸುತ್ತಿದ್ದ ನನ್ನನ್ನು ಮನೆಗೆ ಬಂದ ಅತಿಥಿಗಳು ಹೊಗಳು ತ್ತಿದ್ದರು.

ಅದೂ ನನ್ನ ಪತಿಗೆ ಸಹನೆ ಆಗುತ್ತಿರಲಿಲ್ಲ. ಯಾರಾದರೂ ನನ್ನನ್ನು ಹೊಗಳಿದ ದಿನಗಳಲ್ಲಿ ಪತಿಯ ಬೈಗುಳಾ......ಸಿಡುಕು ಕಾರಣವಿಲ್ಲದ ರೇಗಾಟಾ ಸಹಿಸಬೇಕಾಗಿತ್ತು.

ಮಾತಿಗೊಮ್ಮೆ ಜಗಳ ಬಂದಾಗ ಆತ ಅನ್ನುತ್ತಿದ್ದ ಒಂದು ಮಾತು ನನ್ನನ್ನು ಬಹಳ ನೋಯಿಸುತ್ತಿತ್ತು.

"ಮೂರು ಬಿಟ್ಟೋಳು ನೀನು, ನಿನಗೆ ಗಂಡ ಆಗಲಿ, ಮಕ್ಕಳಾಗಲಿ, ಸಂಸಾರವಾಗಲಿ ಬೇಕಾಗಿಲ್ಲ. ಥಕಥೈ ಅಂತ ಕುಣಿದು ಓಡಿ ಹೋಗಲು ತಯಾರಾದೋಳು ನೀನು."

ಈ ಬೈಗಳನ್ನು ಅವರಿಂದ ಬೈಸಿಕೊಂಡಾಗ ಕುಗ್ಗಿಹೋಗುತ್ತಾ ಇದ್ದೆ. ಅದು ನನ್ನ ಪಾಲಿನ ಅಪಮಾನಕಾರಿ ಬೈಗಳು. ಅದನ್ನು ನೆನೆಸಿಕೊಂಡಾಗೆಲ್ಲ ನನಗೆ ಎದೆಯಲ್ಲಿ ಮುಳ್ಳು ಚುಚ್ಚಿದ ಹಾಗಾಗುತ್ತಿತ್ತು.

ನನ್ನ ಮೊದಲನೆ ಮಗ ಬೆಣ್ಣೆ ಕೃಷ್ಣನಂತೆ ಇದ್ದ. ಅವರಿಟ್ಟ ಹೆಸರು ಬಿಟ್ಟು ಕೃಷ್ಣ ಎಂದೇ ಕೂಗುತ್ತಿದ್ದೆ ಅವನಿಗೆ. ಅವನಿಗೆ ಚಿಕ್ಕಂದಿನಿಂದ ನನ್ನನ್ನು ಕಂಡರೆ ಪಂಚಪ್ರಾಣ.

ತಾಯಿ ಮಗನ ಆತ್ಮೀಯತೆ ಅವರಿಗೆ ಸಹಿಸದ ವಿಚಾರವಾಗಿತ್ತು.

ಆ ಎಳೆ ಹುಡುಗ ಅಮ್ಮಾ......ಎಂದು ಅಪ್ಪಿಕೊಂಡಾಗ ನಾನು ಎಲ್ಲಾ ನೋವನ್ನು ಮರೆಯುತ್ತಿದ್ದೆ. ನನಗೆ ಅವನು ಪ್ರೀತಿಪಾತ್ರ ಎಂಬ ಕಾರಣಕ್ಕೊ ಏನೋ ಏನಾದರೂ ತಪ್ಪು ಹುಡುಕಿ ಅವನ ಮೇಲೆ ರೇಗಾಡುವುದು, ಅವನಿಗೆ ಹೊಡೆದು, ಬಡಿದು ಮಾಡುತ್ತಿದ್ದರು.

ಕಡೆಗೆ ಇವರ ದೌರ್ಜನ್ಯ ಸಹಿಸಲಾರದೆ ಹದಿನಾರು ವರ್ಷದ ನನ್ನ ಕಂದ ಮನೆ ಬಿಟ್ಟು ಹೊರಟ.

ಆ ದಿನಗಳಲ್ಲಿ ನನ್ನ ದುಃಖ ವರ್ಣನಾತೀತ, ಮುಂದೆ ನನ್ನ ಮಗನನ್ನು ಮನಸಾರ ಸ್ಮರಿಸಿ, ಅಳುವ ಸ್ವಾತಂತ್ರವೂ ನನಗಿರಲಿಲ್ಲ. ಅವನನ್ನು ಸಂಪೂರ್ಣ ಮರೆತುಬಿಡಬೇಕು. ಇಡೀ ಮನೆಯಲ್ಲಿ ಅವನ ಹೆಸರು ಸಹ

ಎತ್ತಬಾರದೆಂದು ಶಾಸನ ಮಾಡಿದರು. ಆದರೆ ನನ್ನ ಹೃದಯದಲ್ಲಿ ಒಂದು ದೊಡ್ಡ ಅಗ್ನಿಜ್ವಾಲೆ ಕುದಿಯುತ್ತಾ ಇತ್ತು. ಅದನ್ನು ಮರೆಸಿ ನಗೆ ಮುಖವಾಡ ಹಾಕಿಕೊಂಡು ಸಂಸಾರ ಮಾಡಿದೆ. ಕುಮುದಳ ಮದುವೆ ಆಯಿತು. ಅನಂತನ ಮದುವೆ ಆಯಿತು. ಮಗನಿಗೆ ಹೆಣ್ಣು ಗೊತ್ತು ಮಾಡಿದ್ದು ಅವರೆ. ಮಗಳಿಗೆ ಗಂಡು ಹುಡುಕಿದ್ದು ಅವರೆ. ನನ್ನ ಅಭಿಪ್ರಾಯ ಆಸೆ, ಆಕಾಂಕ್ಷೆ ಕೇಳುತ್ತಲೇ ಇರಲಿಲ್ಲ.

ದುಃಖ ಎನ್ನುವುದೇ ನನಗಿರಲಿಲ್ಲ. ಎಲ್ಲಕ್ಕೂ ನಿರ್ಲಿಪ್ತಳಾಗಿರಲು ಅಭ್ಯಾಸ ಮಾಡಿಕೊಂಡಿದ್ದೆ. ಕೃಷ್ಣ ನನ್ನನ್ನು ಪ್ರೀತಿಸಿದಂತೆ ತಂದೆಗೆ ಹೆದರದೆ ನನ್ನ ಮೇಲೆ ಅತಿ ಪ್ರೀತಿ ತೋರಿಸುತ್ತಿದ್ದ ಇನ್ನೊಂದು ಜೀವ ನನ್ನ ಕೊನೆಯ ಮಗಳು ವಿಜಯ.

ಆದರೆ ವಿಜಯಳನ್ನು ಅವರು ತುಂಬ ಪ್ರೀತಿಸುತ್ತಿದ್ದರು. ತಂದೆಯ ಪ್ರೀತಿಗೆ ಸ್ಪಂದಿಸಿ ತಂದೆಯೊಡನೆ ಆತ್ಮೀಯವಾಗಿ ಇರುತ್ತಿದ್ದ ವಿಜಯ ನನಗಾಗಿ ತುಂಬ ಅನುಕಂಪ ತೋರುತ್ತಿದ್ದಳು. ತಂದೆಯೊಡನೆ ನನಗಾಗಿ ವಾದಿಸುತ್ತಿದ್ದಳು. "ಎಷ್ಟು ದಬ್ಬಾಳಿಕೆಯ ಸ್ವಭಾವ ಅಪ್ಪಾಜಿ ನಿಮ್ಮದು, ಹೆಂಡತಿ ಅಂದ್ರೆ ಗುಲಾಮಳೂಂತ ತಿಳಿದಿದ್ದೀರಾ ?" ಎಂದು ದಬಾಯಿಸುತ್ತಿದ್ದಳು. ಅವಳಿಂದ ನನ್ನ ಬದುಕಿನಲ್ಲಿ ಕೆಲವು ಸುಧಾರಣೆಗಳಾದದ್ದು ನಿಜ. ಆದರೂ ಇವರ ಸ್ವಭಾವದಲ್ಲಿ ಹೆಚ್ಚಿನ ಬದಲಾವಣೆ ಆಗಿರಲಿಲ್ಲ.

ಬೆಳಗಿನಿಂದ ಸಂಜೆಯವರೆಗೆ ಕಾಲೇಜಿನ ಓದು, ವಿದ್ಯಾಭ್ಯಾಸಗಳಲ್ಲಿರುತ್ತಿದ್ದ ವಿಜಯ, ರಿಟೈರಾಗಿ ಯಾವಾಗಲೂ ಮನೆಯಲ್ಲಿ ಕೂತ ತಂದೆಯನ್ನು ತಿದ್ದಲೂ ಸಾಧ್ಯವಿರಲಿಲ್ಲ.

ವಿಜಯಳು ಮದುವೆ ಆಗಿ ಹೊರಟುಹೋದಳು. ಕುಮುದ ಎರಡು ಮಕ್ಕಳ ತಾಯಿ ಆಗಿದ್ದಳು. ನಾನು ಅಜ್ಜಿಯ ಪಟ್ಟವನ್ನು ಹೊಂದಿದ್ದೆ. ಅನಂತನಿಗೆ ಮದುವೆ ಆಗಿ ಸೊಸೆ ವಸಂತಳು ಬಂದಿದ್ದಳು. ಆದರೂ ನನ್ನ ಬದುಕಿನಲ್ಲಿ ಏನು ವ್ಯತ್ಯಾಸವಿರಲಿಲ್ಲ.

ಸೊಸೆಯ ಎದುರಿಗೆ ಶಿಕ್ಷ್ಯಾಷಟ್ಟಿ ಬೈಯುತ್ತಾ ಇದ್ದರು. ಹೀಗಾಗಿ ಸೊಸೆಯ ದೃಷ್ಟಿಯಲ್ಲಿ ನನಗೆ ಏನು ಬೆಲೆ ಇರಲಿಲ್ಲ. ಅನಂತನಿಗೆ ತಂದೆಯನ್ನ ಪ್ರತಿಭಟಿಸುವ ಧೈರ್ಯವಿರಲಿಲ್ಲ.

"ಏಕೆ ಸುಮ್ಮನೆ ಅಪ್ಪನ್ನ ರೇಗಿಸ್ತಿ ಅಮ್ಮ?" ಎಂದು ತಂದೆಯು ಪರವಾ ಮಾತಾಡುತ್ತಿದ್ದ.

ಮೊದಲ ಸಲ ವಿಜಯ ಗಂಡನೊಡನೆ ಬಂದು ಎಂಟು ದಿನ ಇದ್ದು ಹೋದಳು. ಮಗಳು ಅಳಿಯ ಇವರ ಸುಂದರವಾದ ಅನುರೂಪ ಜೋಡಿ, ಪ್ರೇಮಪೂರ್ಣ ದಾಂಪತ್ಯ ನನ್ನಲ್ಲಿ ಹರ್ಷ ಉಕ್ಕಿಸಿತು. ಆದರಿಂದ ಎಂಟು ದಿನ ಉಪಚಾರ ಮಾಡಿದೆ. ಸುರೇಶ ಸ್ವಂತ ಮಗನಂತೆ ಆತ್ಮೀಯವಾಗಿ ಮಾತಾಡುತ್ತಿದ್ದರು.

ಅವರು ಊರಿಗೆ ಹೊರಟ ಮರುದಿನ ಏನೋ ಮಾತಾಡುತ್ತಾ ಕೂತಿದ್ದೆವು.

ಸೊಸೆ ವಸಂತ ನನ್ನ ಮಗ ಅನಂತನಿಗೆ "ನೋಡಿ ಸುರೇಶನ್ನ ಮದುವೆ ಮಾಡಿಕೊಳ್ಳಲ್ಲ ಅಂತ ನಿಮ್ಮ ತಂಗಿ ಸುಳ್ಳೇ......ಹಟಾ ಹಿಡಿದಿದ್ದಳು. ಈಗ ಎಷ್ಟು ಸುಖವಾಗಿ ಇದ್ದಾಳೆ. ನಿನ್ನೆ ನಾನು ಹಾಸ್ಯ ಮಾಡಿದೆ, ಗಂಡನ್ನ ಎಂಟುದಿನ ಬಿಟ್ಟು ಈಗ ತವರಲ್ಲಿ ಇರು ನೋಡೋಣಾಂದೆ, ನಾಚಿಕೊಂಡಳು" ಎಂದಾಗ ನಾನು ಸೊಸೆಯ ಮಾತಿಗೆ ಅನುಮೋದಿಸಿ,

"ಹೌದು ! ಸುರೇಶಾ ಬಂಗಾರದಂತಹ ಹುಡುಗಾ, ಅಂಥಾ ಒಳ್ಳೇ ಗಂಡಾ ಸಿಗಬೇಕಾದರೆ ವಿಜಯ ಎಷ್ಟು ಜನ್ಮದ ಪುಣ್ಯ ಮಾಡಿದ್ದಳೋ ? ನಿಜಕ್ಕೂ ರತ್ನದಂತಹ ಹುಡುಗಾ" ಎಂದೆ.

ಐವತ್ನಾಲಕ್ಕು ವರ್ಷದ ನಾನು, ಇಷ್ಟು ವರ್ಷದ ಮೇಲೆ ಕೊಂಚ ಸ್ವಾತಂತ್ರ್ಯ ವಹಿಸಿ ಗುಂಪಿನಲ್ಲಿ ಮಾತಾಡಿದ್ದೆ. ಆ ಗುಂಪಿನಲ್ಲಿ ಇದ್ದವರಾದರೂ ಯಾರು ? ಮಗ, ಸೊಸೆ ಹಾಗು ನನ್ನ ಪತಿ. ನಾನು ಸ್ವತಂತ್ರವಾಗಿ ಅಭಿಪ್ರಾಯ ಹೇಳಿದ್ದು ನನ್ನ ಪತಿಗೆ ಸಹನೆ ಆಗಲಿಲ್ಲವೇನೊ ?

"ಸುರೇಶ ಚಿನ್ನದಂತಹವನು. ಆದರೆ ನೀನು ಮಾತ್ರ ಇನ್ನು ಸುಧಾರಿಸಿಲ್ಲ, ಹಿತ್ತಾಳೆ ಹೆಂಗಸು" ಎಂದರು.

ನಾನು ಬೇಸರದಿಂದ—

"ಏನು ಹೀಗೆ ಮಾತಾಡ್ತೀರಿ ? ಮುದುಕಿ ಆದೆ ನಾನು. ಈಗಲು ಇದೇ ತರಹಾ ಮಾತುಗಳೇ ?" ಎಂದೆ.

"ಮುದುಕಿ ಆದರೇನು ? ಮೂರು ಬಿಟ್ಟೋಳು ನೀನು__ ನಿನಗೆ ಮಾನ ಮರ್ಯಾದೆ ಅಂದರೆ ಏನೂಂತ ಗೊತ್ತಿಲ್ಲ" ಎಂದು ಅಬ್ಬರಿಸಿದರು.

ತಂದೆ ಉಗ್ರಾವತಾರತಾಳುತ್ತಲೆ ಅನಂತ ತನ್ನ ಪತ್ನಿಯೊಡನೆ ಕೋಣೆಗೆ ಜಾರಿಕೊಂಡ.

ಅಪಮಾನದಿಂದ ನಡುಗುತ್ತಾ ಕಂಬನಿ ಸುರಿಸುತ್ತಾ ನಾನು ಕೇಳಿದೆ" "ಏನು ನೀವು ಮಗಸೊಸೆ ಎದುರು ಕಾರಣವಿಲ್ಲದೇ ಇಂಥಾ ಹೊಲಸುಬೈಗಳು ಬೈತೀರಿ, ನಾನು ಮೂರು ಬಿಟ್ಟು ತಿರುಗಾಡಿದ್ರೆ, ನೀವು ಇಷ್ಟು ಗೌರವಸ್ಥ ಕುಟುಂಬದವರೂಂತ ಅನ್ನಿಸಿಕೊಳ್ತಿದ್ರಾ ? ಮಕ್ಕಳಿಗೆ ಒಳ್ಳೊಳ್ಳೆ ಸಂಬಂಧಗಳು ಸಿಗ್ತಾ ಇದ್ದವಾ ? ಬೀಗರ ಎದುರಿಗೆ ಹೆಚ್ಚುಗಾರಿಕೆ ನಿಮಗಿರೋದ್ಯಾಕೆ ? ಎಲ್ಲಾ ನಾನು ಒಳ್ಳೆ ಗೃಹಿಣಿಯಾಗಿ ಬಾಳ್ತಾ ಇರೋದಿಕ್ಕೆ, ಮೂರು ಬಿಟ್ಟು ಇರೋ ಅಂಥಾ ಹೆಂಗಸರು, ಎಂಥವರು ಗೊತ್ತಾ ? ಐವತ್ತಾಲಕ್ಕು ವರ್ಷದ ನನಗೆ, ಮೊಮ್ಮಕ್ಕಳನ್ನು ಕಂಡಿರೋ ನನಗೆ ಅಂಥಾ ಹೊಲಸು ಮಾತು ಇನ್ಮೇಲೆ ಆಡಬೇಡಿ" ಎಂದೆ. ಅವರು ಅಬ್ಬರಿಸುತ್ತ "ನನಗೆ ಇಷ್ಟು ಎದುರು ವಾದಿಸೊ ನೀನು ಅಳಿಯನೆದುರಿಗೆ ಸೆರಗು ಹೇಗೆ ಹೊದ್ಕೋತಿದ್ದೆ. ನಿನಗೆ ಮಾನಮರ್ಯಾದೆ ಬಗ್ಗೆ ಕಿಂಚಿತ್ ಲಕ್ಷ್ಯವಿಲ್ಲ. ನಾನು ಚಿಕ್ಕಂದಿಂದ ಹೊಡೆದು ಬಡಿದು ಹದ್ದಿನಲ್ಲಿಡೋ ಹೊತ್ತಿಗೆ ಇದು ಒಂದು ಸಂಸಾರವಾಗಿ ನನ್ನ ಮಕ್ಕಳು ಒಳ್ಳೆ ಮದುವೆ ಸಂಸಾರ ಸಂಬಂಧಗಳನ್ನ ಹೊಂದಿದರು. ನಿನ್ನ ನಂಬಿದ್ದರೆ ಈ ಸಂಸಾರ ಮೂರಾಬಟ್ಟೆ ಆಗ್ತಿತ್ತು. ಮರ್ಯಾದೆಗೆಟ್ಟ ಹೆಂಗಸು ನೀನು" ಎಂದರು.

ಮೊಟ್ಟ ಮೊದಲಬಾರಿ ರೋಷ ಉಕ್ಕಿತು. "ನಲವತ್ತು ವರ್ಷ ನಿಮ್ಮ ಜೊತೆ ಸಂಸಾರ ಮಾಡಿದ್ದೀನಿ. ಏನು ಮರ್ಯಾದೆಗೆಟ್ಟ ಕೆಲಸ ಮಾಡಿದ್ದೀನಿ ಹೇಳಿ ? ನಿಮ್ಮ ಹೊಲಸು ನಾಲಿಗೇಲಿ ಹೊಲಸು ಬೈಗಳು ಬರತ್ತೆ. ಪರಮ ಪತಿವ್ರತೆ ನಾನು. ಮುಂಗೈ ಕಾಣದ್ಹಂಗೆ ಸೆರಗು ಹೊದ್ದಿರ್ತೀನಿ, ಅಳಿಯ ನೆದುರಿಗೆ ಹೇಗೆ ಸೆರಗು ಹೊದ್ದಿದ್ದೆ ಅಂತೀರಿ, ಈ ಮುದಿ ವಯಸ್ಸಿನಲ್ಲಿ, ಅನಂತನಿಗಿಂತ ಚಿಕ್ಕ ಹುಡುಗಾ ಆದ ಈ ಅಳಿಯನಲ್ಲಿ ನನಗೇನು ಚೆಲ್ಲಾಟ ಇರುತ್ತೆ ?" ಎಂದೆ.

"ನಿನಗೆ ಚಿಕ್ಕೋರು ದೊಡ್ಡೋರು ಅಂತೇನು ಇಲ್ಲ. ಗಂಡಸರಾದ

ರ್ತಾಯಿತು. ಹೊಸದಾಗಿ ಮದುವೆ ಆದಾಗ ನಮ್ಮ ಮಾವನ ಜೊತೆ ಹಲ್ಲು ಕಿರೀತಾ ಇದ್ದೆ. ಈಗ-ಅಳಿಯನ ಕೂಡ, ಒಟ್ಟಿನಲ್ಲಿ ಹಲ್ಲು ಕಿರಿಯೋ ಸ್ವಭಾವೇ ಎಂದರು,

ನನಗೆ ಮೈ ಉರಿಯಿತು. "ಥೂ......ನಿಮ್ಮ ಮನಸ್ಸು ಬಹಳ ಹೊಲಸು. ಅನಾಥರಾಗಿದ್ದ ನಿಮಗೆ, ನಿಮ್ಮ ತಾಯಿಗೆ ಆಶ್ರಯ ಕೊಟ್ಟೋರು ನಿಮ್ಮ ಸೋದರ ಮಾವ ನಿಮಗೆ ಓದಿಸಿ, ಬರೆಸಿ ವಿದ್ಯಾವಂತರನ್ನ ಮಾಡಿದ್ದು ಅವರು. ಹೆಣ್ಣು ಹುಡುಕಿ ಮದುವೆ ಮಾಡಿದ್ದು ಅವರು. ನಾನು ಈ ಮನೆಗೆ ಬಂದಾಗ ಅವರಿಗೆ ನಲವತ್ತು ವರ್ಷ. ಅಕ್ಕನ ಮಗ ಅಂತ ನಿಮ್ಮ ಮೇಲೆ ಎಷ್ಟು ಪ್ರೀತಿ ಇಟ್ರೋ......? ತಮ್ಮ ಅಕ್ಕನ ಸೊಸೆ ಅಂತ ನನ್ನ ಮೇಲು ಮಗಳ ಸಮಾನ ಪ್ರೀತಿ ಇತ್ತು. ಎಲ್ಲಕ್ಕೂ ಹೊಲಸು ಮಾತಾಡೊ ನಿಮ್ಮದು ಹೊಲಸು ನಾಲಿಗೆ ಥೂ" ಎಂದೆ.

"ಹೊಲಸು ರಂಡೆ......ನನಗೆ ಎದುರು ವಾದಿಸ್ತೀಯ" ಎಂದು ಎದ್ದು ಬಂದವರೆ ಕೂದಲು ಹಿಡಿದು ರಪರಪಾ ಹೊಡೆದರು. ಹೊಡೆಸಿಕೊಂಡ ನನಗೆ ಬಹಳ ದುಃಖವಾಯಿತು. ಮುದುಕಿಯಾದರೂ ಇವರ ಬವಣೆ ತಪ್ಪಲಿಲ್ಲ. ಸಂಶಯ, ಅಸೂಯೆ, ನನ್ನ ಮುಖದಲ್ಲಿ ನಗೆ ಕಂಡರೆ ಹೊಟ್ಟೆ ಉರಿ, ನಾನು ಸ್ವತಂತ್ರವಾಗಿ ಅಭಿಪ್ರಾಯ ವ್ಯಕ್ತಪಡಿಸಿ ಮಾತಾಡಿದ್ದಕ್ಕೆ ಹೊಟ್ಟೆ ಉರಿ.

ನನಗೆ ಹೊಡೆದ ನಂತರ ಮನಃತೃಪ್ತಿಯಾಗಿ ಅವರು ಎಲ್ಲೋ ಹೊರಟು ಹೋದರು. ನನಗೆ ಎಂದಿನಂತೆ ಮನೆಯಲ್ಲಿರಲು ಸಾಧ್ಯವಾಗಲಿಲ್ಲ. ಜಯ ನಗರದಲ್ಲಿದ್ದ ಸುಭದ್ರಮ್ಮ ಎಂಬ ಗೆಳತಿಯ ಮನೆಗೆ ಹೋದೆ. ವಿಜಯಳ ಮದುವೆಯ ಸಮಯದಲ್ಲಿ ಅಕಸ್ಮಾತ್ ಪರಿಚಯವಾದರು ಆಕೆ. ಆಕೆ ಕಷ್ಟ ಜೀವಿ. ಒಂಟಿ ಜೀವಿ. ಮದುವೆ ಮನೆ ಹಪ್ಪಳಾ, ಸಂಡಿಗೆ, ಚಟ್ನಿಪುಡಿ, ಮೆಂತ್ಯಾ ಹಿಟ್ಟು ಮಾಡಲು ಯಾರಾದರೂ ಬೇಕು ಎಂದು ನನ್ನ ಬೀಗಿತ್ತಿ ವಸಂತಳ ತಾಯಿಗೆ ಹೇಳಿದ್ದೆ.

ಅವರು ತಂದು ಪರಿಚಯ ಮಾಡಿಸಿದಾಕೆ, ಅವರ ಮನೆಗೆ ಈ ದಿನ ಹೊರಟಿದ್ದೆ. ದಾರಿಯಲ್ಲಿ ಕಾರೊಂದು ನನ್ನ ಪಕ್ಕ ನಿಂತಿತು. ನಾನು

ಕೊಂಚ ದಿಗ್ಭ್ರಾಂತಳಾಗಿ ನಿಂತೆ. ರಸ್ತೆ ದಾಟುವುದರಲ್ಲಿ ನಾನು ಏನಾದರೂ ತಪ್ಪಿದ್ದೇನಾ ಎನ್ನಿಸಿತು.

ಕಾರಿನಿಂದ ಇಳಿದ ತರುಣ ನನ್ನ ಮುಂದೆ ಬಂದ. ಬೆಲೆ ಬಾಳುವ ಕಪ್ಪು ಉಲ್ಲನ್ ಸೂಟ್‌ನಲ್ಲಿದ್ದ ಆ ತರುಣ ಕಪ್ಪು ಕನ್ನಡಕ ಧರಿಸಿದ್ದ.

"ಅಮ್ಮಾ......" ಎಂದ. ನಾನು ಕೊಂಚ ಬೆದರಿದೆ.

"ಯಾರಪ್ಪಾ ನೀವು ?" ಎಂದೆ. ಅವನ ಕೈ ಬೆರಳುಗಳಲ್ಲಿ ಬೆಲೆ ಬಾಳುವ ಚಿನ್ನದ ಹರಳಿನ ಉಂಗುರಗಳಿದ್ದವು. ಚಿನ್ನದ ಸರಪಣಿಯ ಕೈ ಗಡಿಯಾರ, ಅಂಗಿಯ ಗುಂಡಿಗಳು ಚಿನ್ನದ್ದೆ.

ಆತ ಕನ್ನಡಕ ತೆಗೆದ. "ಅಮ್ಮ, ನಾನು ನಿಮ್ಮ ಮಗಾ ಕೃಷ್ಣಾ. ನಿನ್ನ ಪ್ರೀತಿಯ ಚೊಚ್ಚಲ ಮಗ ನಾಗೇಂದ್ರ. ನನ್ನ ಗುರುತು ಸಿಗ ಲಿಲ್ಲವಾ ?" ಎಂದ.

ನೋವು, ಸಂಕಟ, ಹರ್ಷ ಎಲ್ಲಾ ಮಿಳಿತವಾಗಿ ನನ್ನ ಕಣ್ಣಲ್ಲಿ ನೀರು ಉಕ್ಕಿತು. ಮಂಜು ಮುಸುಕಿದಂತೆ ಆಗಿ ಎದುರಿಗಿದ್ದ ವ್ಯಕ್ತಿ ನನಗೆ ಕಾಣ ಲಿಲ್ಲ. ನನ್ನ ಮಗನ ಗುರುತು ನನಗೆ ಸಿಕ್ಕಿತು. ಕಣ್ಣು ಮಂಜಾದರೂ, ಕರುಳು ಹೊಯ್ದಾಡಿತು. ಹದಿನೆಂಟು ವರ್ಷದ ನಂತರ ಮಗನನ್ನು ಕಂಡ ನಾನು ಹುಚ್ಚಿಯಾಗಿದ್ದೆ. "ಕೃಷ್ಣಾ...... ನನ್ನ ಮುದ್ದು ಕೃಷ್ಣಾ......ನೀನು ಇದ್ದೀಯೇನಪ್ಪಾ ? ಇದು ನಿಜವಾ ? ನಿನಗಾಗಿ ದಿನಾ ದೇವರಿಗೆ ಮೊರೆ ಇಡ್ತಿದ್ದೆ. ಎಲ್ಲೇ ಇದ್ದರೂ ನನ್ನ ಕಂದ ಚೆನ್ನಾಗಿರಲಿ ಎಂದು ಬೇಡಿ ಕೊಳ್ತಿದ್ದೆ" ಎಂದೆ.

"ನಿನ್ನ ಪ್ರಾರ್ಥನೆ ದೇವರಿಗೆ ಮುಟ್ಟಿದೆ ಅಮ್ಮ. ಬಾ ಕಾರಿನಲ್ಲಿ ಕೂತ್ಕೊ" ಎಂದ. ನಾನು ಏನೂ ಅನುಮಾನಿಸದೇ ಅವನ ಕಾರಿನಲ್ಲಿ ಕೂತೆ.

ಕಾರು ಜಯನಗರದ ಹೊರವಲಯದ ಒಂದು ದೊಡ್ಡ ಬಂಗ್ಲೆ ಮುಂದೆ ನಿಂತಿತು. ಕೃಷ್ಣ ನನ್ನನ್ನು ಕರೆದೊಯ್ದು ಆ ಬಂಗ್ಲೆ ತೋರಿಸಿದ. ಚೆಲುವೆಯಾದ ತನ್ನ ಪತ್ನಿ ರಾಧಾಳನ್ನು ತೋರಿಸಿದ.

ಮದ್ರಾಸಿನ ಒಂದು ಖ್ಯಾತ ಬೋರ್ಡಿಂಗ್ ಶಾಲೆಯಲ್ಲಿ ಓದುತ್ತಿದ್ದ ಎರಡು ಗಂಡು ಮಕ್ಕಳ ಫೋಟೋ ತೋರಿಸಿದ.

ತಾನು ಊರು ಬಿಟ್ಟು ಹೋದಾಗಿನಿಂದ ಬದುಕನ್ನು ಹೇಗೆ ಎದುರಿಸಿದೆ, ಎಲ್ಲೆಲ್ಲಿ ಇದ್ದೆ, ಏನೇನು ಕೆಲಸ ಮಾಡಿದೆ ಎಂದು ಎಲ್ಲಾ ವಿವರಿಸಿದ.

ಹಿರಣ್ಯಕಶಿಪುವಿನಂಥಾ ತಂದೆಯಿಂದ ಪಾರಾದ ಅವನು ಬದುಕನ್ನು ದಿಟ್ಟತನದಿಂದ ಎದುರಿಸಿದ್ದ.

ಮದ್ರಾಸಿನ ಸುಪ್ರಸಿದ್ಧ ನಿರ್ಮಾಪಕರೊಬ್ಬರ ಆಶ್ರಯದಲ್ಲಿ ಹತ್ತು ವರ್ಷ ನಂಬಿಕಸ್ತನಾಗಿ ಕೆಲಸ ಮಾಡಿದ. ಅವನ ಪ್ರಾಮಾಣಿಕತೆ ಹಾಗು ಕಷ್ಟಸಹಿಷ್ಣುತೆ, ದುಡಿಮೆಯಲ್ಲಿನ ಶ್ರದ್ಧೆ, ಇವುಗಳನ್ನು ಗಮನಿಸಿ ಅವರು ಮಗಳನ್ನು ಕೊಟ್ಟು ಮದುವೆ ಮಾಡಿದರು. ಚಲನಚಿತ್ರರಂಗದ ಆಯಾ, ಅಳತೆ ಅರಿತಿದ್ದ ಅವನು ಮಾವನಿಂದ ಬಂಡವಾಳ ಸಾಲವಾಗಿ ಪಡೆದು ಒಂದು ಚಿತ್ರ ನಿರ್ಮಿಸಿದ. ಚಿತ್ರ ನೂರು ದಿನ ಓಡಿತು. ಹಾಕಿದ್ದ ಹಣ ಒಂದಕ್ಕೆ ಹತ್ತಾಗಿ ಬಂತು. ಮಾವನಿಂದ ಪಡೆದ ಹಣ ಅವರಿಗೆ ತೀರಿಸಿ ಸ್ವಂತ ಚಿತ್ರ ನಿರ್ಮಿಸಲಾರಂಭಿಸಿದ. ಅವನು ಮುಟ್ಟಿದ ಮಣ್ಣು ಚಿನ್ನವಾಗಲಾರಂಭಿಸಿತು. ಒಂದು ಹಂಚಿಕೆದಾರ ಕಛೇರಿ ಸಹ ತೆಗೆದ. ಚಿತ್ರಗಳನ್ನು ಕರ್ನಾಟಕ, ಹಾಗು ಹೈದರಾಬಾದ್ ಪ್ರದೇಶದಲ್ಲಿ ಹಂಚಿಕೆ ಮಾಡುತ್ತಿದ್ದ.

ಆ ಸಮಯದಲ್ಲಿ ಬೆಂಗಳೂರಿನ ಹಲವು ನಿರ್ಮಾಪಕರು ಅವನಿಗೆ ಪರಿಚಿತರಾದರು. ಅವನು ಕನ್ನಡಿಗನೆಂಬುದು ತಿಳಿದು ಕನ್ನಡ ಚಿತ್ರ ನಿರ್ಮಿಸಲು ಸಲಹೆ ಇತ್ತರು. ಮದ್ರಾಸಿನಲ್ಲಿ ಮಾವ ಹಾಗು ಇಬ್ಬರು ಭಾವ ಮೈದುನರಿಗೆ ಪೈಪೋಟಿಯಾಗಿರುವುದಕ್ಕಿಂತಲೂ ಬೆಂಗಳೂರನ್ನು ತನ್ನ ಕಾರ್ಯಕ್ಷೇತ್ರವಾಗಿ ಇರಿಸಿಕೊಂಡು, ಕನ್ನಡ ಚಿತ್ರ ನಿರ್ಮಿಸಿ, ಒಂದಷ್ಟು ಹಣ ಸಂಪಾದಿಸಿಕೊಂಡು ಇರಬೇಕೆಂದು ನಿಶ್ಚಯಿಸಿದ. ಬೆಂಗಳೂರು ಸೇರಿ ಎರಡು ವರ್ಷ ಆಗಿ, ಮೊದಲು ಅಶೋಕ ಹೋಟೆಲಿನಲ್ಲಿದ್ದ. ರಾಧಾ ತವರಿನಲ್ಲಿದ್ದಳು. ಮುಂದೆ ಕೆಲವು ಹಿತೈಷಿಗಳು, ಒಳ್ಳೆ ಬಂಗಲೆ ಆರಿಸಿಕೊಟ್ಟರು. ಅದನ್ನು ಸುಸಜ್ಜಿತಗೊಳಿಸಿ, ಹೆಂಡತಿಯನ್ನು ಕರೆಸಿಕೊಂಡ.

ತಾಯಿಯದೇ ನೆನಪು ಕಾಡುತ್ತಿತ್ತು. ಅದೇ ಮನೆಯಲ್ಲಿ ತಂದೆ, ತಾಯಿ, ತಮ್ಮ, ತಂಗಿ ಇರುವ ವಿಷಯ ತಿಳಿಯಿತು. ತಂಗಿ ವಿಜಯಳ ವಿವಾಹವಾದದ್ದು ತಿಳಿಯಿತು. ತಾಯಿಯನ್ನು ನೆನಸಿಕೊಂಡಾಗ ಮನೆಗೆ ಬರಬೇಕೆನಿಸುತ್ತಿತ್ತು. ತಂದೆಯನ್ನು ನೆನೆಸಿಕೊಂಡಾಗ ಮೈ ಉರಿಯುತ್ತಿತ್ತು.

ವಿಜಯ ನೋವಿನ ನಗೆ ಚೆಲ್ಲಿ—

"ಆ ಬಗ್ಗೆ ತೀರ್ಪು ಹೇಳಲು ನಾನಾರು ಅಮ್ಮ. ನಿನ್ನ ಮನಸ್ಸಿನ ನೋವು ನನಗೆ ಗೊತ್ತು. ನಲವತ್ತು ವರ್ಷಗಳಿಂದ ಮನಸ್ಸಿಗೆ ಅವಹೇಳನಕಾರಿಯಾಗುವಂತಹ ಹಲವು ಮಾತುಗಳನ್ನು ಕೇಳಿ ನೀನು ನೊಂದಿದ್ದಿ. ಭೂಮಿ ದೇವಿ ಕ್ಷಮಾಶೀಲೆ ನಿಜಾ.....ಸಹನಾಮಯಿ ನಿಜ, ಅಂಥಾ ಭೂತಾಯಿ ಸಹ ಒಮ್ಮೊಮ್ಮೆ ಸಿಡಿದು ಬಿರುಕು ಬಿಡುತ್ತಾಳೆ" ಎಂದಳು.

ಇಂದಿರಮ್ಮ ಸಮಾಧಾನದಿಂದ,

"ಅಷ್ಟು.....ನೀನು ನನ್ನ ಅರ್ಥ ಮಾಡಿಕೊಂಡರೆ ಸಾಕು. ಆದರೆ ನಾನು ತುಂಬ ನೊಂದಿದ್ದೆ ವಿಜಿ. ನಾನು ಒಬ್ಬ ಹುಂಬ ಹಳ್ಳಿ ಹುಡುಗಿ ಆಗಿದ್ರೆ, ಮನಸ್ಸಿಗೆ ಅಷ್ಟು ನೋವಾಗ್ತಾ ಇರಲಿಲ್ಲ. ಆದರೆ ನನ್ನ ರೂಪಾ, ಕಲಾ ಕುಶಲತೆ, ಓದು ಯಾವುದೂ ಅವರ ಮೆಚ್ಚಿಗೆಗೆ ಪಾತ್ರವಾಗಿರಲಿಲ್ಲ. ಅಷ್ಟೇ ಅಲ್ಲ, ನನ್ನಲ್ಲಿದ್ದ ಎಲ್ಲವನ್ನು ಹತ್ತಿಕ್ಕಿ, ಲೋಕದ ಕಣ್ಣಿಗೆ ಕುರೂಪಿಯಾಗಿ, ದಡ್ಡಳಾಗಿ ತೋರಿಸೋದ್ರಲ್ಲಿ ಅವರಿಗೆ ಆನಂದವಿತ್ತು. ಮೊದ ಮೊದಲು ಗೊತ್ತಿಲ್ಲದೇ ಯಾವುದಾದರೂ ವಿಷಯದಲ್ಲಿ ಭಾವಪೂರ್ಣವಾಗಿ ಮಾತಾಡಲೂ ಹೋಗುತ್ತಿದ್ದೆ. ವಿಷಯವನ್ನು ಆಕರ್ಷಕವಾಗಿ ವರ್ಣಿಸುವ ಕಲೆ ನನಗೆ ಸಿದ್ಧಿಸಿತ್ತು. ಆಗಿನ ಕಾಲಕ್ಕೆ ಚೆನ್ನಾಗಿ ಓದು ವಿದ್ಯೆ ಕಲಿತ ವಿದ್ಯಾವತಿಯರ ಲೆಕ್ಕದಲ್ಲೇ ಸೇರಿದ್ದೆ. ಆದರೆ ನಿಮ್ಮ ತಂದೆಗೆ ಹೊಟ್ಟೆಕಿಚ್ಚು. ಏನಾದರೂ ಭಾವಪೂರ್ಣವಾಗಿ ವಿವರಿಸಲು ಹೋದರೆ ಅವರು ಒರಟಾಗಿ ಗದರುತ್ತಿದ್ದರು. ನಾನು ತುಂಬ ಚೆನ್ನಾಗಿ ದೇವರ ನಾಮ ಹಾಡುತ್ತಿದ್ದೆ. ಸಂಗೀತಗಾರ್ತಿಯಾದ ತಾಯಿಯೇ ಕಲಿಸಿದ ವಿದ್ಯೆ ಇದು. ನಾನು ಹಾಡಿದಾಗಲೆಲ್ಲಾ ನಿಮ್ಮ ತಂದೆ ರೇಗಾಡುತ್ತಿದ್ದರು. ದೇವರ ಮುಂದೆ ದೀಪಾ ಹಚ್ಚಿಟ್ಟು ನಾಲ್ಕು ದೇವರನಾಮ ಹಾಡುತ್ತಿದ್ದೆ. ನಮ್ಮತ್ತೆಯವರು ತಲೆದೂಗಿ ಕೇಳುತ್ತಿದ್ದರು.

ನಮ್ಮತ್ತೆ ಸತ್ತಮೇಲೆ ಇವರು ಅದಕ್ಕೂ ತಡೆಹಾಕಿದರು. "ಸುಮ್ಮನೆ ದೀಪಾ ಹಚ್ಚಿ ಎದ್ದು ಬಾ.....ಮಹಾ ದೊಡ್ಡ ಸಂಗೀತಗಾರ್ತಿ ಎಂ.ಎಸ್. ಸುಬ್ಬುಲಕ್ಷ್ಮಿ ನೀನು" ಅಂತ ಮೂದಲಿಸೋರು, ಒಂದು ಮದುವೆಗೆ ಹೋದಾಗ

ಇವರ ದೊಡ್ಡಮ್ಮ ಒಬ್ಬರು "ಗುಲಾಬಿ ಸೀರೆ ಉಟ್ಟಾಗ ಎಷ್ಟು ಚೆನ್ನಾಗಿ ಕಾಣ್ತೆ ? ಒಳ್ಳೆ ಬಂಗಾರ ಬಣ್ಣದ ಮೈಬಣ್ಣಾ ನಿಂದು" ಎಂದರು.

ಮದುವೆ ಮುಗಿಸಿ ಮನೆಗೆ ಬಂದಾಗ "ಎಲ್ಲಿ ನಿನ್ನ ಹತ್ತಿರಿರೊ ರೇಶ್ಮೆ ಸೀರೆಗಳು ಇಲ್ಲಿ ತೆಗೊಂಬಾ"ಂತ ಆಜ್ಞೆ ಮಾಡಿದರು. ನನ್ನ ಬಳಿ ಇದ್ದ ಆರು ರೇಶ್ಮೆ ಸೀರೆ ತಂದು ಹಾಕಿದೆ. ಗುಲಾಬಿ, ಅಚ್ಚ ಕೆಂಪು, ಹಾಗು ಕನಕಾಂಬರ ಮೂರು ಸೀರೆ ಆರಿಸಿಕೊಂಡರು. ಆಗ ನೀನು ಹತ್ತುವರ್ಷದ ಹುಡುಗಿ, ಕುಮುದ ಹದಿಮೂರು ವರ್ಷದ ಹುಡುಗಿ. ಆ ಸೀರೆಗಳೊಂದಿಗೆ ನಿಮ್ಮಿಬ್ಬರನ್ನು ಪೇಟೆಗೆ ಕರೆದುಕೊಂಡು ಹೋಗಿ ಇಬ್ಬರಿಗು ಒಂದೊಂದು ಹದಿನೆಂಟು ಮೊಳದ ಸೀರೆಯಲ್ಲಿ ಎರಡೆರಡು ಲಂಗಗಳಂತೆ ಆರು ಲಂಗಜಂಪರ್ ಹೊಲಿಸಿದರು.

ಮುಂದೆ ಯಾವ ಮದುವೆ ಮನೆಗೆ ಹೋದರು ಉಳಿದ ಮೂರು ರೇಶ್ಮೆ ಸೀರೆ, ಹಸಿರು, ನೀಲಿ, ನಾಸಿಕಲರ್ ಮಾತ್ರ ತೆಗೆಯುತ್ತಿದ್ದರು. ಅದನ್ನೇ ಉಡುತ್ತಿದೆ. ವರ್ಷಕ್ಕೆ ಎರಡು ಸ್ಪನ್‌ಸಿಲ್ಕ್ ಸೀರೆ ತೆಗೆದು ಕೊಡುತ್ತಿದ್ದರು. ಅದು ಹಸಿರು ಹಾಗು ನೀಲಿ" ಎಂದು ಉದ್ವೇಗದಿಂದ ನಿಲ್ಲಿಸಿದರು.

ವಿಜಯ ಚಿಂತಿಸುತ್ತಾ—

"ಆದರೆ ಅಪ್ಪಾ......ನಿನ್ನ ಇಷ್ಟು ಹತ್ತಿಡಲಿಕ್ಕೆ ಏನು ಕಾರಣಾ ಅಮ್ಮ, ಏಕೆಂದರೆ ನಮ್ಮಗಳ ಎದುರು ಅಷ್ಟು ಕಠಿಣವಾಗಿರಲಿಲ್ಲ. ಸೇಕರ ಎದುರು, ಸ್ನೇಹಿತರ ಎದುರು, ಶಾಲೆಯಲ್ಲಿ ಉಳಿದೆಲ್ಲಾ ಉಪಾಧ್ಯಾಯರ ಎದುರು ಸರಿಯಾಗೆ ಇರೋರು" ಎಂದಳು.

ಇಂದಿರಮ್ಮ ನಿಟ್ಟುಸಿರು ಬಿಟ್ಟು "ಅದಕ್ಕೂ ಕಾರಣವಿದೆ ವಿಜಿ, ಮುಖ್ಯವಾಗಿ ನನ್ನ ಪೂರ್ವ ಜನ್ಮದ ಪಾಪ.....ದಾಂಪತ್ಯ ಜೀವನದಲ್ಲಿ ಸುಖಸಂತೋಷ ಕಾಣಲೇ ಇಲ್ಲ ನಾನು. ನಿಮ್ಮ ತಂದೆ ಮಾನಸಿಕವಾಗಿ ಒಬ್ಬ ರೋಗಿಯಾಗಿ. ನನ್ನ ಹಾಗೆ ಪೀಡಿಸೋರು ಅನ್ನಿಸತ್ತೆ. ಲೋಕದ ಎದುರು ನಾರ್ಮಲ್ ಆಗೇ ಇರೋರು, ನನ್ನ ಬಗ್ಗೆ ಹಾಗೆ ವರ್ತಿಸಬೇಕಾದರೆ ಕೆಲವು ಕಾರಣಗಳು ಇದ್ದವು. ಅದನ್ನು ಇನ್ನೊಂದು ದಿನ ಹೇಳ್ತೀನಿ. ಈಗ ವಿಷಯ ಸಾಕು" ಎಂದರು.

"ಇವತ್ತು ಪ್ರಯಾಣ ಮಾಡಿ ಬಳಲಿ ಬಂದಿದ್ದಿ. ಊಟ ಮಾಡಿ ಮಲಗು

ಬಿಡೋಣ" ಎಂದರು. ಅಲ್ಲೇ ಮಹಡಿ ಮೇಲೆ ಇದ್ದ ಡೈನಿಂಗ್ ಟೇಬಲ್ ಮುಂದೆ ಕುಳಿತರು. ಬಿಸಿಬಿಸಿ ಅಡುಗೆಗಳನ್ನು ಕೆಳಗಿನಿಂದ ತಂದು ಅಂದವಾದ ಪಾತ್ರೆಗಳಲ್ಲಿ ಮೇಜಿನ ಮೇಲೆ ಇರಿಸಲಾಗಿತ್ತು.

ಬಗೆಬಗೆ ಪಲ್ಯಗಳು, ಹಪ್ಪಳ, ಸಂಡಿಗೆ, ಜಾಂಗೀರು, ಜಾಮೂನು, ಸಣ್ಣಕ್ಕಿ ಅನ್ನಾ, ಸಾಂಬಾರು, ತಿಳಿಸಾರು, ಮಸಾಲೆ ವಡೆ ಎಲ್ಲಾ ಇತ್ತು, ವಿಜಯ ತೃಪ್ತಿಯಾಗಿ ಊಟ ಮಾಡಿದಳು.

"ಏನಮ್ಮ......ನಾನು ಬಂದೆ ಅಂತ ಇಷ್ಟು ಸ್ಪೆಷಲ್ಲಾ ?" ಅಂತ ಕೇಳಿದಳು. ಇಂದಿರಮ್ಮ ನಕ್ಕು—

"ಇದೊಂದು ಹೋಟೆಲ್ ಊಟಾ. ನಾನೊಂದು ಹೋಟೆಲಿನ ಮಾಲಕಿ ಈಗ" ಎಂದರು.

ವಿಜಯ ಅಚ್ಚರಿಯಿಂದ "ಛೆ......ಛೇ ಎಷ್ಟೊಂದು ರಹಸ್ಯಗಳನ್ನು ಅಡಗಿಸಿಕೊಂಡಿದ್ದೀಯಮ್ಮ" ಎಂದಳು.

ಇಂದಿರಮ್ಮ ನಕ್ಕು—

"ಅಂಥ ರಹಸ್ಯವೇನಿಲ್ಲ ವಿಜಿ, ಇದು ಕೃಷ್ಣ ಮಾಡಿದ ಏರ್ಪಾಡು. ಅವನಿಗೆ ಸ್ವಂತ ಸೋದರನ ಹಾಗೆ ಒಬ್ಬ ಗೆಳೆಯ ಇದ್ದಾನೆ. ತಂದೆ ತಾಯಿಯಾರು ಇಲ್ಲದ ಅನಾಥ ಹುಡುಗ. ಉಡುಪಿ ಬ್ರಾಹ್ಮಣರ ಹುಡುಗ, ಚಿಕ್ಕಪ್ಪ ನಡೆಸುತ್ತಿದ್ದ ಹೋಟೆಲಿನಲ್ಲಿ ಹದಿನಾರನೆಯ ವಯಸ್ಸಿನವರೆಗೆ ದುಡಿದಿದ್ದ. ಆದರೆ ಆ ಚಿಕ್ಕಪ್ಪ ಚಿಕ್ಕಮ್ಮ ಅವನಿಗೆ ತುಂಬಾ ಹಿಂಸೆ ಕೊಡುತ್ತಿದ್ದರು.

ಅವರ ಕಾಟ ತಾಳಲಾರದೆ ಅವನು ಮನೆ ಬಿಟ್ಟು ಬಂದ. ಮದ್ರಾಸಿಗೆ ಬಂದ ಅವನು ಯಾವ ಋಣಾನುಬಂಧದಿಂದಲೋ ಕೃಷ್ಣನ ಆಶ್ರಯದಲ್ಲಿ ಇರತೊಡಗಿದ. ಅವನ ಕೋಣೆ ಸ್ವಚ್ಛ ಮಾಡುವುದು, ಅವನಿಗೆ ರುಚಿಯಾಗಿ ಅಡಿಗೆ ಮಾಡುವುದು, ಸ್ಟುಡಿಯೋಗೆ ಊಟ ತರುವುದು ಎಲ್ಲಾ ಮಾಡುತ್ತಿದ್ದ ಆಗ ಕೃಷ್ಣನು ಆ ಸ್ಟುಡಿಯೋದಲ್ಲಿ ಐನೂರು ರೂ.ಗಳ ಸಂಬಳದ ಒಂದು ಕೆಲಸದಲ್ಲಿದ್ದ.

ಮುಂದೆ ತನಗೆ ಒಳ್ಳೇ ಕಾಲ ಬಂದ ಮೇಲೆ ಕೃಷ್ಣ ಈ ಗೆಳೆಯನನ್ನು ಮರೆಯಲಿಲ್ಲ. ಆ ಹುಡುಗನಿಗೆ ಹೋಟೆಲ್ ಉದ್ಯಮದ ಕನಸು, ಕೊಂಚ ಹಣ ಮಾಡಿಕೊಂಡಿದ್ದ.

"ನನ್ನ ಬಳಿ ಐವತ್ತು ಸಾವಿರದವರೆಗೆ ಹಣ ಇದೆ. ಇನ್ನು ಐವತ್ತು ಸಾವಿರ ಬೇಕು" ಎಂದು ಕೃಷ್ಣನ ಸಹಾಯ ಕೇಳಿದ.

ಆದರೆ ಕೃಷ್ಣ ಹತ್ತು ಲಕ್ಷ ರೂ.ಗಳ ವೆಚ್ಚದಲ್ಲಿ ಒಂದು ಸೊಗಸಾದ ಹೋಟೆಲ್ ತೆಗೆಸಿದ. ಆ ಉಡುಪಿ ಹುಡುಗ ಮೋಹನ ಹಾಗು ನಾನು ಪಾಲು ದಾರರು. ಕಾರ್ಯ ನಿರ್ವಹಣೆಯ ವಿಭಾಗ ಅವನದು. ಲಾಭದಲ್ಲಿ 3/4 ಭಾಗ ನನ್ನದು, ಕಾಲು ಭಾಗ ಅವನದು. ತಿಂಗಳಿಗೆ ಅವನಿಗೆ ಎಲ್ಲಾ ಖರ್ಚು ಕಳೆದು ಹತ್ತುಸಾವಿರ ರೂ. ನಿವ್ವಳ ಆದಾಯ ಸಿಗುತ್ತೆ. ಕೆಲಸಗಾರರ ಸಂಬಳ ಇನ್-ಕಂ-ಟ್ಯಾಕ್ಸ್ ಎಲ್ಲಾ ಕಳೆದು ನನಗೂ ಮುವತ್ತುಸಾವಿರ ರೂ. ಸಿಗತ್ತೆ" ಎಂದರು.

"ಅಂತು ನೀನು ಪ್ರಚಂಡಳಿದ್ದಿ ಅಮ್ಮ....." ಎಂದು ವಿಜಯ ಸಂತಸದಿಂದ ನುಡಿದಳು.

"ಇದರಲ್ಲಿ ನನ್ನ ಸಾಹಸ ಏನಿಲ್ಲ ವಿಜಿ. ನಿನ್ನ ತಂದೆ ಕೈಲಿ ಸಿಕ್ಕಾಪಟ್ಟೆ ಬೈಸಿಕೊಂಡು ಅಂದು ತೀರಾ ರೋಸಿಹೋಗಿ ಮನೆಬಿಟ್ಟು ಹೋಗಿದ್ದೆ. ಇಷ್ಟು ವಯಸ್ಸಾದರೂ ಇನ್ನು ಇವರ ಹಂಗಣೆ, ದ್ವೇಷ ತಪ್ಪಲಿಲ್ಲವಲ್ಲ, ಇನ್ನು ಯಾವ ಸುಖಕ್ಕೆ ಬದುಕಿರಬೇಕು.

ಮನೆ ಬಿಟ್ಟು ಹೋಗಿ, ನಾನು ಆ ಸುಬ್ಬಮ್ಮನಂತೆ ಹಪ್ಪಳ ಸಂಡಿಗೆ ಮಾಡಿ ಮಾರಿ ಜೀವಿಸಬೇಕು. ಆಕೆ ಆಶ್ರಯ ಕೇಳಬೇಕು ಎನಿಸಿತ್ತು. ಆದರೆ ಆ ದಿನ ಅನಿರೀಕ್ಷಿತವಾಗಿ ಕೃಷ್ಣ ಸಿಕ್ಕಿದ್ದು ದೇವರ ದಯೆ. ಅವನು ಇಷ್ಟು ಶ್ರೀಮಂತನಾಗಿ ಬೆಳೆದು ನಿಂತಿದ್ದು ದೇವರ ದಯೆ.

ಜೊತೆಗೆ ನನ್ನ ಮೇಲೆ ಅಪಾರ ಪ್ರೀತಿ ಇದೆ. ನನ್ನ ಬಂಗಾರದ ಅಡ್ಡಿಕೆ ಬಿಲ್ವಾರ ತೆಗೆದುಕೊಂಡು ಹೋಗಿದ್ದಕ್ಕೆ, ನನ್ನ ಆಶೀರ್ವಾದದಿಂದಲೇ ತಾನು ಶ್ರೀಮಂತನಾದೆ ಅಂತ ನಂಬಿದ್ದಾನೆ" ಎಂದರು.

"ಕೃಷ್ಣ ಏನೋ ತುಂಬ ಒಳ್ಳೇನು. ಆದರೆ ಅತ್ತಿಗೆ ಸ್ವಭಾವ ಹೇಗಮ್ಮ? ಸರಿಯಾಗಿ ಮಾತೇ ಆಡಿಸಲಿಲ್ಲ. ಜಂಭಾನೋ_ಅಥವ ಬಿಂಕಾನೋ?" ಎಂದಳು.

"ಇಲ್ಲ. ಆ ಹುಡುಗಿ_ಬಂಗಾರದಂತಹ ಹುಡುಗಿ. ಬಿಂಕ, ಜಂಭ ಒಂದು ಚೂರು ಇಲ್ಲ. ಆದರೆ ಅವಳಿಗೆ ಕನ್ನಡ

[illegible] ಆಗಲ್ಲ [illegible] ಜೊತೆ ಪಾಠ ಕಲಿತಿದ್ದಾಳೆ. ಆದರೆ ಮನ ಮುಟ್ಟಿ, ಹೀಗೆ ನಾವಿಬ್ಬರು ಸರಸವಾಡಿದ ಹಾಗೆ ಅವಳ ಬಳಿ ಮಾತಾಡೋಕ್ಕೆ ಆಗಲ್ಲ. ಆದರೆ ಗುಣ ಸ್ವಭಾವ ಮಾತ್ರ ತುಂಬ ಒಳ್ಳೆಯದು. ಒಳ್ಳೆ ಶ್ರೀಮಂತ ತಂದೆ ತಾಯಿಗಳ ಮುದ್ದಿನ ಮಗಳು. ಇಬ್ಬರು ಅಣ್ಣಂದಿರ ಪ್ರೀತಿಯ ತಂಗಿ, ರಾಜಕುಮಾರಿ ಹಾಗೆ ಬೆಳೆಸಿದ್ದಾರೆ. ಎಳೇಮಗು ತರಹ ಸ್ವಭಾವ, ಯಾವ ತರಹಾ ಕ್ರೋಧ, ಹೊಟ್ಟೆಕಿಚ್ಚು, ಅಸೂಯೆ ಅವಳಿಗಿಲ್ಲ" ಎಂದರು.

"ಹಾಗಿದ್ರೆ ಪರವಾಗಿಲ್ಲಮ್ಮ ಕೆಲವರಿಗೆ ಅತ್ತೆ ಮನೆ ಕಡೆ ಜನಗಳು ಬೇಕಾಗಿರಲ್ಲ. ನಾನಿಲ್ಲಿ ಒಂದೆರಡು ತಿಂಗಳು ಇರಬೇಕೂಂತ ಬಂದಿದ್ದೀನಿ" ಎಂದಳು.

"ಆ ತರಹಾ ಸಣ್ಣ ಮನಸ್ಸಿನ ಹುಡುಗಿ ಏನಲ್ಲ ವಿಜಿ...... ಅವಳು. ಅಮ್ಮ ಮೊದಲು ಇಷ್ಟೆಲ್ಲಾ ಐಶ್ವರ್ಯ ಇದ್ದರೂ, ಅವರೊಂದು ತರಹಾ ಚಿಂತೇಲಿ ಇರೋರು. ಈಗ ನೀವು ಸಿಕ್ಕಿದ ಮೇಲೆ ಅವರಿಗೆ ಜೀವನದಲ್ಲಿ ಉಲ್ಲಾಸ ಬಂದಿದೆ ಅಂತ ಸಂತೋಷ ಪಡ್ತಾಳೆ. ಇಲ್ಲಿ ನಂಗೆ ಸಂಪೂರ್ಣ ಸ್ವಾತಂತ್ರ ಇದೆ. ನೀನು ಇಲ್ಲಿ ಆರು ತಿಂಗಳು ಇದ್ದರೂ ಪರವಾಗಿಲ್ಲ" ಎಂದರು.

ವಿಜಯಳಿಗೆ ಧೈರ್ಯ ಬಂತು.

"ಇಲ್ಲಮ್ಮ, ಅವರು ಆರು ತಿಂಗಳು ದೆಹಲಿಗೆ ಟ್ರೈನಿಂಗ್‌ಗೆ ಹೋಗಿದ್ದಾರೆ. ಅದಕ್ಕೆ ನಾನು ಇಲ್ಲೇ ಇರಬೇಕೂಂತ ಅಂದ್ಕೊಂಡಿದ್ದೀನಿ." ಎಂದಳು.

"ಧಾರಾಳವಾಗಿ ಇರಮ್ಮ ನೀನು ಇರೋದು ನನಗೂ ತುಂಬ ಸಂತೋಷ" ಎಂದಳು.

ತಾಯಿ ಮಗಳು ಊಟ ಮುಗಿಸಿ ಬಂದ ಮೇಲೆ "ವಿಜಿ ನಿನ್ನ ಕೋಣೆಯಲ್ಲಿ ನೀನು ವಿಶ್ರಾಂತಿ ತಗೊ. ನಾನು ಸ್ವಲ್ಪ ಡ್ಯಾನ್ಸ್ ಪ್ರಾಕ್ಟೀಸ್ ಮಾಡ್ತೀನಿ" ಎಂದರು.

ವಿಜಯ ಚಕಿತಳಾಗಿ—

"ಡ್ಯಾನ್ಸ್ ಪ್ರಾಕ್ಟೀಸ್ ಎಂತಾದ್ದು ಅಮ್ಮ" ಎಂದಳು. "ರಾತ್ರಿ ಹೊತ್ತು ಪಾಪ್ ಮ್ಯೂಸಿಕ್ ಹಾಕಿಕೊಂಡು ಡ್ಯಾನ್ಸ್ ಮಾಡ್ತೀನಿ" ಎಂದರು. ವಿಜಯ [illegible]

"ನೀವು ಈ ವಯಸ್ಸಿನಲ್ಲಿ ಡ್ಯಾನ್ಸ್ ಗೀನ್ಸ್ ಅಭ್ಯಾಸ ಏಕೆ ಮಾಡ್ತಿ ಯಮ್ಮ ?" ಎಂದಳು. ಆಕೆಯ ಮುಖ ಗಡುಸಾಗಿತ್ತು.

"ವಯಸ್ಸು ಏನು ಮಾಡುತ್ತೆ ವಿಜಿ. ನಾನು ಭರತನಾಟ್ಯ ಸಹ ಕಲಿತಿದ್ದೀನಿ, ಕೇವಲ ಯೋಗಾಸನದ್ದು ಕ್ಲಾಸ್ಸ್ ಹಾಕ್ಕೊಂಡು ಯೋಗಾಸನ ಸಹ ಮಾಡ್ತಿದ್ದೀನಿ. ಈಗಾಗಲೆ ಎರಡು ಪೌಂಡ್ ಇಳಿದಿದ್ದೀನಿ ಚೆನ್ನಾಗಿ ತೂಕ ಇಳಿಸಿಕೊಳ್ತೀನೆ. ಬರಿ ಹಾಸ್ಯ ನಟಿ ಹಾಗೆ ಉಳಿದಿರ್ತೀನಿ ಅನ್ಕೊಂಡೆಯಾ ? ನಾಯಕಿ ಪಾತ್ರ ಸಹ ಮಾಡಬೇಕೂಂತ ನನಗೆ ಆಸೆ ಇದೆ. ಕೃಷ್ಣಾನೇ ನಿರ್ಮಾಪಕ. ನನಗೆ ಒಂದು ಚಿತ್ರದಲ್ಲಿ ನಾಯಕಿ ಪಾತ್ರ ಕೊಡ್ತೀನಿ ಅಂತ ಹೇಳಿದ್ದಾನೆ. "ಆದರೆ ತೆಳ್ಳಗೆ ಬಳುಕೋ ಬಳ್ಳಿ ಹಾಗಾಗಬೇಕಮ್ಮ" ಅಂತ ಹೇಳಿದ್ದಾನೆ ಬೆಳಿಗ್ಗೆ ಕಾಂಪೌಂಡಲ್ಲಿ ಜಾಗಿಂಗ್ ಸಹ ಮಾಡ್ತೀನಿ" ಎಂದರು.

ವಿಜಯ ದಿಗ್ಭ್ರಾಂತಳಾಗಿ ನಿಂತಿದ್ದಳು. "ಮಲಗಿಕೊ, ಏನಾದರೂ ಬೇಕಾದರೆ ಬೆಲ್ ಬಾರಿಸು. ಅಂಜಮ್ಮ ತಂದುಕೊಡ್ತಾಳೆ. ಅಂಜಮ್ಮ ನನ್ನ ಕೋಣೆಯ ಮುಂದಿನ ವರಾಂಡದಲ್ಲಿ ಮಲಗಿರ್ತಾಳೆ" ಎಂದು ಹೇಳಿ ಇಂದಿರಮ್ಮ ಹೊರಟುಹೋದರು.

ಅಣ್ಣ ಏಕೆ ಹೀಗೆ ಮಾಡುತ್ತಾನೆ. ತಾಯಿಯನ್ನು ಸಿನಿಮಾ ನಟಿಯನ್ನಾಗಿ ಹಾಕಿಕೊಳ್ಳುವುದೆ ? ಎಷ್ಟು ತೂಕ ಇಳಿಸಿಕೊಂಡರೆ ಅಮ ತರುಣಿಯಾಗಲು ಸಾಧ್ಯವೇ ?

ಈ ಚಿತ್ರವಿಚಿತ್ರ ಆಲೋಚನೆಗಳಲ್ಲಿಯೇ ರಾತ್ರಿ ಕಳೆಯಿತು. ಬೆಳಗೆದ್ದು ಮುಖ ತೊಳೆದು ಅಂಜಮ್ಮ ತಂದುಕೊಟ್ಟ ಕಾಫಿ ಕುಡಿದು ರೂಮಿನ ಸ್ನಾನಗೃಹದಲ್ಲೇ ಬಿಸಿನೀರಿನ ಸೌಲಭ್ಯವಿದ್ದದ್ದರಿಂದ ಸ್ನಾನ ಮಾಡಿ ತಿಳಿ ಹಳದಿ, ನೈಲೆಕ್ಸ್ ಸೀರೆ, ತಿಳಿಹಳದಿಯ ಕುಪ್ಪಸಾ ಧರಿಸಿದಳು.

ಅಂಜಮ್ಮ ಹಳದಿ ಗುಲಾಬಿ ಹೂ ತಂದಿತ್ತಳು. "ಅಮ್ಮಾವರೆಲ್ಲಿ___?" ಎಂದಳು. "ತೋಟದ ಒಳಭಾಗದಲ್ಲಿ ಜಾಗಿಂಗ್ ಮಾಡ್ತಿದಾರೆ" ಎಂದಳು. ಅವಳು ಸಡಿಲವಾಗಿ ಒಂದು ಜಡೆ ಹೆಣೆದು ಒಂದು ಬದಿಗೆ ಹಳದಿಗುಲಾಬಿ ಹೂ ಮುಡಿದಳು. ಹಜಾರದ ಒಂದು ಬದಿಗಿದ್ದ ನಿಲುಗನ್ನಡಿಯ ಬಳಿ ಬಂದು ನೋಡಿಕೊಂಡಾಗ ತನ್ನ ರೂಪದ ಬಗ್ಗೆ ತನಗೇ ಹೆಮ್ಮೆ ಎನಿಸಿತು, [illegible]

ಸುರೇಶನ ನೆನಪು ಸುಳಿದಾಗ ಮನಸ್ಸು ದ್ವಂದ್ವದಲ್ಲಿ ಸಿಲುಕಿತು. ಈ ರೂಪ ಮೆಚ್ಚಿ ಆರಾಧಿಸಿ ವಿವಾಹವಾಗಿದ್ದ. ತಾನು ಅವನನ್ನು ಮೊದಲು ತಿರಸ್ಕರಿಸಿದ್ದರೂ, ಆತ ತನ್ನ ಮೇಲೆ ಕೋಪ ತೋರಿಸಲಿಲ್ಲ ಮುಂದಿನ ಮೂರು ತಿಂಗಳುದ್ದ ವಧು ಪರೀಕ್ಷೆಗೆ ಬಂದ ಎಲ್ಲಾ ಹೆಣ್ಣುಗಳನ್ನು ತಿರಸ್ಕರಿಸಿದ್ದ.

ಅನಂತರ ತಾನು ಲಲಿತಳ ಕುತಂತ್ರ ತಿಳಿದು ಅವನಲ್ಲಿ ಕ್ಷಮೆ ಯಾಚಿಸಿದಾಗ ಯಾವ ಕಸರು ಉಳಿಸಿಕೊಳ್ಳದೇ ಪ್ರೀತಿಯಿಂದ ಕ್ಷಮಿಸಿ ವಿವಾಹವಾಗಿದ್ದ.

ಆದರೆ ವಿವಾಹವಾದ ಮೇಲೆ ತನ್ನ ರೂಪಾರಾಧನೆಯಲ್ಲಿಯೇ ಆತ ಕಾಲ ಕಳೆಯುತೊಡಗಿದ್ದನೆ? ಊಹೂಂ ತನ್ನ ಅನೇಕ ಐಷಾರಾಮದ ವಸ್ತುಗಳ ನಡುವೆ ತನ್ನನ್ನು ಒಂದು ವಸ್ತುವಾಗಿ ಸೇರಿಸಿಕೊಂಡ. ಒಂದು ಜೊತೆ ಬೂಟ್ಸ್ ಕೊಂಡುಕೊಂಡರೂ ಅವನಿಗೆ ಬಹಳ ನಚ್ಚು. ತನ್ನ ಉಡುಪುಗಳನ್ನು ಆರಿಸುವಾಗ, ಬೂಟ್ಸ್ ಆರಿಸುವಾಗ ಪ್ರತಿಯೊಂದು ಸಣ್ಣ ವಸ್ತು ಆರಿಸುವಾಗಲೂ ಅವನು ತುಂಬ ಬೆಲೆ ಕೊಡುತ್ತಿದ್ದ. ಎಲ್ಲವೂ ಸುಂದರವಾಗಿರಬೇಕು, ಆಕರ್ಷಕವಾಗಿರಬೇಕು ಹತ್ತು ಜನರ ಗಮನ ಸೆಳೆಯುವಹಾಗಿರಬೇಕು, ಇದವನ ಮನೀಷೆ.

ತಾನು ಸಹ ಅವನ ಪಾಲಿನ ಒಂದು ಸುಂದರ ವಸ್ತು, ಆದರೆ ತನ್ನ ವ್ಯಕ್ತಿತ್ವಕ್ಕೆ ಏನೂ ಬೆಲೆ ಕೊಟ್ಟಿರಲಿಲ್ಲ ಅವನು. ತಾಯಿ ಒಂದು ತರಹದಲ್ಲಿ ತಂದೆಯಿಂದ ಶೋಷಿತೆ, ತಾನು ತನ್ನ ಗಂಡನಿಂದ ಒಂದು ತರಹ ಶೋಷಿತೆ. 'ಇಡೀ ಗಂಡಸು ಜಾತಿಯೇ ಹೀಗಿರಬಹುದೆ!' ಎಂಬ ಆಲೋಚನೆ ಸಹ ಬಂದಿತು. ಅಂಜನಾ ಬಂದು—

"ಬಾಲ್ಕನಿಯಲ್ಲಿ ನಿಂತ್ಕೊಳ್ಳಿ ತಾಯಿ...... ಅಮ್ಮಾವರು ಕಾಣಿಸ್ತಾರೆ" ಎಂದಳು. ಬಂಗಲೆಯ ಮುಂಭಾಗ ದಾಟಿ ಹೋದರೆ ಬಾಲ್ಕನಿ, ಅಲ್ಲಿ ನಿಂತರೆ ಮೇಲಿನಿಂದ ಕೆಳಗಿನ ತೋಟ ಕಾಣುತ್ತಿತ್ತು.

ತೋಟದ ಒಂದು ಬದಿ...... ವಿಶಾಲವಾದ ಬಯಲು, ಗುಲಾಬಿ ಬಣ್ಣದ ಸಲ್ವಾರ್ ಕಮೀಜ್ ಹಾಕಿಕೊಂಡು ಓಡುತ್ತಿರುವ ತಾಯಿಯನ್ನು ನೋಡಿ ದಿಗ್ಭ್ರಾಂತಳಾದಳು. ಕೊಂಚ ಕೊಂಚ ದೂರ ಓಡುವುದು, ಆಯಾಸದಿಂದ ಏದುಸಿರು ಬಿಡುತ್ತಾ ನಿಲ್ಲುವುದು ಮಾಡುತ್ತಿದ್ದರಾಕೆ. ತಾಯಿ ಏಕೆ ಹೀಗೆ ಮಾಡುತ್ತಿದ್ದಾರೆ? ಚೆನ್ನಾಗಿ ತಿಂದುಂಡು, ಮಗನ ಬಳಿ ಸುಖ

ವಾಗಿ ಇರಬಾರದೇ ಎನಿಸಿತು. ಕೆಳಭಾಗದಲ್ಲಿದ್ದ ಈಜುಕೊಳ, ಗುಲಾಬಿ ತೋಟ, ದೊಡ್ಡ ದೊಡ್ಡ ಬೇರೆ ಜಾತಿಯ ಮರಗಳು, ಹೂವಿನ ಗಿಡಗಳು... ಬಗೆ ಬಗೆ ವಿನ್ಯಾಸದಿಂದ ಬೆಳೆಸಿದ ಉಳಿದ ಗಿಡಗಳು. ಎಲ್ಲಾ ನೋಡುತ್ತಾ ಮೈಮರೆತು ನಿಂತಿದ್ದಳು.

ಕೃಷ್ಣ ಬಂದ. "ವಿಜ್ಜು, ನಿನ್ನ ಕೂಡ ಸ್ವಲ್ಪ ಮಾತಾಡಬೇಕಮ್ಮ" ಎಂದ.

ತೋಟದಲ್ಲಿ ದೃಷ್ಟಿ ನೆಟ್ಟಿದ್ದ ವಿಜಯ ಪಕ್ಕಕ್ಕೆ ತಿರುಗಿದಳು. ಎತ್ತರ ವಾಗಿ ಭವ್ಯವಾಗಿ ನಿಂತಿದ್ದ ಅಣ್ಣನನ್ನು ಕಂಡು—

"ಓ ನೀವು ಬಂದಿದ್ದು ಗೊತ್ತೇ ಆಗ್ಲಿಲ್ಲ ಅಣ್ಣ" ಎಂದಳು.

"ಅಮ್ಮ ಜಾಗಿಂಗ್ ಮಾಡೋದು ನೋಡ್ತಾ ಇದ್ದೆಯಾ ವಿಜಿ?" ಎಂದ ಕೃಷ್ಣ.

"ಹೌದಣ್ಣಾ" ಎಂದಳು.

"ಏನನ್ನಿಸುತ್ತೆ ನಿನಗೆ?" ಎಂದ.

"ಏನೋ ಒಂದು ತರಹಾ ವಿಚಿತ್ರಾಂತ ಅನ್ನಿಸತ್ತಣ್ಣಾ. ವೈದಿಕ ಮುತ್ತೈದೆಯಾದ ಅಮ್ಮ ಇಷ್ಟು ಮೂಡ್ ಹೇಗಾದಳು?" ಎಂದಳು.

ಕೃಷ್ಣ ಚಿಂತೆಯಿಂದ, "ಅಮ್ಮ... ಮೆಂಟಲ್ ಹಾಸ್ಪಿಟಲ್ ಪೇಷಂಟ್ ವಿಜ್ಜು. ಒಬ್ಬ ಒಳ್ಳೆ ಸೈಕ್ರಿಯಾರ್ಟಿಸ್ಟ್‌ನಿಂದ ಅಮ್ಮನಿಗೆ ಚಿಕಿತ್ಸೆ ಕೊಡಿಸ್ತಾ ಇದ್ದೀನಿ" ಎಂದ.

ವಿಜಯಾ ಹೌಹಾರಿ "ಏನಣ್ಣಾ ನೀನು ಹೇಳೋದು?" ಎಂದಳು.

"ಹೌದು! ವಿಜ್ಜು, ಆ ವಿಷಯ ನಿನ್ನ ಹತ್ತಿರ ವಿಸ್ತಾರವಾಗಿ ಮಾತಾಡ್ತೀನಿ, ಒಳಗೆ ಹಜಾರಕ್ಕೆ ಹೋಗೋಣವಾ?" ಇಲ್ಲೇ ಚೇರ್ ತರಿಸಿ ಹಾಕಿಸಲೋ?" ಎಂದ.

"ಒಳಗೆ ಹೋಗೋಣ ಅಣ್ಣಾ? ಎಂದಳು. ಇಬ್ಬರೂ ಒಳಗೆ ಬಂದು ಹಜಾರದ ಒಂದು ಬದಿಯ ಸೋಫಾ ಮೇಲೆ ಎದುರು ಬದುರಾಗಿ ಕೂತರು.

"ಅಮ್ಮ ನಿಜವಾಗಿ ಮನೋರೋಗಿ ಆಗಿದ್ದಾಳೇನಣ್ಣಾ? ನಿನ್ನೆ ನನಗೆ ಗೊತ್ತಾಗಲಿಲ್ಲವಲ್ಲ. ನನ್ನ ಕೂಡಾ ಎಷ್ಟೊಂದು ಚೆನ್ನಾಗಿ ಮಾತಾಡಿದಳು. ಮುತ್ತಿನಂಥಾ ಅಕ್ಷರಗಳಲ್ಲಿ ತನ್ನ ಜೀವನದ ಹಿಂದಿನ ಘಟ್ಟ ವಿಷಯ

ಬರೆದಿಟ್ಟಿದ್ದಾಳೆ" ಎಂದಳು. ಕೃಷ್ಣ ಉತ್ತರಿಸುತ್ತಾ "ನನಗು ಮೊದಮೊದಲು ಏನೂ ಗೊತ್ತಿರಲಿಲ್ಲಮ್ಮ. ಅಮ್ಮ ನನ್ನ ಕಣ್ಣಿಗೆ ಬಿದ್ದು ಆರು ತಿಂಗಳಾಯಿತು. ಆ ದಿನಗಳಲ್ಲಿ ಇನ್ನು ಮನೆಯ ಸಂಪರ್ಕ ತೊರೆದಿರಲಿಲ್ಲ. ಬೆಳಿಗ್ಗೆ ಹನ್ನೆರಡು ಗಂಟೆಗೆ ನಮ್ಮಲ್ಲಿಗೆ ಬಂದರೆ ಸಂಜೆ ಎಂಟು ಗಂಟೆಯವರೆಗೆ ನಮ್ಮಲ್ಲೇ ಇರೋಳು. ನಾನು ದೇವಸ್ಥಾನದ ವರೆಗೆ ಕಾರಿನಲ್ಲಿ ಕರೆ ತಂದು ಬಿಡ್ತಿದ್ದೆ. ಅಲ್ಲಿಂದ ಮನೆಗೆ ಹೋಗೋಳು. ಅಮ್ಮ ನನ್ನ ಬಳಿಯೆ ಬಂದು ಇದ್ಬಿಡಮ್ಮ. ಅಲ್ಲಿ ಅಪ್ಪನ ಬಳಿ ಏನು ಅನುಭವಿಸ್ತಿ ?" ಎಂದೆ.

ಆದರೆ ಅಮ್ಮನ ಯೋಜನೆ ಹೀಗಿತ್ತು. "ತನಗೆ ಮಗನ ಆಶ್ರಯ ಸಿಕ್ಕಿರುವ ಗುಟ್ಟು ಯಾರಿಗೂ ಗೊತ್ತಾಗಬಾರದು. ಅನಿರೀಕ್ಷಿತವಾಗಿ ಅವರನ್ನೆಲ್ಲಾ ದಿಗ್ಭ್ರಾಂತಗೊಳಿಸುವ ಒಂದು ಕೆಲಸ ಮಾಡಿ ತಾನು ಅಲ್ಲಿಂದ ಹೊರಬೀಳಬೇಕು" ಎಂದು ತಂದೆ ತನಗೆ ಕೊಟ್ಟ ಕಷ್ಟ ಬಗೆಬಗೆಯಾಗಿ ವರ್ಣಿಸಿ. ಅವರಿಗೆ ಮಾನ ಮರ್ಯಾದೆ ಹಾಗು ಪ್ರತಿಷ್ಠೆಯ ಬೆಲೆ ಜಾಸ್ತಿ. ಆ ಒಣ ಪ್ರತಿಷ್ಠೆ ಬಗ್ಗು ಬಡೆಯಲು ತಾನೊಂದು ಚಿತ್ರದಲ್ಲಿ ನಟಿಸಲೆಬೇಕೆಂದು ಕೇಳಿದಳು. ಆ ದಿನಗಳಲ್ಲಿ ಅಪ್ಪನಮೇಲೆ ಕೋಪ ಇತ್ತು. ನಾನು ಸಹಕರಿಸಿದೆ. ಅಮ್ಮನ್ನ ಅಪ್ಪಾ ಎಷ್ಟೊಂದು ಹಿಂಸಿಸಿದರೆಂದು ನನಗೆ ಗೊತ್ತಿತ್ತು. ಹೀಗಾಗಿ ಆ ಚಿತ್ರದ ಭಾಗಗಳು ಕ್ಯಾಸೆಟ್‌ಮಾಡಿ ಸತು ಕಳಿಸಿದ್ದೆ. ಅಮ್ಮ ಮನೆ ತೊರೆದು ಬಂದರೂ ಸತು ನನ್ನ ಬಳಿ ಬಂದಿದ್ದಾಳೆಂದು ಅನೇಕರಿಗೆ ಗೊತ್ತಿಲ್ಲ. ಯಾವ ನಿರ್ಮಾಪಕ ಅಮ್ಮನಿಗೆ ಈ ವಯಸ್ಸಿನಲ್ಲಿ ಮರುಳಾಗಿ ಇಂಥಾ ಪಾತ್ರ ಕೊಟ್ಟ ಎಂಬುದೇ ಅವರೆಲ್ಲರ ಸಮಸ್ಯೆ. ನಮ್ಮ ಕಡೆಯ ಕೆಲವರು ಅನಂತನ ಬಳಿ ಹೋಗಿ ಹಿತೈಷಿಗಳಂತೆ ನಟಿಸಿ ಕೊಂಚ ಹಣ ಖರ್ಚು ಮಾಡಿದರೆ, ಆ ಭಾಗ ತೆರೆಗೆ ಬರದಂತೆ ಮಾಡುವುದಾಗಿ ನಂಬಿಸಿದರು. ನಂತರ ಕೆಲವು ದಿನಗಳ ಮೇಲೆ ಹೋಗಿ ನಿರ್ಮಾಪಕ ತುಂಬ ಬಲಿಷ್ಠನಿದ್ದಾನೆ ಸ್ವಾಮಿ. ಸ್ವಾಮಿ ಏನು ಮಾಡಿದರೂ ಆ ಭಾಗ ತೆಗೆಸ್ಲಿಕ್ಕಾಗಲ್ಲ. ಮೂರು ತಿಂಗಳಲ್ಲಿ ಚಿತ್ರ ತೆರೆಗೆ ಬಂದು ಅಖಿಲ ಕರ್ನಾಟಕಾದ್ಯಂತ ಓಡತ್ತೆ ಎಂದರು. ಅಪ್ಪ ದೇಸತ್ತು ಕಾಶಿಗೆ ಹೋಗಿದ್ದು ಆಯ್ತು."

"ಇದೆಲ್ಲಾ ಹಳೇ ವಿಷಯ ಆಯ್ತಲ್ಲ ಅಣ್ಣಾ. ಕುಮುದಕ್ಕ ನನಗೆ ಕಾಗದ ಬರೆದಿದ್ದಳು" ಎಂದಳು ವಿಜಯ,

ಕೃಷ್ಣ ಮುಂದುವರಿಸಿದ,

"ಹ್ಞಾಂ. ಮುಂದಿನ ವಿಷಯಕ್ಕೆ ಬರ್ತಿದ್ದೀನಿ. ಆ ಪರಿಹಾರವಾಯಿತು. ಅಮ್ಮ ನಮ್ಮ ಬಳಿ ಸುಖವಾಗಿ ಇರ್ತಾಳೆ ಹಾಗಾಗಲಿಲ್ಲ. ಅಮ್ಮನ ಆಕಾಂಕ್ಷೆಗಳು ವಿಚಿತ್ರವಾಗಿದ್ದವು. ನನ ಸೀರೆ ಬೇಜಾರು ಎಂದಳು ಹನ್ನೆರಡುಮೊಳದ ಸೀರೆ ನಿಂಗೆ ಸಾಲಲ್ಲ. ಲಂಗ ಹಾಕಿ ಹದಿನಾಲ್ಕು ಮೊಳದ ಸೀರೆಗಳು ಉಡಮ್ಮ" ಎಂದೆ. ಕೆಲವು ದಿನದ ಮೇಲೆ ನಮ್ಮ ಒಬ್ಬ ದರ್ಜಿಯನ್ನು ಕರೆಸಿಕೊಂಡು, ಹೌಸ್‌ಕೋಟ್, ನೈಟ್ ಗೌನ್, ಸಲ್ವಾರ್ ಕಮೀಜ್ ಬೇಕೂಂತ ಅಳತೆ ತೆಗೆಸಿಕೊಂಡು ಬಟ್ಟೆ ಕೊಟ್ಟಳು. ಆಗಲೇ ನನಗೆ ಅನುಮಾನ ಬಂತು. ಕೊಡಿಸ ಬೇಡ ಎನ್ನುವ ಥರಹಾ ಮಾತಾಡಿದೆ.

ಜೋರಾಗಿ ಅಳತೊಡಗಿದಳು, "ನಿಮ್ಮ ತಂದೆಯ ಹಾಗೇ ನೀನು ನನ್ನ ತುಂಬ ಹತ್ತಿಕ್ಕಿದ್ದಿ, ಹಾಗೇ ಹೀಗೆ ಎಂದು ಏನೇನೋ ಬೈದಳು.

ಅವರ ಮಾತುಕಥೆ ಭಾವನೆ ಎಲ್ಲಾ ಚಿತ್ರವಿಚಿತ್ರವಾಗಿತ್ತು. ಕಡೆಗೆ ಖ್ಯಾತ ಮನೋ ವೈದ್ಯರಾದ ಡಾ|| ಮಾಣಿಕ್ಯರತ್ನಂ ಅವರಿಗೆ ತೋರಿಸಿದೆ. ಅವರು ಆಕೆಯ ನಲವತ್ತುವರ್ಷದ ಜೀವನ ಸಹ ಆಕೆಯಿಂದಲೆ ಕೆದಕಿ ಕೇಳಿಸಿ ಕೊಂಡರು. ಹೇಳಾ ಹೋದರೆ ಗಂಟೆಗಟ್ಟಲೆ ಒಳ್ಳೆ ಚಂಕಥೆ ಹೇಳ್ವಾಗೆ ಹೇಳೋಳು.

ಕೇಳ್ತಾ ಕೇಳ್ತಾ ನನಗೆ ಕಣ್ಣಲ್ಲಿ ನೀರು ಬರ್ತಾ ಇತ್ತು ವಿಜಿ. ಅಪ್ಪಾ ಏನು ಹಿರಣ್ಯಕಶಿಪುನೋ, ಕಂಸನೋ ಅನಿಸ್ತಾ ಇತ್ತು. ತುಂಬ ಒಳಹಿಂಸೆ ಕೊಟ್ಟಿದ್ದಾರೆ ಮುಸುಕಿನೊಳಗಣ ಗುದ್ದು ಅಂತಾರಲ್ಲಾ ಹಾಗೇ ಎಲ್ಲಾ ಸಹಿಸಿದ್ದಾಳೆ. ಮೇಲ್ನೋಟಕ್ಕೆ ನಗೆಯ ಮುಖವಾಡಾ ಹಾಕ್ಕೊಂಡಿದ್ದಾಳೆ. ಅದು ಒಳಗೆ ಸಹಿಸಿ, ಮನಸು ಹೆಪ್ಪುಗಟ್ಟಿದೆ. ಇಲ್ಲಿಯಾವ ಚಿಂತೆಯೂ ಇಲ್ಲದೆ ಆರಾಮವಾಗಿ ಕಾಲ ಕಳೆಯತೊಡಗಿದಾಗ ಆ ಹೆಪ್ಪುಗಟ್ಟಿದ ನೋವು ಎತ್ತಿ ಹಾಕಿದೆ. ಆಕೆ ದುಃಖದಿಂದ ಕಂಗೆಟ್ಟು ಹುಚ್ಚಿಯ ಹಾಗೆ ಆಡ್ತಿದ್ದಳು" ಎಂದ.

ವಿಜಯ ಆಶ್ಚರ್ಯದಿಂದ,

"ಇದು ಆಶ್ಚರ್ಯವಲ್ಲವಾ ಅಣ್ಣಾ? ಕಷ್ಟ, ನೋವು ಅನುಭವಿಸೊ ಕಾಲದಲ್ಲಿ ನಗೆಯ ಮುಖವಾಡ ಹಾಕಿಕೊಂಡು ಸುಖದಲ್ಲಿ ಇರೋ ಹಾಗೆ

ನಟಿಸ್ತಿದ್ದಳು, ಈಗ ಇಲ್ಲಿ ನಿನ್ನ ಬಳಿ ಸುಖವಾಗಿ ಇರೋವಾಗ ಹೀಗೆ ಆಗಿದ್ದಾಳೆ" ಎಂದಳು.

"ಡಾಕ್ಟರ್ ಪ್ರಕಾರ ಇದಕ್ಕೆ ಕಾರಣ ಹೀಗಿದೆ ವಿಜ್ಜು. ಕಷ್ಟಾನೆ ಸಹಿಸಿ, ಸಹಿಸಿ ಹೆಪ್ಪುಗಟ್ಟಿದ ಮನಸು ಒಮ್ಮೆಲೆ ಸುಖಾನ ಜೀರ್ಣಿಸಿಕೊಳ್ಳಲಿಕ್ಕೆ ಆಗಿಲ್ಲ. ಸುಖವಾಗಿ ಆರಾಮವಾಗಿ ಇದ್ದಾಗ ಹಿಂದಿನ ನೂರು ಚಿಂತೆಗಳು ಎತ್ತಿ ಹಾಕಿವೆ. ಸುಖ ಅಂದ್ರೇನು ಅಂತಲೆ ಆಕೆಗೆ ಪರಿಚಯವಿರಲಿಲ್ಲ. ಆಗ ಕಷ್ಟ, ನೋವು ಹಿಂಸೇನೆ ತನ್ನ ಜೀವನದ ಒಂದು ಭಾಗ ಅಂತ ಸ್ವೀಕರಿಸಿದ್ದಳು. ಈಗ ನನ್ನ ಮನೇಲಿ ಸುಖ, ಸಂತೋಷ, ವಿಶ್ರಾಂತಿ ಅನ್ನೋದು ಪರಿಚಯವಾದಾಗ— ಆಕೆಗೆ ಒಂದು ತರಹಾ ದಿಗ್ಭ್ರಾಂತಿ ಆಯಿತು. ನನ್ನ ಜೀವನದ ಹಲವಷ್ಟು ವರ್ಷಗಳ ಕಾಲ ಸುಖಸಂತೋಷದ ಸಂಪರ್ಕವೇ ಇಲ್ಲದೇ ಬರಡಾಗಿ ಹೋಯಿತಲ್ಲ......ಅನ್ನೋ ಮನದ ಉಮ್ಮಳಾ ಉಕ್ಕಿಬಂತು. ತಡೆಹಿಡಿದ ಜ್ವಾಲಾಮುಖಿ ಸ್ಫೋಟವಾಯಿತು. ಹೀಗಾಗಿ ಒಂದುತರಹ ಅಬ್‌ನಾರ್ಮಲ್ ಆಗಿ ಆಡ್ತಾಳೆ" ಎಂದ. ವಿಜಯ ಕೊಂಚ ಆಶ್ಚರ್ಯದಿಂದ,

"ಆದರೆ ಅಮ್ಮ ಅಂಥಾ ಮನೋದುಗುಡ, ಮನೋದುಮ್ಮಳ, ಏನು ಅನುಭವಿಸ್ತಾ ಇದ್ದಾಳಣ್ಣಾ? ಮೊದಲು ನಾನು ಚಿಕ್ಕೋಳಿದ್ದೆ, ಅದು ಬಿಟ್ಟಿಡೋಣ, ಮುಂದೆ ನಾನು ಹದಿನಾರನೆ ವಯಸ್ಸಿನಿಂದ ಇಪ್ಪತ್ತರಡನೆಯ ವಯಸ್ಸಿನವರೆಗೆ ಅಬ್ಸರ್ವ್ ಮಾಡಿದ್ದೀನಿ, ಅಪ್ಪ ದರ್ಪದ ಸ್ವಭಾವದವರು ನಿಜ. ಆಗಾಗ ಸಿಡುಕ್ತಾ ಇದ್ದರು, ಗದರ್‍ತಾ ಇದ್ದರೂ ನಿಜ. ಆದರೆ ಅಮ್ಮ ಹೇಗೋ ಹೊಂದಿಕೊಂಡು ಸಹಿಸ್ತಿದ್ದಳಲ್ಲ, ಬಗೆಬಗೆ ರುಚಿಯಾದ ಅಡುಗೆಗಳು ಮಾಡ್ತಾ ಇದ್ದಳು, ಬಗೆಬಗೆ ರುಚಿಯಾದ ತಿಂಡಿ ಮಾಡ್ತಾ ಇದ್ದಳು. ಹಬ್ಬ, ಹಾಡಿವ್ರತಾ, ನೇಮ ಎಲ್ಲಾ ಆಚರಿಸ್ತಿದ್ದಳು. ಊಟಕ್ಕೆ ಬಂದ ಬ್ರಾಹ್ಮಣ ಮುತ್ತೈದೆಯರು ಅಮ್ಮನ ಕೈಅಡಿಗೆ ಹೊಗಳ್ತಾ ಇದ್ದರು. ಅಮ್ಮನ ಕೈಯಿನ ಹೋಳಿಗೆ, ಕಡುಬು, ಚಿರೋಟಿ, ಕಜ್ಜಾಯ ಇವತ್ತಿಗೂ ಬಾಯಲ್ಲಿ ನೀರೂರಿಸುತ್ತೆ" ಎಂದಳು.

ಕೃಷ್ಣಾ ಚಿಂತಿಸುತ್ತಾ—

"ಇದು ಮೇಲ್ನೋಟದ ಜೀವನವಾಯ್ತು ವಿಜಿ. ಆದರೆ ಒಳಮುಖದ ಜ್ವಾಲಾಮುಖಿ ಬೇರೆ ಇತ್ತು. ಇವತ್ತಿಗೂ ಅಮ್ಮನ ಮೇಲ್‌ಮುಖದ ಜೀವನ

ಚೆನ್ನಾಗಿದೆ. ರಾಧಾಗೆ ಸಹ ಅಮ್ಮನ ಅಬ್‌ನಾರ್ಮಲ್ ಬಗ್ಗೆ ಹೆಚ್ಚು ತಿಳಿವು ಗೊತ್ತಿಲ್ಲ. ಇನ್ನು ನಮ್ಮ ಮನೆಯ ಆಳುಕಾಳಾಗಲಿ, ಅಡಿಗೆಯವರಿಗಾಗಲಿ, ಏನು ಗೊತ್ತಿಲ್ಲ. ಎಲ್ಲರ ಜೊತೆ ಚೆನ್ನಾಗಿ ವ್ಯವಹರಿಸ್ತಾಳೆ, ಬೆಳಿಗ್ಗೆ ಎದ್ದು ಜಾಗಿಂಗ್ ಡ್ರೆಸ್ ಹಾಕ್ಕೊಂಡು ಓಡೋದು ರೇಖಾ......ಯೋಗಾಸನ ಕ್ಲಾಸ್‌ಗೆ ಹಾಕಿಕೊಂಡು ತಾನು ಬಿಗಿ ಚಲ್ಲಣ, ಟೀಶರ್ಟ್ ಹಾಕಿಕೊಂಡು ಗಂಟೆಗಟ್ಟಲೆ ಯೋಗಾಸನದ ವ್ಯಾಯಾಮ ಮಾಡ್ತಾಳೆ, ರಾತ್ರಿ ಪಾಪ್ ಮ್ಯೂಸಿಕ್, ಜಾಜ್ ಮ್ಯೂಸಿಕ್‌ಗೆ ಹೆಜ್ಜೆ ಹಾಕಿ ಕುಣಿತ್ತಾಳೆ. ಆದರೆ ನಮ್ಮ ಆಳು ಕಾಳುಗಳಿಗೆ ಇದು ವಿಚಿತ್ರ ಅನಿಸಲ್ಲ. ದೊಡ್ಡ ಮನುಷ್ಯರ ಮನೆ ಹೆಂಗಸರೇ ಹಾಗೆಯೇ ಏನೋ ಅನ್ಕೊಳ್ತಾರೆ, ಆದರೆ ಅಮ್ಮ ಹಿಂದೆ ಒಬ್ಬ ಶುದ್ಧ ವೈದಿಕ ಮುತ್ತೈದೆಯಾಗಿ...ಬಾಳಿ ಬದುಕಿದವಳು ಅನ್ನೋದು ನನಗೆ.....ನಿಂಗೆ ಗೊತ್ತಿದೆ." ಎಂದ.

ವಿಜಯ ಗೊಂದಲದಿಂದ—"ಅಂದರೆ ಈಗ ಡಾಕ್ಟರ್ ಏನು ಹೇಳ್ತಾರೆ?" ಎಂದಳು.

"ಆಕೆಯ ಅಭಿಪ್ರಾಯಗಳಿಗೆ ಹೆಚ್ಚು ವಿರೋಧಿಸದೇ ಉಪಾಯವಾಗಿ ಪರಿಹರಿಸಿಕೊಳ್ಳಿ. ಆರು ತಿಂಗಳಲ್ಲಿ ಒಳ್ಳೆಯ ಔಷಧ ಹಾಗು ಮಾನಸಿಕ ಶಾಂತಿಯು ಪ್ರೀತಿ ಪ್ರೇಮದ ವಾತವರಣದಿಂದ ಆಕೆಯನ್ನು ಸರಿಪಡಿಸಬಹುದು ಅಂತ ಹೇಳಿದ್ದಾರೆ. ಈಗ ನೋಡು. "ಇದ್ದಕ್ಕಿದ್ದ ಹಾಗೆ ನಿನ್ನ ಮುಂದಿನ ಚಿತ್ರದಲ್ಲಿ ನಾಯಕಿ ಪಾತ್ರ ನನಗೆ ಕೊಡಪ್ಪ ಅಂತ ಗಲಾಟೆ ಮಾಡಿದಳು. ನಾನು ತಬ್ಬಿಬ್ಬಾದೆ. ಏನಮ್ಮ ಹೀಗಂತ ತಮಾಷೆ ಮಾಡ್ತಿದ್ದೀಯ್ಯಾ ?" ಅಂದೆ. ಆಗ ನನಗೆ ಆಕೆಯ ಮಾನಸಿಕ ವೈಪರಿತ್ಯದ ಅರಿವಿರಲಿಲ್ಲ. ಅಮ್ಮ ನನ್ನ ಸಿಕ್ಕಾಪಟ್ಟೆ ಬೈದು, ಗೋಳೋ ಎಂದು ಅಳಲು ಪ್ರಾರಂಭಿಸಿದಳು. "ಬರಿ ಹಾಸ್ಯನಟಿ ಆಗಿ ನನ್ನ ಕೊಳೀ ಹಾಕ್ತಿಯೇನು ? ನಟ ಸುಂದರ ರಾಜೇಶ್ ಅವರೊಂದಿಗೆ ಅಭಿನಯಿಸ್ಲಿಕ್ಕೆ ರಾಗಿಣಿದೇವಿಗೆ ಮಾತ್ರ ಅರ್ಹತೆ ಇದೆಯಾ ? ನಾನೇನಾಗಿದ್ದೇನೆ?" ಹೀಗೆಲ್ಲಾ ಗಲಾಟೆ ಮಾಡಿ ಊಟ ತಿಂಡಿ ಬಿಟ್ಟಾಗ ನನಗೆ ಅನುಮಾನ ಬಂತು. ಆಕೆಗೆ ಮನೋರೋಗ ತಜ್ಞ ಡಾ॥ ಮಾಣಿಕ್ಯರತ್ನ ಅವರನ್ನ ಸಂದರ್ಶಿಸಿದ್ದು, ಅವರು ಒಳ್ಳೊಳ್ಳೆ ಔಷಧಿ, ಇಂಜೆಕ್ಷನ್‌ಗಳನ್ನು

ಕೊಟ್ಟಿರು. ಹೆಚ್ಚಿನ ಮನದುಮ್ಮಳ ಉದ್ವೇಗ ದೂರಾ ಆಗಿದೆ, ಈಗ ಹೇಳಿದ್ದು ಕೇಳ್ತಾಳೆ, ನಾನು ಉಪಾಯವಾಗಿ—

“ಅಮ್ಮ ಹೇಗಿದ್ದರೂ ನಾನು ಚಿತ್ರಗಳನ್ನು ತಯಾರಿಸ್ತಾನೆ ಇರ್ತೀನಿ, ಈಗಲೆ ನೀನು ನಾಯಕಿ ಅಗ್ಬೇಡಾ, ತುಂಬಾ ಫ್ಯಾಟ್ ಇದ್ದಿ, ಸ್ವಲ್ಪ ಸ್ಲಿಮ್ ಆದ ಮೇಲೆ ನಾಯಕಿ ಆಗು. ಮೊದಲಿನ ಚಿತ್ರ ಬಿಡುಗಡೆ ಆಗ್ತಿದ್ದ ಹಾಗೆ ರಾಗಿಣಿಗಿಂತ ಜನಪ್ರಿಯಳಾಗ್ತಿ ಅಂದೆ.

ಡಾಕ್ಟರ್ ಸಹಾ ಸಮಾಧಾನ ಹೇಳಿ ಚೆನ್ನಾಗಿ ವ್ಯಾಯಾಮ ಮಾಡಿ, ತೂಕಾ ಇಳಿಸಿಕೊಳ್ಳಿ, ನಿಮ್ಮ ಮಗ ವರ್ಷಕ್ಕೆ ನಾಲ್ಕು ಚಿತ್ರ ತಯಾರಿಸ್ತಾರೆ, ಈ ವರ್ಷದ ಚಿತ್ರಗಳಲ್ಲಿ ಚಾನ್ಸ್ ಸಿಗದಿದ್ದರೆ ಏನು ? ಬರೋ ವರ್ಷದ ಚಿತ್ರ ಅವಕಾಶ ತಗೊಳ್ಳಿ.

ತೆರೆಗೆ ಬಂದ ಮೇಲೆ ನೀವು ಗಟ್ಟಿಯಾಗಿಉಳಿಯಬೇಕು, ಜನ ನಿಮ್ಮನ್ನ ಸ್ವೀಕರಿಸಬೇಕು” ಎಂದರು. “ಹೌದು !” ಎಂದು ಅಮ್ಮ ಒಪ್ಪಿದಳು. ವಿಜಯ ಗೊಂದಲದಿಂದ—

“ಛೆ......ಛೇ ಈ ಥರ ಆದರೆ ತುಂಬ ತುಂಬ ಕಷ್ಟವಪ್ಪಾ, ಕತ್ತಿ ಮೇಲೆ ಸಾಮು ಮಾಡಿದ ಹಾಗೆ” ಎಂದಳು.

“ಅಯ್ಯೊ ! ಏನು ಹೇಳ್ತಿ ವಿಜ್ಜು ? ಮೊನ್ನೆ ಇದ್ದಕ್ಕಿದ್ದ ಹಾಗೆ ತಿಂಗಳ ಹಿಂದೆ ಈಜುಡಿಗೆ ತರಿಸಿ ಕೊಡು. ನಾನು ಇನ್ನು ಮೇಲೆ ಈಜು ಕಲಿತೀನಿ ಅಂತ ಶುರು ಮಾಡಿದಳು. ಆಮೇಲೆ ನಾನು ಉಪಾಯವಾಗಿ ನಮ್ಮ ಫ್ರೆಂಡ್ ಒಬ್ಬರನ್ನ ಈಜು ತಜ್ಞರೆಂದು ಕರೆಸಿ ಪರಿಚಯ ಮಾಡಿಸಿದೆ.

ಆತ ಸ್ವಾಭಾವಿಕವಾಗಿ ಮಾತಾಡುವಂತೆ ನಟಿಸಿ—“ನೋಡಿ ಮೇಡಂ, ತಮಗೆ ಈಜು ಕಲಿಸಬಹುದು. ಆದರೆ ಈಜು ಕಲಿತರೆ ಶರೀರ ಸಿಕ್ಕಾಪಟ್ಟೆ ದಪ್ಪಾ ಆಗತ್ತೆ. ಈ ಕೆಲವು ಫಿಲಂ ಆಕ್ಟರ್ಸ್ ಫೋಟೋ ನೋಡಿ, ಇದು...... ಈಜು ಕಲಿಯೋ ಮುಂಚಿಂದು, ಹವ್ಯಾಸ ಅಂತ ಈಜು ಕಲಿತರು ನೋಡಿ, ಸಿಕ್ಕಾಪಟ್ಟೆ ದಪ್ಪ ಆದರು. ಈಗ ಫಿಲಂನಲ್ಲಿ ಅವರುಗಳಿಗೆ ಚಾನ್ಸ್ ಇಲ್ಲ” ಎಂದ ಅಮ್ಮ ಹೆದರಿಬಿಟ್ಟಳು.

“ಛೆ ಛೇ ಹಾಗಾದರೆ ಹೇಗೆ ? ನಾನು ಮೊದಲು ಸ್ಲಿಮ್ ಆಗಬೇಕು.

ಈಗಾಗಲೆ ಎರಡೂವರೆ ಪೌಂಡ್ ಇಳಿಸಿಕೊಂಡಿದ್ದೇನೆ, ಈ ಹಾಳು ಈಜು ನನಗೆ ಬೇಡಾ" ಎಂದ್ಲಳು.

ವಿಜಯ ಆಶ್ಚರ್ಯದಿಂದ—

"ನಿಜವಾಗಿ ಅಮ್ಮನಿಗೆ ಫಿಲಂಆಕ್ಟರ್ ಹುಚ್ಚು ಹೇಗೆ ಹಿಡೀತು ? ಏನು ಕಥೆ ?" ಎಂದಳು.

ಕೃಷ್ಣ ಚಿಂತೆಯಿಂದ—

"ಹೇಳಿದೆನಲ್ಲ ಮಾನಸಿಕ ವೈಪರಿತ್ಯ ಅಂತ, ಅದಕ್ಕೆ ಡಾಕ್ಟರ್ ಹೇಳಿದರು ಅವರಿಗೆ ತೀರ ನಿಕಟರಾದವರೊಬ್ಬರು ಒಂದು ಆರುತಿಂಗಳು ಹತ್ತಿರದಲ್ಲಿದ್ದು ? ಡಾಕ್ಟರ್ ಸಲಹೆ ಮೇರೆಗೆ ಮನಸ್ಸಿಗೆ ಕೆಲವು ಸೂಚನೆಗಳನ್ನು ಕೊಡಬೇಕು. ಅಂದರೆ ಬ್ರೈನ್ ವಾಷ್ ಮಾಡಿದ ಹಾಗೆ ಅನ್ನೊ, ಆದರೆ ನಾನು ಯಾವ ರೀತಿಯು ಮಾತಾಡೋ ಹಾಗಿಲ್ಲ. ನನ್ನ ಕಂಡ್ರೆ ಒಂದೊಂದು ಸಲ ಸಿಡಿದಾಡ್ತಾಳೆ. ನೀನು ನಿಮ್ಮಪ್ಪನ ಪ್ರತಿರೂಪಾ ಕಣೊ ನನ್ನ ಕಟ್ಟಿಹಾಕ್ತಿ, ನನ್ನ ಪ್ರೋಗ್ರೆಸ್‌ಗೆ ಅವಕಾಶವೇ ಕೊಡಲ್ಲ ಅಂತಾಳೆ.

ಆಮೇಲೆ ನನ್ನ ಹತ್ತಿರ ಯಾವ ವಿಷಯವು ಮನಸ್ಸುಬಿಚ್ಚಿ ಮಾತಾಡಲ್ಲ ಸಂಜೆಯ ಹೊತ್ತು ತೋಟದ ಅಂಚಿನಲ್ಲಿ ಕಲ್ಲು ಜಗುಲಿಯ ಮೇಲೆ ಕೂತು ಮುಳುಗುತ್ತಾ ಇರೋ ಆ ಸೂರ್ಯನ್ನೆ ನೋಡ್ತಾ ಇರ್ತಾಳಂತೆ,ಆಗ ಅಳೋದು ಏನೇನೊ ಮಾತಾಡಿಕೊಳ್ಳೋದು ಮಾಡ್ತಾಳಂತೆ. ಹೊಂಬಣ್ಣ ತುಂಬಿದ ಆಕಾಶ ನೋಡಿ ಭಾನಲ್ಲಿ ಬೆಂಕಿ, ಬೆಂಕಿ ಬಿದ್ದಿದೆ ನೋಡು ಅಂತ ಏನೇನೊ ಹೇಳ್ತಾಳಂತೆ" ಅಂಜಮ್ಮ ಡಾಕ್ಟರ್ ಬಳಿ ಕೊಂಚಕೊಂಚ ಹೇಳಿದ್ದಾಳೆ. ಅದಕ್ಕೆ ಡಾಕ್ಟರ್ ಅವರು ಏನೋ ಮುಚ್ಚಿಟ್ಟುಕೊಂಡಿದ್ದಾರೆ. ಇಷ್ಟೆಲ್ಲಾ ಔಷಧಿ ಕೊಟ್ಟು, ಮಿದುಳಿನ ಉದ್ವೇಗ ಶಮನಗೊಳಿಸಿ ಮನಸು ಶಾಂತವಾಗಿಟ್ಟಿದ್ದೀವಿ ಪ್ರಯೋಜನವಿಲ್ಲ. ಮನದಲ್ಲಿ ಏನೋ ಕಸರು ಉಳಿಸಿಕೊಂಡಿದ್ದಾರೆ. ತೆಗೆಸಿ ಹಾಕಬೇಕು. ತನ್ನ ಬದುಕಿನ ಅನೇಕ ವಿಷಯ ಡಾಕ್ಟರಿಗೆ ಕಥೆಯ ಹಾಗೆ ಬರೆದುಕೊಟ್ಟಿದ್ದಾಳೆ. ಆದರೂ ಆಕೆ ಮುಚ್ಚಿಟ್ಟ ವಿಷಯ ಏನೊ ಇದೆ ಅಂತ ಡಾಕ್ಟರ್ ಸಂಶಯ ಪಡ್ತಾರೆ.

ಅದು ಹೊರಬಿದ್ದರೆ, ಆ ವಿಷಯಕ್ಕೆ ಸಮಾಧಾನ ಸಿಕ್ಕಿದರೆ ಆಕೆ ಮನಸ್ಸು

ನಿಜವಾಗಿ ಹದಕ್ಕೆ ಬರುತ್ತೆ. ಈ ಮಾನಸಿಕ ವೈಪರಿತ್ಯ ದೂರಾಗುತ್ತೆ ಅಂದಿದ್ದಾರೆ.

ನೀನೊಂದು ಆರು ತಿಂಗಳು ಇಲ್ಲಿ....ನಿಲ್ಲಲ್ಲಿಕ್ಕೆ ಸಾಧ್ಯಾನಾ ವಿಜಿ ?" ಎಂದ.

"ಅಮ್ಮನಿಗೆ ಸರಿಹೋಗತ್ತೆ ಅನ್ನೋದಾದರೆ ಖಂಡಿತಾ ನಿಲ್ತೀನಿ ಅಣ್ಣಾ" ಎಂದಳು.

"ಇಲ್ಲಿ ಒಬ್ಬರು ನಿಕಟವಾಗಿ ನಿಂತು ಡಾಕ್ಟರ್ ಸಲಹೆ ಪ್ರಕಾರ ಅಮ್ಮನ ಮನಸ್ಸನ್ನು ಉತ್ತು ಬಿತ್ತು ಮಾಡಿದರೆ ; ಖಂಡಿತಾ ಅಮ್ಮ ಸರಿಹೋಗ್ತಾಳೆ, ಅಮ್ಮ ಖಂಡಿತ ಸರಿ ಹೋಗಬೇಕೂಂತ ನನಗೆ ಆಸೆ ಇದೆ. ನಾನು ನೀಡಿದ ಸುಖ ಸಂತೋಷ ಐಶ್ವರ್ಯದ ಜೀವನಾನೇ ಅವಳ ಪಾಲಿಗೆ ಶಾಪವಾದರೆ ಏನು ಮಾಡಲಿ ? ಬೇಕಾದರೆ ನಾನೇ ಮೈಸೂರಿಗೆ ಹೋಗಿ ನಿನ್ನ ಗಂಡನ ಜೊತೆ ಮಾತಾಡಿ, ಪರ್ಮಿಷನ್ ತಗೊಂಡು ಬರ್ತೀನಿ, ಒಂದಾರು ತಿಂಗಳು ನೀನಿದ್ರೆ ಒಳ್ಳೆಯದು" ಎಂದ.

ವಿಜಯ ಸುಳ್ಳು ಹೇಳಿ—

"ನೀನು ಅವರನ್ನೇನು ಭೇಟಿ ಮಾಡಬೇಡಣ್ಣಾ. ಅವರು ದೆಹಲಿಗೆ ಆರು ತಿಂಗಳು ಟ್ರೈನಿಂಗ್ ಹೋಗಿದ್ದಾರೆ. ನಾನು ಆರು ತಿಂಗಳ ಕಾಲ ಅನಂತಣ್ಣನ ಮನೇಲಿ ಇರೋಣ ಅಂತ ಅಂದ್ಕೊಂಡೆ. ಅದರ ಬದಲು ನಿನ್ನ ಬಳಿಯೆ ಇರ್ತೀನಿ" ಎಂದಳು.

ಕೃಷ್ಣ ಸಂತಸದಿಂದ—

"ಹಾಗಿದ್ದರೆ ಸರಿ, ಅಮ್ಮನ್ನ ನೀನು ಚೆನ್ನಾಗಿ ನೋಡ್ಕೊ, ಈಗ ಎರಡು ತಿಂಗಳ ಹಿಂದೆ ಇದ್ದಕ್ಕಿದ್ದ ಹಾಗೆ,

"ಏನಪ್ಪಾ ಕೃಷ್ಣ....ಬಂಗ್ಲೇಲಿ ಕೂಡಿಸಿ ಬರಿ ತಿಂಡಿ ಊಟಾ ಹಾಕಿ, ಜರತಾರಿ ಸೀರೆ ಉಡಿಸಿ ಕೂಡಿಸಿದರೆ ಸಾಲದು. ಸುಮ್ಮನೆಯೋ ಕ್ಲಾಸ್ ಖೈದಿಯ ಹಾಗೆ ಬಾಳ್ತಾ ಇದ್ದೀನಿ, ಹೆಣ್ಣು ಮಕ್ಕಳಿಗೆ ಆರ್ಥಿಕ ಸ್ವಾತಂತ್ರ ಬೇಕು ನಾನು ಹಣಾ ಸಂಪಾದಿಸಬೇಕು" ಎಂದು ಏನೇನೊ ಹೇಳಿದಳು. ಆಮೇಲೆ ನಾನು—"ನೋಡಮ್ಮ ನನ್ನ ಗೆಳೆಯನ ಜೊತೆ ಹೋಟೆಲ್ "ನಳಾ"ದ ಪಾಲುದಾರ ಆಗಿದ್ದೀನಿ. ತಿಂಗಳಿಗೆ ಮುವ್ವತ್ತು ಸಾವಿರ ರೂ. ಬರುತ್ತೆ, ನೀನೆ

ಪಾಲುಗಾರ್ತಿ ಆಗುವಂತೆ ಕಾಗದ ಪತ್ರ ಮಾಡಿಸಿದೆ. ಸಂತೋಷ ಆಯ್ತು. ನನಗೆ ಸ್ವಲ್ಪ ಇನ್‌ಕಂಟ್ಯಾಕ್ಸ್ ಪ್ರಾಬ್ಲಮ್ ಇತ್ತು ಹೀಗಾಗಿ ಎಲ್ಲಾ ಅವಳಿಗೆ ವರ್ಗಾಯಿಸಿದೆ. ಆ ಬ್ಯಾಂಕ್ ಪುಸ್ತಕಾ ಇಟ್ಕೊಂಡು, ಬ್ಯಾಲೆನ್ಸ್ ಏರ್ತಾ ಇರೋದು ನೋಡಿ ಸಂತೋಷ ಪಡ್ತಾಳೆ" ಎಂದ. ಆ ಹೊತ್ತಿಗೆ ಆಳು ಬಂದು—

"ಸುಂದರಂ ಅವರು ಬಂದಿದ್ದಾರೆ" ಎಂದ. ಕೃಷ್ಣ ಲಗುಬಗೆಯಿಂದ ಎದ್ದು "ಬರ್ತೀನಿ ವಿಜಿ, ನಮ್ಮ ಡಿಸ್ಟ್ರಿಬ್ಯೂಟರ್ ಬಂದಿದ್ದಾರೆ. ಕೆಲವು ಮುಖ್ಯ ವಿವರ ಮಾತಾಡಬೇಕಿದೆ" ಎಂದ.

ಅವನು ಹೊರಟ ಅರ್ಧಗಂಟೆಯ ನಂತರ ಇಂದಿರಮ್ಮ ಹಾಜರಾದರು. ಆಗಿನ್ನು ಎಂಟು ಗಂಟೆ. "ವಿಜ್ಜೂ ಎಷ್ಟು ಹೊತ್ತಿಗೆ ಎದ್ದೆಯಮ್ಮ. ನಾನಂತೂ ಬೆಳಗ್ಗೆ ಹೊತ್ತು ತುಂಬ ಬ್ಯುಸಿ, ನಿನಗೆ ಸಿಕ್ಕಲ್ಲ. ಗುಲಾಬಿ ಬಣ್ಣದ ಸೆಲ್ವಾರ್ ಕಮೀಜಿನಲ್ಲಿ ಏದುಸಿರು ಬಿಡುತ್ತಾ ನಿಂತ ತಾಯಿಯನ್ನು ನೋಡಿ—

"ಏನಮ್ಮ ನಾನು ಆರು ಗಂಟೆಗೆ ಎದ್ದೆ, ಎಂಟು ಗಂಟೆಯವರೆಗೆ ನೀನು ಪತ್ತೆಯೆ ಇಲ್ಲ" ಎಂದಳು. ಇಂದಿರಮ್ಮ ಅವಳೆದುರು ಕೂತು,

"ಏನು ಮಾಡೋದು ವಿಜಿ ? ಫಿಲಂ ಆಕ್ಟರ್ ಜೀವನ ಅಂದರೆ ಒಂದು ನಿಮಿಷ ಬಿಡುವು ಇರಲ್ಲ, ಒತ್ತಡಗಳಿರತ್ತೆ. ಬೆಳಗ್ಗೆ ಜಾಗಿಂಗ್ ಕೆಲವು ವ್ಯಾಯಾಮ, ಅರ್ಧಗಂಟೆ ಇಬ್ಬನಿ ಬಿದ್ದ ಹುಲ್ಲಿನ ಮೇಲೆ ಅಂಗಾಲು ತಾಗಿಸಿ ನಡೆಯೋದು ಎಲ್ಲಾ ಇಟ್ಕೊಂಡು ಇದ್ದೀನೆ. ಈಗ ಒಂದು ಗಂಟೆ ಮಾತ್ರ ನನಗೆ ಬಿಡುವಿದೆ ವಿಜಿ......ಟಿಫನ್ ನಿನ್ನ ಜೊತೆ ತಗೋತೀನೆ. ಆಮೇಲೆ ಇಂಗ್ಲೀಷ್ ಟೀಚರ್ ಬರ್ತಾರೆ. ಬಳಕೆಯ ಮಾತು ಕಥೆ ಆಡೋದು......ಸ್ವಲ್ಪ ಬರವಣಿಗೆ ಕಲಿಸ್ತಾರೆ, ಆಮೇಲೆ ಯೋಗಾಭ್ಯಾಸ......" ಎಂದು ಹೇಳುತ್ತಾ ಇದ್ದಂತೆಯೆ......ವಿಜಯ ಮಾತಾಡಿ—

"ಅದು ಸರಿ......ಊಟ ಎಷ್ಟು ಹೊತ್ತಿಗೆ ಮಾಡ್ತೀಯಮ್ಮ ?" ಎಂದಳು.

"ಬೆಳಗಿನ ಊಟ ನಾನು ಮಾಡೋದೆ ಇಲ್ಲ ವಿಜಿ. ಎರಡು ತುಂಡು ಬ್ರೆಡ್, ಅರ್ಧ ಲೋಟ ತಿಳಿಹಾಲು, ಕೊಂಚ ನೆನೆಸಿದ ಹೆಸರುಕಾಳು, ಕೆಲವು ಹಸಿ ತರಕಾರಿ ನೋಡು ನನ್ನ ಊಟ. ಈ ಮೈ ಇಳಿಸ್ಕೋಬೇಕಮ್ಮ, ಬೆಳಗ್ಗೆ ನೋಡು ಅರ್ಧ ಲೋಟ ಬಿಸಿನೀರಿಗೆ ಒಂದಿಷ್ಟು ನಿಂಬೆರಸ ಹಿಂಡಿ ಕುಡಿದಿದ್ದೀನಿ. ಕಾಫಿ, ಹಾಲು, ಏನಿಲ್ಲ. ಈಗ ನಿನ್ನ ಜೊತೆ ಟಿಫನ್,

ಮತ್ತೆ ರಾತ್ರಿ ನಿನ್ನ ಜೊತೆ ಊಟ. ಎರಡು ಸಲ ಮಾತ್ರ ಕಂಪನಿ ಕೊಡ್ತೀನಿ" ಎಂದರು.

ಹೇಗಿದ್ದ ತಾಯಿ......ಹೇಗಾಗಿದ್ದಾರೆ ಎನಿಸಿತು. ತುಳಸಿ ಪೂಜೆ, ಮಂಗಳ ಗೌರಿ ಪೂಜೆ, ನವಗ್ರಹ ದೀಪ, ಶ್ರೀ ಲಕ್ಷ್ಮೀವ್ರತ ಎಂದು ಓಡಾಡುತ್ತಿದ್ದ ವ್ಯಕ್ತಿ ಇವರೇನೇ ಎನಿಸಿತು.

"ಅಲ್ಲಮ್ಮ ಡಯಟ್, ಡಯಟ್ ಎಂದು ನಿನ್ನ ಜೊತೆ ನನಗೂ ಒಪ್ಪತ್ತು ಊಟ ಮಾಡಿಸ್ತೀಯ ?" ಎಂದಳು.

"ಛೇ......ಛೇ ಹಾಗಿಲ್ಲ ವಿಜು. ಹನ್ನೆರಡು ಗಂಟೆ ಹೊತ್ತಿಗೆ ಆರಾಮವಾಗಿ ನೀನು ಊಟ ಮಾಡಿಬಿಡು. ಡಯಟ್ ಊಟ ನನ್ನದು ಆಮೇಲೆ......" ಎಂದು ಏದುಸಿರು ಬಿಡುತ್ತಾ ಇದ್ದಂತೆಯೆ "ಅಮ್ಮ ಶವರ್‌ಬಾತ್ ಮಾಡ್ತೀನಿ ಅಂದ್ರಲ್ಲ ಬನ್ನಿ" ಎಂದಳು ಅಂಜಮ್ಮ.

ಇಂದಿರಮ್ಮ ಎದ್ದು "ಬರ್ತೀನಿ ವಿಜಿ, ಸ್ನಾನ ಮುಗಿಸಿ ಬರ್ತೀನಿ. ಅದುವರೆಗೂ ವಿಡಿಯೊ ನೋಡು, ಪತ್ರಿಕೆ ಓದು, ಒಂದು ಬೀರು ತುಂಬ ಕನ್ನಡ ಕಾದಂಬರಿಗಳಿವೆ ಓದು" ಎಂದು ಸ್ನಾನದ ಮನೆಗೆ ನಡೆದರು.

ತಾಯಿಗೆ ನಿಜವಾಗಿ ಹುಚ್ಚೆ ? ಅಥವ ನನಗೆ ಹುಚ್ಚು ಹಿಡಿಸುತ್ತಿರುವರೆ ? ಸ್ಥೂಲಾಕಾಯದ ತಾಯಿ ಈ ಸೆಲ್ವಾರ್ ಕಮೀಜದಲ್ಲಿ ಎಷ್ಟು ಅಸಹ್ಯ ಕಾಣುತ್ತಿದ್ದಾರೆ ?" ಎಂದು ಯೋಚಿಸಿದಳು. ತ್ರಿವೇಣಿಯವರ ಒಂದು ಕಾದಂಬರಿ ಹಿಡಿದು ಕುಳಿತಳು. ಒಂಬತ್ತು ಗಂಟೆ ಆದರೂ ಕಾದಂಬರಿಯಲ್ಲಿ ಮೈ ಮರೆತ ಅವಳಿಗೆ ಎಚ್ಚರವಿರಲಿಲ್ಲ. ಒಂದೆರಡು ಭಾರಿ ಅಂಜಮ್ಮ ತಂದಿತ್ತ ಕಾಫಿ ಕುಡಿದಿದ್ದಳು.

"ವಿಜಿ ಟಿಫನ್‌ಗೆ ಬರ್ತಿಯಾ ?" ಸಣ್ಣಂಚಿನ ಗುಲಾಬಿ ಬಣ್ಣದ ರೇಷ್ಮೆ ಸೀರೆ ಒಪ್ಪವಾಗಿ ನೆರಿಗೆ ಹಾಕಿ ಉಟ್ಟು ; ಗುಲಾಬಿ ಬಣ್ಣದ ರೇಶಿಮೆ ಕುಪ್ಪಸ ತೊಟ್ಟಿದ್ದರು. ಮತ್ತೆ ನಿನ್ನೆಯ ಹಾಗೆ ಅಗಲವಾದ ತುರುಬು ಕಟ್ಟಿ, ಚಕ್ರಾಕಾರವಾಗಿ ಗುಲಾಬಿ ದಂಡೆ.ಹಣೆಯಲ್ಲಿ ಕುಂಕುಮಾ, ಕಣ್ಣಲ್ಲಿ ಕಾಡಿಗೆ ನಗುತ್ತಿತ್ತು. ತಾಯಿಯನ್ನೇ ಕಣ್ಣರಳಿಸಿ ನೋಡಿದಳು ವಿಜಯ. ಲಕ್ಷಣವಾಗಿ ನಗುತ್ತಿದ್ದ ಮುಖವನ್ನು ಇನ್ನೂ ಒಂದೆರಡು ಕ್ಷಣ ನೋಡಬೇಕೆನ್ನಿಸುತ್ತಿತ್ತು.

ಸ್ನಾನ ಮುಗಿಸಿ, ಸುಂದರವಾಗಿ ಅಲಂಕರಿಸಿಕೊಂಡು ಭಾವದ ತಾಯಿ

ಯೊಡನೆ ವಿಜಯ ಡೈನಿಂಗ್ ಹಾಲಿಗೆ ಬಂದಳು. ಕಣ್ಣಮ್ಮ ಬಿಸಿಬಿಸಿ ಇಡ್ಲಿ ಬಡಿಸಿ, ಬೆಣ್ಣೆ ಚಟ್ನಿ ಆಲುಗಡ್ಡೆ ಪಲ್ಯ ಹಾಕಿದಳು.

ಇಂದಿರಮ್ಮ ಪಲ್ಯ ಹಾಗು ಬೆಣ್ಣೆ ಅರ್ಧಕ್ಕರ್ಧ ತೆಗೆದಿರಿಸಿ "ಕಣ್ಣಮ್ಮ ನನಗೆ ಚಟ್ನಿ ಇಡ್ಲಿ ಮಾತ್ರ ಹಾಕು, ನನಗಂತು ಡಯಟ್" ಎಂದರು. ಇಡ್ಲಿಯ ಜೊತೆ ಉದ್ದಿನವಡೆ, ಸಾಂಬಾರ್ ಸಹ ತಂದಿಟ್ಟಳು.

"ಅಮ್ಮಾ ಈ ಸೀರೆ ಕುಪ್ಪುಸದಲ್ಲಿ ಈ ತರಹ ತುರುಬಿನಲ್ಲಿ ನೀನು ಎಷ್ಟು ಚೆನ್ನಾಗಿ ಕಾಣ್ತಿ? ನಿನ್ನನ್ನೇ ನೋಡ್ತ ಇರಬೇಕೂನ್ನಿಸತ್ತೆ"ಎಂದಳು ವಿಜಯ.

"ಹೌದು ವಿಜಿ.....ನನ್ನ ಇಂಗ್ಲೀಷ್ ಮಾಸ್ಟರ್ ಅವರಿಗೂ ಈ ಥರಹಾ ಡ್ರೆಸ್ ಅಂದರೆ ತುಂಬ ಇಷ್ಟ. ನೀವು ಈ ತರಹಾ ಡ್ರೆಸ್ನಲ್ಲಿ ತುಂಬಾ ಚೆನ್ನಾಗಿ ಕಾಣ್ತೀರಿ. ಹದಿನಾರು ವರ್ಷದ ಹುಡುಗಿ ತರಹಾ ಕಾಣ್ತೀರಿ ಅಂತಾರೆ. ನಮ್ಮ ಇಂಗ್ಲೀಷ್ ಮಾಸ್ಟರ್ ಎಷ್ಟು ಒಳ್ಳೇರೂಂತಿ ಇವತ್ತು ನಿನಗೆ.....ಅವರ ಪರಿಚಯ ಮಾಡಿಸ್ತೀನಿ" ಎಂದರು.

ಆ ಮಾಸ್ತರು ಎಂಥವನೊ ? ಎಂದು ವಿಜಯಳಿಗೆ ಚಿಂತೆ ಆಯಿತು. ವಿಜಯಳ ಪ್ರತಿಕ್ರಿಯೆಗೆ ಕಾಯದೆ ಮತ್ತೆ ಇಂದಿರಮ್ಮ ಹರಟತೊಡಗಿದರು. ರುಚಿಯಾದ ತಿಂಡಿ ತಿನ್ನುತ್ತ ವಿಜಯ ಅವರ ಮಾತು ಆಲಿಸಿದಳು.

"ಈಗ ತಿಂಗಳಿಗೆ ಆಳುಕಾಳುಗಳ ಸಂಬಳವೇ ಎರಡು ಸಾವಿರ ರೂ. ಕೊಡ್ತೀನಿ.....ವಿಜಿ, ಅಂಜಮ್ಮ ಇಡೀ ಮಹಡಿಯ ಎಲ್ಲಾ ಮೇಲುಸ್ತುವಾರಿ ನೋಡ್ಕೋತಾಳೆ. ಅವಳ ಸಂಬಳ ಐನೂರು. ಕಣ್ಣಮ್ಮ ಊಟ-ತಿಂಡಿ ವಿಭಾಗ ಬಡಿಸೋದು, ಮೇಜು ಶುಚಿಗೊಳಿಸೋದು, ಸಿದ್ಧಪಡಿಸಿದ ಅಡಿಗೆ ಕೆಳಗಿನಿಂದ ಮೇಲೆ ಸಪ್ಲೈ ಮಾಡೋದು ಎಲ್ಲ ಅವಳ ಕೆಲಸ. ಕೆಳಗೆ ನಾನು ಹೋಗೋದೆ ಇಲ್ಲ. ಕೆಳಗ ಕೃಷ್ಣನ ಸಾಮ್ರಾಜ್ಯ, ಮೇಲೆ ನನ್ನ ಸಾಮ್ರಾಜ್ಯ.

ನಿನಗೆ ಡ್ರೆಸ್ ಮಾಡೋದು.....ಅಲಂಕಾರ ಮಾಡೋದು ಬಿಡುವಿನ ವೇಳೇಲಿ ಮುಖಕ್ಕೆ ಫೇಸ್ ಮಾಸ್ಕ್ ಹಾಕೋದು ಇದೆಲ್ಲಾ ಮಾಡೋಳು ಪೊನ್ನು ಅಂತ. ಆ ಹುಡುಗಿ ಏನು ಬುದ್ಧಿವಂತಳೂಂತ ಚೆನ್ನಾಗಿ ಈ ತರಹ ಹಾಕ್ಕೋಬೇಕೂಂತ ತುರುಬು ನನಗೆ ಎಷ್ಟು ದಿನದಿಂದ ಆಸೆ ಇತ್ತು.

ಎಂಟುನೂರು ರೂ. ಕೊಟ್ಟು ಈ ತುರುಬಿನ ಪ್ಯಾಡ್ ತರಿಸಿದ್ದಾಳೆ. ಇರೋಷ್ಟು ಕೂದಲಿಗೆ ಹೇರ್ ಡೈ ಹಚ್ಚಿ, ಕಪ್ಪಗೆ ಆ ಕೂದಲು ಥಳಥಳಿಸೊ

ಹಾಗೆ ಮಾಡಿದ್ದಾಳೆ. ವಾರಕ್ಕೊಂದು ಸಲ ಆ ಕೂದಲು ಕಪ್ಪು ಮಾಡೊ ಹೊಣೆ ಅವಳದು. ವಾರಕ್ಕೆರಡು ಸಲ ಮುಖಕ್ಕೆ ಫೇಸ್ ಪ್ಯಾಕ್ ಹಾಕ್ತಾಳೆ. ಅದಕ್ಕೆ ನನ್ನ ಮುಖ ಹೇಗೆ ಥಳಥಳಾಂತ ಹೊಳೀತಾ ಇದೆ ನೋಡು. ಆ ದೊಡ್ಡ ಕೂದಲ ಪ್ಯಾಡ್ ನೋಡಿ ನಾನು ಹೆದರಿದ್ದೆ. ಏನಿಲ್ಲಮ್ಮ ನೋಡ್ಲಿಕ್ಕೆ ಹಾಗೆ ಕಾಣತ್ತೆ, ಹತ್ತಿ ಹಾಗೆ ಹಗುರಾಗಿದೆ ಅಂದಳು.

ನನ್ನ ಇರೋಷ್ಟೆ ಕೂದಲು ಪೋನಿಟೈಲ್ ಕಟ್ಟಿ ಈ ಪ್ಯಾಡಿಟ್ಟು, ಸುತ್ತ ಕೂದಲು ಪ್ಯಾಡಿಗೆ ಅಡ್ಜಸ್ಟ್ ಮಾಡಿ ಪಿನ್ ಮಾಡ್ತಾಳೆ, ರಾಶಿ ಕೂದಲು ಇರೋರು ಅಗಲವಾಗಿ ತುರುಬು ಕಟ್ಟ್ಯಾಗ ಹೇಗೆ ಕಾಣ್ತಾರೊ ಹಾಗೆ ಕಾಣ್ತೀನಿ. ತಲೆಗೆ ಈ ಪ್ಯಾಡ್ ಭಾರವು ಇಲ್ಲ. ಎಷ್ಟು ಹಗುರಾಗಿರುತ್ತೆ. ಹಿಂದೆಲ್ಲಾ ಆ ಶ್ರೀಕಂಠದ ಚೌರಿ ಹಾಕ್ದಾಗ, ಕೂದಲು ಏನು ಬಿಗಿತಿರೋದು ನೋಡೊಕು ಚೆನ್ನಾಗಿರ್ತಿರಲಿಲ್ಲ. ಮೂಸಂಬಿ ಗಾತ್ರದ ಗಂಟು, ಈಗ ನೋಡು ಇದು ನನ್ನ ಮುಖಕ್ಕೆ ಎಷ್ಟು ಶೋಭೆ ಕೊಡತ್ತೆ ಎಂದರು.

ನಿಜ.....ಆಗ ಮಡಿಹುಡಿ ಎಂದು ಕೂದಲು ಚೌರಿ ಹಾಕಲು ಬಿಡುತ್ತಿರಲಿಲ್ಲ ತಂದೆ.

ಆಕೆ ಹಲವತ್ತು ವರ್ಷದ ನಂತರ ಮುಡಿ ಕಟ್ಟಲು ಕೂದಲು ಸಾಲದೆಂದು ಒರಟಾಗಿ ಶ್ರೀಕಂಠದ ಚೌರಿ ಹಾಕುತ್ತಿದ್ದರು. ತಾಯಿಯ ತುರುಬಿಗೆ ಕೈಯಾಡಿಸಿದಾಗ ಒರಟಾದ ಬ್ರಷ್ ಮೇಲೆ ಕೈ ತಾಗಿದಂತಾಗುತ್ತಿತ್ತು ಆಗ. ಪಶ್ಚಾತರ ಪ್ರಾಣಿಯ ಕೂದಲು ಶ್ರೀಕಂಠಾ ಎಂಬ ಜಾತಿಯ ಚಮರಿ ಮೃಗದ ಕೂದಲಂತೆ, ಜಿಂಕೆಯ ಚರ್ಮ ಹಾಸಿಯೇ ತಂದೆ ಸಂಧ್ಯಾವಂದನೆ ಮಾಡುತ್ತಿದ್ದರು. ಜಪವೆ ಅಥವ ಮಣಿಗಿಂತ ಕೃಷ್ಣಾಂಜಿನ ಶ್ರೇಷ್ಠ ಎಂದು ಅವರ ಅಭಿಪ್ರಾಯ, ತಾಯಿ ಸಹಾ....ಶ್ರೀಕಂಠದ ಚೌರಿಯೆ ಹಾಕಬೇಕಾಗಿತ್ತು.

ಮೃದುವಾದ ನೈಲಾನ್ ಚೌರಿ, ರೇಶ್ಮೆ ಚೌರಿ ಮಡಿಮಾಡಲು ಅನರ್ಹ ಇನ್ನು ಕೂದಲು ಚೌರಿ ಅನ್ನೋ ಶಬ್ದವೆ ಅಪವಿತ್ರ. ಯಾರ ತಲೆಯ ಕೂದಲೊ ? ವಿಸರ್ಜಿಸಿದ ಕೂದಲು, ಉಗುರು ಹೊಲಸು ಇದ್ದಂತೆ. ಅದನ್ನ ಮತ್ತೆ ತಂದು ತಲೆ ಮೇಲೆ ಇಟ್ಕೋತಾರೆಯೆ ? ಮನೆಗೆ ಶ್ರೀಲಕ್ಷ್ಮೀದೇವಿ ಬರೋದು ಹ್ಯಾಗೆ ?

ಒಂದು ಕಾಲದಲ್ಲಿ ಜೌಂ ಹಾಕುವುದು ಸಹ ನಿಷಿದ್ಧ ಎಂದು ಕಾದಿದ್ದರು ತಂದೆ. ಆದರೆ ಇಂದು ತಾಯಿ ಪ್ಯಾಡ್ ಧರಿಸುತ್ತಿದ್ದಾರೆ, ನಾಳೆ ವಿಗ್ ಸಹ ಧರಿಸಬಹುದು. ಅದುಮಿಟ್ಟ ಆಸೆಗಳು ಸ್ಫೋಟವಾಗಿವೆ, ಅದೇ ಈಕೆಯ ಮನೋ ವೈಪರೀತ್ಯವಿರಬಹುದೆ ?

ವಿಜಯ ಯೋಚಿಸುತ್ತಿದ್ದಂತೆಯೆ ಮತ್ತೆ ಇಂದಿರಮ್ಮ ಮಾತಾಡಿದರು.

"ಶ್ರೀರಂಗಮ್ಮ ನನ್ನ ಇಂಗ್ಲೀಷ್ ಡ್ಯಾನ್ಸ್ ಟೀಚರ್. ಅವರಿಗೆ ಇನ್ನೂರು ರೂ. ಕೊಡ್ತೀನಿ. ನಮ್ಮ ಇಂಗ್ಲೀಷ್ ಮಾಸ್ತರರ ಫೀಸ್ ಐನೂರು ರೂ. ಶ್ರೀರಂಗಮ್ಮ ನಂಗೆ ಭರತನಾಟ್ಯ ಬೇರೆ ಹೇಳಿಕೊಡ್ತಾರೆ. ಅದರ ಫೀಸ್ ಬೇರೆ ಮುನ್ನೂರು ರೂ. ಕೊಡ್ತೀನಿ. ಒಂದು ಕಾಲದಲ್ಲಿ ಪಾತ್ರೆ ತೊಳೆಯಲಿಕ್ಕೆ, ಬಟ್ಟೆ ಒಗೆಯಲಿಕ್ಕೆ ನನಗೆ ಆಳುಕಾಳು ಇಟ್ಕೊಳ್ಳೋಕ್ಕೆ ಬಿಡ್ತಿರಲಿಲ್ಲ ವಿಜಿ ನಿಮ್ಮಪ್ಪ. ಒಂದು ನಲವತ್ತು, ಐವತ್ತು ರೂಪಾಯಿ ಕೊಡೋ ಶಕ್ತಿ ಇರೋದು, ಆದರೆ ಸಹಾನುಭೂತಿ ಇರಲಿಲ್ಲ. ಮಡಿಹುಡಿ ಅಂತ ನೆಪ ಮಾಡಿ ಶೂದ್ರರನ್ನ ಕೆಲಸಕ್ಕೆ ಇಟ್ಕೋಬೇಡಾ ಅಂತ ಗಲಾಟೆ ಮಾಡೋರು. ಪಾತ್ರೆ ತೊಳೆದು, ತೊಳೆದು, ನನ್ನ ಕೈ ದೊರಗು ಬಿದ್ದೋಗಿರೋದು. ಅಂಗೈಯಲ್ಲಿ ಯಾವಾಗಲು ಸೀಳುಗಾಯ ಇರೋದು ವಿಜಿ" ಎಂದು ಜೋರಾಗಿ ಅಳತೊಡಗಿದಳು.

ಇದೇ ತಾನೆ ಉಲ್ಲಾಸವಾಗಿ ಮಾತಾಡುತ್ತಿರುವ ತಾಯಿ ಇದ್ದಕ್ಕಿದ್ದಂತೆ ಅಳತೊಡಗಿದಾಗ ವಿಜಯ ದಿಗ್ಭ್ರಾಂತಳಾದಳು.

"ಇರ್ಲಿ ಬಿಡಮ್ಮ, ಅಳಬೇಡಾ__ಏಕಳ್ತಿ ? ಈಗ ಸುಖವಾಗಿದ್ದೀಯಲ್ಲ ಅದಕ್ಕೆ ಸಂತೋಷಪಡು" ಎಂದು ಸಮಾಧಾನ ಮಾಡಿದಳು.

"ಈಗ ಸುಖ ಸಿಕ್ಕಿದರೆ ಏನು ಪ್ರಯೋಜನ ವಿಜಿ, ನನಗೆ ಈ ಮುಪ್ಪಿನ ಕಾಲದಲ್ಲಿ, ಎಲ್ಲಾ ವೈಭೋಗ ಸಿಕ್ಕಿದೆ. ಯೌವನದ ದಿನಗಳಲ್ಲಿ ಒಂದು ಬಣ್ಣವಾದ ಸೀರೆ ಉಡಲಿಕ್ಕೆ ಬಿಡ್ತಿರಲಿಲ್ಲ ನಿಮ್ಮಪ್ಪ"

ಏನೇನೊ ನೆನೆಸಿಕೊಂಡು ಅಳತೊಡಗಿದ ಆಕೆಯನ್ನು ಹೇಗೆ ಸಂತೈಸುವುದೆಂದು ತಿಳಿಯದೇ ವಿಜಯ ತೊಳಲಾಡಿದಳು.

ಅಂಜಮ್ಮ ಬಂದು ಬಲವಂತವಾಗಿ ಒಂದು ಮಾತ್ರೆ ನುಂಗಿಸಿ, ನೀರು ಕುಡಿಸಿದಳು. ಸುಮಾರು ಹತ್ತು ನಿಮಿಷದಲ್ಲಿ ಆಕೆಗೆ ಮಂಪರು ಹತ್ತಿತು.

ಕೈ ಹಿಡಿದು ಕರೆದೊಯ್ದು ಅಂಜಮ್ಮ ಬೆಡ್‌ರೂಮಿನ ಹಾಸಿಗೆಯ ಮೇಲೆ ಮಲಗಿಸಿದಳು.

ಸಣ್ಣಪುಟ್ಟಗೆ ಗೊಣಗುತ್ತಿದ್ದ, ಬಿಕ್ಕುತ್ತಿದ್ದ ಆಕೆ ಆಕೆ ನಿದ್ರೆಯ ಆಳಕ್ಕೆ ಮುಳುಗಿದರು.

ವಾತಾವರಣ ಹತ್ತು ನಿಮಿಷದಲ್ಲಿ ಪ್ರಶಾಂತವಾಯಿತು.

"ಅಮ್ಮ, ಈ ಗಲಾಟೇಲಿ ತಾವು ಸರಿಯಾಗಿ ತಿಂಡಿ ತಿಂದಿರಾ.....?" ಅಂಜಮ್ಮ ವಿಜಯಳನ್ನು ವಿಚಾರಿಸಿಕೊಂಡಳು. ವಿಜಯ ಗೊಂದಲದಿಂದ—

"ನಂದೇನೊ ತಿಂಡಿ ಆಯಿತು. ಆದರೆ ಉಲ್ಲಾಸವಾಗಿ ಮಾತಾಡುತ್ತಿದ್ದ ಅಮ್ಮ ಇದ್ದಕ್ಕಿದ್ದ ಹಾಗೆಯೆ ಅಳು ಶುರು ಮಾಡಿದ್ದು ನನಗೆ ದಿಗ್ಭ್ರಾಂತಿಯಾಯಿತು. ಕೊಂಚ ಭಯವೇ ಆಯಿತು" ಎಂದಳು.

ಅಂಜಮ್ಮ ನಕ್ಕು—

"ಇದೆಲ್ಲಾ ದಿನನಿತ್ಯದ ರಂಪವೇ ತಾಯಿ. ಅಮ್ಮಾವರು ಯಾವಾಗಲು ಹೀಗೆಯೆ ಆಡ್ತಿರ್ತಾರೆ, ನಗ್ತನಗ್ತಾ ಮಾತಾಡ್ತಿರ್ತಾರೆ. ಹಿಂದೆಯೇ ಜೋರಾಗಿ ಅಳ್ತಾ ನಿಮ್ಮ ತಂದೆಯವರಿಂದ ಅನುಭವಿಸಿದ ಯಾವುದಾದರು ತೊಂದರೆ ಜ್ಞಾಪಿಸಿಕೊಂಡು ದುಃಖ ಪಡ್ಲಿಕ್ಕೆ ಶುರು ಮಾಡ್ತಾರೆ" ಎಂದಳು.

"ಅಂತೂ ನೀನು ಇಂಥಾ ಸಮಯದಲ್ಲಿ ಧೈರ್ಯಗೆಡದೆ ಕಾರ್ಯ ನಿರ್ವಹಿಸ್ತೀಯಲ್ಲ. ಮಾತ್ರೆಗೀತ್ರೆ ವಿವರ ತಿಳ್ಕೊಂಡಿದ್ದಿ. ಪಿಲ್ಸ್ ನುಂಗಿಸಿ ಹುಷಾರಾಗಿ ಕರೆದುಕೊಂಡುಹೋಗಿ ಮಲಗಿಸೋದು, ಮಾನಸಿಕ ಉದ್ವೇಗದ ಶಮನಕ್ಕೆ, ಬೆನ್ನು ಹಿಡಿದು, ನೀವೋದು ಎಲ್ಲಾ ಚೆನ್ನಾಗಿ ಮಾಡ್ತಿ" ಎಂದಳು.

ಅಂಜಮ್ಮ ನಕ್ಕು—

"ನಾನು ಇಲ್ಲಿನ ಮಾನಸಿಕ ಚಿಕಿತ್ಸಾ ಕೇಂದ್ರದ ನರ್ಸ್ ಮೇಡಂ. ಡಾ|| ಮಾಣಿಕ್ಯರತ್ನಂ ಅವರೇ ನನ್ನ ಇಲ್ಲಿ ಬಿಟ್ಟಿದ್ದಾರೆ. ತಾಯಿಗೆ ಸರಿ ಹೋಗಲಿ ಅಂತ ನಿಮ್ಮ ಅಣ್ಣನವರು ನೀರಿನ ಹಾಗೆ ದುಡ್ಡು ಖರ್ಚು ಮಾಡ್ತಿದ್ದಾರೆ. ದಿನಾ.... ಇಂಗ್ಲೀಷ್ ಪಾಠ ಹೇಳಿಕೊಡೊ ಮಾಸ್ಟರ್ ಹಾಗೆ ನಟಿಸಿ ಬರೋರು ನಮ್ಮ ಡಾ|| ಮಾಣಿಕ್ಯರತ್ನಂ ಅವರೇ. 'ತಾನು ಹುಚ್ಚಿ, ತನ್ನ ರೋಗಾ ಸರಿ ಮಾಡ್ಲಿಕ್ಕೆ ಡಾಕ್ಟರ್ ಬರ್ತಾರೆ' ಅಂತ ಗೊತ್ತಾದರೆ

ಆಯಾಸ್ತ್ಮ ಗಲಾಟೆ ಮಾಡ್ತಾರೆ. ಈಗವರಿಗೆ ಇದ್ದಕ್ಕಿದ್ದ ಹಾಗೆ ಸೈಕ್ಯಾಟ್ರಿ, ಸುಪೀರಿಯಾಟಿ ಕಾಂಪ್ಲೆಕ್ಸ್ ಹುಟ್ಟಿಬಿಟ್ಟಿದೆ. ರೂಪದಲ್ಲಿ ತಾವು ಹೇಮ ಮಾಲಿನಿ ಅಂತ ಹೇಳ್ಕೋತಾರೆ, ಸಂಗೀತದಲ್ಲಿ ಎಂ. ಎಸ್. ಸುಬ್ಬುಲಕ್ಷ್ಮಿ ಅಂತ ಹೇಳ್ಕೋತಾರೆ. ಭರತನಾಟ್ಯ ಬೇರೆ ಅಭ್ಯಾಸ ಮಾಡ್ಕೋತಿದ್ದಾರೆ" ಎಂದಳು.

"ಡಾಕ್ಟರ್ ಈ ಎಲ್ಲದರ ಬಗ್ಗೆ ಏನು ಹೇಳ್ತಾರೆ?" ಎಂದಳು ವಿಜಯ.

ಅಂಬಮ್ಮ ಉತ್ತರಿಸಿ—

"ಅದುಮಿಟ್ಟ ಭಾವನೆಗಳು ಸ್ಫೋಟವಾಗ್ತಿದೆ. ಲೋಕದ ಎಲ್ಲರಂತೆ ಆಕೆಯೂ ತನ್ನ ಆಸೆ ಆಕಾಂಕ್ಷೆ ಅನುಭವಿಸುತ್ತ ಮುಂದುವರಿದಿದ್ದರೆ ಹೀಗಾಗ್ತಿರಲಿಲ್ಲ. ಉದಾಹರಣೆಗೆ ಆಕೆ ಒಂದು ಮದುವೆ ಮನೆಗೆ ಹೋದಾಗ ಹೊತ್ತಿಗೊಂದು ಬಣ್ಣವಾದ ಸೀರೆ ಉಟ್ಟು, ಬಗೆಬಗೆಯಾಗಿ, ಸ್ನೋ, ಪೌಡರ್, ಕಾಡಿಗೆ ಕುಂಕುಮ ಮಾಲೆಜುಮ್ಕಿ ಹಾಕಿಕೊಂಡು ಅಲಂಕರಿಸಿಕೊಳ್ಳೋ ಅಷ್ಟು ಸ್ವಾತಂತ್ರ ದೊರೆತಿದ್ದರೆ ಅವರು ಖಂಡಿತಾ ಹೀಗಾಗ್ತಿರಲಿಲ್ಲ. ಆದರೆ ನಿಮ್ಮ ತಂದೆ ಇದಕ್ಕೆಲ್ಲಾ ಅವಕಾಶ ಕೊಡ್ತಿರಲಿಲ್ಲ. ಡಾಕ್ಟರ್ ಪಾಠ ಹೇಳಿಕೊಡೋ ನೆಪದಲ್ಲಿ ಬಂದು ಉಪಾಯವಾಗಿ ಹಳೆಯ ವಿಷಯವೆಲ್ಲಾ ಹೊರತೆಗಿಸಿದ್ದಾರೆ. ಮನದಲ್ಲಿ ಹುದುಗಿದ್ದ ಹಳೆಯ ಕಲ್ಪನೆಗಳೆಲ್ಲಾ ಹೋದರೆ ನಿಮ್ಮ ತಾಯಿ ಸರಿಹೋಗ್ತಾರೆ, ತಮ್ಮ ಇಪ್ಪತ್ತನೆ ವಯಸ್ಸಿನಲ್ಲಿ ಒಂದು ಮದುವೆಗೆ ಆಕೆ ಭಾಗವಹಿಸಿದ್ದು ಹೇಳಿದರು. ಆಕೆಯ ವಯಸ್ಸಿನ ಎಲ್ಲರೂ ಆ ಮದುವೆಯಲ್ಲಿ ಬಗೆಬಗೆಯಾಗಿ ಸಿಂಗರಿಸಿಕೊಂಡು, ಹೊತ್ತಿಗೊಂದು ಬಣ್ಣದ ಸೀರೆಯುಟ್ಟು ನಲಿಯುತ್ತಿದ್ದರೆ, ಈಕೆ ಹದಿನೆಂಟು ಮೊಳದ ಎರಡೆ ರೇಶ್ಮೆಸೀರೆ ಮತ್ತೆ ಮತ್ತೆ ಬದಲಿಸುತ್ತ, ಮೂರುದಿನ ಕಾಲ ಹಾಕಿದರಂತೆ, ಉದ್ದಕ್ಕೆ ಜಡೆ ಹಾಕಬಾರದು, ಕೂದಲು ತುರುಬು ಹಾಕಿಬಿಡಬೇಕು, ಬಣ್ಣವಾಗಿ ಕನಕಾಂಬರ ಮುಡಿಯಬಾರದು. ಮುಡಿದರೆ ಮಲ್ಲಿಗೆ ಸೇವಂತಿಗೆ ಮುಡಿ, ವಾಸನೆ ಇಲ್ಲದ ಆ ಅಲಂಕಾರದ ಹೂ ಏಕೆ ಮುಡೀತಿ? ಅನ್ತಾ ಇದ್ದರಂತೆ, ಹಣೆಯಲ್ಲಿ ಕುಂಕುಮ ಕಾಸಿನಗಲ ಇಡಬೇಕು. ಅವರ ಅವತಾರ ನೋಡಿದ ಹೆಣ್ಣಿನ ಕಡೆಯವರು "ಬನ್ನಿ—ಗಂಡಿನ ಕಡೆಯ ಹಿರಿಯ ಮುತ್ತೈದೆ, ನೀವು ನಮ್ಮ ಮಗಳ ಕೈಲಿ ಮಂಗಳಗೌರಿ ಮಾಡಿದ ಭಾಗಿನ ತಗೊಳ್ಳೀ. ಅಂದರಂತೆ. ಹೆಣ್ಣಿನ

ಜನ ಹಾಗೆಯೆ ಗುರುತಿಸ್ತಿದ್ರಂತೆ, ಇದೆಲ್ಲಾ ಅವರ ಮನಸ್ಸಿನಲ್ಲಿ ನೋವಿದೆ, ಒಳದುಃಖವಿದೆ. ಆಗ ಹುಡುಗಿಯಾಗಿದ್ದಾಗ ಎಲ್ಲರೂ ಮುದುಕಿ ಅಂತ ಗುರುತಿಸಿದರು. ಈಗ ಮುದುಕಿಯಾದರೇನು ? ಎಲ್ಲರು ಹುಡುಗಿ ಅಂತ ಗುರುತಿಸೋ ಹಾಗೆ ಅಲಂಕಾರ ಮಾಡ್ಕೋತೀನಿ ಅಂತ ಡಾಕ್ಟರ್ ಮುಂದೆ ಹೇಳಿದ್ರಂತೆ.

ಡಾಕ್ಟರ್ ಹಿಪ್ನಾಟಿಸಂ ಮಾಡಿಲ್ಲ. ಆದರೆ ಆತ್ಮೀಯವಾದ ಮಾತುಕಥೆ ಮೂಲಕವೆ ಆಕೆಯ ಮನಸ್ಸಿನ ಒಳಪದರ ಬಿಚ್ಚಿಡ್ತಿದ್ದಾರೆ" ಎಂದರು.

"ಅಂತು ನಮ್ಮಮ್ಮ ಈ ರೀತಿ ಹುಚ್ಚಿ ಆಗ್ತಾರೆ ಅಂತ ನಾನು ಭಾವಿಸಿರಲಿಲ್ಲ ನರ್ಸ್. ಆಕೆ ಎಂಥಹ ತ್ಯಾಗಮಯಿ, ಎಂಥಹ ಮೃದುಭಾಷಿ. ನಮ್ಮ ತಂದೆಯ ದಬ್ಬಾಳಿಕೆಯನ್ನು ಪ್ರೀತಿಯಿಂದಲೇ ಸಹಿಸ್ತಾ ಇದ್ದರು. ಗಂಡನ ಮೇಲೆ ಒಂದಿನ ಕೋಪ ಮಾಡಿದೋರಲ್ಲ, ಸಿಡಿಮಿಡಿಗೊಂಡೋರಲ್ಲ. ನಮ್ಮ ತಂದೆ ರೇಗಾಡಿ ಒಂದು ಆಜ್ಞೆ ಮಾಡಿದರೂ, ನಗೆಮುಖದಿಂದ ಆ ಕೆಲಸ ನಿರ್ವಹಿಸ್ತಿದ್ದರು. ನನಗೆ ಒಂದೊಂದು ಸಲ ತುಂಬ ಕೋಪಾ ಬರ್‍ತಿತ್ತು. ಕೊಂಚ ಅಸಮಾಧಾನದ ಮುಖವಾಡಾನಾದರೂ ಹಾಕಿಕೊ ಅಮ್ಮ ಅಂತಿದ್ದೆ. ಊಹೂಂ ನಮ್ಮ ತಾಯಿ ಅಸಮಾಧಾನದ ಮುಖವಾಡ ಸಹ ಹಾಕ್ಕೋತಿರಲಿಲ್ಲ" ಎಂದಳು.

"ಹೂ.....ಹಾಗೆ ಅದುಮಿಟ್ಟ ಭಾವನೆಗಳೇ ಹೀಗೆ ಸ್ಫೋಟ ಆಗೋದು, ತಮ್ಮ ಎದುರಾಳಿ ಮೇಲೆ ತಮಗೆ ಹಿಗ್ಗದ ಒತ್ತಡ ಹೇರಿದವರ ಮೇಲೆ ಆಗಲೇ ತಮ್ಮ ಕೋಪಾ, ತಾಪಾ, ಚಕಮಕಿ ತೋರಿಸಿಬಿಟ್ಟರೆ ಒಳ್ಳೆಯದು. ಜಗಳ ಕದನ ದಂಪತಿಗಳ ಮಧ್ಯೆ ಆಗದಿದ್ದರೆ ಒಳ್ಳೆಯದು. ಯಾವ ವಿಷಯದ ಬಗ್ಗೆ ವಾದ ಆಗ್ತಿದೆಯೊ ಅವರ ಬಗ್ಗೆ ಇಬ್ಬರು ಸ್ವತಂತ್ರ ಅಭಿಪ್ರಾಯ ತೋರಿ ಗಂಟಿಗಟ್ಟಲೆ ವಾದಿಸಬೇಕು. ಹಾಗಿದ್ದರೆ ಅವರ ಮನಸ್ಸಿನಲ್ಲಿ ಜಾಸ್ತಿ ಕಸರು ಉಳಿಯಲ್ಲ. ಆದರೆ ಯಾವುದೋ ಕಾರಣಕ್ಕೆ ಗಂಡನಿಗೆ ಹೆದರಿ ತಮ್ಮ ಮನಸ್ಸಿನ ಭಾವನೆಯನ್ನು ಹೊರಚೆಲ್ಲಲಾರದವರ ಅವಸ್ಥೆ ಹೀಗಾಗುತ್ತೆ.

ಏಕೆಂದರೆ ನಿಮ್ಮ ತಾಯಿಯವರ ಆಸೆ ಆಕಾಂಕ್ಷೆಗಳೇ ಬೇರೆ ಇತ್ತು. ತಂದೆಯವರು ಹೇರ್‍ತಿದ್ದ ಆಜ್ಞೆಗಳೇ ಬೇರೆ ಇರ್‍ತಿತ್ತು. ರೋಗಿ ಬಯಸಿದ್ದು ಹಾಲು ಅನ್ನ....ವೈದ್ಯ ಹೇಳಿದ್ದು ಹಾಲು ಅನ್ನ ಹೇಳೋ ಅಂತಹ ಒಂದ್ಕೇ

ಒಂದು ಪ್ರಕರಣ ಸಹ ಅವರ ಜೀವನದಲ್ಲಿ ನಡೆಯಲಿಲ್ಲ. ಹಾಗೆ ಕಷ್ಟ ಅನುಭವಿಸ್ತಿದ್ದರೆ ಅದೊಂಥರ ಇತ್ತು. ಆದರೆ ಅವರಿಗೆ ಇದ್ದಕ್ಕಿದ್ದ ಹಾಗೆಯೆ ಅಪರಿಮಿತ ಸ್ವಾತಂತ್ರ್ಯ, ಸುಖ, ಸಂತೋಷ ಸಿಕ್ಕಿತು. ಮನಸ್ಸು ಕೆಟ್ಟು, ಆತ್ಮಹತ್ಯೆ ಮಾಡಿಕೊಳ್ಳೋಷ್ಟು ರೋಸಿಹೋಗಿದ್ದ ದಿನ ತಾನು ನಡೆದ ನೆಲಕ್ಕೆ ಹೂ ಹಾಸಿ, ಸುಖವಾಗಿಡಲಿಕ್ಕೆ ಸಿದ್ಧನಾದ ಶ್ರೀಮಂತ ಮಗ ಸಿಕ್ಕಿದ. ಹೀಗಾಗಿ ಅವರ ಮನಸ್ಸು ಒಡೆದುಹೋಯ್ತು. ನಿಮ್ಮ ತಂದೆಯನ್ನು ಬಿಟ್ಟು ಬಂದರೆ ತನಗಾರು ಆಶ್ರಯರಿಲ್ಲ. ತವರುಮನೆ ಬಲವಿಲ್ಲ. ಹೀಗೆ ಹೆದರಿ ಆಕೆ ನಿಮ್ಮ ತಂದೆ ಆಜ್ಞೆ ಪಾಲಿಸ್ತಿದ್ದರು. ಈಗ ಬಲವಾದ ಆಶ್ರಯ ಸಿಕ್ಕಿತು ಎಂದೊಡನೆ ನಿಮ್ಮ ತಂದೆಯವರನ್ನು ಪ್ರತಿಭಟಿಸಲಾರಂಭಿಸಿದರು. ಜೀವಮಾನ ಪೂರ್ತಿ ಅವರು ಹೇರಿದ ನಿಯಮಗಳನ್ನು ಉಲ್ಲಂಘಿಸಿದರು. ಆಹಾರ–ವಿಹಾರ–ಉಡುಪು–ಅಲಂಕಾರ ಎಲ್ಲದರಲ್ಲಿ ಬದಲಾವಣೆ ಆಯಿತು.

ಅಂಜಮ್ಮ ವಿವರಿಸುತ್ತಿದ್ದಂತೆಯೆ ಮಹಡಿಯಮೇಲೆ ಬೂಟ್ಸ್ ಹೆಜ್ಜೆಯ ಸಪ್ಪಳ ಕೇಳಿಬಂತು. ಫುಲ್ ಸೂಟ್ ಧರಿಸಿದ ಸುಮಾರು ಐವತ್ತು ವಯಸ್ಸಿನ ನಗೆಮುಖದ ಎತ್ತರ ನಿಲುವಿನ ಆಕರ್ಷಕ ವ್ಯಕ್ತಿ ಮಹಡಿ ಹಜಾರದ ಬಾಗಿಲಿನ ತೆರೆ ಸರಿಸಿ ಒಳಗೆ ಬಂದರು.

ಅಂಜಮ್ಮ ಎದ್ದು ಬಂದು ಭಯ ಭಕ್ತಿಯಿಂದ —

"ಗುಡ್ ಮಾರ್ನಿಗ್ ಡಾಕ್ಟರ್" ಎಂದು ವಂದನೆ ಹೇಳಿದರು.

"ಹಲೋ ! ಗುಡ್ ಮಾರ್ನಿಂಗ್ ! ಹೇಗಿದ್ದಾರೆ ನಮ್ಮ ಪೇಷಂಟ್ !" ಎಂದರು.

ಕುರ್ಚಿಯ ಮೇಲೆ ಕುಳಿತ ಅವರ ಎದುರು ನರ್ಸ್ ನಿನ್ನೆಯ ಕೆಲವು ವಿವರ ಹೇಳಿದಳು. "ಇದೆಲ್ಲಾ ನಿನ್ನೆ ಡೇಟ್ ಹಾಕಿ ಕೇಸ್ ಷೀಟಲ್ಲಿ ಬರೆದಿದೆ. ಅಂದಹಾಗೆ ಅವರ ಡಾಟರ್ ಬಂದಿದ್ದಾರೆ ಅಂತ ಮಿಸೆಸ್ ಕೃಷ್ಣ ತಿಳಿಸಿದರು. ಎಲ್ಲಿ ಅವರು ?" ವಿಜಯ ಬಂದು ಕೈ ಮುಗಿದಳು. ಅಂಜಮ್ಮ ಪರಿಚಯ ಮಾಡಿಕೊಡುವ ಮುಂಚೆಯೆ "ನಾನು ಸಾರ್ ವಿಜಯ ಅಂತ. ನಮ್ಮ ಮದರ್ ಈ ರೀತಿ ಮಾನಸಿಕ ರೋಗಿ ಅಂತ ಇಲ್ಲಿಗೆ ಬರುವರೆಗೆ ನನಗೆ ತಿಳಿದಿರಲಿಲ್ಲ. ತಾಯಿಯ ಕಾಗದ ಓದಿ, ಏನೊ ಕುತೂಹಲದಿಂದ ಬಂದೆ. ಅವು

ಈ ವಯಸ್ಸಿನಲ್ಲಿ ಫಿಲ್ಮ್ ಆಕ್ಟರ್ ಆಗಿ ಹೇಗೆ ಸಂಪಾದಿಸ್ತಿದ್ದಾಳೆ. ನಿಜವಾಗಿ ಸ್ವತಂತ್ರವಾಗಿ ಜೀವನ ಮಾಡೋಷ್ಟು ಹಣವನ್ನ ಅಮ್ಮನಿಗೆ ಇಂಥಾ ಪಾತ್ರಕ್ಕೆ ಕೊಟ್ಟ, ನಿರ್ಮಾಪಕ ಯಾರು ? ಎಂದೆಲ್ಲ ಯೋಚಿಸಿ ಬಂದೆ. ಆದರೆ ಇಲ್ಲಿ ನೋಡಿದರೆ ಕಥೇನೆ ಬೇರೆ ಇದೆ" ಎಂದಳು.

ಡಾಕ್ಟರ್ ವಿಷಾದದಿಂದ ನಕ್ಕರು. "ನಿಮ್ಮಮ್ಮ ಮಾಡಿದ ತಪ್ಪು ಬಹು ದೊಡ್ಡ ತಪ್ಪು. ತಾಯಿಯ ಆಶೆಯಂತೆ ಅಂಥಾ ಚಿತ್ರದಲ್ಲಿ ನಟಿಸಲು ಬಿಟ್ಟಿದ್ದು. ಆಗ ಅವರು ಯಾವುದೋ ದ್ವೇಷದಿಂದ, ಅಸಮಾಧಾನದಿಂದ ಹುಚ್ಚರಾಗಿದ್ದರು ಅನ್ನಿಸುತ್ತೆ. ತಂದೆಯ ಮೇಲೆ ಸೇಡು ತೀರಿಸಿಕೊಳ್ಳ ಬೇಕು, ತಾಯಿಯ ಅಪೇಕ್ಷೆ ನೆರವೇರಿಸಬೇಕು ಅನ್ನೋ ಯಾವುದೋ ಭಾವನೇಲಿ ದುಡುಕಿ ಆ ಚಿತ್ರದಲ್ಲಿ ಅಭಿನಯಿಸಲು ಒಪ್ಪಿದರು. ಬರೀ ನಿಮ್ಮ ತಂದೆಯವರನ್ನ ಫೂಲ್ ಮಾಡೋದು ಮಾತ್ರ ಅವರ ಉದ್ದೇಶ ಆಗಿತ್ತು. ಆ ಭಾಗದ ಚಿತ್ರಣದ ವೀಡಿಯೊ ಕ್ಯಾಸೆಟ್ ನಿಮ್ಮ ತಂದೆಗೆ ತೋರಿಸಿ, ಇನ್ನೇನು ಆ ಚಿತ್ರ ಇಡೀ ಕರ್ನಾಟಕದಾದ್ಯಂತ ಬಿಡುಗಡೆಯಾಗುತ್ತೆ ಎಂಬ ಭಾವನೆ ಹಬ್ಬಿಸಿದರು. ನಿಮ್ಮ ತಂದೆ ಸಹಜವಾಗಿ ದೈವಭಕ್ತರು, ಧರ್ಮಭೀರು, ಕೆಲವು ಸಾಂಪ್ರದಾಯಿಕ ಭಾವನೆಗಳಿಂದ ಪ್ರೇರೇಪಿತರಾಗಿದ್ದವರು, ತನ್ನ ಮನಸ್ಸಿಗೆ ಬಂದಂತೆ ನಡೆಯಬೇಕೆನ್ನುವುದು ಬಿಟ್ಟರೆ ಆತ ಅಂತಹ ಖಳ ನಾಯಕರೇನಲ್ಲ. ತಾನು ಸಹ ಮನೆಯಲ್ಲಿದ್ದಾಗ ಮಡಿಪಂಚೆಯ ಬ್ರಾಹ್ಮಣರಾಗೇ ಇದ್ದರು. ಕಚ್ಚೆ ಪಂಚೆ, ಟೋಪಿ ಹಳೇಕಾಲದ ಕೋಟು ಹೈಸ್ಕೂಲ್ ಮಾಸ್ತರಾದರು ಅವರ ಅಲಂಕಾರ, ನಿಮ್ಮ ತಾಯಿಯು ಅದಕ್ಕೆ ಹೊಂದಿಕೊಂಡಿದ್ದರೆ ಅದರ ಕಥೆ ಬೇರೆ ಇತ್ತು. ಆಕೆ ಮನಸ್ಸಿನಲ್ಲಿ ನಿಮ್ಮ ತಂದೆಯ ಭಾವನೆಗಳನ್ನು ವಿರೋಧಿಸುತ್ತಲೇ ಹೋದರು. ಪ್ರೀತಿ ಪ್ರೇಮ ಗಂಡನಲ್ಲಿ ಬೆಳೆಸಿಕೊಳ್ಳುತ್ತಲೆ ಇರಲಿಲ್ಲ. ಹೀಗಾಗಿ ಇಂದು ಅವರ ಸ್ಥಿತಿ ಹೀಗಾಗಿದೆ" ಎಂದರು.

ವಿಜಯ ಕೊಂಚ ಚಕಿತಳಾಗಿ, "ಅಂದರೆ ನನ್ನ ತಾಯಿಯೆ ಅಪರಾಧಿ ಹಾಗು ಖಳನಾಯಕಿ ಎನ್ನುತ್ತೀರಾ ಡಾಕ್ಟರ್ ?" ಎಂದಳು.

ಡಾಕ್ಟರ್ ನಕ್ಕು, "ಕೇಸ್ ಹಿಸ್ಟರಿ ಗಮನಿಸಿದರೆ ಹಾಗೆಯೇ ಅನ್ನ ಬೇಕಾಗುತ್ತದೆ. ಇದು ನಿಮ್ಮ ಮನಸ್ಸಿಗೆ ಅತೀವ ನೋವಾಗಬಹುದು.

ನಿಮ್ಮ ತಾಯಿ......ನಿಮ್ಮ ತಂದೆಗೆ ಅತೀವ ವಿಧೇಯರಾಗಿ ನಡೆದುಕೊಂಡಂತೆ ನಟಿಸಿದರೂ, ಮನದಲ್ಲಿಯೆ ನಿಮ್ಮ ತಂದೆಯನ್ನು ಅತೀವ ದ್ವೇಷಿಸಿದ್ದಾರೆ. ಇದಕ್ಕೆ ಚಿಕ್ಕಂದಿನಲ್ಲಿಯ ಅವರ ಕೆಲವು ಕನಸುಗಳೇ ಸಾಕ್ಷಿ

ಚಿಕ್ಕಂದಿನಲ್ಲಿ ನಿಮಗೆ ಬೀಳುತ್ತಿದ್ದ ಕೆಲವು ಕನಸ್ಸುಗಳು ಹೇಳಿ? ಎಂದೆ. ಆಕೆ ಆಗಾಗ ಬೀಳುತ್ತಿದ್ದ ಕೆಲವು ಕನಸ್ಸುಗಳನ್ನು ನನಗೆ ಹೇಳಿದ್ದಾರೆ. ಒಂದು ಕನಸ್ಸಿನಲ್ಲಿ ಆಕೆ ನಿಮ್ಮ ತಂದೆಯನ್ನು ಕಂಬಕ್ಕೆ ಕಟ್ಟಿ ಚಾಟಿಯಿಂದ ಹೊಡೆಯುತ್ತಿದ್ದರಂತೆ......ಹೊಡೆದು, ಹೊಡೆದು, ಸಾಕಾದ ಮೇಲೆ ನಿಮ್ಮ ತಂದೆಯನ್ನು ಅಪ್ಪಿಕೊಂಡು ನಾನು......ಪಾಪಿ......ನನ್ನನ್ನು ಕ್ಷಮಿಸಿ ಎಂದು ಅಳತೊಡಗುತ್ತಾಳೆ. ಆಗ ನಿಮ್ಮ ತಂದೆ ಆ ಚಾಟಿ ಎತ್ತಿ ಎಷ್ಟೂ ಸಲ ಪಾತ್ರ ಆಕೆಗೆ ಹೊಡೆಯುತ್ತಾರೆ, ನಿಮ್ಮ ತಾಯಿ ನೋವಿನಿಂದ ಚಡಪಡಿಸಿ ಅಳಲೆತ್ನಿಸುತ್ತಾರೆ. ನಿಮ್ಮ ತಂದೆ ಗದರಿ– ನೀನು ಅಳಕೂಡದು; ಎಂದಾಗ ಆಕೆ ನೋವು ಹಾಗು ಅಳು ತಡೆಹಿಡಿಯಲು ಯತ್ನಿಸಿ ವಿಲಿವಿಲಿ ಒದ್ದಾಡುತ್ತಾರೆ.

ಆ ಒದ್ದಾಟ, ತೊಳಲಾಟದಲ್ಲಿಯೆ ಎಚ್ಚರ ಆಗುತ್ತದೆ. ವರ್ಷಕ್ಕೆ ನಾಲ್ಕಾರು ಭಾರಿಯಾದರೂ ಈ ಕನಸ್ಸು ಪುನಃ ಪುನಃ ಬೀಳುತ್ತಿತ್ತು ಎಂದಿದ್ದಾರೆ.

ಈ ಕನ್ನಸ್ಸನ್ನು ವಿಶ್ಲೇಷಿಸಿದರೆ ನಿಮ್ಮ ತಂದೆ ತಾಯಿಯ ಜೀವನದಲ್ಲಿ ಏನೋ ಒಂದು ರಹಸ್ಯ ಇತ್ತು ಅನ್ನಿಸುತ್ತೆ" ಎಂದರು.

ವಿಜಯಳ ಮುಖ ಕಪ್ಪಿಟ್ಟಿತು. ಕೊಂಚ ಅಳುಕುತ್ತ "ನಿಜಕ್ಕು ನನ್ನ ತಾಯಿ ಒಬ್ಬ ಸಾದಾಸೀದಾ ಗೃಹಿಣಿ ಎಂದಿದ್ದೆ. ಆದರೆ ಅವರು....." ಎಂದು ತೊಳಲಿದಳು. ಡಾಕ್ಟರ್ ಅವಳನ್ನು ಸಂತೈಸಿ,

"ಈ ವಿಷಯಕ್ಕೆ ನೀವು ಮನಸ್ಸು ಕೆಡಿಸಿಕೊಳ್ಳಬೇಡಿ. ಆಕೆ ಜೀವನದಲ್ಲಿ ಒಂದು ರಹಸ್ಯ ಹುದುಗಿದ್ದ ಮಾತ್ರಕ್ಕೆ ಆಕೆ ಪತಿತೆ ಎಂದು ಅರ್ಥ ಇಲ್ಲ. ಪ್ರತಿ ಹೆಣ್ಣು ಸಾದಾಸೀದ ಗೃಹಿಣಿಯಾಗಿ ಇರಬೇಕೆಂದುಕೊಳ್ಳುತ್ತಾಳೆ. ಆದರೆ ಪರಿಸ್ಥಿತಿ ಪ್ರಭಾವದಿಂದ ಕೆಲವರ ಜೀವನದಲ್ಲಿ ಒಂದು ವಿಚಿತ್ರ ಘಟಿಸಿಬಹುದು.

ಈಗ ಮಹಾಭಾರತವನ್ನೇ ನೋಡಿ ಶಂತನು ಪತ್ನಿ ಗಂಗೆ ಏಳು ಮಕ್ಕಳನ್ನು ನದಿಗೆಸೆದಳು. ಸತ್ಯವತಿ ಅವಿವಾಹಿತೆಯಾಗಿ ಇದ್ದಾಗಲೆ

ವೇದವ್ಯಾಸರನ್ನು ಪಡೆದಳು. ಅಂಬೆಯ ಜೀವನ ನೋಡು, ಅವಿವಾಹಿತತನದಲ್ಲಿ ಮುಗಿಯಿತು. ಅಂಬಿಕಾ, ಅಂಬಾಲಿಕೆಯರು ವಿಧವೆಯರಾಗಿ ಪುತ್ರರನ್ನು ಪಡೆದರು. ಋಷಿನಿಯೋಗ ಪದ್ಧತಿ ಆಗ ಮಾನ್ಯತೆಯಲ್ಲಿತ್ತು

ಕುಂತಿ ಕರ್ಣನನ್ನು ಅವಿವಾಹಿತೆಯಾಗಿ ಪಡೆದಳು. ದ್ರೌಪದಿ ಐವರು ಪತಿಯರನ್ನು ಪಡೆದಳು. ಗಾಂಧಾರಿ ಗರ್ಭದಿಂದ ಭ್ರೂಣ ಮಾತ್ರ ಪಡೆದರೂ ಎರಡು ವರ್ಷ ಗರ್ಭ ಧರಿಸಿದರೂ, ಅವಳಲ್ಲಿ ಅದು ಭ್ರೂಣದ ಸ್ಥಿತಿಯಲ್ಲಿತ್ತು. ಮುಂದೆ ಆ ಭ್ರೂಣಗಳನ್ನು ಘಟಗಳಲ್ಲಿಟ್ಟು ಶಿಶುಗಳಾಗಿ ಮಾರ್ಪಡಿಸಿದವರು ಶ್ರೀ ವೇದವ್ಯಾಸರು ಇವೆಲ್ಲಾ ಕೊಂಚ ವಿಚಿತ್ರ ಅನ್ನಿಸಲ್ಲವೆ? ಆದರೆ ಅವರೆಲ್ಲಾ ನಮಗೆ ಪೂಜ್ಯನೀಯರಲ್ಲವೆ? ನಿನ್ನ ತಾಯಿ ರಹಸ್ಯ ಏನೇ ಇರಲಿ......ಆಕೆ ನಿನ್ನ ಪಾಲಿಗೆ ಪೂಜನೀಯಳು, ನಿನ್ನ ತಾಯಿಯ ಒಂದು ರಹಸ್ಯ ನೀನೇ ಕಂಡು ಹಿಡಿಯಬೇಕು, ನಿನ್ನನ್ನು ಕರೆಸಿರೋದೇ ಅದಕ್ಕಮ್ಮ"

"ಯಾವ ರಹಸ್ಯ ಡಾಕ್ಟರ್?" ಎಂದು ಆತಂಕದಿಂದ ಕೇಳಿದಳು.

ಸಂಜೆಯ ಹೊತ್ತು ಆಕೆ ಆಕಾಶ ನೋಡ್ತಾಳೆ......ಮುಳುಗ್ತಾ ಇರೋ ಸೂರ್ಯನ್ನ ನೋಡ್ತಾಳೆ ವಿಚಲಿತರಾಗ್ತಾರೆ. ಹೊಂಬಣ್ಣದ ಆಕಾಶ ನೋಡಿ, ಆಕಾಶದಲ್ಲಿ ಬೆಂಕಿ ಹರಡಿದೆ......ಅಂತ ಬಡಬಡಿಸುತ್ತಾ ಉದ್ವಿಘ್ನರಾಗ್ತಾರೆ.

ಈ ರಹಸ್ಯ ಕಂಡು ಹಿಡಿಯಲಿಕ್ಕೆ, ನಿಮ್ಮಣ್ಣನಿಂದಾಗಲಿ ಅಂಜಮ್ಮನಿಂದಾಗಲಿ, ಸಾಧ್ಯವಾಗಿಲ್ಲ. ಹಿಪ್ನಾಟಿಸಂಗೂ ಆಕೆಯನ್ನು ಒಳಪಡಿಸಲಿಲ್ಲ. ನೀವು ಕೊಂಚ ಆತ್ಮೀಯವಾಗಿ ಮಾತಾಡಿ......ಈ ವಿಷಯದ ಕಾರಣ ತಿಳ್ಕೋಬೇಕು. ನಿಮ್ಮಣ್ಣಾ ದುಡ್ಡು ಕಾಸು ನೀರಿನ ಹಾಗೆ ಚೆಲ್ಲಲಿಕ್ಕೆ ಸಿದ್ಧರಾಗಿದ್ದಾರೆ. ತಾಯಿಯನ್ನು ಆಸ್ಪತ್ರೆಗೆ ಸೇರಿಸಿ ಕೈ ತೊಳ್ಕೊಳ್ಳೊ ಪ್ರವೃತ್ತಿಯವರಲ್ಲ. ನಾನು ಒಳ್ಳೆಯ ಔಷಧೋಪಚಾರ ಕೊಡ್ತಿದ್ದೀನಿ, ಮಾನಸಿಕವಾಗಿಯೂ ಹಂತ ಹಂತವಾಗಿ ಒಳಪದರಗಳಲ್ಲಿ ಶೇಖರವಾದ ಮನಸ್ಸಿನ ಕಲ್ಮಶಗಳನ್ನು ಹೊರ ತೆಗೆಸ್ತಾ ಇದ್ದೀನಿ, ಅವರು ಸರಿಹೋಗ್ತಾರೆ. ನೀವು ಸಹಕರಿಸಬೇಕು. ನಿಮ್ಮ ತಾಯಿಗೆ ನಿಮ್ಮಲ್ಲಿ ತುಂಬ ವಿಶ್ವಾಸ ಇದೆ. ನಿಮ್ಮನ್ನ ಈ ತಿಂಗಳಿನುದ್ದಕ್ಕೆ ಪ್ರತಿದಿನದ ಮಾತುಕತೆಯಲ್ಲಿ ತುಂಬ ನೆನೆಸಿದ್ದಾರೆ. ನಿಮ್ಮ ಹತ್ತಿರ ತಮ್ಮ ಅಂತರಂಗವೆಲ್ಲಾ ತೋಡಿಕೊಳ್ಳಲು ಅವರು ಸಿದ್ಧರಿದ್ದಾರೆ. ನಿಮಗೆ ಆಕೆಯ ವಾಕ್‌ಲಹರಿ ಬೋರ್ ಅನ್ನಿಸಬಹುದು. ಆದರೂ ಎಲ್ಲಾ ಕೇಳಿಕೊಳ್ಳ

ಬೇಕು ಮೃದುವಾಗಿ ಕೆಲತ್ತ ಭಾವನೆಗಳನ್ನು ತಿದ್ದಬೇಕು. ಅದರಲ್ಲಿ ನನ್ನ ಸಲಹೆ ತೆಗೆದುಕೊಳ್ಳಿ. ಹಾಗು ನಿಮ್ಮ ಸ್ವಂತ ಬುದ್ಧಿಯೂ ಉಪಯೋಗಿಸಿ. ಉದಾಹರಣೆಗೆ "ಬಾನಲ್ಲಿ ಬೆಂಕಿ" ಎಂದು ಅವರು ಬಡಬಡಿಸಿದಾಗ 'ಆಕಾಶ ದಲ್ಲೆಲ್ಲ ಬಂಗಾರ ಹರಡಿದ ಹಾಗೆ ಕಾಣಿಸುತ್ತಮ್ಮ....' ಅಂತ ಮತ್ತೆ ಮತ್ತೆ ನೀವು ಅದೇ ಭಾವನೆ ಅವರಿಗೆ ಕೊಡಿ" ಎಂದು ಕೆಲವು ಸೂಚನೆಗಳನ್ನು ನೀಡಿ ದರು. ವಿಜಯ ಶ್ರದ್ಧೆಯಿಂದ ಅದನ್ನು ಆಲಿಸಿ....." ಖಂಡಿತ ನಾನು ಶ್ರದ್ಧೆ ಯಿಂದ ನಮ್ಮ ತಾಯಿನ್ನ ನೋಡ್ಕೋತೀನಿ. ನೀವು ಹೇಳಿದ ಪ್ರಕಾರ ವರ್ತಿಸಿ ಅವರ ಭಾವನೆಗಳನ್ನು ತಿದ್ದೀನಿ ಏನಾದರೂ ಮನಸ್ಸಿನ ರಹಸ್ಯ ಇದ್ದರೆ ಹೊರ ತೆಗೆಸ್ತೀನಿ" ಎಂದಳು.

ಡಾಕ್ಟರ್ ಹೊರಡುವಾಗಲೂ, ಅವಳಿಗೆ ಧೈರ್ಯ ಹೇಳಿ— "ನೀವು ಮಾನಸಿಕವಾಗಿ ಧೈರ್ಯಗೆಡಬೇಡಿ" ಎಂದು ಹೇಳಿ ಹೋದರು.

* * * * *

ವಿಜಯ ಸುರೇಶನನ್ನು ಅಗಲಿ ಹೋಗಿ.....ಈಗಾಗಲೆ ತಿಂಗಳಾಗಿತ್ತು. ಸುರೇಶ ಬೇಸರಾಂಬುಧಿಯಲ್ಲಿ ಮುಳುಗಿ ಹೋಗಿದ್ದ. ಪತ್ನಿಯ ಅಗಲಿಕೆಯ ಬಿಸಿ.....ಒಂದುವಾರ ಅವನನ್ನು ತಟ್ಟಲಿಲ್ಲ.

ಮೊದಲ ಎರಡು ದಿನ ಒಂದು ತಲೆನೋವು ಕಳೆದುಹೋಯಿತೆಂದು ಖುಷಿಯಾದ. ಹೂಂ.....ಇತ್ತೀಚೆಗೆ ಕಾಯಿಲೆಯಿಂದ ಎದ್ದಮೇಲೆ ತುಂಬ ಚಿರಿಪಿರಿ ಮಾಡುತ್ತಿದ್ದಳು. ತಾನು ಸಹನೆ ಕಳೆದುಕೊಂಡು.....ರೇಗಾಡು ವುದು.....ನಂತರ ಕೋಪ ಆರಿದ ಮೇಲೆ ಅವಳನ್ನು ಸಂತೈಸಿ ಮುದ್ದಾಡುವುದು ನಡೆದಿತ್ತು.

ಆದರೆ ಅವಳ ತಾಯಿ ಸಿನಿಮಾ ಸೇರಿದ್ದಾರೆ ಎಂಬ ವಾರ್ತೆ ಬಂದ ದಿನ, ಹಾಗು ಅನಂತರದ ಎಂಟು ದಿನಗಳಲ್ಲಿ ಏನೇನು ನಡೆದುಹೋಯಿತು. ತನ್ನ ರೇಗಾಟ, ಕೂಗಾಟದ ಸಾಮಾನ್ಯ ಜಗಳಗಳಿಗೆ.....ಮಹಾಚಂಡಿಯಂತೆ ಪ್ರತಿಕ್ರಯಿಸಿದಳು. ತನ್ನ ನೂರೆಂಟು ತಪ್ಪು ಹೊರತೆಗೆದು ತನ್ನ ಮೇಲೆ ಚಂಡವ್ವೆರಿಯಂತೆ ಉರಿ ಕಾರಿದಳು. ವಿಧೇಯಳಾದ ಪತ್ನಿ.....ಪ್ರೇಮಪತ್ನಿ

ಎಂದು ತಾನು ನಂಬಿದ ವಿಜಿ ಇವಳೇನೆ? ಇವಳು ತನ್ನ ಹೊಟ್ಟೆಯಲ್ಲಿ ಇಷ್ಟು ವಿಷ ತುಂಬಿಟ್ಟುಕೊಂಡಿದ್ದಾಳೆಯೆ..... ಎನಿಸಿ ಹಗೆ ಉಕ್ಕಿತ್ತು.

ನಿಜಕ್ಕೂ ತಾನು ಅವಳ ರೂಪ ಬಯಸಿ ಬಯಸಿ ವಿವಾಹವಾಗಿದ್ದ. ತಾನು ಸುಂದರ ಎಂದು ಅವನಿಗೆ ತಿಳಿದಿತ್ತು ತನ್ನ ರೂಪಕ್ಕೆ ಸರಿ ಜೋಡಿ ಹೊಗುವ ಸ್ತ್ರೀ ಸೌಂದರ್ಯ ಅವಳದು ಎನಿಸಿತ್ತು ಆ ದಿನಗಳಲ್ಲಿ. ವಧು ಪರೀಕ್ಷೆಗೆ ಬಂದಾಗಲೇ ತನ್ನಲ್ಲಿದ್ದ ನಾಲಿಗೆಚಪಲ, ಮುಂಗೋಪ..... ಎರಡು ಅವಗುಣಾ ಹೇಳಿಕೊಂಡಿದ್ದ, ತಾನು ಒಪ್ಪಿದರೂ ಹುಡುಗಿಯೆ ಒಪ್ಪಲಿಲ್ಲ ಎಂಬ ವಾರ್ತೆ ಬಂದಾಗ ಅವನ ಅಭಿಮಾನಕ್ಕೆ ಸೋಲಾಗಿತ್ತು. ಮುಂದೆ ನಾಲ್ಕಾರು ತಿಂಗಳು ನೋಡಿದರೂ ಒಂದು ಹುಡುಗಿಯೂ ತನ್ನ ಮನಸ್ಸಿಗೆ ಒಪ್ಪಿರಲಿಲ್ಲ. ಅವನು ತಿರಸ್ಕರಿಸಿದ ಎರಡು ಹುಡುಗಿಯರ ಬಗ್ಗೆ ಹೆಮ್ಮೆಯಿಂದ ತನ್ನ ಪತ್ನಿಯ ಎದುರು ಕೊಚ್ಚಿಕೊಳ್ಳುತ್ತಿದ್ದ. ವಿಜಯ ತನ್ನಲ್ಲಿ ಕ್ಷಮೆ ಬೇಡಿ, 'ಗೆಳತಿಯ ಆ ಬಗೆ ಉಪಾಕ್ರಸಿಯಿಂದ ನಿಮ್ಮನ್ನು ತಿರಸ್ಕರಿಸಿದೆ. ಕ್ಷಮಿಸಿ.....' ಎಂದಾಗ ಯಾವ ಕಸರನ್ನು ಮನದಲ್ಲಿ ಉಳಿಸಿಕೊಳ್ಳದೆ ಕ್ಷಮಿಸಿ, ಅವಳನ್ನು ಸ್ವೀಕರಿಸಿದ್ದ, ವಿವಾಹವಾಗಿದ್ದ.

ವಿವಾಹವಾದ ಮೇಲು ವಿಜಯ ಅವನನ್ನು ಈ ವಿಷಯದ ಬಗ್ಗೆ ಆಗಾಗ ಹೊಗಳಿ..... "ನಿಮ್ಮದು ತುಂಬ ದೊಡ್ಡ ಗುಣ, ನನ್ನ ಎಲ್ಲಾ ಹುಚ್ಚಾಟಾ ಕ್ಷಮಿಸಿ ವಿವಾಹವಾಗಿದ್ದೀರಿ. ಅವಳು ನಿಮ್ಮ ರೂಪ ನೋಡಿ ಮರುಳಾಗಿ ತಾನು ನಿಮಗೆ ದುಂಬಾಲು ಬಿದ್ದು, ನನಗೆ ಮಾತ್ರ ಬೇಡಾಂತ ಹೇಳಿಕೊಟ್ಟಿದ್ದಳು" ಎಂದಾಗ ಅವನು ಹೆಮ್ಮೆಯಿಂದ ನಗುತ್ತಾ,

"ಆದರೇನು? ನನ್ನ ವಿಜಿ ನನಗೆ ಸಿಗಬೇಕೂಂತ ದೇವರ ನಿಯಮ ಇತ್ತಲ್ಲ ಸಿಕ್ಕಿದಳು. ಅದ್ಸರಿ..... ಅವರಪ್ಪ ವಾರಕ್ಕೊಮ್ಮೆ ಬಂದು ಏನು ಹಿಂಸೆ ಮಾಡ್ತಿದ್ದರೂ ಅಂತಿ? ಐವತ್ತು ಸಾವಿರ..... ಲಕ್ಷ..... ಒಂದೂವರೆ ಲಕ್ಷ ಹೀಗೆ ವಾರಕ್ಕೊಮ್ಮೆ ಬಂದು ಐವತ್ತು ಸಾವಿರ ಏರಿಸೋರು. ಆದರೆ ನಾನು ಒಮ್ಮೆ ಹೇಳಿಯೇಬಿಟ್ಟೆ. ನೋಡಿ ಸ್ವಾಮೀ..... ಸುಮ್ಮನೆ ಪ್ರಯಾಣ ಮಾಡಿಕೊಂಡರೆ ತಗೋಬೇಡಿ. ನನ್ನ ಮನಸ್ಸಿನಲ್ಲಿ ಬೇರೆ ಹುಡುಗಿ ಇದ್ದಾಳೆ ಅಂದು ಬಿಟ್ಟೆ" ಎಂದಾಗ ವಿಜಯಾ —

"ನಿಜವಾಗಲು ನಿಮ್ಮದು ತುಂಬ ದೊಡ್ಡ ಗುಣ, ಅಷ್ಟು ಹಣದ ಆಸೆ

ತೋರಿಸಿದರೂ. ನೀವು ಅವಳನ್ನು ವಿವಾಹವಾಗಿಲ್ಲ" ಎಂದು ಹೊಗಳು ತ್ತಿದ್ದಳು. ಆ ಹೊಗಳಿಕೆಯನ್ನು ಹೆಮ್ಮೆಯಿಂದ ಸ್ವೀಕರಿಸಿದ ಅವನು;

"ಅಯ್ಯೋ! ಮನಸ್ಸಿನಲ್ಲಿ ಒಂದು ಹುಡುಗಿಯ ರೂಪ ಪ್ರತಿಷ್ಠೆ ಆದ ಮೇಲೆ ಬೇರೆ ಹುಡುಗಿಯರ ರೂಪ, ಹಣ, ಏನು ಪರಿಣಾಮ ಮಾಡಲ್ಲ ವಿಜಯ. ನಿನ್ನ ನೋಡಿ ಹೋದ ಸುಮಾರಿಗೆ ನಮ್ಮ ಕಾಲೇಜಿನಲ್ಲಿಯೆ ಇನ್ನೊಂದು ಹುಡುಗಿ ಗಂಟು ಬಿತ್ತು. ರೂಪದಲ್ಲಿ ನಿನಗಿಂತ ಚೆನ್ನಾಗಿದ್ದಾಳೆ ಅನ್ನೊ. ನೀನು ಬಿ.ಎ. ಆದರೆ ಅವಳು ಎಂ.ಎ. ಆಗಾಗ ಸಹೋದ್ಯೋಗಿ ಅಂತ ಮಾತಾಡಿಸ್ತಿದ್ದೆ.

ಒಂದಿನ ಇದ್ದಕ್ಕಿದ್ದ ಹಾಗೆ ಅವರ ತಾಯಿ ಹೇಳಿಕಳಿಸಿ "ನಮ್ಮ ಹುಡುಗಿ ನಿಮ್ಮ ಗುಣಸ್ವಭಾವ ತುಂಬ ಇಷ್ಟ ಪಟ್ಟಿದ್ದಾಳೆ. ಅವಳನ್ನ ವಿವಾಹ ಆಗ್ತೀರೇನಪ್ಪಾ......?" ಅಂದರು-

"ಕ್ಷಮಿಸಿ ತಾಯಿ ನಾನು ಒಂದು ಹುಡುಗಿಯನ್ನ ಮನಸ್ಸಿಂದಾ ಒಪ್ಪಿದ್ದೀನೆ. ಬರುವ ವಾರ ಲಗ್ನಪತ್ರಿಕೆ ಅಂದೆ."

ಪಾಪ ಅವರು ನಿರಾಶರಾಗಿ—

"ನಮ್ಮ ಹುಡುಗಿಗೆ ಪುಣ್ಯವಿಲ್ಲಪ್ಪಾ......" ಅಂತ ನಿರಾಶರಾದರು, ಎಂದು ಕಥೆ ಹೇಳಿದ.

ಒಮ್ಮೆ ಸುಲಭಾ ಅವರ ಮನೆಗೆ ಕರೆದುಕೊಂಡು ಹೋಗಿ—

"ಅಮ್ಮ...... ಅವತ್ತು ನಿಮ್ಮನ್ನು ನಿರಾಶೆ ಪಡಿಸಲು ಈ ಹುಡುಗಿಯೇ ಕಾರಣ......ಈ ಹುಡುಗಿ ನನ್ನ ಮನಸ್ಸು ತುಂಬಿಬಿಟ್ಟಿದ್ದಳು" ಎಂದ.

ಆಕೆ ಆತ್ಮೀಯತೆಯಿಂದ—

"ಇರ್‍ಲಿ ಬಿಡಪ್ಪಾ......ಈ ಹುಡುಗಿ ಪುಣ್ಯ ಮಾಡಿದ್ದಾಳೆ, ನಿನ್ನ ಗುಣ ದೊಡ್ಡದು, ನಮಗಂತು ತುಂಬ ಇಷ್ಟ ಇತ್ತು. ಕೇಳಿದೆವು, ಋಣಾನುಬಂಧಾ ಇರಲಿಲ್ಲ" ಎಂದು ಕಣ್ಣೊರೆಸಿಕೊಂಡರು.

ಮಿಸ್. ಸುಲಭಾ ಆಗಾಗ ಅವನ ಕಾಲೇಜು ಸಹೋದ್ಯೋಗಿಗಳ ಗುಂಪಿನಲ್ಲಿ ಅವನ ಮನೆಯ ಸಂತೋಷಕೂಟಗಳಿಗೆ ಬರುತ್ತಿದ್ದಳು.

"ನಿಜವಾಗಿಯೂ ಮಿಸ್ ಸುಲಭಾ ಅಂತ ಹುಡುಗಿಯನ್ನು ತಿರಸ್ಕರಿಸಿ, ನೀವು ನನ್ನ ವಿವಾಹವಾಗಿದ್ದೀರಲ್ಲ. ನಿಮ್ಮ ಗುಣ ದೊಡ್ಡದು. ಇನ್ನು

ಲಗ್ನ ಪತ್ರಿಕೆ ಸಹಾ ಆಗಿರಲಿಲ್ಲ ಆಗ ನೀವು ಮನಸ್ಸು ಬದಲಿಸಿಬಿಟ್ಟಿದ್ರೆ ನನ್ನ ಗತಿ ಏನಿತ್ತು ?" ಎಂದು ಮಿಡಿಯುತ್ತಿದ್ದಳು.

ಆಗ ಅವನು ಹೆಮ್ಮೆಯಿಂದ—

"ರೂಪ, ಹಣ ಒಂದು ವಿಷಯಕ್ಕೂ ಸೋಲೋಸಲ್ಲ ಮರಿ ನಿನ್ನ ಸುರೇಶಾ" ಎಂದು ಅವಳನ್ನು ಮುದ್ದುಗರೆಯುತ್ತಿದ್ದ.

ತನ್ನ ಹಿಪಾಕ್ರಸಿ ಮರೆಸಿ ಹೆಂಡತಿಯ ಕಣ್ಣಲ್ಲಿ ದೊಡ್ಡ ಮನುಷ್ಯನಾಗಲು ನಡೆಸಿದ ಪ್ರಯತ್ನಗಳವು. ಆದರೆ ಬಹು ಬೇಗ ತನ್ನ ಸಂಸಾರ ಒಡೆದುಹೋಯಿತು.

ತನ್ನನ್ನು 'ಖಳನಾಯಕ' ಎಂದು ಗುರುತಿಸಿ......ಹೆಂಡತಿ ಹೊರಟು ಹೋದಳು. ಮೊದಮೊದಲು ಅವಳ ಬಗ್ಗೆ ಇದ್ದ ಕೋಪ ಎರಡು ವಾರಗಳ ನಂತರ ಸಂಪೂರ್ಣ ಮಾಯವಾಯಿತು. ಈಗ ವಿಜಯಳ ಬೆಲೆ ತಿಳಿಯಿತವನಿಗೆ.

ಪ್ರೀತಿಯ ನೆಪದಲ್ಲಿ ಎಷ್ಟೊಂದು ಕೆಲಸ ಮಾಡಿಸುತ್ತಿದ್ದೆ. ತನ್ನ ಸ್ನಾನಕ್ಕೆ ನೀರು ಬೆರೆಸಿಕೊಡುವುದರಿಂದ ಹಿಡಿದು, ತನ್ನ ಬೂಟ್ ಪಾಲಿಷ್ ಮಾಡುವುದರವರೆಗೆ ಎಲ್ಲಾ ಅವಳೇ ನಿರ್ವಹಿಸುತ್ತಿದ್ದಳು.

ಹೊಗಳುತ್ತ, ಉತ್ತೇಜಿಸುತ್ತಾ, ಮುದ್ದಿಸುತ್ತಾ ಅವಳಿಂದ ಎಲ್ಲಾ ಕೆಲಸ ತೆಗೆಯುತ್ತಿದ್ದೆ.

ಈಗ ಒಮ್ಮೆ ಕ್ರಾಪ್ ಬಾಚಲು ಗಂಟೆಗಟ್ಟಲೆ ಬಾಚಣಿಗೆ ಹುಡುಕಾಡಿದ್ದ, ಕನ್ನಡಿಯ ಮೇಲೆ ಧೂಳು ಕೂತಿದೆ ಆಗ ಮನೆಯನ್ನು ಸ್ವಚ್ಛವಾಗಿ ಕನ್ನಡಿಯ ಹಾಗೆ ಇಡುತ್ತಿದ್ದಳು.

ಎರಡು ಹೊತ್ತು ಎಂಥೆಂತಹ ರುಚಿಯಾದ ಅಡಿಗೆ......ಕಾಫಿ......ತಿಂಡಿ ಮಾಡಿಡುತ್ತಿದ್ದಳು. ಈಗ ಎರಡು ಹೊತ್ತು ಹೋಟೆಲಿನ ಕೂಳು. ಒಂದು ದಿನ ಅವನ ನಾಲ್ಕು ಗೆಳೆಯರು ಏನೋ ಮಾತಾಡಲು ಬಂದಿದ್ದರು.

ಅವರಿಗೆ ಅತಿಥಿ ಸತ್ಕಾರ ಎಂದು ಚಹ ಮಾಡಿಕೊಡಲು ತೊಳಲಾಡಿದ. ಚಹಾ ಮಾಡಲು ತೊಳೆದ ಬಟ್ಟಲಿಲ್ಲ... ಲೋಟಗಳು ತೊಳೆದದ್ದಿಲ್ಲ. ಹಾಲನ್ನೆ ಕಾಸಿ, ಕೋಂಪ್ಲಾನ್ ಬೆರೆಸಿ, ನಾಲ್ಕು ಗ್ಲಾಸ್‌ಗಳನ್ನು ತೊಳೆದು ತಟ್ಟೆಯಲ್ಲಿ ಇಟ್ಟು ತರುವ ಹೊತ್ತಿಗೆ ಸಾಕಪ್ಪಾ ಈ ಅತಿಥಿ ಸತ್ಕಾರ... ಇನ್ನು ಮೇಲೆ

ಯಾರು ಬಂದರೂ ಇಲ್ಲೇ ಹತ್ತಿರದಲ್ಲಿರುವ ಹೋಟೆಲಿಗೆ ಕರೆದೊಯ್ಯಬೇಕು" ಎಂದುಕೊಂಡ.

ಕೋಲ್ಡ್ ಪ್ಲಾನ್ ತುಟಿಗಿಟ್ಟ......ಅವನ ಆಪ್ತ ಗೆಳೆಯ ಚಂದ್ರನ್ "ಏನೊ ಮಹಾರಾಯ ಸಕ್ಕರೇನೆ ಹಾಕಿಲ್ಲ" ಎಂದಾಗ ಸಾರಿ ಎಂದು ಸಕ್ಕರೆ ತರಲು ಹೋದ. ಅವನು ಸಕ್ಕರೆ ತಂದಾಗ ಇನ್ನೊಬ್ಬರು ತುಂಬಿದ ಲೋಟಾ ಕೆಳಗೆ ಇಟ್ಟಿದ್ದರು.

ಅವರು ತನಗಿಂತ ಹಿರಿಯರು......ಸೀನಿಯರ್ ಪ್ರೊಫೆಸರ್,

"ಏಕೆ ಸಾರ್ ಕುಡಿಯಲಿಲ್ಲ ?" ಎಂದ.

"ಸಾರಿ......ಸಾಬೂನ್ನು ವಾಸನೆ ಇದೆ. ಕೈಗೆ ಲೋಟಾ ತಗೊಂಡಾಗ ಕೈಯೆಲ್ಲಾ ಸೋಪಿನ ನೊರೆ ಮೆತ್ತಿದೆ. ಕೈ ತೊಳೆಯಬೇಕು, ಒಳಗೆ ಬರಲಾ?" ಎಂದರು.

ಆತುರದಲ್ಲಿ ಸೋಪಿನ ಪುಡಿ ಹಚ್ಚಿ ಲೋಟಾ ತೊಳೆದಾಗ ಒಂದು ಲೋಟಾ ಸರಿಯಾಗಿ ತೊಳೆದಿಲ್ಲ "ಸಾರಿ......ಸಾರ್—" ಎಂದು ಬಚ್ಚಲು ಮನೆಗೆ ಕರೆದೊಯ್ದ.

ಅಲ್ಲಲ್ಲಿ ಬಿಚ್ಚಿ ಎಸೆದ, ಬನೀನು, ಅಂಡರ್‌ವೇರ್, ಲುಂಗಿಗಳು...... ಕೆಲವು ಹಗ್ಗದ ಮೇಲೆ ಕೆಲವು ನೆಲದ ಮೇಲೆ ಬಿದ್ದಿದ್ದವು. ಬಚ್ಚಲ ಪಕ್ಕದಲ್ಲಿ ಜಾರಿಕೆಯ ರಾಶಿ......ಜಾರಿಕೆ ಕಾಣುತ್ತಿದ್ದ ಬಚ್ಚಲು, ಅವರು ಕೈ ತೊಳೆದು ಬರುವಷ್ಟರಲ್ಲಿ ನಾಚಿಕೆಯಿಂದ ಅವನ ಜೀವ ಹಿಡಿಯಾಗಿತ್ತು. ಏಕಾದರೂ ಇವರನ್ನು ಬಚ್ಚಲು ಮನೆಗೆ ಕರೆದು ತಂದೆನೊ ? ಅದರ ಬದಲು ಅಲ್ಲೆ ಒಂದು ತಂಬಿಗೆ ನೀರು ತಂದು ಕೊಟ್ಟಿದ್ದರಾಗುತ್ತಿತ್ತು.

ವಿಜಯ ಇದ್ದಾಗ ಇದೇ ಬಚ್ಚಲು ಮನೆ ಎಷ್ಟು ಶುಭ್ರವಾಗಿ ಇಡುತ್ತಿದ್ದಳು.

ನಾಲ್ಕು ಜನಕ್ಕೆ ಒಂದು ಚಹಾ ಮಾಡಲು ಸುಸ್ತು ಹೊಡೆದು, ಕೋಲ್ಡ್ ಪ್ಲಾನ್ ಮಾಡಿದೆ. ಅದಕ್ಕೆ ತಟ್ಟೆ ಬಟ್ಟಲು ಒದಗಿಸುವಲ್ಲಿ ಎಷ್ಟು ಗಡಿಬಿಡಿ. ಆದರೆ ವಿಜಯಳಿದ್ದಾಗ ಕಾರಣ ಇಲ್ಲದೆ ಆಗಾಗ ಪಾರ್ಟಿ.

ತಾನು ಕಾಲೇಜಿನ ಅಸೋಸಿಯೇಷನ್ ಸೆಕ್ರೆಟರಿ ಆಗಿದ್ದು, ವಿಜಯಳ ಜೀವ ಹಿಂಡಿ ಹಿಪ್ಪೆ ಮಾಡಲಿಕ್ಕಾಗಿಯೆ ?

ಏನೇನೋ ದೊಡ್ಡ ಸ್ಥಿಕೆ ಎಂದು ಮುಖ್ಯ ಸಭೆಗಳನ್ನು ಮನೆಯಲ್ಲಿಯೆ ಕರೆದುಬಿಡುತ್ತಿದ್ದ. ಒಟ್ಟು ಕಾಲೇಜಿನ ಸಲವತ್ತು ಅಧ್ಯಾಪಕರಲ್ಲಿ ಹನ್ನೆರಡು ಜನ ಈ ಸಾಂಸ್ಕೃತಿಕ ಸಭೆಯ ಪದಾಧಿಕಾರಿಗಳು. ವಿದ್ಯಾರ್ಥಿ ವಿಭಾಗದ ಪದಾದಿಕಾರಿಗಳು, ವಿದ್ಯಾರ್ಥಿ ವಿಭಾಗದ ಪದಾಧಿಕಾರಿಗಳಿಬ್ಬರು, ಒಟ್ಟು ಹದಿನಾಲ್ಕು ಜನಕ್ಕೆ ಮಾಡಲು ವಿಜಯ ಸುಸ್ತು ಹೊಡೆದಳು.

"ಅಬ್ಬಾ! ಹೆಸರಿಗೆ ಗಂಡಾ ಹೆಂಡ್ತಿ ಇಬ್ಬರ್ದೆ ಸಂಸಾರ ಅರಾಮ ಅಂತ ಹೆಸರು. ಆದರೆ ತಿಂಗಳಿಗೊಮ್ಮೆ ಈ ಪಾರ್ಟಿ ಈ ಮನೆ ಅಲಂಕರಿಸಾಟಾ ಈ ತಿಂಡಿಗಳು ಮಾಡಾಟಾ......ಎಲ್ಲಕ್ಕಿಂತ ಹೆಚ್ಚಾಗಿ ಆ ತಟ್ಟೆ ಬಟ್ಟಲು ತೊಳೆದು ಹಾಕೋ ಹೊತ್ತಿಗೆ ಜೀವ ಬಿದ್ದು ಹೋಗತ್ತೆ." ತಾನು ಅವಳ ಗೊಣಗಾಟ ಕೇಳಿಸದಂತೆ ನಟಿಸಿ ಪೇಪರ್ ಓದುವುದರಲ್ಲಿ ಮಗ್ನನಾಗಿ ಇರುತ್ತಿದ್ದ.

ಒಮ್ಮೊಮ್ಮೆ ಅವಳ ಗೊಣಗಾಟ ಅತಿಯಾದಾಗ "ಏನು ಮುದುಕಿ ಆದ್ಹಾಗೆ ಆಡ್ತಿ ವಿಜಿ? ಪಕ್ಕದ ಮನೆ ಶೈಲಜಾ ಅವರನ್ನು ನೋಡು, ಹಗಲು ಇರುಳು ಹೇಗೆ ಕೆಲಸ ಮಾಡ್ತಾರೆ?" ಎಂದು ತಾನು ಗದರುತ್ತಿದ್ದ. ವಿಜಯ ಮುಖ ಚಿಕ್ಕದು ಮಾಡಿಕೊಂಡು ಸುಮ್ಮನೇ ಆಗುತ್ತಿದ್ದಳು.

ಒಟ್ಟಿನಲ್ಲಿ ಅವಳ ದುಡಿತಕ್ಕೆ ತನ್ನ ಸಹಾನುಭೂತಿ ಇರಲೇ ಇಲ್ಲ. "ನೋಡಿ ಮನೇಲಿ ಪಾರ್ಟಿ ಏರ್ಪಡಿಸಿ ಪರವಾಗಿಲ್ಲ. ಆದರೆ ಒಂದಿಷ್ಟು ಚೌಚೌ, ಮೈಸೂರ್‌ಪಾಕು, ಹಣ್ಣು ತಂದ್ಬಿಡಿ. ಉಪ್ಪಿಟ್ಟು ಕಾಫಿ ಮಾಡ್ತೀನಿ. ಮನೆ ಅಲಂಕರಿಸಿರ್‍ತೀನಿ" ಎನ್ನುತ್ತಿದ್ದಳು.

ಆದರೆ ನಾನು ಒಪ್ಪುತ್ತಿರಲಿಲ್ಲ.

"ಈ ಸೌಲಭ್ಯಕ್ಕೆ ಅವರನ್ನ ಮನೆಯವರೆಗೆ ಏಕೆ ಕರೆದುಕೊಂಡು ಬರಬೇಕು? ಅಲ್ಲೇ ಕಾಲೇಜ್ ಕ್ವಾಡ್ರಾಂಗಲ್‌ನಲ್ಲಿ ಸಭೆ ಮುಗಿಸಿ, ಅಲ್ಲೇ ನಮ್ಮ ಕಾಲೇಜುಹತ್ತಿರ ಇರೊ ಒಂದು ಅಧ್ವಾನ ಹೋಟೆಲಿನಲ್ಲಿ ಕಾಫಿ ಮಸಾಲ ದೋಸೆ ಕೊಡಿಸಬಹುದು. ನಮ್ಮ ಕಾಲೇಜಿನ ಸೈನ್ಸ್ ಕ್ಲಬ್‌ನೋರು ಹಾಗೆ ಮಾಡ್ತಾರೆ, ಮ್ಯಾಗಜೈನ್ ಕಮಿಟಿಯವರು ಹಾಗೇ ಮಾಡ್ತಾರೆ. ಅವರಿಗೆಲ್ಲಾ ನಮ್ಮ ಆರ್ಟ್ಸ್ ಅಂಡ್ ಲಿಟ್ರೇಚರ್ ಅಸೋಸಿಯೇಷನ್ ಸಭೆಗಳ ಮೇಲೆ ಕಣ್ಣು. ಸುರೇಶ್ ಏರ್ಪಡಿಸಿದ ಸಭೆಗಳಲ್ಲಿ ತಿಂಡಿ ತಿನ್ನೋದೆ ಒಂದು

ಅದೃಷ್ಟ ಅವರ ಹೆಂಡತಿಯು ನಳಪಾಕ ಅಂತಿರ್ತಾರೆ ನಮ್ಮ ಮನೆ ಡೆಕೋರೇಷನ್ ಬಗ್ಗೆ ಎಷ್ಟು ಅಪ್ರಿಷಿಯೇಟ್ ಮಾಡ್ತಾರೆ ಗೊತ್ತಾ?" ಎಂದು ಏನೇನೋ ಪುಲಾಯಿಸಿ, ಹೊಗಳಿ ಉಬ್ಬಿಸುತ್ತಿದ್ದ.

"ವಿಜಿ ಮೊನ್ನೆ ನಮ್ಮ ಸೀನಿಯರ್ ಪ್ರೊಫೆಸರ್ ರಾಘವ ಏನಂದ್ರು ಗೊತ್ತಾ? ಅವರಂತು ಯಾರನ್ನು ಹೊಗಳೋದಿಲ್ಲ, ಅಂತದ್ದು ನಂಗೆ— ನೀವೇನಪ್ಪಾ? ಸೌಂದರ್ಯಪ್ರಿಯರು, ನಿಮಗೆ ಎಲ್ಲದರಲ್ಲಿ ಸೆನ್ಸ್ಆಫ್‌ಬ್ಯೂಟಿ ಇದೆ. ನಿಮ್ಮ ಮನೆ ಸುಂದರ.... ನೀವು ಸುಂದರ.... ನಿಮ್ಮ ಪತ್ನಿ ಸುಂದರ, ಆದಕ್ಕೆ ನೀವು ಕೈಗೊಂಡ ಪ್ರತಿ ಪ್ರೋಗ್ರಾಂ ಸಹ ಅಚ್ಚುಕಟ್ಟಾಗಿ ಸುಂದರವಾಗಿರುತ್ತವೆ" ಅಂದರು

ಒಟ್ಟಿನಲ್ಲಿ ವಿಜಯ ದುಡಿದು ಹೈರಣಾ ಆಗುತ್ತಿದ್ದಳು. ಮಧುಚಂದ್ರದ ದಿನಗಳು ಕೇವಲ ಆಕೆಯ ಪಾಲಿಗೆ ಒಂದೆರಡು ತಿಂಗಳು ಮಾತ್ರ ಇದ್ದವೆ? ಆಗಷ್ಟೇ ತಾನು ಅವಳನ್ನು ಆಗಾಗ ಓಲೈಸಿ ಹೊಸ ಸೀರೆ, ಪ್ರೀತಿ ಪ್ರೇಮ, ತಿರುಗಾಟಾ, ಸಿನಿಮ, ಪಾರ್ಕ್, ಎಂದು ಓಲೈಸಿದ್ದು, ಆನಂದದ ದಿನಗಳು. ಧರ್ಮಪತ್ನಿಯಾದ ಅವಳು ತಾನು ಹೇಳಿದಂತೆ ಕೇಳುತ್ತಾ ಪತಿಸೇವೆ ಮಾಡುತ್ತಿದ್ದಳು. ತನ್ನನ್ನು ಓಲೈಸುವುದೇ ಅವಳ ಕರ್ತವ್ಯ ಎಂಬಂತೆ ತಿಳಿದು ಕೊಂಡಿದ್ದ.

ತಾನು ಅವಳ ಮನಸ್ಸಿನ ಆಸೆ ಆಕಾಂಕ್ಷೆಗೆ ಸುಖಸಂತಸಕ್ಕೆ ಎಷ್ಟು ಬೆಲೆ ಕೊಟ್ಟಿದ್ದೆ. .

ಸುಗಮಸಂಗೀತದ ಅಭ್ಯಾಸಕ್ಕೆ ಎಂದು ಕಾಲೇಜಿಗೆ ರಜಾ ಬಂದಾಗ ಯಾವುದೋ ಸಂಗೀತ ಶಾಲೆಗೆ ಹೋಗಿಬರುತ್ತಿದ್ದ. ಕಾಲೇಜ್ ಹೇಗೆ.... ಟೀಚರ್ಸ್ ಕಡೆಯಿಂದ ಎಂದು.....ಒಂದು ನಾಟಕ ಇತ್ತು. ತಾನು ರಿಹರ್ಸಲ್ ಮುಗಿಸಿ ಬರಲು ಎಂಟುಗಂಟೆ ಆಗುತ್ತಿತ್ತು.

ಕಾಲೇಜಿನ ಉದ್ಯೋಗವಲ್ಲದೆ ತಾನು ಇಂತಹ ಹಲವಾರು ಚಟುವಟಿಕೆ ಹಚ್ಚಿಕೊಂಡು ತಿರುಗಿದರೂ ವಿಜಿ ಗೊಣಗಾಡುತ್ತಿರಲಿಲ್ಲ. ತರಕಾರಿ, ದಿನಸಿ ತರುವುದು, ಲೈಟ್‌ಬಿಲ್ ಕಟ್ಟಿ ಬರುವುದು, ರೇಷನ್ ತರುವುದು ಎಲ್ಲಾ ನಿರ್ವಹಿಸುತ್ತಿದ್ದಳು.

ತಾನು ಇಬ್ಬರು ಹುಡುಗಿಯರನ್ನು ಅವಳಿಗಾಗಿ ತಿರಸ್ಕರಿಸಿದ್ದೆ ಎಂದು

ಆಗಾಗ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದ. ಅವಳನ್ನು ಮರುಳು ಮಾಡಿ ಒಲ್ಲೈಸಲು. ಆದರೆ ಇದರಲ್ಲಿಯೂ ಕೊಂಚ ಸ್ವಾರ್ಥವೇ ಇತ್ತು. ವಿಜಯಳ ಗೆಳತಿ ಲಲಿತ ಒಂದು ಚೂರು ಸೌಂದರ್ಯವತಿಯಲ್ಲ. ಗಡುಸಾದ ಗಂಡು ಮುಖದ ಹುಡುಗಿ. ಅವನ ಸೌಂದರ್ಯ ಪ್ರಜ್ಞೆಗೆ, ಅವನ ರೂಪಕ್ಕೆ ಸವಾಲು ಹಾಕುವಂತಹ ಹುಡುಗಿ. ಬರಿ ದುಡ್ಡಿಗಾಗಿ ಅವಳನ್ನು ವಿವಾಹ ಆಗಿ___ ಜೀವಮಾನ ಪೂರ್ತಿ ಆ ಕುರೂಪಿಯೊಡನೆ ಸಂಸಾರ ಮಾಡಿಕೊಂಡಿರಲು ಅವನು ಸಿದ್ಧನಿರಲಿಲ್ಲ.

ಇನ್ನು ಸುಲಭಾನ ತಾಯಿ ಒಮ್ಮೆ ಕೇಳಿದ್ದು ನಿಜ. ಇಪ್ಪತ್ತಾರು ವರ್ಷದ ಸುಲಭ ತುಂಬ ಸುಂದರಿ. ಆದರೆ ಕಾಲೇಜಿನ ಅನೇಕ ಅಧ್ಯಾಪಕರೊಡನೆ ಆತ್ಮೀಯವಾಗಿ ಹರಟುತ್ತಿದ್ದಳು. ಕೆಲವರ ಜೊತೆ ಕಾಫಿಗೆ ಹೋಗಿ ಬರುತ್ತಿದ್ದಳು.

ಒಮ್ಮೊಮ್ಮೆ ಸಂಜೆ ಅವಳ ಮನೆಯ ಕಡೆ ಹೋಗುವ ಶಾಂತಮೂರ್ತಿ ಎಂಬ ಲೆಕ್ಚರರ್ ಜೊತೆ ಸ್ಕೂಟರಲ್ಲಿ ಕುಳಿತು ಹೋಗುತ್ತಿದ್ದದ್ದು ಉಂಟು.

ಮಳೆ ಮೋಡಾ ಇದ್ದಾಗ ಹಾಗೆ ಕರೆದೊಯ್ದು ಅವನಿಗೆ ಮೂರನೆಯ ದಿನ ಎಲ್ಲರೆದುರಿಗೆ—

"ಸಧ್ಯ ನಿಮ್ಮಿಂದಾ ನಿನ್ನೆ ಸಿಟಿ ಬಸ್ ಕಾಯೋದು ತಪ್ಪಿತು. ಇಲ್ದಿದ್ರೆ ಘನಘೋರ ಮಳೆಯಲ್ಲಿ ಸಿಕ್ಕಿಬೀಳ್ತಿದ್ದೆ. ನಿಮಗೆ ತುಂಬ ಥ್ಯಾಂಕ್ಸ್ ಸಾರ್" ಎನ್ನುತ್ತಿದ್ದಳು.

"ಅಯ್ಯೊ! ನಾನು ಮನೇಲಿ ಬೈಸ್ಕೊಂಡೆ ಮೇಡಂ. ಕೊಂಚ ಲೇಟಾದರೂ ನನ್ನ ಮಿಸೆಸ್ ತರಾಟೆಗೆ ತಗೋತಾಳೆ. ನೀವು ರಿಕ್ಷಾದಲ್ಲಿ ಹೋಗ್ಬಿಡಿ ಇನ್ನು ಮೇಲೆ" ಎಂದರು.

ಒಂದೆರಡು ಭಾರಿ ತಮಾಷೆಗೆಂಬಂತೆ ಅವರಿಂದ ಹೀಗೆ ಅನಿಸಿಕೊಂಡು ಅವಳು ಮುಖ ಸಣ್ಣದು ಮಾಡಿಕೊಂಡದ್ದು ಗಮನಿಸಿ ಸುರೇಶ ಬೇಸರಗೊಂಡಿದ್ದ.

ಒಮ್ಮೆ ಅವಳು ಸ್ಕೂಟರ್ ಸ್ಟ್ಯಾಂಡಿನ ಬಳಿ ಬಂದು "ಸಾರ್......ಇವತ್ತು ಬಸ್ ಸ್ಟ್ರೈಕಿದೆ. ನನಗೆ ಡ್ರಾಪ್ ಮಾಡ್ತೀರಾ ?" ಎಂದಳು.

"ಮೇಡಂ......ನಾನು ಮನೆ ಕಡೇ ಹೋಗ್ತಾ ಇಲ್ಲ......ಆಸ್ಪತ್ರೆಯ ಕಡೇ ಹೋಗ್ತಾ ಇದ್ದೀನಿ" ಎಂದು ಒರಟಾಗಿ ನುಡಿದು, ಆ ನೀರಸ ಮುಖದ ವ್ಯಕ್ತಿ ಹೊರಟುಬಿಟ್ಟ. ಖಿನ್ನಳಾಗಿ ನಿಂತಿದ್ದ ಅವಳ ಬಳಿ ಸುರೇಶಾ ಬಂದು "ಮೇಡಂ......ಬನ್ನಿ, ನಾನು ನಿಮ್ಮನ್ನು ಡ್ರಾಪ್ ಮಾಡ್ತೀನಿ" ಎಂದ.

"ಛೇ......ಛೇ ಬೇಡಿ, ನಿಮ್ಮ ಮನೆ ಎಲ್ಲಿದೆಯೊ ಏನೋ ' ನೀವು ಯಾವ ಕಡೇ ಹೋಗ್ಬೇಕೊ ಏನೋ......? ಮಿ||ಶಾಂತಮೂರ್ತಿ ಅದರೆ ನಮ್ಮನೆ ಸಾಲಿನಲ್ಲೆ ಇದ್ದಾರೆ. ನಮ್ಮನೆಯಿಂದ ಮೂರನೆ ಮನೆ ಅವರದು. ಅದಕ್ಕಾಗಿ ಕೇಳ್ದೆ ಎಂದಳು.

"ಇಡೀ ಕಾಲೇಜಿನಲ್ಲಿ ಎಲ್ಲರಿಗು ಗೊತ್ತು ಅವರು ಹೆನ್‌ಪೆಕ್ಡ್ ಅಂತ. ಬನ್ನಿ ಪರವಾಗಿಲ್ಲ, ಲೇಡೀಸ್ ಕರ್ಟಸಿ ಅನ್ನೋ ದೃಷ್ಟಿಯಿಂದ ನಾನು ಸಹಾಯ ಮಾಡ್ತೀನಿ" ಎಂದು ಕರೆದೊಯ್ದ.

ಮನೆಯವರೆಗೂ ಕರೆತಂದು ಬಿಟ್ಟಾಗ ಒಳಗೆ ಆಹ್ವಾನಿಸಿ, ತಾಯಿಯನ್ನು ಪರಿಚಯ ಮಾಡಿಸಿ, ಕಾಫಿ ಸಹ ಕೊಟ್ಟಳು.

ಅವಳು ಕಾಲೇಜಿಗೆ ಬಂದು ಆರು ತಿಂಗಳಾಗಿತ್ತು. ಇಬ್ಬರಿಗೂ ಔಪಚಾರಿಕ ಪರಿಚಯ ಇತ್ತು. ವಿಜಯಳ ವಧುಪರೀಕ್ಷೆ ಆದ ಮೇಲೆ ಹುಡುಗಿ ತನ್ನನ್ನು ಒಪ್ಪಿಲ್ಲ ಎಂದಾಗ ಮನಸ್ಸು ಸಿಡಿದು ಎದ್ದಿತ್ತು. ಕೆಲಸದಲ್ಲಿ ಇರುವ ಹುಡುಗಿಯರು ಅವನಿಗೆ ಇಷ್ಟವಿರಲಿಲ್ಲ. ಜೊತೆಗೆ ಸುಲಭಾ ಇಪ್ಪತ್ತಾರ ವರ್ಷದ ಪ್ರೌಢೆ. ಹೀಗಾಗಿ ಅವನು ಸುಲಭಳ ಬಗ್ಗೆ ಯಾವ ಭಾವನೆ ಬೆಳಸಿಕೊಂಡಿರಲಿಲ್ಲ.

ಆದರೆ ವಿಜಯಳಿಂದ ತಿರಸ್ಕೃತನಾದ ಮೇಲೆ ರೂಪವಂತು ಚೆನ್ನಾಗಿದೆ ಒಲಿದು ಬಂದು ಒಂದಾದರೆ ಕೆಲಸದಿಂದ ಬಿಡಿಸಬಹುದು......ಎಂದು ತಾನಾಗಿ ಮೇಲೆ ಬಿದ್ದು ಸ್ನೇಹಾ ಗಳಿಸಿಕೊಂಡ.

ಆತ್ಮೀಯವಾಗಿ ಮಾತಾಡುವಾಗ,ಅವಳ ಸ್ವಂತ ವಿಷಯ ಆಶೆ ಆಕಾಂಕ್ಷೆ ಎಲ್ಲಾ ವಿಚಾರಿಸಿ ಕೊಂಡಿದ್ದ. ತೀರ ಬಡತನದಲ್ಲಿ, ಕಷ್ಟದಲ್ಲಿದ್ದು ಮುಂದೆ ಬಂದ ಕುಟುಂಬ.

ಇತ್ತೀಚೆಗೆ ಅವಳಿಗೆ ಕಾಲೇಜಿನಲ್ಲಿ ಕೆಲಸಾ ಸಿಕ್ಕಿದಾಗಿನಿಂದ ಮನೆಯಲ್ಲಿ ಕೊಂಚ ಪರಿಸ್ಥಿತಿಯೇನೊ ಸರವಾಗಿಲ್ಲ. ಒಂದೆರಡು ವರಗಳು ತನ್ನನ್ನು ನೋಡಿ ಇಷ್ಟಪಟ್ಟರು. ಆದರೆ ಹತ್ತು ಸಾವಿರ ರೂ ಖರ್ಚು ಮಾಡಿ ವಿವಾಹ ಮಾಡುವ ಯೋಗ್ಯತೆ ತಾಯಿಗಿಲ್ಲ. ಈಗಾಗಲೇ ತನ್ನ ಉದ್ಯೋಗದ ಸಲುವಾಗಿ ಯಾರೋ ಮಧ್ಯವರ್ತಿಗಳಿಗೆ ಕೊಡಲು ಐದು ಸಾವಿರ ರೂ. ಸಾಲಾ ಮಾಡಿದ್ದೇವೆ. ಆ ಸಾಲಾ ತೀರಿಸುತ್ತಿದ್ದೇವೆ, ತಮ್ಮನಿಗೆ ಬ್ಯಾಂಕಿನಲ್ಲಿ ಅಟೆಂಡರ್ ಕೆಲಸಾ ಸಿಗದೆ. ಅದಕ್ಕೆ ಸಹ ಆ ಮಧ್ಯವರ್ತಿಗೆ ಐದು ಸಾವಿರ ರೂ. ಕೊಡಲಿದ್ದೇವೆ. ಈ ಸಾಲಾ ಸಹ ನಾವೆ ತೀರಿಸಬೇಕು ಎಂದು ಎಲ್ಲಾ ಹೇಳಿದಳು.

"ಸಪೋಸ್ ನೀವು ಮದುವೆ ಆಗಿ ಹೊರಟು ಹೋದರೆ ನಿಮ್ಮ ತಮ್ಮನೆ ಸಾಲಾ ತೀರಿಸಬೇಕಾಗಬಹುದು" ಎಂದ. ಸುಲಭಾ ನಕ್ಕು—

"ಇಲ್ರಿ ಯಾವುದೇ ಗಂಡು ಬಂದ್ರೂ ನಮ್ಮನೆ ಪರಿಸ್ಥಿತಿ ಮನಸು ಬಿಚ್ಚಿ ತಿಳಿಸ್ತೀವಿ ಹನ್ನೆರಡು ಸಾವಿರ ಸಾಲಾ ತೀರಿಸಬೇಕು, ಜೊತೆಗೆ ತಾಯಿ ತಮ್ಮ ನನ್ನ ಜೊತೆಗಿರ್ತಾರೆ. ನಾನು ಉದ್ಯೋಗಕ್ಕೆ ಹೋಗೋಳು, ಜೊತೆಗೆ ನನಗೆ ಅಡಿಗೆ ಕೆಲಸಾ ಏನೇನು ಬರಲ್ಲ. ನಾನು ಅರ್ನ್ ಮಾಡ್ತಿರೋದ್ರಿಂದ ನನ್ನದಾದ ಕೆಲವು ಬೇಡಿಕೆಗಳನ್ನ ಮಂಡಿಸಬಹುದು ಅಲ್ಲವಾ ?" ಎಂದಳು.

"ಸಪೋಸ್ ! ಉದ್ಯೋಗವೆ ಬೇಡಾ ಅನ್ನೋ ಗಂಡ ಸಿಕ್ಕಿದರೆ ?" ಸುರೇಶ್ ಪ್ರಶ್ನೆ ಮಾಡಿದ. ಸುಲಭಾ ಹೌಹಾರಿ—

"ಅಯ್ಯೊ ! ಪ್ರಾಣಾ ಹೋದರೂ ಉದ್ಯೋಗ ಮಾತ್ರ ಬಿಡಲ್ಲಾರೀ ಈಗಿನ ಕಾಲದಲ್ಲಿ ಸಿಕ್ಕಿದ ಕೆಲಸಾ ಬಿಡೋರುಂಟೆ ? ಸಾಧ್ಯವೆ ಇಲ್ಲ" ಎಂದಳು

ಇನ್ನೊಮ್ಮೆ ಅವರ ಮನೆಗೆ ಹೋಗಿ ಮಾತನಾಡುತ್ತ ಕೂತಿದ್ದ. ರಾತ್ರಿ ಎಂಟೂವರೆ, ಸುರೇಶ ಹೊರಡಲು ಸಿದ್ಧನಾದರೂ ಸುಲಭಳ ತಾಯಿ —

"ನೀವು ಬ್ರಹ್ಮಚಾರಿ. ಇನ್ನು ಹೋದರೆ ಹೋಟಲಿಗೆ ಹೋಗಬೇಕು. ಊಟ ಮಾಡಿಕೊಂಡೇ ಹೋಗಪ್ಪಾ" ಎಂದು ಉಪಚರಿಸಿದ್ದರು.

ಊಟ ಮಾಡುತ್ತಿದ್ದಾಗ ಯಾರೋ ಬಾಗಿಲು ತಟ್ಟಿದರು. ಸುಲಭಾಳೆ ಬಾಗಿಲು ತೆರೆದಳು. ನಂತರ ಸಂಭ್ರಮದಿಂದ "ಅಮ್ಮ, ತಮ್ಮಣ್ಣಾ ಬಂದಿದ್ದಾರೆ" ಎಂದಳು. ಪುಟ್ಟ ನಡುಮನೆಯ ಒಂದು ಬದಿಗೆ ಮೂರು ಎಲೆ ಹಾಕಿ

ಸುರೇಶಾ, ಸುಲಭಾ, ಹಾಗು ಸುಲಭಳ ತಮ್ಮ ಊಟಕ್ಕೆ ಕೂತಿದ್ದರು. ತಮ್ಮಣ್ಣಾ ಎಂಬ ಸಲ್ವತ್ತರ ಪ್ರೌಢ ವ್ಯಕ್ತಿಯೂ ಅಲ್ಲೇ ಇದ್ದ ಕುರ್ಚಿಯ ಮೇಲೆ ಕೂತ, ಸುಲಭ ಹಾಗು ಅವಳ ತಾಯಿ ದೇವರನ್ನು ಕಂಡ ಭಕ್ತನಂತೆ ಆ ವ್ಯಕ್ತಿಯನ್ನು ಉಪಚರಿಸಿದರು. ಆತ ಬಿಗುವಾಗಿಯೇ ಇದ್ದ, "ಮುಖ್ಯ ವಿಷಯ ಹೇಳಬೇಕಾಗಿತ್ತು. ಇಲ್ಲಿ ಎಲ್ಲರ ಎದುರಿಗೆ ಹೇಳೋದು ಹ್ಯಾಗೆ?" ಎಂದ. ಊಟಕ್ಕೆ ಕೂತಿದ್ದ ಸುರೇಶಾ ಚಡಪಡಿಸಿದ. ಸುಲಭಳ ತಾಯಿ "ಸುಲಭಾ ಅವರನ್ನ ರೂಮಿಗೆ ಕರೆದುಕೊಂಡು ಹೋಗಿ ಮಾತಾಡಮ್ಮ" ಎಂದರು.

ಆ ಹಜಾರಕ್ಕಂಟಿದ ಪುಟ್ಟ ಕೋಣೆ, ಸುಲಭಾ ಆತನ ಜೊತೆ ಕೋಣೆಗೆ ಹೋದಳು ಹತ್ತು ನಿಮಿಷದ ಮಾತು ಕಥೆ. ಸುರೇಶನಿಗೆ ಇಲ್ಲಿ ಈಕೆ ಉಪಚರಿಸಿ ಬಡಿಸುತ್ತಿದ್ದರು. ಮಾತು ಮುಗಿಸಿ ಆತ ಹೊರಟ.

ಸುಲಭಾ ಅವಳ ತಾಯಿ ಬಾಗಿಲವರೆಗೆ ಬೀಳ್ಕೊಟ್ಟು ಬಂದರು ಸುಲಭಳ ತಾಯಿ ಆಶೆಯಿಂದ "ಸುಲಭಾ ಆತ ಏನು ಹೇಳಿದರೆ?" ಎಂದರು. ಸುಲಭಾ ಚಿಂತೆಯಿಂದ "ಅಮ್ಮ ಅವತ್ತು ಒಬ್ಬಾತ ಇವರಜೊತೇಲಿ ಬಂದಿದ್ರಲ್ಲ. ಅವರೇ ಶಿವಮೊಗ್ಗೆ ಕೆಲಸಾ ಕೊಡಿಸೋರು. ಅವರು ಐದು ಸಾವಿರಕ್ಕೆ ಒಪ್ಪಲಿಲ್ಲ ವಂತೆ, ಎಂಟು ಸಾವಿರ ಕೇಳ್ತಿದ್ದಾರಂತೆ. ಎಂಟು ಸಾವಿರ ಸಾಲ ನಾನೇ ಕೊಡ್ತೀನಿ. ಕಂತುಗಳು ಇನ್ನುಮೇಲೆ ತಿಂಗಳಿಗೆ ಆರುನೂರು ರೂ. ಕೊಡ್ತೀರಾ? ಅಂದರು. ಆಗಲಿ ಅಂದೆ" ಎಂದಳು.

"ಬಂಗಾರದಂತಹ ಮನುಷ್ಯ, ಸಾವಿರಾರು ರೂಪಾಯಿ ಸಾಲಾ ನಮ್ಮಂತಹ ಬಡವರಿಗೆ ಏನು ನೋಡಿ ಕೊಡ್ತಾರೆ? ಆತ ದೇವರು" ಎಂದು. ಸುಲಭಳ ತಾಯಿ ವರ್ಣಿಸಿದರು.

ಏಕೊ ಸುರೇಶನಿಗೆ ಅಂದಿನಿಂದ ಅವರ ಮನೆಗೆ ಹೋಗಲು ಮನಸ್ಸು ಬರಲಿಲ್ಲ. ಒಂದು ತಿಂಗಳ ನಂತರ ಸುಲಭಾ ಕರೆದಳು.

"ಅಮ್ಮ ನಿಮ್ಮನ್ನ ಕರ್ಕೊಂಬಾಂತ ಅಂದಳು. ಶಿವಮೊಗ್ಗೆ ಕೆಲಸ ಸಿಕ್ಕಿದೆ. ಇವತ್ತು ಸ್ವೀಟ್ಸ್ ಮೈಸೂರು ಪಾಕ್ ಮಾಡಿದ್ದಾಳೆ ಬರಬೇಕಂತೆ" ಎಂದು ಒತ್ತಾಯ ಮಾಡಿ ಕರೆದೊಯ್ದಳು.

"ಏನಪ್ಪಾ ಈ ನಡುವೆ ಒಂದು ತಿಂಗಳಾಯ್ತು ತಾವು ಬರಲೇ ಇಲ್ಲ" ಎಂದರು ಸುಲಭಳ ತಾಯಿ.

"ಮಗನಿಗೆ ಕೆಲಸ ಸಿಕ್ಕಿದೆಯಂತಲ್ಲಮ್ಮ, ತುಂಬ ಸಂತೋಷ. ಶಾಮು ಕನ್‌ಗ್ರಾಟ್ಸ್ ಹೇಳ್ಲಿಕ್ಕೆ ಬಂದೆ. "ಸಿಹಿ ಕೊಡಿ" ಎಂದು ಸರಳವಾಗಿ ಮಾತಾಡಿದ. ಅನಂತರ ತಾನು ನಾಲ್ಕು ದಿನ ಒಟ್ಟಿಗೆ ರಜಾ ಬಂದಾಗ, ಬೆಂಗಳೂರಿನ ಅಕ್ಕನ ಮನೆಗೆ ಹೋಗಿದ್ದು ತಿಳಿಸಿದ. ಆಕೆ ಉಪಚರಿಸಿದ ಮೈಸೂರುಪಾಕು ಬೊಂಬಾಯಿ ಬೋಂಡ ತಂದಿತ್ತು ಲೋಕಾಭಿರಾಮವಾಗಿ ಕೊಂಚ ಹೊತ್ತು ಮಾತಾಡಿಸಿ, ಅವನ ತಂದೆ ತಾಯಿಗಳ ಬಗ್ಗೆ ತಿಳಿದುಕೊಂಡರು.

"ಏನಪ್ಪಾ ತಾವು ತಪ್ಪು ತಿಳಿದು ಕೊಳ್ಳದೇ ಇದ್ದರೆ ಮನಸ್ಸಿನಲ್ಲಿರೊ ವಿಷಯ ಹೇಳ್ತೀನಿ" ಎಂದರು. ಸುರೇಶಾ ವಿನಯದಿದ......

"ಹೇಳಿ ಅಮ್ಮ......" ಎಂದ.

"ಮಗನಿಗೆ ಕೆಲಸ ಸಿಕ್ಕಿದ್ದು ಹೇಗೊ ನನ್ನ ತಲೆ ಮೇಲಿನ ಒಂದು ಭಾರ ಇಳೀತು. ಶಾಮು ಇವಳ ಹಾಗೆ ಬುದ್ಧಿವಂತನಲ್ಲ. ನಾಲ್ಕು ಸಲ ಎಸ್ಸೆಲ್ಸಿ ಕಟ್ಟಿ ಅಂತು ಒಂದು ಪಾಸು ಅನಿಸಿಕೊಂಡ. ಬ್ಯಾಂಕಲ್ಲಿ ಒಂದು ಕೆಲಸವು ಸಿಕ್ಕಿದೆ ಸಾಕು. ಈಗ ಸುಲಭಳಿಗೆ ಇಪ್ಪತ್ತಾರು ವರ್ಷ. ಮದುವೆ ಆಗಿ ಒಡಲಿ ಅಂತ ಆಸೆ ಇದೆ ಅವಳಿಗೆ. ಸರಳವಾಗಿ ಒಂದೆರಡು ಸಾವಿರ ರೂ. ಖರ್ಚಲ್ಲಿ ವಿವಾಹ ಶಾಸ್ತ್ರೋಕ್ತವಾಗಿ ನಡೆಸಿದರೆ ಸಾಕೂಂತ ಎಷ್ಟೋ ಸಲ ಅಂದಿದ್ದೀರಂತೆ. ನಾವು ಅಷ್ಟು ಮಾಡಬಲ್ಲವರು. ಹತ್ತು ಹನ್ನೆರಡು ಸಾವಿರ ರೂ. ಸಾಲಾ ಇದೆ. ಅದನ್ನ ಅಕ್ಕ ತಮ್ಮ ಒಟ್ಟಿಗೆ ತೀರಿಸ್ತಾರೆ. ಮದುವೆ ಆದರೆ ಅವಳಿಗೆ ಎರಡು ಮಕ್ಕಳಾಗಿ ಬೆಳೆದು ದೊಡ್ಡೋರಾಗೋವರಿಗೆ ನಾನು ಜೊತೇಲಿರ್ತೀನಿ. ಏಕೆಂದರೆ ಕೆಲಸಕ್ಕೆ ಹೋಗೋ ಹೆಂಗಸರಿಗೆ ಮಗುವನ್ನು ನೋಡಿಕೊಳ್ಳಲು ಯಾರಾದರೂ ಬೇಕಲ್ಲ. ಶಾಮನ ಮದುವೆ ಆದ ಮೇಲೆ ನಾನು ನಿಮ್ಮನ್ನ ಬಿಟ್ಟು ಹೋಗೋಳು. ಶಾಮುನಿಗೆ ಈಗಿನ್ನು ಇಪ್ಪತ್ತೆರಡು ವರ್ಷ. ಮುಂದಿನ ಹತ್ತು ವರುಷಗಳ ಕಾಲ ಮಾತಾಡೋ ಹಾಗಿಲ್ಲ. ಏನಂತೀರಿ ?" ಎಂದರು. ಸುರೇಶಾ ವಿನಮ್ರನಾಗಿ—

"ಅಮ್ಮ ನನಗೆ ಬೆಂಗಳೂರಿನಲ್ಲಿ ಹುಡುಗಿ ಗೊತ್ತಾಗಿದೆ. ಬರೋವಾರ ಲಗ್ನಪತ್ರಿಕೆ, ಕಾಲೇಜನಲ್ಲಿ ಸುಲಭಾ ಎಲ್ಲಾ ಅಧ್ಯಾಪಕ, ಅಧ್ಯಾಪಕಿಯ

ರೊಡನೆ ಆತ್ಮೀಯವಾಗಿ ಮಾತಾಡ್ತಾ ಇರ್ತಾರೆ. ನಾನು ಸಹ ಎಲ್ಲರೊಂದಿಗೆ ಆತ್ಮೀಯವಾಗಿರ್ತೀನಿ, ಇದಕ್ಕಿಂತ ಹೆಚ್ಚಾಗಿ ನಮ್ಮಿಬ್ಬರಲ್ಲಿ ಯಾವ ಬಗೆಯ ಆತ್ಮೀಯತೆಯು ಇಲ್ಲ" ಎಂದ.

ಸುಲಭಳ ತಾಯಿ ಮುಖ ಕೆಡಿಸಿಕೊಳ್ಳದೆ "ತುಂಬ ಸಂತೋಷಪ್ಪಾ. ನಿಮ್ಮ ಮದುವೆ ಗೊತ್ತಾಗಿರೋದು ತಿಳೀದೆ ನಾನು ಮಗಳ ಹೆಸರು ಎತ್ತಿದೆ. ತಪ್ಪು ತಿಳ್ಕೋಬೇಡಿ" ಎಂದರು.

ಅವತ್ತು ತಮ್ಮಣ್ಣ ಬಂದರು. ಸುಲಭಳ ತಾಯಿ ಅವರನ್ನು ಕೊಂಡಾಡುತ್ತಾ "ನಿಮ್ಮ ಪುಣ್ಯದಿಂದ ಮಗನಿಗೆ ಕೆಲಸ ಸಿಕ್ಕಿತು. ಸಿಹಿ ಕೊಡ್ತೀನಿ ಇರಿ" ಎಂದು ತಂದುಕೊಟ್ಟರು.

"ಏನು ಬರಿ ಸಿಹಿ ಕೊಟ್ಟು ಓಡಿಸ್ತೀರಾ? ಇವತ್ತು ಇಲ್ಲೇ ಊಟ ಮಾಡ್ಲಿಕ್ಕೆ ಬಂದಿದ್ದೀನಿ" ಎಂದರಾತ.

"ಸಾಕ್ಷಾತ್ ಶ್ರೀ ಕೃಷ್ಣ ಪರಮಾತ್ಮ ಬಡ ವಿದುರನ ಮನೆ ಊಟಣ ಬಯಸಿದ ಹಾಗಾಯ್ತು. ಸುಲಭಾ ಅವರನ್ನ ಮಾತಾಡಿಸ್ತಿರಮ್ಮ. ನಾನು ಅಡಿಗೆ ಮಾಡಲು ಹೋಗ್ತೀನಿ" ಎಂದು ಆಕೆ ಒಳಗೆ ನಡೆದಾಗ ಆತ ಆಜ್ಞೆ ಮಾಡುವಂತೆ "ನೋಡಿ ತಿಳಿಸಾರು ಅನ್ನ ಅಷ್ಟೇ ಮಾಡಿ. ಜಾಸ್ತಿ ಮಾಡ ಬೇಡಿ. ಈ ತಿಂಡೀನೆ ಸಾಕಾಗಿದೆ" ಎಂದರು.

"ಜಾಸ್ತಿ ಬೇಡಾ.....ಚಟ್ನಿ ಪಲ್ಯ ಮಾಡಮ್ಮ, ಹಪ್ಪಳಾ ಸಂಡಿಗೆ ಕರೆದು ಬಿಡು, ತಮ್ಮಣ್ಣನವರು ನಮ್ಮನೇಲಿ ಊಟ ಮಾಡೋದೆ ಭಾಗ್ಯ" ಎಂದು ಹೊಗಳಿ ಉಬ್ಬಿಸಿದಳು ಸುಲಭಾ.

"ನಿನ್ನ ಪೈಂಟ್ಸ್ ಯಾವಾಗ ತೋರಿಸ್ತಿ?"

"ಬನ್ನಿ.....ಈಗಲೆ.ತೋರಿಸ್ತೀನಿ" ಎಂದು ಕೋಣೆಗೆ ಕರೆದೊಯ್ದಳು. ಗಾಜಿನ ಮೇಲೆ ಅವಳು ಮಾಡಿದ ಕೆಲವು ಚಿತ್ರಗಳನ್ನು ಸುರೇಶಾ ಈ ಮೊದಲೆ ನೋಡಿದ್ದ. ಕಾಲೇಜಿನ ಎಕ್ಸಿಬಿಷನ್ನಲ್ಲಿ ತಂದಿಟ್ಟಿದ್ದಳು.

ಸುರೇಶಾ ಹತ್ತು ನಿಮಿಷ ಟಬ್ಬನೆ ಕೂತಿದ್ದು ನಂತರ ಅಡಿಗೆ ಮನೆ ಬಾಗಿಲಿಗೆ ಬಂದು—

"ಅಮ್ಮ ಮನೆಗೆ ಹೋಗ್ತೀನಿ" ಎಂದ.

"ಹೋಗಿ ಬಾಪ್ಪಾ" ಎಂದಾಕೆ ನೀರಸ ಸ್ವರದಲ್ಲಿ ನುಡಿದರು. ಸುರೇಶ

ಹೊರಟುಬಿಟ್ಟ. ಅಂದಿನಿಂದ ಒಂದು ತಿಂಗಳ ಕಾಲ ಸುಲಭ ಅವನೊಡನೆ ಆತ್ಮೀಯವಾಗಿ ಮೊದಲಿನಂತೆ ಮಾತಾಡುತ್ತಿರಲಿಲ್ಲ. ವಿಜಯಳ ಗುಂಗಿನಲ್ಲಿದ್ದ ಸುರೇಶನೂ ಅವಳನ್ನು ಲಕ್ಷ್ಯ ಮಾಡಲಿಲ್ಲ. ವಿವಾಹವಾಗಿ ವಿಜಯ ಬಂದ ಎರಡು ತಿಂಗಳ ನಂತರ ಮತ್ತೆ ಕಾಲೇಜ್ ಆರ್ಟ್ಸ್ ಕ್ಲಬ್ ಕಾರಣವಾಗಿ ಇಬ್ಬರು ಒಂದಾದರು. ಸುಲಭಾ ಪ್ರೆಸಿಡೆಂಟ್ ಆದರೆ ಸುರೇಶಾ ಸೆಕ್ರೆಟರಿ.

ಈ ಅವಧಿಯಲ್ಲಿ ಇಬ್ಬರ ಸ್ನೇಹಾ ಚಿಗುರಿತು. ಆಗಾಗ ಪಾರ್ಟಿ, ಕೂಟಾ ಎಂದೂ ಬಂದರೂ ಸುಲಭಳನ್ನು ಮಾತ್ರ ಮನೆ ದೂರಾ ಎಂದು ಸುರೇಶನೇ ತನ್ನ ಸ್ಕೂಟರ್ ಹಿಂದೆ ಕರೆದೊಯ್ಯುತ್ತಿದ್ದ.

ಆರೇಳು ತಿಂಗಳ ನಂತರ ಸುಲಭಾ ಸ್ಕೂಟರಿಗೆ ಸಾಲಾ ಕೇಳಿದಾಗ "ನೀವು ಈ ಸಾಲಾ ಆ ತಮ್ಮಣ್ಣನ ಹತ್ತಿರ ಸಾಲಾ ತಗೋಬೇಡಿ, ನಾನೇ ಕೊಡ್ತೀನಿ. ನಿಮ್ಮ ತಮ್ಮಣ್ಣನಿಗಾದರೆ ಬಡ್ಡಿ ಕೊಡಬೇಕು. ನನಗೆ ಬಡ್ಡಿ ಗಿಡ್ಡಿ ಬೇಡಾ......" ಎಂದು ತಾನೇ ಹದಿನೈದು ಸಾವಿರ ಸಾಲಾ ನೀಡಿದ.

ಆಗ ಅವನ ಮನಸ್ಸಿನಲ್ಲಿ ಒಂದು ಧೂರ್ತತನವೂ ಇತ್ತು. ಶಾಕುಂತಲ ನಾಟಕವನ್ನು ಪ್ರೇಮ ರಸಮಯ ಸಂಭಾಷಣೆಗಳಿಂದ ತಾನೆ ರಚಿಸಿದ್ದ. ಸಾಲ ಕೊಟ್ಟು ದಾಕ್ಷಿಣ್ಯದಲ್ಲಿ ಸಿಕ್ಕಿಹಾಕಿಸಿ, ನಾಟಕದಲ್ಲಿ ಅವಳು ಅಭಿನಯಿಸಬೇಕೆಂದು ಕೇಳಬೇಕೆಂದುಕೊಂಡ.

ಆದರೆ ಸಾಲಾ ಪಡೆದ ಎರಡು ವಾರದ ನಂತರ ಅವಳು ಕಾಲೇಜು ಸ್ಟಾಫ್ ರೂಂನಲ್ಲಿ ಎಲ್ಲರಿಗೂ ಸಿಹಿ ಹಂಚಿದಳು.

"ಏನ್ರಿ ವಿಶೇಷಾ ? ಹೋದವಾರ ಸ್ಕೂಟರ್ ತಗೊಂಡಿದ್ದಕ್ಕೆ ಸಿಹಿ ಹಂಚಿದಿರಿ, ಈ ವಾರ ಏನು ವಿಶೇಷಾ......?" ಎಂದರು ಕೆಲವು ಅಧ್ಯಾಪಕರು.

"ನಿನ್ನೆ ನನ್ನ ಮದುವೆ ನಿಶ್ಚಯ ಆಯ್ತು. ಈ ಊರಿನ ವಿಜಯ ಮೆಡಿಕಲ್‌ಸ್ಟೋರ್ ಪಾಲುದಾರ, ವಿಜಯಕುಮಾರ್ ಅಂತ ಅವರ ಹೆಸರು. ಫಾರ್ಮಸಿಸ್ಟ್ ಎಂದು [illegible] ಹೇಳಿದಳು. ಮನೆ ಚಿಕ್ಕದಾದ್ದರಿಂದ ಯಾರನ್ನು ಕರೆಯಲಿಲ್ಲ" ಎಂದಳು.

ಅವಳಿಗೆ ಮದುವೆ ಗೊತ್ತಾದ ಸುದ್ದಿಯನ್ನು ವಿಜಯಳಿಗೆ ಹೆಮ್ಮೆಯಿಂದ ಹೇಳಿದ. ವಿಜಯ ಈ ನಡುವೆ ತಮ್ಮಿಬ್ಬರ ಒಡನಾಟಕ್ಕೆ ಕೊಂಚ ಅನುಮಾನ

ಪಡುತ್ತಿದ್ದಾಳೆಂದು ಊಹಿಸಿದ್ದ. ಹೆಂಡತಿಯಮನಸ್ಸಿನ ಸಂಶಯ ಕಳೆಯಲು ನಿವಾರಿಸಿದ್ದ.

ಆದರೇನು ತನ್ನ ಹಿಪಾಕ್ರಸಿ ವಿಜಯ ಅಂತರಂಗದಿಂದ ಸೆರೆಹಿಡಿದಿದ್ದಳು. ತನ್ನನ್ನು ಉಗಿದು ಝಾಡಿಸಿ ಹೋಗುವಾಗ ನಾಟಕದಲ್ಲಿ ಅವಳು ನಿಮ್ಮೊಂದಿಗೆ ಸ್ವಚ್ಛಂದವಾಗಿ ಅಭಿನಯಿಸಲಿ ಎಂದೇ ನೀವು ಹದಿನೈದು ಸಾವಿರ ಸಾಲಾ ಕೊಟ್ಟಿರಿ ಎಂದು ತನ್ನ ಅಂತರಂಗಕ್ಕೆ ಕನ್ನಡಿ ಹಿಡಿದು ಹೋಗಿದ್ದಳು. ಕೃತಕ ಪ್ರೀತಿ ತೋರುತ್ತ ತಾನು ಅವಳೆದುರಿಗೆ ಕೃತಕ ದೊಡ್ಡಸ್ತಿಕೆ ತೋರಿಸಿದ್ದು ವ್ಯರ್ಥವಾಗಿತ್ತು.

ವಿಜಯ ಹೊರಟ ಒಂದು ತಿಂಗಳಿಗೆ ಸುರೇಶಾ ಹೈರಾಣವಾಗಿದ್ದ. ಒಂದೆರಡು ಭಾರಿ ಡಾ|| ಕಾಮಾಕ್ಷಿ ಊಟಕ್ಕೆ ಕರೆದಿದ್ದರು. ಸುಲಭ ಕಾಲೇಜಿನಲ್ಲಿ ಒಂದೆರಡು ಭಾರಿ ಕಲಸನ್ನ ತಂದು ಕೊಟ್ಟಿದ್ದಳು. ಒಂದು ಭಾರಿ ತಾನಾಗಿ—

“ಇವತ್ತು ಸಂಜೆ ಊಟಕ್ಕೆ ಬರ್ತೀನಿ, ಅಮ್ಮನಿಗೆ ಹೇಳ್ಬಿಡಿ” ಎಂದ ಸುರೇಶಾ.

“ಬೇಡಾರಿ, ಊಟಕ್ಕೆ ಬರೋದು, ರಾತ್ರಿ ಒಂಬತ್ತರವರೆಗೆ ಇರೋದು ಚೆನ್ನಾಗಿರಲ್ಲ. ನೀವು ಒಳ್ಳೇರು ನಿಜ. ಆದರೆ ಈಚಲುಮರದ ಕೆಳಗೆ ಕೂತು ಮಜ್ಜಿಗೆ ಕುಡಿಯಬಾರದಲ್ಲವಾ ? ವಿಜಯಕುಮಾರ್ ಅಕ್ಕ ನಮ್ಮ ಬೀದೀಲೆ ಇರ್ತಾರಲ್ಲವಾ ? ಅವರು ತುಂಬ ಹಳೇ ಕಾಲದವರು” ಎಂದಳು.

ಸುರೇಶನಿಗೆ ಅಪಮಾನವೂ ಆಯಿತು, ಅಸಮಾಧಾನವೂ ಆಯಿತು. ತಾನು ಹೆಂಡತಿಯ ಎದುರೇ ಇವಳನ್ನು ಓಲೈಸಿ ಹೆಂಡತಿಯ ವಿಶ್ವಾಸ ಕಳೆದುಕೊಂಡೆ. ಇವಳಾದರೊ ಮದುವೆಗೆ ಮುನ್ನವೇ ತನ್ನ ಪತಿಯ ಪ್ರೇಮಕ್ಕಾಗಿ ಎಷ್ಟು ಜಾಗರೂಕತೆ ವಹಿಸುತ್ತಿದ್ದಾಳೆ ಎಂದು ಮನಸ್ಸಿನಲ್ಲಿಯೆ ಬೈದುಕೊಂಡ. ಒಟ್ಟಿನಲ್ಲಿ ಊಟಾ ತಿಂಡಿ ಸರಿಯಾಗಿಲ್ಲದೇ ಒಂಟಿತನದ ವಿರಹದಲ್ಲಿ ಕಂಗೆಟ್ಟಿದ್ದ ಅವನಿಗೆ ವಿಜಯಳಿಂದ ಒಂದು ಕಾಗದಾ ಬಂತು,

ಪ್ರೀತಿಯ ಸುರೇಶ್....ನಿಮ್ಮನ್ನು ಬಿಟ್ಟು ಹೋದಾಗಿನಿಂದ ನನ್ನ ಮನಸ್ಸಿಗೆ ಸಮಾಧಾನವಿಲ್ಲ. ಏನೋ ಒಂದು ಬಗೆಯ ಚಿಂತೆಯಿಂದ ಬಳಲಿ ಬೆಂಡಾಗಿದ್ದೀನಿ. ಇಲ್ಲಿ ನಮ್ಮ ತವರು ಮನೆಯಲ್ಲಿ ಅಣ್ಣಾ ಮನೆ

ಬದಲಾಯಿಸಿದ್ದಾನೆ ಹೊಸ ಮನೆಯ ವಿಳಾಸ ಕೊಟ್ಟಿದ್ದೇನೆ. ತಂದೆ ಕಾಶಿಗೆ ಹೋಗಿ, ತಾಯಿ ಎಲ್ಲೋ ಸಿನಿಮ ಸೇರಿಕೊಂಡರು. ಈ ಮನೆಗೆ ಅತ್ತಿಗೆಯೆ ಯಜಮಾನಿ. ಮೊದಲು ಹದಿನೈದು ದಿನ ಚೆನ್ನಾಗಿ ನೋಡಿಕೊಂಡರು. ಈಗಂತು ದೇವರೇ ಗತಿ. ನಿಮಗೆ ನಿಮ್ಮ ವರ್ತನೆಯ ಬಗ್ಗೆ ಪಶ್ಚಾತಾಪಾ ಆಗಿದ್ದರೆ, ಇನ್ನು ಮುಂದೆ ನನ್ನನ್ನು ಚೆನ್ನಾಗಿ ನೋಡಿಕೊಳ್ಳುವ ಹಾಗಿದ್ದರೆ, ನಾನು ಖಂಡಿತಾ ನಿಮ್ಮ ಬಳಿ ಬರುತ್ತೇನೆ. ನಿಮ್ಮ ಅಭಿಪ್ರಾಯ ತಿಳಿಸಿ ಜಯನಗರಕ್ಕೆ ಈ ವಿಳಾಸಕ್ಕೆ ಕಾಗದಾ ಬರೆಯಿರಿ,

ಇಂತಿ ನಿಮ್ಮ
ಪ್ರೀತಿಯ "ವಿಜಯ"

ಎಂದು ಕಾಗದದ ಹಾಕಿದ್ದಳು. ಸುರೇಶನ ಪಶ್ಚಾತಾಪವೆಲ್ಲಾ ಮಂಜಿನಂತೆ ಕರಗಿಹೋಯಿತು, ಅಹಂಕಾರ ಗರಿ ಕೆದರಿ ನಿಂತಿತು.

ಡಿಯರ್ ವಿಜಿ......ನಿನ್ನ ಪತ್ರ ನೋಡಿದೆ, ಅಹಂಕಾರಕ್ಕೆ ಉದಾಸಿನವೇ ಮದ್ದು ಅಂತ ಒಂದು ಗಾದೆ ಇದೆ ಗೊತ್ತಾ ? ನಿನಗೆ ಕಾಗದವೇ ಬರಿಯಬಾರದೊಂತ ಇದ್ದೆ. ಆದರೆ ತವರು ಮನೆಯಲ್ಲಿ ನೀನು ಏನೇನು ಕಷ್ಟಾ ಅನುಭವಿಸ್ತಾ ಇದ್ದೀಯೊ ಅದಕ್ಕಾಗಿ ಕರುಣೆಯಿಂದ ಬಾ.....ಎಂದು ನಾನು ಬರೆಯುತ್ತಿದ್ದೇನೆ, ಇಲ್ಲಿ ಬಂದ ಮೇಲೆ ಚೆನ್ನಾಗಿ ನನ್ನನ್ನು ಹೊಂದಿಕೊಂಡು ಸೌಮ್ಯವಾಗಿ, ಪ್ರೀತಿಯಿಂದ ನಾನು ಹೇಳಿದಂತೆ ಕೇಳಿಕೊಂಡು ಇರಬೇಕು. ಒಡವೆಗಳನ್ನು ಜೋಪಾನವಾಗಿ ತೆಗೆದುಕೊಂಡು ಬಾ.....ನಿನ್ನ ಮಿಸ್ಟೇರ್ಮೆಂಟಾಲಿಟಿ, ಅಸೂಯೆ, ಅವಮಾನ ಎಲ್ಲಾ ಅಲ್ಲೆ ಗಂಟುಕಟ್ಟಿ ಎಸೆದು ಬಾ.....ವಿದ್ಯಾವತಿಯಾದ ನೀನು ಬ್ರಾಡ್ಮೈಂಡೆಡ್ ಆಗಿರಬೇಕು. ಚೆನ್ನಾಗಿ ಹೊಂದಿಕೊಂಡಿರುವ ಹಾಗಿದ್ದರೆ ಬಾ.....

ಇಂತಿ ನಿನ್ನ
ಸುರೇಶ

ವಿಜಯ ಅಲ್ಲಿ ಅತ್ತಿಗೆಯಿಂದ ತುಂಬ ಹಿಂಸೆಯನ್ನು ಅನುಭವಿಸುತ್ತಿದ್ದಳು.

ತ್ತಾಳೆ. ತನ್ನ ಈ ಪತ್ರ ಕಂಡ ತಕ್ಷಣಾ ಓಡಿ ಬರುತ್ತಾಳೆ ಎಂದು ಅವನು ಊಹಿಸಿದ್ದ. ಬಂದು ಬಗೆ ಬಗೆಯಾಗಿ ಕ್ಷಮಾಪಣೆ ಕೇಳುತ್ತಾಳೆ, ತಾನು ಬಿಗುವಾಗಿ ಕೆಲವು ಶರತ್ತು ಹಾಕಬೇಕು ಎಂದು ಮನಸ್ಸಿನಲ್ಲೆ ಮಂಡಿಗೆ ಹಾಕಿದ. ಹೋಟಲೂಟ ತಿನ್ನುತ್ತಾ, ದಿನಗಳನ್ನು ಎಣಿಸ ಹತ್ತಿದ, ಎರಡನೆಯ ತಿಂಗಳು ಉರುಳಿತು. ಆದರೆ ವಿಜಯ ಬರಲಿಲ್ಲ. ಅವಳಿಂದ ಪತ್ರವೂ ಬರಲಿಲ್ಲ.

ಮತ್ತೆ ಸುರೇಶನೇ ಇನ್ನೊಂದು ಪತ್ರ ಬರೆದ.

ಡಿಯರ್ ವಿಜಿ......ನನ್ನ ಪತ್ರಕ್ಕೆ ನಿನ್ನಿಂದಾ ಉತ್ತರವಿಲ್ಲ ಏಕೆ? ನಿನಗೆ ಇಲ್ಲಿ ಬರಲು ಇಷ್ಟವಿಲ್ಲವೆ? ಮೊನ್ನೆ ಮೂರುದಿನ ನನಗೆ ಜ್ವರಾ ಬಂದಿತ್ತು. ಶೈಲಜಾ ಗಂಜಿ ಮಾಡಿಟ್ಟು ಮನೆ ನೋಡಿಕೊಂಡರು. ಹೋಟಲೂಟಾ ಉಂಡುಂಡು ಆರೋಗ್ಯ ಹಾಳಾಗಿದೆ. ಈಗ ನನ್ನ ಮನಸ್ಸು ನಿನಗಾಗಿ ಬಯಸುತ್ತಿದೆ. ನೀನು ಬರುತ್ತಿ ಎಂದು ನಂಬಿದ್ದೇ.

ಇಂತಿ ನಿನ್ನ
ಪ್ರೀತಿಯ "ಸುರೇಶಾ"

ಅವನ ಪತ್ರಕ್ಕೆ ಹದಿನೈದು ದಿನಗಳ ನಂತರ ವಿಜಯಳ ಉತ್ತರ ಬಂತು.

ಡಿಯರ್ ಸುರೇಶ್......ನಿಮಗೆ ಜ್ವರಾ ಬಂದಾಗ ಶೈಲಜಾ ಬಂದು ಗಂಜಿ ಮಾಡಿದರೆ? ಏಕೆ ನಿಮ್ಮ ಸುಲಭಾ ಬರಲಿಲ್ಲವೆ? ನನಗೆ ಜ್ವರಾ ಬಂದಾಗಲು ಪಾಪ ಶೈಲಜಾ ಅವರೇ ಬಂದು ಗಂಜಿ ಮಾಡಿ ಕೊಡುತ್ತಿದ್ದರು. ನೀವು ಕಾಮಾಕ್ಷಿ ಮನೆ ಔತಣಾ ಸವಿಯುತ್ತ ಸುಲಭಳೊಂದಿಗೆ ಸುಗಮಸಂಗೀತ ಹಾಡುತ್ತಾ, ಕುಣಿದಾಡುತ್ತಿದ್ದರೆ ನಾನು ಇಲ್ಲಿ ಜ್ವರದಿಂದ ತೊಳಲಾಡುತ್ತಿದ್ದೆ.

ಸುರೇಶಾ ನಿಮ್ಮ ಸುಲಭಾ ಏನಾದಳು. ಜ್ವರ ಬಂದ ನಿಮ್ಮೆದುರು ಮೈಸೂರು ಮಲ್ಲಿಗೆ ಹಾಡಲು, ವಾಂಗಿಭಾತ್ ತಿನ್ನಿಸಲು ಬರಲಿಲ್ಲವೆ? ಒಡವೆಗಳನ್ನು ಜೋಪಾನವಾಗಿ ಏಕೆ ತರಬೇಕು? ಅದನ್ನು ಮಾರಿ ನಿಮ್ಮ ಸುಲಭಳಿಗೆ ಸ್ವೆಟರ್ ತೆಗೆದುಕೊಡಬೇಕಾ? ಏನು

ಸಮಾಚಾರಾ......? ಹೋದ ಸಲ ನನ್ನ ಚೈನ್ ಮಾರಿ ಹದಿನೈದು ಸಾವಿರ ಸಾಲ ಕೊಟ್ಟಿರಲ್ಲ ಒಂದು ರೂಪಾಯಾದರು ವಾಪಸ್ ಬಂದಿದೆಯಾ ?

ಇಂತಿ ನಿಮ್ಮ
ಪ್ರೀತಿಯ ವಿಜಯ

ಕಾಗದ ಓದಿ ಸುರೇಶಾ ಭೂಮಿಗೆ ಇಳಿದು ಹೋದ. ಹಾಗಾದರೆ ಇವಳ ಅಹಂಕಾರ ಇನ್ನು ಇಳಿದಿಲ್ಲ.

ಮೂರು ತಿಂಗಳಾಗಿತ್ತು, ಕಾಲೇಜಿಗೆ ರಜಾ ಬಂದಾಗ ಹಳ್ಳಿಗೆ ಹೋದ. ತಾಯಿ ಅತ್ತಿಗೆ ರುಚಿರುಚಿಯಾದ ಅಡಿಗೆ ಮಾಡಿ ಹಾಕಿದರು.

ವಿಜಯ ಕೆಲವು ದಿನಗಳ ಮಟ್ಟಿಗೆ ತವರು ಮನೆಗೆ ಹೋಗಿದ್ದಾಳೆಂದು ಸುಳ್ಳು ಹೇಳಿದ.

"ಏನೊ ಜನ ಏನೇನೋ ಹೇಳ್ತಾರಪ್ಪಾ. ನೀನು ನೋಡಿದರೆ ತವರು ಮನೆಗೆ ಹೋಗಿದ್ದಾಳೇಂತ ಶಾಂತವಾಗಿ ಹೇಳ್ತಿ" ಎಂದರು.

ಸುರೇಶಾ ಹೌಹಾರಿ "ಏನು ಹೇಳ್ತಾರಪ್ಪಾ ?" ಎಂದ. "ಯಾವುದೋ ನಿನ್ನ ಕಾಲೇಜು ಮೇಡಂ ಜೊತೆಗೆ ಹಗಲು ರಾತ್ರಿ ಇಲ್ಲದೆ ಗಂಟೆಗಟ್ಟಲೇ ಅಲೆದಾಡ್ತಾ ಇದ್ದೆಯಂತೆ. ರಾತ್ರಿ ಒಂಬತ್ತರವರೆಗೆ ನಿನ್ನ ಮನೇಲಿ ಸಹ ತಂದಿಟ್ಕೊಳ್ತಾ ಇದ್ದೆಯಂತೆ, ಆ ಹುಡುಗಿ ಸಹಿಸೋ ಅಷ್ಟು ದಿನ ಸಹಿಸಿ ಕಡೆಗೆ ಬೇಸತ್ತು ಹೊರಟೋದಳಂತೆ. ಮೊನ್ನೆ ನಮ್ಮ ಗಿರಿಯಪ್ಪಾ ಮೈಸೂರಿಂದ ಬಂದಾಗ ಏನೇನೋ ಹೇಳಿದರಪ್ಪಾ. ನೀನು ವಿದ್ಯಾವಂತ, ನಿನ್ನ ಸಂಸಾರ ನೀನು ಹಾಳು ಮಾಡ್ಕೋಬಾರದು" ಎಂದು ಬುದ್ಧಿ ಹೇಳಿದಾಗ ಸುರೇಶನಿಗೆ ಅಪಮಾನದಿಂದ ಜೀವ ಹಿಡಿಯಾಯಿತು. ಊರಿಗೆ ಬಂದವನೇ ವಿಜಯಳಿಗೆ ಒಂದು ಕಾಗದ ಬರೆದ.

ಪ್ರೀತಿಯ ವಿಜಯಾ......ನೀನು ನನ್ನಿಂದಾ ದೂರ ಹೋಗಿ ಮೂರು ತಿಂಗಳಾಯಿತು. ನನ್ನ ಪತ್ರಗಳು ನಿನಗೆ ತಲುಪುತ್ತಿದೆಯೆ ? ಗಂಡಾಹೆಂಡತಿಯರಲ್ಲಿ ಇಂಥಹ ಹಟ ಒಳ್ಳೆಯದಲ್ಲ. ನಾನು ಸೋತಿದ್ದೇನೆ ವಿಜ, ಸೋಲುತ್ತಿದ್ದೇನೆ ನೀನಿಲ್ಲದೆ ನನಗೆ ಯಾವುದರಲ್ಲಿಯೂ ಆಸಕ್ತಿ ಇಲ್ಲ. ಹುಚ್ಚನ ಹಾಗಾಗಿದ್ದೇನೆ. ಕಾಲೇಜಿನಲ್ಲಿ

ಪಾಠವೂ ಸರಿಯಾಗಿ ಮಾಡುತ್ತಿಲ್ಲ. ಈ ಕಾಗದಾ ಕಂಡ ಕೂಡಲೆ ಬಾ......ನಾನೇ ಬಂದು ಕರೆದೊಯ್ಯುಲೆ.

ನಿನ್ನ ಪ್ರೀತಿಯ
ಸುರೇಶಾ

ಪತಿಯ ಪತ್ರ ಓದುತ್ತಾ ನಸುನಕ್ಕಳು ವಿಜಯ. ಅವಳು ಇಲ್ಲಿ ತಾಯಿ ಮನೆಗೆ ಬಂದು ಮೂರು ತಿಂಗಳಾಗಿತ್ತು. ಇಲ್ಲಿ ರಾಜವೈಭೋಗದಲ್ಲಿದ್ದಳು. ಮನಸು ಆಗಾಗ ಸುರೇಶನನ್ನು ಬಯಸುತ್ತಿತ್ತು.

ತಾಯಿ ನಿಧಾನವಾಗಿ ಸರಿ ಹೋಗುತ್ತಿದ್ದರು. ವಿಜಯ ಬಂದ ಎರಡು ತಿಂಗಳು ಆದಮೇಲೆ ಒಂದು ದಿನ ಒಳ್ಳೆ ಸಂಧ್ಯಾ ಸಮಯ, ತೋಟದ ಈಜು ಕೊಳದ ಬಳಿ ಎತ್ತರ ಕಲ್ಲುಬೆಂಚಿನ ಮೇಲೆ ಇಂದಿರಮ್ಮ ಕುಳಿತಿದ್ದರು. ಇನ್ನು ಕೊಂಚ ಹೊತ್ತಿಗೆ ಸೂರ್ಯ ಮುಳುಗಬೇಕು. ಆಕಾಶವೆಲ್ಲಾ ಹೊಂಬಣ್ಣ ಹರಡಿದೆ. ಇಂದಿರಮ್ಮ ಬಿಕ್ಕಿ ಬಿಕ್ಕಿ ಅಳುತ್ತಾ ಆಕಾಶದ ತುಂಬ ಬೆಂಕಿ ಹರಡಿದೆ. ವಿಜಿ, ಅವನು ಹೇಳಿದಂತೆ ಆ ಬೆಂಕಿ ನನ್ನನ್ನು ಸುಟ್ಟು ದಹಿಸಿ ಬಿಟ್ಟಿದೆ. ವಿಜಯ ನಗುತ್ತಾ "ಅಮ್ಮ ಆಕಾಶದ ತುಂಬಾ ಬಂಗಾರ ಹರಡಿದೆ. ಈ ಸಂಜೆಯ ಸೌಂದರ್ಯ ನೋಡಿ 'ಬಾನಲ್ಲಿ ಬಂಗಾರ ನೋಡಾ......' ಅಂತ ಕವಿಗಳು ಹಾಡಿದ್ದಾರೆ. ಇದು ನಿನಗೆ ಬೆಂಕಿ ಹಾಗೆ ಏಕೆ ಕಾಣಿಸುತ್ತಮ್ಮ?" ಎಂದಳು.

"ಇಲ್ಲ ವಿಜಿ. ಅವನು ಹೇಳಿದಂತೆ ನಾನು ಅವನನ್ನೇ ವಿವಾಹವಾಗಿದ್ದರೆ ನನ್ನ ಬದುಕು ಬಂಗಾರವಾಗ್ತಾ ಇತ್ತು. ಆದರೆ ನಿಮ್ಮಪ್ಪನ್ನ ವಿವಾಹವಾಗಿ ಬದುಕೇ ಬೆಂಕಿಯ ಕುಂಡವಾಯ್ತು. ಈಗ ನನಗೆ ಅವನು ಹೇಳಿದ ಹಾಗೆ ಆಕಾಶದಲ್ಲೆಲ್ಲಾ ಬೆಂಕಿಯ ಕಾಣಿಸ್ತಿದೆ. ನನ್ನ ಹೃದಯದಲ್ಲಿ ಬೆಂಕಿ, ನನ್ನ ಒಡಲಲ್ಲಿ ಬೆಂಕಿ, ನನ್ನ ಬದುಕಿಗೇ ಬೆಂಕಿ ಬಿತ್ತು." ಎಂದು ಹೇಳಿ ಆಕೆ ಬಿಕ್ಕಿ ಬಿಕ್ಕಿ ಅಳತೊಡಗಿದಳು.

ವಿಜಯ ಬೇಸರದಿಂದ "ಅಮ್ಮ......ಅಪ್ಪಾ ತುಂಬಾ ಒಳ್ಳೆಯವರಮ್ಮ

ಏನೊ ದಬ್ಬಾಳಿಕೆಯ ಸ್ವಭಾವ ಇತ್ತು. ಹಳೆಕಾಲದ ಸಂಪ್ರದಾಯ ನಂಬಿದ್ದರು ಕೆಲವು ಕಟ್ಟುನಿಟ್ಟು ಮಾಡಿದ್ದರು. ನಿನಗೆ ಬೇಡದಿದ್ದರೆ ಆಗಲೇ ಪ್ರತಿಭಟಿಸಬೇಕಾಗಿತ್ತು. ಏಕೆ ಲಕ್ಷಾಂತರ ಗೃಹಿಣಿಯರು, ಹದಿನೆಂಟು ಮೊಳದ ಸೀರೆಯುಟ್ಟು, ಹಳೆ ಕಾಲದ ಪೂಜಾ ವ್ರತ, ನೇಮಾ ಮಾಡುತ್ತಾ ಗಂಡ ಹೇಳಿದ ಹಾಗೆ ಕೇಳ್ಕೊಂಡು ಸುಖವಾಗಿಲ್ಲವೆ ? ಅಪ್ಪಾ ತಾನೇ ಏನು ಅಲಂಕಾರ ಮಾಡ್ಕೋತ ಇದ್ದರು. ಹೈಸ್ಕೂಲ್ ಹೆಡ್‌ಮಾಸ್ತರಾದ ಮೇಲೂ ಕಚ್ಚೆ ಪಂಚೆ, ಮುಚ್ಚು ಕೋಟು, ತಲೆ ಮೇಲೊಂದು ಟೋಪಿ, ಬೇರೆ ಏನು ಅಲಂಕಾರ ಮಾಡ್ತಾ ಇದ್ದರು ? ಮನೇಲಿ ಇದ್ದಾಗಂತು ಮಡಿ ಪಂಚೆ ಬ್ರಾಹ್ಮಣ" ಎಂದಳು.

"ಹೌದು ವಿಜಿ ನಿಮ್ಮಪ್ಪಾ ಒಳ್ಳೆಯವರು, ನಾನು ಪಾಪಿ. ನಾನು ಪತಿತೆ ಎಂದು ಗೊತ್ತಾದ ಮೇಲೂ ಅವರು ನನ್ನ ತ್ಯಜಿಸಲಿಲ್ಲ. ಅವರ ಪಾದ ಸೇವೆ ಮಾಡೋ ಭಾಗ್ಯ ನನಗೆ ಸಿಗತ್ತಾ ? ವಿಜಿ.....ತಿರುಗಾ ನನಗೆ ಅವರು ಸಿಕ್ತಾರಾ ?" ಎಂದು ಹಂಬಲಿಸಿದರು.

ಅಲ್ಲಮ್ಮ ನೀನು ಐವತ್ನಾಲಕು ವರ್ಷದ ಮುದುಕಿ ಆಗಿ ಹೀಗೆ ಸಿನಿಮಾ ನಟಿ ಆಗ್ಬೇಕು ಸ್ಲಿಮ್ ಆಗಬೇಕೂಂತ ಜಾಗಿಂಗ್, ಯೋಗಾಸನ, ಭರತನಾಟ್ಯ ಮಾಡ್ತಾ, ಈ ಚಿತ್ರ ವಿಚಿತ್ರವಾದ ಡ್ರೆಸ್ ಹಾಕ್ಕೊಂಡು, ಅಪ್ಪನಿಗೆ ಹಂಬಲಿಸಿದರೇನು ? ನಿನಗೆ ನಿಜವಾಗಿ ಅಪ್ಪಾ ಬೇಕಾದರೆ ಇವೆಲ್ಲಾ ಬಿಡಬೇಕು" ಎಂದು ಗದರಿ ಹೇಳಿದಳು.

"ನಿಜವಾಗಿ ನಿಮ್ಮಪ್ಪಾ ಸಿಗೋದಾದರೆ ಇವೆಲ್ಲಾ ಬಿಟ್ಟು ಬಿಡ್ತೀನೇ ?"

"ಅಪ್ಪಾನು ನಿನಗಾಗಿ ಹಂಬಲಿಸ್ತಿದ್ದಾರಮ್ಮ. ಕಾಶಿಯಿಂದ ಅನಂತಣ್ಣಂಗೆ ಕಾಗದ ಬರೆದಿದ್ದಾರಂತೆ, ಒಂಟಿಯಾಗಿರಲಾರೆ, ಇಲ್ಲಿನ ಹವಾಗುಣಾ ಸರಿ ಹೊಗಲ್ಲಾಂತ, ನಾನೇ ಹೋಗಿ ಅಪ್ಪನ್ನ ಕರೆದುಕೊಂಡು ಬರ್ತೀನೆ. ಆದರೆ ಅಮ್ಮ ನಿನ್ನ ಮನಸ್ಸಲ್ಲಿ ಏನೊ ಕಸರಿದೆ, ಅದಕ್ಕೆ ಕಾರಣ ಇದೇ ಹೇಳು.....ಹೇಳಿ ಅದನ್ನ ಮರೆತುಬಿಡು."

"ಇಲ್ಲ ವಿಜಿ, ನಾನು ಹೇಳಲ್ಲ. ಒಳಗೆ ಆ ವಿಷಯ ಇಟ್ಕೊಂಡು ಕೊರಗ್ತೀನಿ. ಕೊರಗಿ ಕೊರಗಿ ಸಾಯ್ತೀನಿ. ಒಂದ್ಸಲ ಬುದ್ಧಿ ಇಲ್ಲದೆ ಆಕ್ಷಣದಿನಲ್ಲಿ ನಿಮ್ಮಪ್ಪನಿಗೆ ಹೇಳಿದೆ, ಅವರು ನನ್ನ ಕ್ಷಮಿಸಲಿಲ್ಲ. ಪ್ರೀತಿಸ್ತಾ

ಇದ್ದೋರು ದ್ವೇಷಿಸಕೊಡಗಿದರು. ನಾನೇದರೆ ಅಸಹ್ಯ ಪಡಕೊಡಗಿದರು. ಈಗ ವಿಷಯ ತಿಳಿದರೆ, ನೀನು ನನ್ನ ಮೇಲೆ ಅಸಹ್ಯಗೊಳ್ತಿ. ಹೇಳಲ್ಲಾ ಹೇಳಲ್ಲಾ" ಎಂದು ಚೀರಿ ತೋಟದ ಇನ್ನೊಂದು ಭಾಗಕ್ಕೆ ಓಡಿಬಿಟ್ಟರು.

ಸೂರ್ಯ ಮುಳುಗಿ ಆಗಲೇ ಎಲ್ಲೆಲ್ಲೂ ಕತ್ತಲು ಹರಡಿ ಕಪ್ಪು ರಂಗು ಹರಡುತ್ತಿದೆ. ವಿಜಯಳ ಮನಸು ಶೂನ್ಯವಾಗಿತ್ತು. ತನ್ನ ತಾಯಿಯ ಬದುಕಿನಲ್ಲಿ ಮೂಡಿದ ಕಪ್ಪು ಚುಕ್ಕೆ ಯಾವುದು ? ಈ ಯೋಚನೆಯಲ್ಲಿಯೇ ರಾತ್ರಿ ಕಳೆದು ವಿಜಯ ಮಾರನೆ ದಿನ ಬೆಳಿಗ್ಗೆ ಡಾಕ್ಟರನ್ನು ಕಂಡು ವಿಷಯ ತಿಳಿಸಿದಳು. ಏನು ಮಾಡಿದರೂ ಇನ್ನೊಬ್ಬ ವ್ಯಕ್ತಿ ಯಾರೂಂತ ಗೊತ್ತಾಗಲಿಲ್ಲ ಸಾರ್ ಎರಡು ತಿಂಗಳಿನಿಂದ ಪ್ರಯತ್ನಿಸಿದೆ. ಆಕೆ ತನ್ನ ರಹಸ್ಯ ಖಂಡಿತ ಹೇಳಲೊಲ್ಲರೂ ಅನಿಸತ್ತೆ" ಎಂದಳು.

"ಸರಿ ಈಗಾಗ್ಲೆ ನಿಮ್ಮಿಂದ ಸಾಕಷ್ಟು ಸಹಕಾರ ದೊರತಿದೆ. ಆಕೆಗೆ ಹಿಪ್ನಾಟಿಸಂ ಮಾಡಿಬಿಡೋಣಾ ಈ ದಿನ" ಎಂದರು.

ಹಿಪ್ನಾಟಿಸಂ ಮಾಡಿ ಆಕೆಯ ಮನಸ್ಸನ್ನು ವಶೀಕರಿಸಿಕೊಂಡು ವಿಜಯ ಹೇಳಿದ ಕಥೆಯ ಸಾರಾಂಶದ ಆಧಾರದ ಮೇಲೆ ಪ್ರಶ್ನೆ ಕೇಳಿದರು. ಅವನು ಅಂತ ಆಕಾಶ ನೋಡಿ ಚಡಪಡಿಸ್ತೀರಲ್ಲಾ ಯಾರು ?

ಎಂಬ ಪ್ರಶ್ನೆಯೊಂದಿಗೆ ಡಾಕ್ಟರ್ ಆಕೆಯ ಅಂತರಂಗ ಕೆದಕಿದರು. ಆಕೆ ತುಂಡು ತುಂಡಾಗಿ ಹೇಳಿದ ಕಥೆಯ ಸಾರಾಂಶ ಒಟ್ಟು ಹೀಗಿತ್ತು.

ಸುಮಾರು ನಲವತ್ತು ವರ್ಷಗಳ ಹಿಂದೆ ಆಕೆ ಹದಿನಾಲ್ಕರ ಪುಟ್ಟ ಹುಡುಗಿ. ಏಳನೆಯ ತರಗತಿ ವಿದ್ಯಾರ್ಥಿನಿ, ಆಗಿನ ದಿನಗಳಲ್ಲಿ ಹೆಣ್ಣು ಮಕ್ಕಳು ಶಾಲೆಗೆ ಹೋಗುವುದು ತೀರ ಅಪರೂಪವಾಗಿತ್ತು. ಒಬ್ಬಳೇ ಮಗಳನ್ನು ಬೋರ್ಡ್ ಪರೀಕ್ಷೆ ಮಾಡಿಸಲೇ ಬೇಕೆಂದು ತಂದೆಯ ಹಠಾ, ತಾಯಿಯ ಮಗಳಿಗೆ ಇಂಪಾಗಿ ಸಂಗೀತ ಹಾಡಲು ಕಲಿಸಿದ್ದರು. ಶಾಲೆಯಲ್ಲಿ ಇವಳ ತರಗತಿಯಲ್ಲಿ ಇದ್ದ ಹುಡುಗಿಯರು ಐದು ಜನ, ಉಳಿದೆಲ್ಲಾ ಗಂಡು ಹುಡುಗರು. ಒಟ್ಟು ಶಾಲೆಯ ತರಗತಿಗಳಿಂದ ಇದ್ದ ಹುಡುಗಿಯರ ಸಂಖ್ಯೆ ಮುವ್ವತ್ತು.

ಆ ಮುವತ್ತು ಹುಡುಗಿಯರ ಪೈಕಿ ಇವಳೇ ಚೆಲುವೆ. ಶಾಲೆಯಲ್ಲಿ ರಾಧಾಕೃಷ್ಣ ನಾಟಕ ಆಡಿದಾಗ ಇಂದಿರಾ ರಾಧೆಯ ಪಾತ್ರ ವಹಿಸಿದ್ದಳು.

ಅವಳಿಗಿನ್ನ ಎತ್ತರವಾಗಿದ್ದ ಇನ್ನೊಬ್ಬ ಕಪ್ಪು ಬಣ್ಣದ ಎಳಸಾದ ಮುಖದ ಹುಡುಗಿ ಚಂದ್ರಿಕಾ ಕೃಷ್ಣನ ಪಾತ್ರ ವಹಿಸಿದ್ದಳು. ನಾಟಕಕ್ಕೆ ಮೊದಲೆ ಪ್ರತಿಯೊಬ್ಬ ತಂದೆತಾಯಿಗಳ ಒಪ್ಪಿಗೆ ಕೇಳಲಾಗಿತ್ತು. ಪ್ರತಿ ದಿನ ರಿಹರ್ಸಲ್ ಆದ ಮೇಲೆ ಮನೆಗೆ ಹೋಗಲು ಏಳು ಗಂಟೆ ಆಗುತ್ತಿತ್ತು. ಚಂದ್ರಿಕಾಳ ಅಣ್ಣಾ ಅವಳನ್ನು ಕರೆದೊಯ್ಯಲು ಬರುತ್ತಿದ್ದ. ಮೊದಲೆರಡು ದಿನ ಇಂದಿರಾಳ ತಂದೆಯೆ ಬಂದಿದ್ದರು. ಇಂದಿರಾ ತಂದೆಗೆ—

"ಅಣ್ಣಾ ನೀನೇನು ಬರಬೇಡಾ ಹಿಂದಿನ ಬೀದಿ ಚಂದ್ರಿಕಾ, ನಾನು ಮಾಲತಿ ಎಲ್ಲಾ ಒಟ್ಟಿಗೆ ಬರ್‍ತೀವಿ. ಚಂದ್ರಿಕಾಳ ಅಣ್ಣನು ಬರ್‍ತಾರೆ" ಎಂದಳು.

ತಂದೆ ತಾಯಿ ಇಬ್ಬರು ಒಟ್ಟು ಗುಂಪು ಬರುತ್ತಾರೆಂದು ತಿಳಿದು ಸಮಾಧಾನಗೊಂಡರು. ಒಂದು ತಿಂಗಳ ರಿಹರ್ಸಲ್ಲಿನ ಇಂದಿರಳ ಎಳೆಯ ಮನಸ್ಸು ಪ್ರೇಮ ಭಾವನೆಗಳಿಂದ ಮೃದುವಾಯಿತು. ತಾನು ಆರಾಧಿಸುವ ಕೃಷ್ಣ ಚಂದ್ರಿಕಳಲ್ಲ, ಚಂದ್ರಿಕಾಳ ಅಣ್ಣ ಮಾಧವಾ ಎನಿಸುತ್ತಿತ್ತು. ಅವನು ಅವಳನ್ನು ಆಸಕ್ತಿಯಿಂದ ದಿಟ್ಟಿಸುತ್ತಿದ್ದ.

ನಾಟಕದ ದಿನ ಬಂತು, ಬಣ್ಣ ಬಣ್ಣದ ಜರಿಯ ಸೀರೆಗಳಲ್ಲಿ ; ಕೃತಕ ಹರಳಿನ ಒಡವೆಗಳಲ್ಲಿ ಕೆಂದುಟಿ, ಗುಲಾಬಿ ಕೆನ್ನೆಯ ಅಂದವಾದ ಮುಖಾಲಂಕಾರಗಳಲ್ಲಿ ಇಂದಿರೆ ದೀಪದ ಉಜ್ವಲ ಬೆಳಕಿನಲ್ಲಿ ರಾಧೆಯಾಗಿ ಶೋಭಿಸಿದಳು. ಅವಳಿಗೆ ಬಹುಮಾನವೂ ಬಂತು.

ನಾಟಕ ಮುಗಿದು ಸ್ಟೇಜಿನ ಮೇಲೆ ವಂದನಾರ್ಪಣೆ ಆಗುವಾಗ ಹುಡುಗಿಯರು ಸ್ಟೇಜಿನ ಪಕ್ಕ ಇದ್ದ ಗ್ರೀನ್ ರೂಮಿನಲ್ಲಿ ತಾವು ತಾವು ತಂದ ಬಟ್ಟೆಗಳು, ಒಡವೆಗಳು ಸೂಟ್‌ಕೇಸಿನಲ್ಲಿ ಜೋಡಿಸಿಕೊಳ್ಳುತ್ತಿದ್ದರು.

ಚಂದ್ರಿಕಾಳ ಅಣ್ಣ ಗ್ರೀನ್ ರೂಮಿಗೆ ಬಂದಿದ್ದ. ತಂಗಿಯೊಡನೆ ಏನೋ ಮಾತಾಡಿ ಅನಂತರ ಸೀರೆ ಮಡಿಸುತ್ತಿದ್ದ ತನ್ನ ಬಳಿ ಬಂದು "ನಿಮ್ಮ ಪಾತ್ರ ತುಂಬಾ ಚೆನ್ನಾಗಿತ್ತು" ಎಂದ. ಇಂದಿರಾ ನಾಚಿಕೆಯಿಂದ "ನಿಮ್ಮ ತಂಗಿಯೂ ತುಂಬ ಚೆನ್ನಾಗಿ ಮಾಡಿದ್ದಳು" ಎಂದಳು.

ಅವನು ಮಿಂಚಿನ ವೇಗದಲ್ಲಿ ಅವಳ ಸೂಟ್‌ಕೇಸಿನ ಮೇಲೆ ಒಂದು

ಕವರ್ ಇರಿಸಿ, "ಬರ್ತ್ತೀನಿ, ಕನ್‌ಗ್ರಾಜುಲೇಷನ್ಸ್ ಗೋಕುಲದ ರಾಧೆ ಮತ್ತೆ ಪ್ರತ್ಯಕ್ಷವಾದ ಹಾಗಿತ್ತು" ಎಂದು ಹೇಳಿ ಹೊರಟುಬಿಟ್ಟ.

ಇಂದಿರಾ ಹೆದರಿಕೆಯಿಂದ ಅದನ್ನು ಸೂಟ್‌ಕೇಸಿನ ತಳದಲ್ಲಿ ಹಾಕಿ, ಉಳಿದ ಸಾಮಾನೆಲ್ಲಾ ಜೋಡಿಸಿ ಸೂಟ್‌ಕೇಸ್ ಬೀಗಾ ಹಾಕಿದಳು.

ಆ ರಾತ್ರಿ ರಾಷ್ಟ್ರಗೀತೆಯಾದ ಮೇಲೆ ತಂದೆ ತಾಯಿಗಳ ಜೊತೆ ಮನೆಗೆ ಹೋದಳು. ತಾಯಿ ದೃಷ್ಟಿ ತೆಗೆದು ಹಾಕಿದರು. ಮಾರನೆಯ ದಿನ ಶಾಲೆಗೆ ರಜಾ ಕೊಟ್ಟರು.

ತಂದೆ ಒಂಬತ್ತು ಗಂಟೆಗೆ ಗದ್ದೆಗಳನ್ನು ನೋಡಬೇಕೆಂದು ಮೂರು ಮೈಲಿಯಲ್ಲಿದ್ದ ಹಳ್ಳಿಗೆ ಹೊರಟುಬಿಟ್ಟರು. ಇಂದಿರಾ ಕೋಣೆಯಲ್ಲಿ ಕುಳಿತು ಸೂಟ್‌ಕೇಸ್ ತಳದಲ್ಲಿದ್ದ ಪತ್ರ ಬಿಚ್ಚಿದಳು.

ನನ್ನ ಮುದ್ದಿನ ರಾಧೆ—

ಈ ದಿನ ಸಂಜೆ ಊರ ಮುಂದಿನ ಹೊಳೆಯ ಬಳಿ ಬರುತ್ತೀಯಾ ? ನಿನ್ನೊಡನೆ ತುಂಬ ಮಾತಾಡಬೇಕೆಂದು ಆಶೆಯಾಗುತ್ತಿದೆ. ನಿನ್ನ ಪ್ರೀತಿಯ ಮಾಧವ.

ಹದಿನಾಲ್ಕು ವರ್ಷದ ಇಂದಿರಾಳ ದೇಹದ ಕಣ ಕಣವೂ ಬೆಚ್ಚಗಾಯಿತು. ರಕ್ತ ವೇಗವಾಗಿ ಹರಿಯಿತು. ತಾನು ರಾಧೆ... ತನಗೊಬ್ಬ ಮಾಧವ. ಊರಿನ ಶ್ರೀಮಂತ ಶೆಟ್ಟರ ಒಬ್ಬನೆ ಮಗ ಮಾಧವ. ದಿನವೂ ಎಂಥೆಂತಹ ಉಡುಪು ಧರಿಸಿ ಬರುತ್ತಿದ್ದ. ತಾಲೂಕು ಮಟ್ಟದ ತಮ್ಮೂರಿಗೆ ಅವನೆ ರಾಜಕುಮಾರ.

ಹದಿನೆಂಟರ ತರುಣ ಮಾಧವ. ಅತ್ಯಂತ ಸುಂದರನು ಹೌದು ! ಒಂದು ತಿಂಗಳಿಂದ ಕಂಗಳ ಮೂಲಕ ವಿನಿಮಯವಾಗುತ್ತಿದ್ದ ಪ್ರೇಮ ಇಂದು ಕಾಗದದಲ್ಲಿ ಇಳಿದಿತ್ತು.

"ಅಮ್ಮ ಚಂದ್ರಿಕಾಳ ಮನೆಗೆ ಹೋಗಿ ಬರ್ತೀನಿ." ಸಂಜೆ ಐದು ಗಂಟೆಗೆ ತಾಯಿಗೆ ಹೇಳಿದಳು. ಗಂಡಾ ಊರಲಿಲ್ಲದಾಗ ರಾಗರಾಗವಾಗಿ ದೇವರ ಸ್ತುತಿ ಹೇಳಿಕೊಂಡು ಹರಿಕಥೆ ಮಾಡುತ್ತಾ ದೇವರ ಮನೆ ಸೇರಿಬಿಡುತ್ತಿದ್ದರು ಲಕ್ಷ್ಮಮ್ಮ !

ದ್ರೌಪದಿ ವಸ್ತ್ರಾಪಹರಣ ಹರಿಕಥೆ ದೇವರ ಮುಂದೆ ಹೇಳಿಕೊಳ್ಳುತ್ತಿದ್ದರು,

ಮುಂಬಾಗಿಲು ಹಾಕ್ಕೊಂಡು ಹೋಗು. ಬೇಗ ಬಂದ್ಬಿಡು" ತಮ್ಮ ಗುಂಗಿನಲ್ಲಿಯೇ ಉಳಿದು ನಂದಾದೀಪದ ಕುಡಿ ಸರಿಮಾಡುತ್ತಿದ್ದ ಲಕ್ಷ್ಮಮ್ಮ ಮಗಳ ವಿಶೇಷ ಅಲಂಕಾರ ಗಮನಿಸಲಿಲ್ಲ.

ಗುಲಾಬಿ ಬಣ್ಣದ ಲಂಗಾ ಜಂಪರ್ ಧರಿಸಿ ತಿಳಿ ಹಳದಿ ಧಾವಣಿ ಹೊದ್ದು, ಉದ್ದನೆಯ ಎರಡು ಜಡೆ ಹೆಣೆದು ಸೋಗೆ ತೀಡಿ, ಕಾಡಿಗೆ ಹಚ್ಚಿ ತಿಲಕ ಇಟ್ಟು, ಕಿವಿಯ ಬದಿ ಜೋಲಾಡುವಂತೆ ಕನಕಾಂಬರಾ ಮುಡಿದು, ಕೆನ್ನೆಯ ಮೇಲೆ ತೂಗಾಡುತ್ತಿದ್ದ ಜುಂಕಿಯೊಂದಿಗೆ ಸ್ಪರ್ಧಿಸುವಂತೆ ಹಣೆಯ ಮೇಲೆ ಹಾರಾಡುವ ಮುಂಗುರಳು.

ಅವಳು ಬೀದಿಗಿಳಿದು ನಡೆದು ಹೊರಟಾಗ "ಆ ಹುಡುಗಿ ಅಲಂಕಾರ ನೋಡಮ್ಮ, ಬಾಳಿ ಬದುಕೊ ಹುಡುಗಿಯರಿಗೆ ಇಂಥಾ ಅಲಂಕಾರ ಏಕೆ ಬೇಕು ?" ಕಟ್ಟೆ ಹರಟೆಗೆ ಕೂತಿದ್ದ ರಂಗಮ್ಮ ಹೇಳಿದರು.

"ನಾಟಕಾ....ಪಾಟಕಾಂತ ಕುಣಿತಾಳಂತಮ್ಮ. ಪಕ್ಕದ ಮನೆ ಹುಡುಗಿ ಸಣ್ಣಾ ಬಣ್ಣಾ ಹಚ್ಚಿಕೊಂಡು ಒಳ್ಳೆ ಸಿನಿಮಾ ನಟಿ ಹಾಗೆ ಕುಣಿದಾಡಿದ್ದಳು ಅಂತ ನಿನ್ನೆ ನಮ್ಮ ಯಜಮಾನರು ಹೇಳಿದರು, ಅದೇನೋ ಅವರ ಶಾಲೇಲಿ ನಾಟಕಾ ಇತ್ತಂತೆ" ಕುಮುದಮ್ಮ ಎಂಬ ಇನ್ನೊಬ್ಬಾಕೆ ಹೇಳಿಳು.

"ಅದೇನ್ರಿ ಆ ತಂದೆ ತಾಯಿಗಳು ಒಬ್ಬಳೇ ಮಗಳೂಂತ ಹಾಗೆ ಕುಣಿಸ್ತಾರೆ ? ನಮ್ಮಂಥಾ ಬಡವರು, ಎಂಟು, ಒಂಬತ್ತು ತುಂಬೋದೊಳಗೆ ಹೆಣ್ಣು ಮಕ್ಕಳಿಗೆ ಮದುವೆ ಮಾಡಿದ್ದೇವಿ. ಕೈ ತುಂಬಾ ದುಡ್ಡಿದ್ದು ಇವರಿಗೇನು ಕೇಡು....? ಹದಿನಾಲ್ಕು ವರ್ಷ ಆಗಿದೆ....ಆಗಿದೆ....ಆ ಹುಡುಗಿಗೆ" ಎಂದರು ರತ್ನಮ್ಮ

"ಅಯ್ಯೊ ! ಅವರು ನಮ್ಮ ಹಾಗೆ ಕಂದಾಚಾರ ಅರಿಸೋರು ಅಲ್ಲಂತೆ. ಹೆಣ್ಣು ಮಕ್ಕಳಿಗೆ ಓದು, ವಿದ್ಯಾಭ್ಯಾಸ ಬೇಕೆಬೇಕಂತೆ. ಬೆಂಗಳೂರು, ಮೈಸೂರಿನಲ್ಲಿ ಈಗ್ಯಾರು ಎಂಟು ವರ್ಷಕ್ಕೆ ಮದುವೆ ಮಾಡಲ್ಲಂತೆ. ಇವರು ಲೋವರ್ ಸೆಕೆಂಡರಿಯ ಪರೀಕ್ಷೆ ಪಾಸಾದಮೇಲೆ ಮಕ್ಕಳಿಗೆ ಮದುವೆಮಾಡಿಸ್ತಾರಂತೆ. ದುಡ್ಡಿರೋರು ಏನು ಆಟ ಆಡಿದರೂ ತಡಿಯತ್ತಮ್ಮ, ನಮ್ಮಂತ ಬಡವರು ಮಾನ ಮರ್ಯಾದೆಗೆ ಹೆದರಬೇಕಾದ್ದು" ಎಂದು ರಂಗಮ್ಮ ನುಡಿದರು. ಎಲ್ಲಾ ಕೇಳಿಸಿಕೊಳ್ಳುತ್ತಾ ಇಂದಿರ ಬೇಗ ಬೇಗ ಹೆಜ್ಜೆ ಹಾಕಿದಳು,

ಊಟ ಮುಂದಿನ ಹೊಳೆಯಂಚಿಗೆ ಇಂದಿರ ಬಂದಾಗ ಐದೂವರೆ. ಹೊಳೆಯ ಅಂಚಿನ ಮರಳಿನಲ್ಲಿ ಕೊಂಚ ದೂರ ನಡೆಯುತ್ತಿದ್ದಂತೆಯೇ ಮಾಧವ ಬಂದ. "ಬಾದ್ಯಾ ಇಂದೂ.....ಬಾ.....ಇನ್ನು ಕೊಂಚ ಮುಂದೆ ಹೋಗೋಣ. ಎಂದು ಉದ್ದಕ್ಕೆ ಕರೆದೊಯ್ದ. ಕಪ್ಪು ಉಲ್ಲನ್ ಸೂಟ್ ಬಿಳಿಯ ತುಂಬು ತೋಳಿನ ಶರ್ಟಿನಲ್ಲಿದ್ದ ಮಾಧವ ಇಂದಿರಳ ಕಣ್ಣಿಗೆ ಚುಬ್ಬು ವೆನಿಸಿದ್ದ. ಸಾಕಷ್ಟು ನಡೆದು, ತೀರ ನಿರ್ಜನ ಎನಿಸುವ ಪ್ರದೇಶದಲ್ಲಿ ಒಂದು ಬಂಡೆ ಮೇಲೆ ಕೂತರು. ಸುತ್ತಲು ಮರಳಿನ ರಾಶಿ ಹೊಳೆಯ ಅಂಚಿನಲ್ಲಿ ಮರಗಳು, ಎದುರಿಗೆ ಹರಿಯುತ್ತಿದ್ದ ಹೊಳೆ, ಆಕಾಶದಲ್ಲಿ ಹೊಂಬಣ್ಣದ ಸಂಜೆಯ ಸೂರ್ಯ, ಬಂಡೆಯ ಮೇಲೆ ಕುಳಿತು ಮಾಧವ ಕೊಂಚ ಮುಂದೆ ಸರಿದಾಗ ಅವಳು ನಾಚಿ ಹಿಂದೆ ಸರಿದಳು, "ಹಾಗೆ ಹಿಂದೆ ಸರಿದರೆ ಬಿದ್ದು ಬಿಟ್ಟಿ ಇಂದು.....ಎಂದು ತೋಳು ಚಾಚಿ ಅವಳನ್ನು ಮುಂದಕ್ಕೆಳೆದುಕೊಂಡು ತನ್ನ ಎದೆಗೊತ್ತಿಕೊಂಡ.

ಹದಿನಾಲ್ಕು ವರ್ಷದ ಪುಟ್ಟ ಇಂದಿರ ಕೊಂಚ ಬೆಚ್ಚಿದಳು. "ಬಿಡಿ ಯಾರಾದರೂ ನೋಡಿದರೆ ಏನ್ಗತಿ.....? ನನಗೆ ಭಯವಾಗುತ್ತೆ" ಎಂದು ತೊದಲಿದಳು. ಮಾಧವ ಬಿಡಲಿಲ್ಲ. ತೋಳಿನ ಬಿಗಿತ ಜಾಸ್ತಿ ಮಾಡಿದ.

"ಯಾರು ನೋಡಲ್ಲ ಇಂದು. ಒಂದು ಕ್ಷಣಾ ಇಡೀ ಜಗತ್ತ ಮರೆತು ಬಿಡು. ನೀನು ರಾಧೆ, ನಾನು ನಿನ್ನ ಕೃಷ್ಣ, ಇದು ಯಮುನಾ ತೀರಾ....." "ರಾಧಾ ನನ್ನ ಮುದ್ದು ರಾಧಾ....." ಎಂದು ಅವಳ ಕೆನ್ನೆ ತುಟಿಗಳನ್ನು ಪದೆ ಪದೆ ಚುಂಬಿಸಿದ.

"ಬಿಡಿ.....ನಂಗೆ ಭಯವಾಗುತ್ತೆ. ನಮ್ಮ ತಂದೆ ತಾಯಿಗೆ ತಿಳಿದರೆ ನನ್ನ ಕೊಂದು ಹಾಕ್ತಾರೆ" ಎಂದಳು. "ನಾವಿಬ್ಬರು ವಿವಾಹವಾಗ್ತೀವಿ ಇಂದು. ನೋಡು ಆಕಾಶದಲ್ಲಿ ಬಂಗಾರ ಹರಡಿದೆ, ನಮ್ಮ ಬದುಕು ಹಾಗೆ ಬಂಗಾರ ಆಗಬೇಕು" ಅವನು ಏನೋ ವರ್ಣಿಸುತ್ತಿದ್ದ. ಅವಳು ತನ್ಮಯಳಾಗಿ ಕೇಳುತ್ತಿದ್ದಳು.

"ರ್‍ಯಾಸ್ಕಲ್" ಎಂಬ ಗುಡುಗು ಕೇಳಿಸಿತು. ಹಿಂದಿನಿಂದ ಕೃಷ್ಣ ಬೆಚ್ಚಿ ಅವಳನ್ನು ಬಿಟ್ಟು, ಹಿಂದೆ ಅವಳ ಕನ್ನಡ ಮಾಸ್ತರ್ ನಿಂತಿದ್ರು.

"ಏನಯ್ಯಾ.....ಶ್ರೀಮಂತರ ಮನೆ ಹುಡುಗಾ.....ನೀನು ಆಟಾ ಆಡಿ

ಬಚಾವ್ ಆಗ್ತಿ. ಆ ಹುಡುಗಿ ಬಾಳು ಬೆಂಕಿ... ಬೆಂಕಿ ಆಗತ್ತೆ. ಎಷ್ಟು ದಿನದಿಂದ ಈ ಆಟಾ ಆಡ್ತಿದ್ದೀರಿ?"

ಕೃಷ್ಣ ಸುಮ್ಮನೆ ನಿಂತಿದ್ದ. ಐದು ನಿಮಿಷದಲ್ಲಿ ವೇಗವಾಗಿ ಓಡಿಬಿಟ್ಟ. ವೆಂಕಟಪ್ಪಾ ಅವನನ್ನು ಹಿಡಿಯಲೆತ್ನಿಸಿ "ಹೇಡಿ ಓಡುತ್ತೀಯಾ?" ಎಂದು ಹಿಂಬಾಲಿಸಿದರು.

ಇಂದಿರಾ ದಿಗ್ಭ್ರಾಂತಳಾಗಿ ಆಕಾಶ ನೋಡುತ್ತಾ ನಿಂತಳು. ತನ್ನ ತಂದೆಗೆ ವಿಷಯ ತಿಳಿದರೆ ಬೆಂಕಿ... ಬೆಂಕಿ... ಆಗ್ತಾರೆ. ತಂದೆಯ ಕೋಪಾ ನೆನೆಸಿಕೊಳ್ಳುತ್ತಿದ್ದಂತೆ ಭ್ರಾಂತಳಾದಳು. ಆಕಾಶದ ತುಂಬ ಬೆಂಕಿ ಹರಡುತ್ತಿದ್ದಂತೆ ಆ ಬೆಂಕಿ ಜ್ವಾಲೆಯಾಗಿ ವ್ಯಾಪಿಸುತ್ತಿದ್ದಂತೆ ತನ್ನ ಮೇಲೆ ವ್ಯಾಪಿಸಿದಂತೆ ಇಂದಿರಾ ಚಿಟ್ ಎಂದು ಚೀರಿ ಕೆಳಗೆ ಬಿದ್ದಳು. ಅವಳಿಗೆ ಜ್ಞಾನಬಂದಾಗ ಮನೆಯಲ್ಲಿದ್ದಳು.

"ನಿಮ್ಮ ಹುಡುಗಿಗೆ ಬುದ್ಧಿ ಹೇಳಿ ಸ್ವಾಮಿ... ನಮ್ಮ ಹುಡುಗನ್ನ ನೋಡಿ ನಗ್ತೋದು, ಕಣ್ಣು ಮಿಟಕಿಸ್ತೋದು ಎಲ್ಲಾ ಮಾಡ್ತಿದ್ದೋಳು ಅವಳೆ. ನಾನು ನಮ್ಮ ಹುಡುಗಂಗೆ ಬಲಿ ಹಾಕಿದ್ದೀನಿ. ನೀವು ನಿಮ್ಮ ಹುಡುಗೀನ್ನ ಹದ್ದುಬಸ್ತಲ್ಲಿ ಇಟ್ಕೊಳ್ಳಿ. ನನ್ನ ಮಗಾ ಕರೆದರೆ ಹೊಳೆ ದಂಡೆಯವರೆಗೆ ಏಕೆ ಹೋಗ್ಬೇಕು?" ಎಂದರು.

ಇಂದಿರಾಳ ತಂದೆ ನಾರಾಯಣರಾವ್ "ನನ್ನ ಮಗಳದು ತಪ್ಪಿದ್ರೆ ಅವಳನ್ನ ಕೊಂದು ಬಿಡ್ತೀನೆ" ಎಂದರು. ವೆಂಕಟಪ್ಪಾ ಬಾಯಿ ಹಾಕಿ,

"ನೋಡು... ಶೆಟ್ಟರು ದೊಡ್ಡ ಮನುಷ್ಯರು. ಅವರ ಮಗನಿಗೆ ನಾಳೆ ಒಳ್ಳೆ ಮನೆತನದ ಹೆಣ್ಣು ಸಿಗಬೇಕು. ಅವರು ಈ ವಿಷಯ ಬಯಲಿಗೆ ಹಾಕಲ್ಲ. ಈ ವಿಷಯ ಕಂಡೋನು ನಾನೊಬ್ಬನು. ನನಗೂ ಹೆಣ್ಮಕ್ಕಳಿದ್ದಾರೆ. ನಾನು ಈ ವಿಷಯಾ ಹೊರಗ್ಹಾಕಲ್ಲ. ನೀನು ಮಕ್ಕಳನ್ನ ಕೊಲ್ಲಬೇಡಾ. ಬೇಗ ನಿನ್ನ ಮಗಳಿಗೆ ಒಂದು ಒಳ್ಳೆ ಹುಡುಗನ ಮದುವೆ ಮಾಡು. ಇದರಲ್ಲಿ ನಿನ್ನದೂ ತಪ್ಪಿದೆ. ವಯಸ್ಸಿನ ಹುಡುಗಿಗೆ ಮದುವೆ ಮಾಡದೆ ಓದ್ಸಿ, ವಿದ್ಯಾ, [illegible] ಪರೀಕ್ಷೆ ಪಾಸು ಮಾಡಿಸ್ತೀನಿ ಅಂತ ಕೂತಿದ್ದೆ. ಈ ಎಲ್ಲಾ ಹುಚ್ಚು ಬಿಟ್ಟು ಬೇಗ ಮದುವೆ ಮಾಡು" ಎಂದರು.

[illegible] ಅಂತು ಅವರೆಲ್ಲ ಒಂದು ಒಪ್ಪಂದಕ್ಕೆ ಬಂದರು. ಈ ಘಟನೆ ನಡೆದ

ಮೂರು ತಿಂಗಳಲ್ಲಿ ದೂರದ ಬೆಂಗಳೂರಿನ ಒಂದು ಬಡ ಕುಟುಂಬದ ಹುಡುಗನ್ನ ಹುಡುಕಿ ನಾರಾಯಣಾಚಾರ್ಯರು ಮಗಳ ಮದುವೆ ಮಾಡಿದರು. ಇದಕ್ಕೂ ಮೊದಲು ಹತ್ತಿರವೆ ತಾವು ಮೊದಲು ಇಂದುಕೊಂಡಿದ್ದ ಒಂದೆರಡು ಸಂಬಂಧಿಕರ ಅನುಕೂಲಸ್ಥ ವರಗಳನ್ನು ವಿಚಾರಿಸಿದ್ದರು.

ಆದರೆ ಹಿಂದಿಟ್ಟು ತಮಾಷೆ ನೋಡುವ ಸ್ವಭಾವದ ವೆಂಕಟಪ್ಪನವರು ಉಪ್ಪುಖಾರ ಹಚ್ಚಿ, ತಾವು ಕಣ್ಣಾರೆ ಕಂಡ ಕಥೆಯನ್ನು ಹರಡಿದ್ದರು. ಅಲ್ಲೆಲ್ಲಾ ವ್ಯವಹಾರ ಕುದುರಲಿಲ್ಲ.

ಕಡೆಗೆ ಬೆಂಗಳೂರಿನಲ್ಲಿ ಸೋದರಮಾವನ ಬಡ ಕುಟುಂಬದಲ್ಲಿದ್ದವರ ......ವೃತ್ತಿಯಲ್ಲಿ ಪ್ರೈಮರಿಸ್ಕೂಲ್ ಮಾಸ್ತರು, 25 ವರ್ಷವಾದರೂ ವಿವಾಹವಾಗಿಲ್ಲ. ಸ್ವಲ್ಪ ಹಣದಾಸೆ ತೋರಿಸಿದರೆ ಒಪ್ಪುತ್ತಾನೆ ಎಂದ್ಯಾರೊ ಹಿತೈಷಿಗಳು ಮಧ್ಯಸ್ತಿಕೆ ಮಾಡಿ ಎರಡೂ ಕಡೆ ಓಡಾಡಿ ವಿವಾಹ ಮಾಡಿದರು.

ವಿವಾಹವಾದಾಗ ಒಂದೆರಡು ವರ್ಷ ಸೋದರಮಾವನ ಮನೆಯಲ್ಲೇ ಹೆಂಡತಿ ತಾಯಿಯೊಂದಿಗೆ ಇದ್ದರು ರಾಮರಾಯರು. ಮೊದಲಾರು ತಿಂಗಳು ಪ್ರೀತಿ ಪ್ರೇಮ ಚೆನ್ನಾಗೇ ಇತ್ತು.

ತಮ್ಮ ಕಡೆಯ ನೆಂಟರು ಯಾರು ಹುಡುಗಿಯನ್ನ ನೋಡಿದರೂ—

"ಅಂತು ರಾಮು ಅದೃಷ್ಟ ಚೆನ್ನಾಗಿದೆ. ಅವನ ಬಡತನ ನೋಡಿದ್ರೆ ನಾವು ಬಳಗದಲ್ಲಿ ಯಾರು ಹೆಣ್ಣೇ ಕೊಡಲಿಕ್ಕೆ ಸಿದ್ಧರಿರಲಿಲ್ಲ. ಅಂಥಾದ್ದು ಇಂಥಾ ಚೆಂದುಳ್ಳಿ ಹೆಣ್ಣಿನ ಜೊತೆ ಬಣ್ಣಾ ಬಂಗಾರ ಸಹ ಸಿಕ್ಕಿದೆ" ಎನ್ನುತ್ತಿದ್ದರು.

"ಅಂತು ನಿನ್ನ ಅದೃಷ್ಟಾ ದೊಡ್ಡದು ರಾಮು. ಹೆಣ್ಣ ಸಿಗಲ್ಲ ನಿಂಗೆ ಅಂತಿದ್ದರೆ ಲಕ್ಷ್ಮಿದೇವೀನೇ ಒಲಿದು ಬಂದಳು. ಚೆನ್ನಾಗಿ ಪ್ರೀತಿಯಿಂದ ನೋಡ್ಕೊ" ಎಂದು ಸೋದರ ಮಾವಾ ಅವಳನ್ನು ಹೊಗಳುತ್ತಿದ್ದರು. ಆರು ತಿಂಗಳ ನಂತರ ದೀಪಾವಳಿಗೆ ಹೆಂಡತಿಯ ಜೊತೆ ಮಾವನ ಮನೆಗೆ ಹೋಗಿ ಬಂದಾಗ ರಾಮರಾಯರ ಮನಸು ಕೆಟ್ಟುಹೋಯಿತು. ಇದಕ್ಕೆ ಕಾರಣ ಪತ್ನಿಯೊಡನೆ ಸಿಂಗರಿಸಿಕೊಂಡು ಹೊಳೆಯಂಚಿನ ಶ್ರೀ ಗಂಗಾಧರೇಶ್ವರ ದೇವಾಲಯಕ್ಕೆ ಹೋಗಲು ಸಿದ್ಧರಿದ್ದಾಗ ದಾರಿಯಲ್ಲಿ ಕೆಟ್ಟ ಶಕುನ ಹೊಗಳು ಇವರ ಕಿವಿಗೆ ಬೀಳುವಂತೆಯೂ,

"ಅಂತು ಹಣದ ಬಲದಿಂದ ನಾರಾಯಣರಾಯ ಹುಡುಗೀನ್ನ ಥಾಟಿಸಿ ಬಿಟ್ರು. ನಮ್ಮ ಬಡವರ ಹುಡುಗಿಯರು ಇಂಥಾ ಆಟಾ ಆಡಿದ್ದರೆ ಕೆರೆ ಭಾವಿ ಕಾಣ್ಬೇಕಿತ್ತು" ಎಂದು ರಂಗಮ್ಮ ಗಟ್ಟಿಯಾಗಿ ನುಡಿದರೆ....ಇನ್ನೊಬ್ಬಾಕೆ ಕುಮುದಮ್ಮ—

"ಈ ಲೌಡಿ ನೋಡಮ್ಮ ಆಡಬಾರದ ಆಟಾ ಆಡಿ, ಈಗ ಗಂಡನ ಜೊತೆಗೆ ವಾಕಿಂಗ್ ಹೋಗ್ತಿರೋದು. ಆ ಶೆಟ್ಟರ ಹುಡುಗನ ಗತಿ ಏನಾಯ್ತೊ ಪಾಪ. ಇವಳ ಮದುವೆ ಆದ ಮೇಲೆ ಕಾಯಿಲೆ ಬಿದ್ದು ಹುಚ್ಚನ ಹಾಗೆ ಆಗ್ಬಿಟ್ನಂತೆ" ಎಂದರು.

ರಾಮರಾಯರೊಡನೆ ದೇವರ ದರ್ಶನ ಮುಗಿಸಿ ಪೋಳೆಯ ದಂಡೆಗೆ ಬಂದಾಗ ಗಂಡನ ಮುಖ ಬಿಗಿದು ಗಂಟು ಕಟ್ಟಿರುವುದು ನೋಡಿ ಹದಿನೈದರ ಪುಟ್ಟ ಇಂದಿರೆಗೆ ಭಯವಾಯಿತು. ತಾಯಿ ಹೊಳೆ ದಂಡೆಯಲ್ಲಿ ಗಂಡ ಹೆಂಡತಿ ತಿನ್ನಲೆಂದು ಹುರಿಯವಲಕ್ಕಿ, ಚಕ್ಕುಲಿ, ಕೋಡುಬಳೆ, ಕೊಬ್ಬರಿ ಮಿಠಾಯಿ, ರವೆವುಂಡೆ ಎಲ್ಲಾ ಕಟ್ಟಿ ಕೊಟ್ಟಿದ್ದರು.

"ತಿಂಡಿ ಕೊಡಲಾ....?" ಇಂದಿರಾ ಹೆದರುತ್ತಾ ಗಂಡನಿಗೆ ಕೇಳಿದಳು.

"ಹೂಂ......" ಎಂದರು ರಾಮರಾಯರು,

ವೈರ್ ಬುಟ್ಟಿ ಬಿಚ್ಚಿ ದೊಡ್ಡ ದೊಡ್ಡ ಸ್ಟೀಲ್ ತಟ್ಟೆಗಳಲ್ಲಿ ಕೋಡುಬಳೆ, ಚಕ್ಕುಲಿ, ಉಂಡೆ, ಮಿಠಾಯಿ ಹಾಕಿದಳು.

"ತಗೊಳ್ಳಿ....." ಎಂದು ತಿಂಡಿ ತಟ್ಟೆಯನ್ನು ನೀಡಿದಳು. ತಿಂಡಿ ತಟ್ಟೆ ಕೈಲಿ ಹಿಡಿದು ರಾಮರಾಯರು ಅದನ್ನೇ ದಿಟ್ಟಿಸುತ್ತ ಕುಳಿತರು. "ತಿಂಡಿ ತಿನ್ನಿ....." ಇಂದಿರಾ ಹೆದರುತ್ತ ಹೇಳಿದಳು. ಇದ್ದಕ್ಕಿದ್ದಂತೆಯೇ ರಾಮರಾಯರು ಗಡುಸಾಗಿ "ಆ ಶೆಟ್ಟರ ಹುಡುಗ ಯಾರು ಇಂದಿರಾ...?" ಎಂದರು. ಇಂದಿರಾ ದಿಗ್ಭ್ರಾಂತಳಾಗಿ ಗಂಡನ ಮುಖ ನೋಡಿದಳು. ಅವಳ ಮುಖ ಬಿಳಿಚಿಕೊಂಡಿತ್ತು.

"ಇಗೊ! ಈ ತಿಂಡಿ ತಗೊ, ತಿನ್ನೋ ತಿಂಡಿಯ ಸಾಕ್ಷಿಯಾಗಿ ನಿಜ ಹೇಳು. ಏನು ತಪ್ಪು ಮಾಡಿದ್ದರೂ ನಾನು ಕ್ಷಮಿಸ್ತೀನಿ. ನಿಮ್ಮ ತಂದೆ ಶ್ರೀಮಂತರು, ಅನುಕೂಲಸ್ಥರು. ನನ್ನಂಥಾ ಬಡವನ್ನ ಹುಡುಕಿ ಮದುವೆ ಮಾಡಿ ಬಿಡ್ಲಿಕ್ಕೆ ಏನು ಕಾರಣ? ನಿಜಾ ಹೇಳಿದರೆ ಕ್ಷಮಿಸ್ತೀನಿ" ಹಠವಾದ

ನೋಟಾ ಕ್ಷ-ಕಿರಣಾ ತೂರಿದ ಹಾಗೆ ತೂರಿ ಹೃದಯದ ಭಾವನೆಗಳ ಕಣಕಣ ವನ್ನು ಬಗೆಯುತ್ತಿದೆ ಎನಿಸಿದಾಗ ಇಂದಿರಳಿಗೆ ತಪ್ಪಿಸಿಕೊಳ್ಳಲಾಗಲಿಲ್ಲ.

ತೊದಲುತ್ತಾ ನಡೆದಷ್ಟೆ ಘಟನೆಗಳನ್ನು ಹೇಳಿ ಬಿಟ್ಟಳು. "ಅಷ್ಟೇನಾ ......? ಅಷ್ಟೇನಾ ಅವನು ಮಾಡಿದ್ದು ಬೇರೇನು ಮಾಡಲಿಲ್ಲವಾ ?"

ರಾಯರಾಯರು ಅಪನಂಬಿಕೆಯಿಂದ ಪ್ರಶ್ನಿಸಿದರು. ಅವರ ಕಣ್ಣು ಗಳು ಕೆಂಡದುಂಡೆಗಳಂತೇ ಉರಿಯುತ್ತಾ ಇದ್ದವು. ಇಂದಿರಾ ತಲೆ ಎತ್ತಿ ಆಕಾಶ ನೋಡಿದಳು. ಆಕಾಶದಲ್ಲಿ ಸೂರ್ಯ ಮುಳುಗುತ್ತಿದ್ದ. ಸುತ್ತಲೂ ಹರಡಿದ್ದ ಕೆಂಬಣ್ಣಾ ಹೊಂಬಣ್ಣಾ ಎಲ್ಲಾ ಉರಿ ಜ್ವಾಲೆಗಳಂತೆ ಕಾಣಿಸಿತು.

"ನೀವೇನೋ ಆಡೋ ಆಟಾ ಆಡಿ ಓಡಿ ಹೋಗ್ತೀರಿ. ಆಮೇಲೆ ಹೆಣ್ಣು ಮಕ್ಕಳು ಜೀವನದಲ್ಲಿ ಬೆಂಕಿ ಏಳತ್ತೆ, ಆ ಹುಡುಗಿಯ ಬದುಕೆ ನರಕ ಆಗುತ್ತೆ" ವೆಂಕಟಪ್ಪನ ಧ್ವನಿ ಕೇಳಿ ಬಂದಿತು.

"ಇಂದಿರಾ......ನಿನ್ನೆ ಕೇಳ್ತಾ ಇರೋದು. ನಿಜ ಹೇಳು, ಆ ಹುಡುಗ ನಿನಗೆ ಇನ್ನೇನೇನು ಮಾಡಿದ ? ಬರಿ ನಾಲ್ಕು ಸಲ ಮುದ್ದಿಸಿ ಓಡಿ ಹೋದ ಅಂದರೆ ನಾನು ನಂಬಲ್ಲ. ನಿಜ ಹೇಳು ನಿಜಾ ಹೇಳು ?"

ಇಂದಿರಾ ವಿಹ್ವಲಳಾಗಿ ಭಯದಿಂದ ಕ್ರೋಧದಿಂದ ಉನ್ಮತ್ತನಾದಂಥಾ ಗಂಡನ ಕಂಗಳನ್ನೆ ದಿಟ್ಟಿಸಿದಳು. ಬೆಂಕಿಯ ಜ್ವಾಲೆ ಅಲ್ಲಿಂದ ವ್ಯಾಪಿಸಿ ಆಕಾಶವೆಲ್ಲಾ ಹರಿಸುತ್ತಿದೆ ಎಂದೆ ಅವಳಿಗೆ ಭ್ರಮೆ ಆಯಿತು. "ಬೆಂಕಿ... ಬೆಂಕಿ" ಎಂದು ಚೀರಿ ಕೆಳಗೆ ಬಿದ್ದು ಬಿಟ್ಟಳು.

ರಾಮರಾಯರು ಭೀತರಾದರು. ಪಾತ್ರೆಯಿಂದ ನೀರು ಚುಮುಕಿಸಿ ಮುಖಕ್ಕೆ ಹನಿಸಿದರು. ಶಲ್ಯದ ಸೆರಗಿನಿಂದ ಗಾಳಿ ಬೀಸಿದರು. ಎಷ್ಟೋ ಹೊತ್ತಿಗೆ ಇಂದಿರಾ ಎದ್ದಳು. ರಾಮರಾಯರು ಎಷ್ಟೇ ಪ್ರೀತಿಯಿಂದ ಮಾತಾಡಿಸಿದರೂ ಮಂಕಾಗಿದ್ದಳು. ಅಂತು ತಿಂಡಿ ತಿಂದು, ಕೊಂಚ ಹೊತ್ತು ಅಲ್ಲಿದ್ದು ಗಂಡ ಹೆಂಡತಿ ಹೊರಬಿದ್ದರು.

ಆ ಸಲ ಮಾವನ ಮನೆಯಿಂದ ಹೊರಬಿದ್ದ ರಾಮರಾಯರು ಮತ್ತೆಂದು ಮಾವನ ಮನೆಗೆ ಕಾಲಿಡಲಿಲ್ಲ. ಹೆಂಡತಿಯನ್ನು ಕಳಿಸಲಿಲ್ಲ. ಹೆಂಡತಿಯನ್ನು ಯಾರೂ ಹೊಗಳಿದರೂ ಕೋಪ....ಅವನನ್ನು ವರ್ಷದ ಸ್ನೇಹಿತರಮಾವ.....ಇಂದಿರಳನ್ನು ಬಾಯ್ತುಂಬಾ ಹೊಗಳುತ್ತಿದ್ದನು. ಶತ್ರುವನ್ನು

ಸಾಕಿ ಬೆಳಸಿದ ಮಾವನನ್ನು ಪ್ರತಿಭಟಿಸಲಾರದೆ ಹೆಂಡತಿಯೊಡನೇ ಬೇರೆ ಮನೆ ಮಾಡಿದರು.

ತಾಯಿಯೂ ಸತ್ತ ಮೇಲಂತೂ ಹೆಂಡತಿಯ ಮೇಲೆ ಆತ ಮತ್ತಷ್ಟು ದಿಗ್ಬಂಧನಾ ಹೇರಿದರು. ಹೆಂಡತಿಯನ್ನು ಕಂಡರೆ ಏನೋ ಒಂದು ತರಹ ಅಸಹನೆ, ಸಿಡಿಮಿಡಿ ಅವಳ ಭಾವನೆಗಳನ್ನು ತುಳಿಯುವುದರಲ್ಲೇ ಆನಂದಾ ಅವರಿಗೆ. ಮೊದಲ ಮಗನಿಗೆ ಹೆಂಡತಿ ಕೃಷ್ಣ ಎಂದು ಹೆಸರಿಟ್ಟು ಕರೆದರೂ, ತಾವು ಬೇರೆಯ ಹೆಸರಿಂದ ಕರೆಯತೊಡಗಿದರು.

ಇಂದಿರಮ್ಮನ ತಾಯಿ ಜೀವನದಲ್ಲಿ ವೈರಾಗ್ಯ ತಾಳಿ ಶ್ರೀಹರಿದಾಸಿಯಾಗಿ ಶ್ರೀಹರಿಕಥೆ ಮಾಡುತ್ತಾ ಊರೂರು ಸುತ್ತತೊಡಗಿದರು. ತಂದೆ ಬಂದು ಉಳಿದ ಹೊಲ ಗದ್ದೆ ಆಸ್ತಿ ಪಾಸ್ತಿ ಅಳಿಯನಿಗೊಪ್ಪಿಸಿ......ವೈರಾಗ್ಯದಿಂದ.... ಮಂತ್ರಾಲಯಕ್ಕೆ ಹೋಗಿ ಅಲ್ಲಿ ರಾಯರ ಮಠದಲ್ಲಿ ಶೇಷಾಯುಷ್ಯ ಕಳೆಯಲು ನಿರ್ಧರಿಸಿದರು.

ಈಗಂತು ತವರುಮನೆಯ ಲವಲೇಶ ಆಸೆಯೂ ಇಲ್ಲ. ಗಂಡನ ಪಾದವೆ ಗತಿಯೆಂದು ಇರಬೇಕಾಯಿತು.

ರಾಮರಾಯರು ಮಾವನ ಹಣದ ಬಲದಿಂದ ಜೀವನದಲ್ಲಿ ಮೇಲೇರಿದರು. ಬೆಂಗಳೂರಿನಲ್ಲಿ ಸ್ವಂತಮನೆ ಮಾಡಿಕೊಂಡರು. ತಾವು ಗ್ರಾಜುಯೇಟಾಗಿ ಹೈಸ್ಕೂಲ್ ಮಾಸ್ತರಾದರು, ಎಂ.ಎ. ಮುಗಿಸಿ ರಿಟೈರ್ಡ್ ಆಗುವ ನಾಲ್ಕು ವರ್ಷಗಳ ಮುಂಚೆ ಹೈಸ್ಕೂಲ್ ಹೆಡ್‌ಮಾಸ್ತರ್ ಆದರು. ಮಕ್ಕಳಿಗೆ ಓದಿಸಿದರು. ಒಳ್ಳೊಳ್ಳೆ ಕಡೆ ಮದುವೆ ಸಹಾ ಮಾಡಿದರು. ಆದರೆ ಹೆಂಡತಿಯನ್ನು ಕಂಡರೆ ಏನೊ ಅಸಹನೆ.....ತಿರಸ್ಕಾರ.....

ಅವಳು ಮಾಡಿದ ಒಂದು ಸಣ್ಣ ತಪ್ಪನ್ನು ಆತ ಜೀವಮಾನದ ಉದ್ದಕ್ಕೂ ಕ್ಷಮಿಸಲೇ ಇಲ್ಲ. ಮರ್ಯಾದೆಯಾಗಿ ಸಂಸಾರ ಮಾಡುತಾ ತಮ್ಮ ಅಜ್ಞೆಯಲ್ಲಿಯೆ ಇದ್ದ ಹೆಂಡತಿಗೆ....ಆಗಾಗ ಇಲ್ಲದ ಕಾರಣ ಹುಡುಕಿ ರೇಗಾಡಿ..... "ನೀನು ಮರ್ಯಾದೆಗೆಟ್ಟ ಹೆಂಗಸು, ಮನೆ ಬಿಟ್ಟವಳು - ಅಂಥ ಹೊಲಸು ಮಾತಾಡಿ ತೃಪ್ತಿ ಹೊಂದುತ್ತಿದ್ದರು.

ತಾವು ಗಂಡನ ಮಾತಿನ ಕೋಪಕ್ಕೆ, ಆತನ ಹೊಲಸು ಮಾತು ಸಹಿಸಲಾರದೇ ಮಗನಿಗೆ ದುಂಬಾಲು ಬಿದ್ದು ಒಂದು ಚಿತ್ರದಲ್ಲಿ ಅಶ್ಲೀಲ ಪಾತ್ರ

ವಸಿದ್ದಾಗಿ ಹೇಳಿದರು. ಆದರಿಂದ ತನ್ನ ಮನಶ್ಶಾಂತಿಯೇ ಹಾಳಾಗಿದೆ...... ಎಂದು ಆಕೆ ಹೇಳಿದಾಗ ಡಾಕ್ಟರ್ ಆಶ್ಚರ್ಯದಿಂದ ಏಕಮ್ಮಾ....?" ಎಂದರು.

"ರೇಗಿಸ್ಕೊಂಡೋ......ಕೂಗಿಸ್ಕೊಂಡೋ ನಮ್ಮ ಯಜಮಾನರ ಹತ್ತಿರ ಇದ್ದಾಗ ನನಗೆ ಸುಖಶಾಂತಿ ಇತ್ತು. ನನ್ನ ಹಿಂದಿನ ಜೀವನದ ತಪ್ಪು ಕ್ಷಮಿಸ್ಯಿ, ಅವಳು ಒಳ್ಳೆ ಗೃಹಿಣಿಯ ಹಾಗೆ ನನ್ನ ಇಟ್ಕೊಂಡಿದ್ದರು. ಈಗ ಈ ಮುದಿ ವಯಸ್ಸಿನಲ್ಲಿ ಅವರನ್ನ ಬಿಟ್ಟು ಬಂದೆ. ಈಗ ಒಂಟಿಯಾಗಿ ಕಾಶಿಯಲ್ಲಿ ಹೇಗಿರ್ತಾರೊ ಏನೊ?" ಎಂದು ಅತ್ತರು. ಡಾಕ್ಟರ್ ಮಾಣಿಕ್ಯರತ್ನಂ ಹಿಪ್ನಾಟಿಸಂ ಅವಸ್ಥೆಯಲ್ಲಿಯೇ ಅವರಿಗೆ ಚೆನ್ನಾಗಿ ಮನಶ್ಶಾಂತಿ ಬರುವಂತೆ ಬುದ್ಧಿವಾದ ಹೇಳಿದರು.

ಯಾವುದೋ ಪಾಪ ಮಾಡಿದೆ ಎಂದು ಕೊರಗಬೇಡಿ, ತಿಳಿಯದೇ ಮಾಡಿದ್ದು ಪಾಪವಲ್ಲ ನಿಮ್ಮ ಪತಿ ನಿಮ್ಮನ್ನು ಕ್ಷಮಿಸಿದ್ದಾರೆ. ಒಳ್ಳೆ ಬದುಕು ಕೊಟ್ಟಿದ್ದಾರೆ ಒಳ್ಳೆ ಮಕ್ಕಳ ತಾಯಿಯಾಗಿ ಒಂದು ಗೌರವಸ್ಥ ಕುಟುಂಬದ ಗೃಹಿಣಿ ಆಗಿ.... ನೀವು ಹತ್ತು ಜನ್ಮದಲ್ಲಿ ಹೆಸರಾಗಿದ್ದೀರಿ. ನೀವು ಸಿನಿಮಾ ನಟಿ ಆದದ್ದು ಒಂದು ಎಪ್ರಿಲ್‌ಫೂಲ್ ವಿಚಾರ. ಚಿತ್ರ ಬಿಡುಗಡೆಯಾದರೂ ನಿಮ್ಮ ಅಭಿನಯದ ಆ ಭಾಗಗಳು ಬೇರೊಬ್ಬ ಹಾಸ್ಯನಟಿಯಿಂದ ಅಭಿನಯಿಸಲ್ಪಡುತ್ತವೆ. ನಿಮ್ಮ ಭಾಗದ ಫಿಲಂ ನಿಮ್ಮ ಮಗ ಲ್ಯಾಬಲ್ಲಿ ನಾಶ ಪಡಿಸಿದ್ದಾರೆ. ಜನ ಪತ್ರಿಕೆಯಲ್ಲಿ ದಿನಕ್ಕೆ ನೂರೆಂಟು ಸುದ್ದಿ ಓದುತ್ತಾರೆ. ಆದರಲ್ಲೆನೂ ಫಿಲಂ ವಿಷಯದಲ್ಲಿ ತಮ್ಮ ನೆಚ್ಚಿನ ನಾಯಕ ನಾಯಕಿಯ ಬಗ್ಗೆ ಬಂದ ಸುದ್ದಿ ಮಾತ್ರ ಅವರಿಗೆ ನೆನಪಿರುತ್ತದೆ.

ಉಳಿದ ಎಕ್ಸ್ಟ್ರಾ ನಟಿಯರ ಬಗ್ಗೆ ಓದಿದ್ದು ಎಂದೊ ಮರೆತುಹೋಗಿರುತ್ತಾರೆ. ನಿಮ್ಮ ನೆಂಟರಿಷ್ಟರೆಲ್ಲ ಕೇಳಿದರೆ,

"ನಾನು ಅಭಿನಯಿಸೇ ಇರಲಿಲ್ಲ. ತಂದೆಯವ್ರು ಮಗಾ... ಫೂಲ್ ಮಾಡಿದ್ರು" ಎನ್ನಿ. ಅವರವರ ಸಾಂಸಾರಿಕ ಕ್ಲೇಶಗಳಲ್ಲಿ ಇದೆಲ್ಲಾ ಬೇಗ ಮರೆತು ಹೋಗುವ ವಿಷಯ. ನಿಮ್ಮ ಪತಿಯ ಜೊತೆ ನೀವು ಹಾಯಾಗಿ ಸಂಸಾರ ಮಾಡಿಕೊಂಡು ಸುಖವಾಗಿರಿ" ಎಂದರು.

"ನನ್ನ ಪತಿ ನನ್ನನ್ನು ಕ್ಷಮಿಸುತ್ತಾರೆಯೆ ?" ಆಕೆ ನರಳುತ್ತಾ ಕೇಳಿದರು.

"ಖಂಡಿತಾ ಕ್ಷಮಿಸ್ತಾರೆ. ನೀವು ನಿಮ್ಮ ಪತಿಯ ಜೊತೆ ಹಾಗುಮಗಳ ಜೊತೆ ಸುಖವಾಗಿ ಸಂಸಾರ ಮಾಡಿಕೊಂಡಿರಬಲ್ಲಿರಿ" ಎಂದು ಅನೇಕ ಭರವಸೆಗಳನ್ನು ಕೊಟ್ಟರು.

ಹದಿನೈದು ದಿನ ಇಂದಿರಮ್ಮ ಅತ್ಯಂತ ನಿತ್ರಾಣ ಸ್ಥಿತಿಯಲ್ಲಿದ್ದರು. ಆ ಸಮಯದಲ್ಲಿಯೆ ಅವರಿಗೆ ವಿಷಯಗಳನ್ನು ಬಿಂಬಿಸಲಾಯಿತು. ಆಕಾಶ ನೋಡಿದಾಗ ಬೆಂಕಿ ಹರಡಿದೆ ಎಂದು ಭ್ರಮಿಸುವುದನ್ನು ಹೋಗಲಾಡಿಸಿ ಆಕಾಶದಲ್ಲಿ ಬಂಗಾರ ಹರಡಿದೆ. ನಿಮ್ಮ ಬದುಕು ಬಂಗಾರವಾಗಿದೆ ಎಂಬುದನ್ನು ದಿನವೂ ಅವರ ಮನಸ್ಸಿಗೆ ಬಿಂಬಿಸಲಾಗುತ್ತಿತ್ತು.

ಡಾಕ್ಟರ್ ಮಾಣಿಕ್ಯರತ್ನಂ ಹಾಗೂ ನರ್ಸ್ ಅಂಜಮ್ಮ ಇಲ್ಲಿ ಇಂದಿರಮ್ಮನ ಮನಸು ಹದಪಡಿಸಲು ಸತತವಾಗಿ ಹದಿನೈದು ದಿನಗಳು ಶ್ರಮಿಸಿದ್ದರೆ, ವಿಜಯ ಅದೇ ಸಮಯದಲ್ಲಿ ಇನ್ನೊಂದು ಕಾರ್ಯವನ್ನು ಸಾಧಿಸಿದ್ದಳು.

ತಾಯಿಗೆ ಹಿಪ್ನಾಟಿಸಂ ಮಾಡಿದ ಮರುದಿನವೇ ವಿಜಯ ಅನಂತನ ಮನೆಗೆ ಬಂದಳು.

ಮೂರು ತಿಂಗಳ ಹಿಂದೆಯೆ ತಂಗಿ ವಿಜಯ ಬೆಂಗಳೂರಿಗೆ ಬಂದಿದ್ದಾಳೆಂದು ತನ್ನ ಇನ್ನೊಬ್ಬ ಅಣ್ಣನ ಮನೆಯಲ್ಲಿ ಇದ್ದಾಳೆಂದು ಅನಂತನಿಗೆ ಕನಸಿನಲ್ಲಿ ಸಹ ಗೊತ್ತಿರಲಿಲ್ಲ.

ವಿಜಯಳನ್ನು ಆತ್ಮೀಯತೆಯಿಂದ—

"ಬಾಮ್ಮ ಬಾ......ನಿನಗೆ, ಕುಮುದನಿಗೆ ಕಾಗದಾ ಬರೆದು ಕರಿಸಿಕೊಳ್ಳೋಣಾಂತಿದ್ದೆ."

"ಏನು ವಿಷಯ ಅನಂತಣ್ಣಾ ?" ಎಂದರು ಉದ್ವೇಗದಿಂದ.

"ಕಾಶಿಯಿಂದ ವಿಶ್ವನಾಥಭಟ್ಟರೂ ಅನ್ನೋ ಅಪ್ಪನ ಹಿತೈಷಿ ಒಬ್ಬರು ಕಾಗದಾ ಬರೆದಿದ್ದಾರೆ. ಅಪ್ಪನ ಆರೋಗ್ಯ ಏನೇನು ಚೆನ್ನಾಗಿಲ್ಲಂತೆ. ನಿಮ್ಮ ಪೈಕಿ ಯಾರಾದರೂ ಬಂದ್ರೆ ವಾಸಿ ಅಂತೆ ಬರೆದಿದ್ದಾರೆ" ಎಂದ.

ವಿಜಯ ಹೆದರಿ—"ಅಂದರೆ ಅಪ್ಪಗೆ ಏನಾಗಿದೆ ?" ಎಂದಳು. ಅನಂತ ಚಿಂತೆಯಿಂದ—

"ಅಮ್ಮನದು ಒಂದು ವಿಚಿತ್ರ ಪ್ರಕರಣ ಗೊತ್ತಲ್ಲಮ್ಮ. ಇದ್ದಕ್ಕಿದ್ದ ಹಾಗೆ ಮನೆ ಬಿಟ್ಟು ಹೋಗಿ ಸಿನಿಮಾ ನಟಿ ಆದಳು. ನಾವೆಲ್ಲಾ ಸಂಚೇ ಇರಲಿಲ್ಲ. ನಮ್ಮ ಆಫೀಸ್ ಹತ್ತಿರಾ ಯಾರೋ ಕೆಲವು ವ್ಯಕ್ತಿಗಳು ಬಂದು ಆ ಚಿತ್ರದ ತುಣುಕು ಸಹಾ ತೋರಿಸಿದರು. ಪತ್ರಿಕೆಗಳಲ್ಲಿ ಬಂದ ಜಾಹಿರಾತು ವಿಡಿಯೋದಲ್ಲಿ ಅಮ್ಮ ಅಭಿನಯಿಸಿದ ದೃಶ್ಯದ ತುಣುಕು ಎಲ್ಲಾ ನೋಡಿ ಅಪ್ಪಾ ಮನಸು ಕೆಟ್ಟು, ನಾಲ್ಕು ತಿಂಗಳ ಹಿಂದೆ ಕಾಶಿಗೆ ಹೋದರು. ದಿನ ಮೂರು ಹೊತ್ತು ಗಂಗಾ ನದಿಯಲ್ಲಿ ಸ್ನಾನ ಭಟ್ಟರ ಮನೇಲಿ ಒಪ್ಪೊತ್ತು ಊಟ ಮಾಡ್ತಿದ್ದರಂತೆ. ಒಂದೂಟಾ ಬಿಟ್ಟರೆ ಬೇರೆ ಹಾಲು ಹಣ್ಣು ಏನು ತಗೋತಾ ಇರಲಿಲ್ಲವಂತೆ. ನೀವು ಹೀಗೆ ದೇಹ ದಂಡಿಸಿದರೆ ಹೇಗೆ ? ಎಂದು ಭಟ್ಟರು, ಭಟ್ಟರ ಹೆಂಡತಿ ರಾತ್ರಿ ಹೊತ್ತು ಏನಾದರೂ ತೆಗೆದು ಕೊಳ್ಳಲು ಒಪ್ಪಿಸಲು ಪ್ರಯತ್ನಿಸಿ ಸೋತರಂತೆ. "ನಾನು ದೇಹಾ ವಿಸರ್ಜಿಸಲೆಂದೇ ಇಲ್ಲಿ ಬಂದಿದ್ದೇನೆ" ಎಂದು ಅಪ್ಪನ ಉತ್ತರವಂತೆ. ಕಡೆಗೆ ಹೋದ ತಿಂಗಳು ಸಂಜೆ ಹೊರಗಿಂದ ಬಂದವರು ತಲೆ ತಿರುಗಿ ಬಿದ್ದರಂತೆ. ಹಣೆ ಒಡೆದು ಗಾಯ ವಾಗಿದೆ. ಕಾಲಿಗೆ ಪೆಟ್ಟು ತಗಲಿದೆ.

ಮೊದಲು ಕೆಲವು ದಿನ ಹಾಗೆ ತೂರಾಡಿಕೊಂಡು ಸ್ನಾನ ದೇವಸ್ಥಾನ ಅಂತ ಹೋಗ್ತಿದ್ದರಂತೆ. ಭಟ್ಟರ ಮನೆಯಿಂದ ಸ್ನಾನದ ಘಾಟಿಗೆ ಒಂದು ಮೈಲು ದೂರವಿದೆ. ಈಗ ಹದಿನೈದು ದಿನದಿಂದ ತೀರ ಏಳಲಾರದ ಸ್ಥಿತೀಲಿ ಇದ್ದಾರಂತೆ. ಭಯಂಕರ ಜ್ವರಾ ನಾನಿನ್ನು ಬದುಕಲ್ಲ. ಮಕ್ಕಳಿಗೆ ಸುದ್ದಿ ಕೊಡಬೇಡಿ ಅಂದಿದ್ದಾರಂತೆ. ಭಟ್ಟರು ಟೆಲಿಗ್ರಾಂ ಸಹ ಕೊಟ್ಟಿಲ್ಲ. ಒಂದು ಕಾಗದಾ ಬರೆದಿದ್ದಾರೆ. ವಸಂತ ಮಕ್ಕಳನ್ನ ಕರೆದುಕೊಂಡು ಇಲ್ಲೇ ಜಯ ನಗರದ ಅವಳ ತವರು ಮನೇಲಿದ್ದಾಳೆ. ನೀನು ಏನು ಮಾಡ್ತಿ ?" ಎಂದ. ವಿಜಯ ದೃಢವಾಗಿ:

"ಅನಂತಣ್ಣಾ ನಾನು ನಿನ್ನ ಜೊತೆ ಕಾಶಿಗೆ ಬರ್ತೀನಿ" ಎಂದಳು.

ಅನಂತ ಅರೆ ಮನಸ್ಸಿನಿಂದ "ನೀನು ಹೇಗೆ ಬರ್ತಿಯಮ್ಮ ?" ಎಂದ.

"ಛಾರ್ಜ್ ವಿಷಯಕ್ಕೆ ಚಿಂತೆ ಮಾಡಬೇಡಾ. ನನಗೆ, ನಿನಗೆ ಆಗೋ ಅಷ್ಟು ನಾನೇ ಕರ್ತೀನಿ" ಎಂದಳು. ಅನಂತ ಅಸಮಾಧಾನದಿಂದ—

"ಚಾರ್ಜ್ ವಿಷಯುದ್ದಲ್ಲಮ್ಮ. ಚಾರ್ಜ್ ಕೊಡಲಾರದಷ್ಟು ಬಡವನೇನಲ್ಲ ನಾನು. ಆದರೆ ಅಲ್ಲಿನ ಸ್ಥಿತಿಗತಿ ಹೇಗಿದೆಯೊ ? ಅಪ್ಪನಿಗೇನಾದರೂ ಆದರೆ ಎಷ್ಟು ದಿನ ಇರಬೇಕಾಗತ್ತೊ ? ನೀನು ನಿನ್ನ ಸಂಸಾರ ಬಿಟ್ಟು ಕಂಡು ಕೇಳದೆ ಊರಲ್ಲಿ ಎಷ್ಟು ದಿನ ಇರ್ತಿ ?" ಎಂದ.

"ಅಪ್ಪನ ಆರೋಗ್ಯ ಸರಿ ಮಾಡೋ ಉದ್ದೇಶದಿಂದಲೇ ಅಲ್ಲಿಗೆ ಬರ್ತಿದ್ದೇನೆ. ನನಗೆ ಇನ್ನೊಬ್ಬ ಅಣ್ಣ ಇರೋದು ನಿನಗೆ ಗೊತ್ತಿರಬಹುದು. ಅಣ್ಣ, ಅಮ್ಮ ಸೇರಿಕೊಂಡು ಅಪ್ಪನ್ನ ನಿನ್ನನ್ನ ಫೂಲ್ ಮಾಡಿದ್ದಾರೆ. ವಾಸ್ತವವಾಗಿ ಅಮ್ಮ ಮಾಡಿದ ಚಿತ್ರ ಬಿಡುಗಡೆ ಆಗೋ ಸಂಭವವೇ ಇಲ್ಲ. ಅಪ್ಪಾ ಹಾಯಾಗಿ ಇಲ್ಲಿಗೆ ಹಿಂತಿರುಗಿ ಬರಬಹುದು" ಎಂದು ಕೃಷ್ಣನ ವಿಷಯ ವಿವರವಾಗಿ ಹೇಳಿ ಇಂದಿರಮ್ಮ ಅಲ್ಲಿರುವುದಾಗಿ ತಿಳಿಸಿದಳು. ತಾಯಿ ತನ್ನ ಅಣ್ಣನ ಮನೆಯಲ್ಲಿ ಇರುವುದು......ಓಡಿ ಹೋಗಿದ್ದ ತನ್ನ ಅಣ್ಣಾ ಶ್ರೀಮಂತನಾಗಿ ಇದೇ ಊರಲ್ಲಿರುವುದು ಎಲ್ಲಾ ಕೇಳಿ ಅನಂತ ಚಕಿತನಾದ. ಇಂದಿರಮ್ಮನ ಮಾನಸಿಕ ಅನಾರೋಗ್ಯದ ವಿಷಯ ಮಾತ್ರ ವಿಜಯ ಹೇಳಲಿಲ್ಲ.

"ಅಮ್ಮ ಈಗ ಮದ್ರಾಸಿನಲ್ಲಿದ್ದಾಳೆ. ನಾನು ಅಣ್ಣನ್ನ ಮಾತ್ರ ನಿನಗೆ ಭೇಟಿ ಮಾಡಿಸ್ತೀನಿ" ಎಂದು ಹೇಳಿ ಕೃಷ್ಣನ ಬಳಿ ಬಂದಳು.

ತಂದೆಯ ಅನಾರೋಗ್ಯದ ವಿಷಯ ತಿಳಿಸಿ ಇಲ್ಲಿ ತಾಯಿಯನ್ನು ಹುಷಾರಾಗಿ ನೋಡಿಕೊಳ್ಳಬೇಕೆಂದು ತಾನು ತಂದೆಗಾಗಿ ಅನಂತನ ಜೊತೆ ಕಾಶಿಗೆ ಹೋಗುವುದಾಗಿ ತಿಳಿಸಿದಳು. ಕೆಲವು ಜವಾಬ್ದಾರಿ ವಿಷಯಗಳ ಕಾರಣದಿಂದ ಕೃಷ್ಣ ಬೆಂಗಳೂರು ಬಿಡುವ ಹಾಗಿರಲಿಲ್ಲ. ಹತ್ತು ಸಾವಿರ ರೂ.ಗಳ ಟ್ರಾವಲರ್ಸ್ ಚೆಕ್ ಕೊಟ್ಟ. ಅನಂತ, ಕೃಷ್ಣ ಇಬ್ಬರೂ ಒಬ್ಬರನ್ನೊಬ್ಬರು ಭೇಟಿ ಆಗಿ ಅಪ್ಪಿಕೊಂಡರು. ಹದಿನಾರು ವರ್ಷದ ಕೃಷ್ಣ ಮನೆ ಬಿಟ್ಟು ಹೋದಾಗ ಅನಂತನಿಗೆ ಹನ್ನೆರಡು ವರ್ಷ.

ಕೃಷ್ಣನೇ ತಮ್ಮನನ್ನು ಒಪ್ಪಿಸಿ ಕೈ ಖರ್ಚಿಗೆ ಹಣದ ವ್ಯವಸ್ಥೆ ಮಾಡಿ ಕಳಿಸಿದ. ವಿಜಯ ಹಾಗು ಅನಂತ ಕಾಶಿಗೆ ಬಂದರು. ಒಂದು ಸಾಧಾರಣ

ವಾದ ಹಳೆಯ ಮನೆ ಭಟ್ಟರದು. ಮಣ್ಣಿನ ಜಗುಲಿ ಆ ಜಗುಲಿಯ ಮೇಲೆ ಕೋಣೆ ಎಂದು ಹೇಳಬಹುದಾದ ಒಂದು ಗೂಡು. ಆ ಗೂಡಿನಲ್ಲಿ ತೀರಾ ಜೀರ್ಣಾವಸ್ಥೆಯಲ್ಲಿ ಇದ್ದ ತಂದೆಯನ್ನು ನೋಡಿ ಅವಳಿಗೆ ವ್ಯಥೆ ಆಯಿತು.

ಭಟ್ಟರನ್ನು ವಿಚಾರಿಸಿ ತಂದೆಯನ್ನು ಒಳ್ಳೆಯ ನರ್ಸಿಂಗ್ ಹೋಮಿಗೆ ಸೇರಿಸಿದಳು. ಎಂಟು ದಿನದ ಮೇಲೆ ರಾಯರು ಚೇತರಿಸಿಕೊಂಡು ಮಾತನಾಡುವ ಹಾಗಾದರು. ವಿಜಯಳ ಕೈ ಹಿಡಿದು—

"ಹೋಗ್ಲಿ ಸಾಯೋ ಕಡೆಗಾಲದಲ್ಲಿ ನಿನ್ನ ಹಾಗು ಅನಂತನ್ನ ನೋಡಿದ ಹಾಗಾಯ್ತಲ್ಲಮ್ಮ. ಕೊನೆಗಾಲದಲ್ಲಿ ಯಾರೂ ಇಲ್ಲದೆ ಜೀವ ಬಿಡ್ತೀನಿ ಅಂತ ವ್ಯಥೆ ಆಗಿತ್ತು" ಎಂದರು.

"ನಿನಗೇನು ಆಗಲ್ಲಪ್ಪಾ ಚೆನ್ನಾಗಾಗ್ತಿ" ಎಂದು ವಿಜಯ ತಂದೆಗೆ ಸಮಾಧಾನ ಮಾಡಿದಳು. ಒಳ್ಳೆಯ ಔಷದೋಪಚಾರಗಳಿಂದ ರಾಯರು ಮುಂದಿನ ಎಂಟು ದಿನದ ಹೊತ್ತಿಗೆ, ಮತ್ತೆ ಚೆನ್ನಾಗಿ ಚೇತರಿಸಿಕೊಂಡರು. ಬರೋವಾರ ಪ್ರಯಾಣ ಮಾಡಬಹುದು ಎಂದು ಹೇಳಿದ್ದರು ಡಾಕ್ಟರ್. ರಾಯರು ಕೋಲು ಹಿಡಿದು ಓಡಾಡುತ್ತಿದ್ದರು.

"ಅಪ್ಪಾ ಬರೋವಾರ ನಾವೆಲ್ಲಾ ಊರಿಗೆ ಹೋಗಿ ಬಿಡೋಣ. ಹಿಂದಿನ ದಿನ ಕಾಶಿ ವಿಶ್ವನಾಥನ ದರ್ಶನ ಮಾಡಿ, ಅಭಿಶೇಕ ಹಾಗು ಸಹಸ್ರ ಬಿಲ್ವಾರ್ಚನೆ ಮಾಡಿಸಿ, ಮಾರನೆಯ ದಿನ ಊರಿಗೆ ಹೊರಟುಬಿಡೋಣ" ಎಂದಳು. ರಾಯರ ಮುಖ ಗಂಭೀರವಾಯಿತು. ಅನಂತರ ಅವರು—

"ಊರಿಗೆ ನಾನು ಹೇಗೆ ಬರಲಮ್ಮ? ಊರಿನಲ್ಲಿ ನಾನು ತಲೆ ಎತ್ತಿ ತಿರುಗಾಡದ ಹಾಗೆ ಮಾಡಿಬಿಟ್ಟಿದ್ದಾಳೆ ನಿಮ್ಮ ಅಮ್ಮ....." ಎಂದರು.

ವಿಜಯ ನಕ್ಕು "ಹಾಗೇನೂ ಆಗಿಲ್ಲಪ್ಪಾ. ಅಮ್ಮ ನಟಿಸಿದ ಸಿನಿಮಾ ಬಿಡುಗಡೆ ಆಗಿಲ್ಲ. ಆ ಚಿತ್ರ ಬಿಡುಗಡೆ ಆದರೂ ಅಮ್ಮ ನಟಿಸಿದ ಭಾಗ ತೆಗೆದು ಹಾಕಿರ್ತಾರೆ. ಆ ನಿರ್ಮಾಪಕ ಬೇರೆ ಯಾರು ಅಲ್ಲ. ನಿನ್ನ ಮಗನೆ" ಎಂದು ತಂದೆಯ ಮನಸ್ಸಿಗೆ ನೋವಾಗದಂತೆ ಹಲವು ಕಥೆ ಹೇಳಿದಳು. "ನೀನು ಅಮ್ಮನ ಮನಸ್ಸು ತುಂಬ ನೋಯಿಸಿದ್ದಿಯಪ್ಪಾ. ಒಬ್ಬ ಗೃಹಿಣಿಗೆ ಹಾಗೆ ಹೊಲಸು ಮಾತುಗಳಾಡಬಹುದಾ? ನಲವತ್ತು ವರ್ಷ ಸಂಸಾರ [illegible]ದಾ? ಅಮ್ಮ ಎಷ್ಟು ನೊಂದ್ಕೊಂಡಿದ್ದಳು.

ಕಡೆಗೆ ತಾನು ಬಯಸಿದ ಮಗನ ಆಶ್ರಯ ಪಡೆದಳು. ಅಣ್ಣಾ ಕೃಷ್ಣನಿಗೂ ನಿನ್ನ ಮೇಲೆ ಕೋಪ ಇತ್ತು. ಕಡೆಗೆ ತಡೆಯಲಾರದೇ ಈ ಸಿನಿಮ ವಿಷಯದಲ್ಲಿ ನಿನ್ನ ಮನಸ್ಸಿನ ಆಘಾತ ಮಾಡೋಣಾಂತ ನಾಟಕ ಆಡಿದರು" ಎಂದು ಎಲ್ಲಾ ವಿಸ್ತಾರವಾಗಿ ಹೇಳಿದಳು.

ರಾಯರು ನಿಟ್ಟುಸಿರಿಟ್ಟು "ಅಂತು ಈಗ ಮಗನ ಆಶ್ರಯದಲ್ಲಿದ್ದಾಳೆ ಅನ್ನು" ಎಂದರು.

"ಹೌದಪ್ಪಾ ಈಗ ಕೃಷ್ಣಾ......ರಾಜ ವೈಭವದಲ್ಲಿ ಇದ್ದಾನೆ. ಅಮ್ಮ ಅವನ ಹತ್ತಿರ ಇದ್ದಾಳೆ" ಎಂದಳು. ರಾಯರು ಚಿಂತೆಯಿಂದ—

"ಸರಿ ಈಗ ನಾನು ಅಲ್ಲಿ ಬಂದು ಅಂತನ ಮನೇಲಿ ಅನ್ನಕ್ಕೆ ಭಾರವಾಗಿರಲೇನಮ್ಮ. ಇದ್ದ ಬಿದ್ದ ಹಣಾ ಎಲ್ಲಾ ದೇವಸ್ಥಾನದ ಕಡೆ ಹಾಗೆ ಭಟ್ಟರಿಗೆ ಒಪ್ಪಿಸಿಬಿಟ್ಟಿದ್ದೀನಿ. ತಿರುಗಾ ಅವರ ಬಳಿ ಹಣಾ ವಾಪಸ್ ಕೇಳೊ ಹಾಗಿಲ್ಲ. ಕೇಳಿದರೂ ಅವರು ಕೊಡಲ್ಲ" ಎಂದರು.

ವಿಜಯ ನಕ್ಕು—

"ದೇವರಿಗೆ, ಬ್ರಾಹ್ಮಣರಿಗೆ ಕೊಟ್ಟಿದ್ದು, ವಾಪಸ್ ಏಕೆ ತಗೋಬೇಕು? ಅಪ್ಪಾ......ಈಗ ನಿನ್ನ ಬೆಲೆ ನಿನಗೇ ಗೊತ್ತಿಲ್ಲ. ಬರಿ ನಿನ್ನ ವೈದ್ಯಕೀಯ ಚಿಕಿತ್ಸೆ ಎಂದೇ ಹತ್ತು ಸಾವಿರ ರೂ. ಖರ್ಚು ಮಾಡಿದ್ದಾನೆ ಅಣ್ಣಾ."

"ಯಾಕೆ ಅನಂತಾ ?" ಎಂದರು.

"ಅನಂತ ಏನು ಖರ್ಚು ಮಾಡ್ತಾನಪ್ಪಾ ? ಐನೂರು ರೂಪಾಯಿ ಖರ್ಚು ತಗೊಂಡು ಇಲ್ಲಿಗೆ ಬರೋನಿದ್ದ."

"ಎಲ್ಲಾ ಏರ್ಪಾಡು ಮಾಡಿದೋನು ನಮ್ಮ ದೊಡ್ಡಣ್ಣಾ" ಎಂದು ವಿವರವಾಗಿ ಹೇಳಿದಳು. ರಾಯರು ಚಿಂತೆಯಿಂದ—

"ಅವನಿಗೆ ನನ್ನ ಮೇಲೆ ಕೋಪಾ ಇಲ್ವೇನಮ್ಮ ?" ಎಂದರು. ವಿಜಯ ಹಾರ್ದಿಕವಾಗಿ......

"ಖಂಡಿತಾ ಇಲ್ಲಪ್ಪಾ......ಅಮ್ಮ ಅಂತು ನಿನಗಾಗಿ ಮೆಂಟಲ್ ಹಾಸ್ಪಿಟಲ್ ಪೇಷೆಂಟ್ ಆಗ್ಬಿಟ್ಟಿದ್ದಾಳೆ" ಎಂದು ತಾಯಿಗೆ ಹಿಪ್ನಾಟಿಸಂ ಮಾಡಿದಾಗಲೂ ಗಂಡನಿಗಾಗಿ ಹಂಬಲಿಸುತ್ತಿದ್ದ ತಾಯಿಯ ಬಗ್ಗೆ ವರ್ಣಿಸಿದಳು.

"ನಾನು ನಿಮ್ಮ ತಾಯಿಯನ್ನು ಒಂದು ತರಹ ಕ್ರೂರವಾಗೆ ನಡೆಸಿಕೊಂಡೆ

ಒಂದೊಂದುಸಲ ನನ್ನ ಮನಸು...... ನನ್ನ ಕಂಟ್ರೋಲ್‌ನಲ್ಲಿ ಇರ್ತಾ ಇರಲಿಲ್ಲ" ಎಂದರು.

"ಇದೆಲ್ಲಕ್ಕೆ ಕಾರಣಾ ಗೊತ್ತಿದೆಯಪ್ಪಾ......ಅಮ್ಮ ಏನು ಮಾಡಬಾರದ ಪಾಪ ಮಾಡಿಲ್ಲ. ಮನಸು ಅರಿಯದ ಪಾಪಾ ಇಲ್ಲ ಅಂತಾರೆ. ಒಂದು ದೃಷ್ಟಿಯಿಂದ ನೋಡಿದರೆ ನಾವೆಲ್ಲಾ ಭಗವಂತನ ಕಣ್ಣಿಗೆ ಅಪರಾಧಿಗಳೇ...... ಅಲ್ವೇನಪ್ಪಾ ?" ಎಂದಳು.

"ನಿಜಮ್ಮಾ......ಜೀವಮಾನ ಪೂರ್ತಿ ನನಗೆ ಜೀವಸವೆಸಿದಳವಳು, ನಾನೆ ನಿರ್ದಯನಾಗಿ ನಡೆದುಕೊಂಡೆ" ಎಂದರು.

"ಇಲ್ಲಿ ಒಂದು ಹೊಸ ಜೀವನ ಪ್ರಾರಂಭ ಮಾಡಪ್ಪಾ......ಯಾವ ಗಂಡು ಮಕ್ಕಳ ಆಶ್ರಯದಲ್ಲಿಯೂ ನೀನೂ, ಅಮ್ಮ ಇರಬೇಕಾಗಿಲ್ಲ, ನಿನ್ನ ಪೆನ್‌ಷನ್ ಬರತ್ತೆ, ಅಮ್ಮನ ಗದ್ದೆಗಳಿವೆ" ಎಂದಳು. ರಾಯರಿಗು ಪರಸ್ಥಳದಲ್ಲಿ ಪರಾಧೀನ ವಾಸಾ ಸಾಕಾಗಿತ್ತು. ಒಂದಿಷ್ಟು ಊಟಾ ಹಾಕುವುದು ಭಟ್ಟರ ಮನೆಯವರು ಇವರ ಯಾವ ಜವಾಬ್ದಾರಿ ತೆಗೆದುಕೊಂಡಿರಲಿಲ್ಲ. ಕಾಯಿಲೆ ಬಿದ್ದಾಗಂತು ಪೂರಾ ನಿರ್ಲಕ್ಷಿಸಿದ್ದರು. ಒಂಟಿಯಾಗಿ ತಿಂಗಳಾನುಗಟ್ಟಲೆ ನರಳುವಾಗ ಪತ್ನಿಯ ನೆನಪು ಬಂದಿತ್ತು ರಾಯರಿಗೆ.

ತಾನು ಒಂದು ತಲೆನೋವು ಎಂದು ಮಲಗಿದರೆ ಎಷ್ಟು ಕಾಳಜಿಯಿಂದ ಎಷ್ಟು ಬಗೆ ಸೇವೆ ಮಾಡುತ್ತಿದ್ದಳು. ಇಲ್ಲಿ ಮರಣಸಂಕಟವನ್ನು ಅನುಭವಿಸುತ್ತಿದ್ದರೂ ಯಾರೂ ಕೇಳುವವರಿಲ್ಲ. ಸಾಯುವ ಕಡೆ ಘಳಿಗೆಯಲ್ಲಿ ಮನುಷ್ಯನಿಗೆ ತನ್ನ ತಪ್ಪೆಲ್ಲಾ ನೆನಪಿಗೆ ಬರುವಂತೆ......ಹೆಂಡತಿಯನ್ನು ಜೀವಮಾನವಿಡೀ ಎಷ್ಟು ಹಿಂಸೆ ಮಾಡಿದ್ದೇ—ಅವಳು ಎಲ್ಲಾ ಸಹಿಸಿ ನಗೆಮುಖದಿಂದ ಇರುತ್ತಿದ್ದಳು. ಒಂದು ದಿನ ಒಂದು ಒಳ್ಳೇ ಮಾತಾಡಿರಲಿಲ್ಲ. ಎಲ್ಲಾ ಆಗಾಗ ಯೋಚಿಸಿ ಪಶ್ಚಾತಾಪ ಪಟ್ಟಿದ್ದರು.

ಕಬ್ಬಿಣಾ ಕಾದಾಗಲೆ ಬಡಿಯುವಂತೆ ಈ ಸಮಯದಲ್ಲಿ ವಿಜಯ ಪ್ರೀತಿಯಿಂದ ಮಾತಾಡಿ ತಂದೆಯ ಮನಸು ಸರಿಪಡಿಸಿದ್ದಳು.

ಅಂತು ರಾಯರು ಮುಂದಿನವಾರ ಮಗ, ಮಗಳೊಡನೆ ಬೆಂಗಳೂರಿಗೆ ಹಿಂತಿರುಗಿದರು. ತಂದೆಯನ್ನು ನೇರವಾಗಿ ಕೃಷ್ಣನ ಮನೆಗೆ ಕರೆತಂದಳು ವಿಜಯ.

ಕೆಳಗಿನ ವಿಭಾಗದ ಒಂದು ಕೋಣೆಯಲ್ಲಿ ಅವರು ಸ್ನಾನ ಮುಗಿಸಿ, ಊಟಾ ಮಾಡಿದರು. ಕೃಷ್ಣಾ ಬಂದು ಪತ್ನಿಯೊಡನೆ ನಮಸ್ಕಾರ ಮಾಡಿದ. ರಾಯರು ಆಶೀರ್ವದಿಸಿದರು.

"ಅಂತು ನಿನ್ನ ಇಷ್ಟು ದೊಡ್ಡ ಮನುಷ್ಯನನ್ನಾಗಿ ನೋಡ್ತಾ ಇರೋದು ಸಂತೋಷಪ್ಪ" ಎಂದರು.

"ನೀವು ಬದುಕಿ ಬಂದದ್ದು ನಮಗು ತುಂಬಾ ಸಂತೋಷಪ್ಪಾ. ಅಮ್ಮ ಅಂತು ನಿಮಗಾಗಿ ತಪಸ್ಸು ಮಾಡ್ತಾ ಇದ್ದಳು" ಎಂದ.

"ಅಮ್ಮ ಹೇಗಿದ್ದಾಳೆ ಅಣ್ಣಾ ?" ಎಂದಳು ವಿಜಯ. "ಹದಿನೈದು ದಿನ ತುಂಬ ನಿಶ್ಶಕ್ತಿಯಲ್ಲಿದ್ದಳಮ್ಮ. ಈಗ ದೈಹಿಕವಾಗಿ, ಮಾನಸಿಕವಾಗಿ ಸರಿಹೋಗಿದ್ದಾಳೆ.

ಅಪ್ಪನ ಆರೋಗ್ಯ ಸರಿಹೋಗ್ತಿದೇ ಅಂತ ನೀನು ಬರೆದ ಪ್ರತಿ ಪತ್ರ ಓದಿಕೊಳ್ತಾ ತಾನು ಸುಧಾರಿಸಿಕೊಳ್ತಿದ್ದಾಳೆ" ಎಂದ.

ವಿಜಯ ಅಮ್ಮನನ್ನು ನೋಡಲು ಮಹಡಿಗೇ ಹೋದಳು. ಇಂದಿರಮ್ಮ ಹದಿನೆಂಟು ಮೊಳದ ಒಂದು ಸೀರೆ ಉಟ್ಟು, ಹಳೇಕಾಲದ ಗೃಹಿಣಿಯಂತೆ ತಯಾರಾಗಿದ್ದರು. ವಿಜಯ ನಕ್ಕು—"ಅಮ್ಮ ನಾನು ಅಪ್ಪನ್ನ ಚೆನ್ನಾಗಿ ಹದಾ ಮಾಡಿದ್ದೀನಿ. ಶ್ರೀಮಂತ ಮಗನ ತಾಯಿಯಾದ ಹಾಗು ಹೋಟಲ್ "ನಟರಾಜನ್" ಪಾಲುದಾರ್ತಿಯಾಗಿ ನಿನ್ನನ್ನು ; ಅಪ್ಪನ ಕಣ್ಣಿಗೆ ಹಾಕ್ತೀನಿ. ಗಂಡನಿಗೆ ಹೆದರಿ ನಡೆಯೋ ಈ ವೈದಿಕ ಮುತ್ತೈದೆ ಅಲಂಕಾರ ಬೇಡಾ.....ಈ ಹದಿನೆಂಟು ಮೊಳದ ಸೀರೆ ಬಿಚ್ಚು ಈ ಶ್ರೀಕಂಠಚೌರಿ ಮುಡಿ ತುರುಬು ಬಿಚ್ಚು" ಎಂದು ಬಲವಂತ ಮಾಡಿ ತಾಯಿಗೆ ಹದಿನಾರು ಮೊಳದ ಗುಲಾಬಿ ಬಣ್ಣದ ರೇಶ್ಮೆ ಸೀರೆ ಉಡುಸಿದಳು.

ದೊಡ್ಡಂಚಿನ ಗುಲಾಬಿ ರೇಶ್ಮೆ ಸೀರೆ ಉಟ್ಟು, ಗುಲಾಬಿಬಣ್ಣದ ರೇಶಿಮೆ ಕುಪ್ಪುಸಾ ಧರಿಸಿ, ದೊಡ್ಡ ಸಿಂಬೆ ಇಟ್ಟು ಅಗಲವಾದ ತುರುಬು ಕಟ್ಟಿ, ಗುಲಾಬಿ ದಂಡೆ, ಚಕ್ರಾಕಾರವಾಗಿ ಮುಡಿಸಿ, ಅಗಲವಾದ ಚಿನ್ನದ ಕೆತ್ತನೆಯ ಸಾಲೆ__ಮಾವಿನಕಾಯಿ ನಕ್ಲೇಸ್__ಹಾಗು ಮಣಿಸಿನ ಬಳೆಗಳೊಡನೆ ಗಾಜಿನ ಬಳೆ ತೊಡಿಸಿದಳು. ಹಣೆಯಲ್ಲಿ ಅಗಲವಾದ ಕುಂಕುಮಾ.....ಕಣ್ಣಿಗೆ ಕಾಡಿಗೆ ಲಕ್ಷ್ಮೀದೇವಿಯಂತೆ ಕಾಣುತ್ತಿದ್ದಳು.

ಮಹಡಿಯಿಂದ ಕೆಳಗಿಳಿಸಿ ತಾಯಿಯನ್ನು ತಂದೆ ಇದ್ದ ಕೋಣೆಗೆ ಕರೆದು ತಂದಳು.

"ಅಪ್ಪಾ ನಮ್ಮ ಅಮ್ಮನ ಗುರುತು ಸಿಕ್ಕತ್ತಾ ?" ರಾಯರು ಬೆರಗಾಗಿ ತಲೆ ಎತ್ತಿ ನೋಡಿದರು. ಶ್ರೀಲಕ್ಷ್ಮಿಯಂತೆ ಕಂಗೊಳಿಸುತ್ತಿರುವ ಹೆಂಡತಿ.

"ಅಪ್ಪಾ......ಅಮ್ಮ ಈಗ ಬೆಂಗಳೂರಿನ ಪಾಶ್ ಹೋಟಲ್ "ನಟರಾಜ"ದ ಮಾಲಕಿ ಮಿಲಿಯನರ್-ಮಗನ ತಾಯಿ" ಎಂದಳು. ರಾಯರು ಕತ್ತೆತ್ತಿ—

"ಇಂದೂ......ಹಿಂದೆಲ್ಲ ನಾನು ನಿನ್ನ ಬಹಳ ಹಿಂಸೆ ಮಾಡಿದೆ. ಬಾಳಿನ ಸಂಜೆಯಾದರೂ......ನಾವು ಪ್ರಶಾಂತವಾಗಿ ಕಾಲಾ ಕಳೆಯೋಣಾ......" ಎಂದರು.

ಇಂದಿರಮ್ಮ ಮುಂದೆ ಬಂದು ಪತಿಯ ಪಾದಕ್ಕೆ ಎರಗಿದಳು. ರಾಯರು ತೋಳು ಹಿಡಿದು ಪತ್ನಿಯನ್ನು ಎಬ್ಬಿಸುತ್ತಿದ್ದಂತೆಯೆ ವಿಜಯ ಬಾಗಿಲು ಮುಂದೆ ಮಾಡಿಕೊಂಡು ಹೊರಗೆ ಬಂದಳು. ಅವಳ ಹೃದಯದಲ್ಲಿ ತೃಪ್ತಿ ತುಂಬಿತು.

"ವಿಜಮ್ಮ......ಇಲ್ಲಿನ ಅಡ್ರೆಸ್ಸಿಗೆ ಎಂಟು ದಿನದ ಹಿಂದೆ ನಿನ್ನ ಗಂಡನ ಒಂದು ಕಾಗದ ಬಂದಿದೆ ನೋಡಮ್ಮ" ಎಂದು ಕೃಷ್ಣಾ ಒಂದು ಕಾಗದ ಕೊಟ್ಟ. ವಿಜಯ ತನ್ನ ಕೋಣೆಗೆ ಬಂದು ಆ ಕಾಗದ ಬಿಚ್ಚಿದಳು.

ಪ್ರೀತಿಯ ವಿಜಿ...... ನೀನು ನನ್ನನ್ನು ಬಿಟ್ಟುಹೋಗಿ ನಾಲ್ಕು ತಿಂಗಳು ಕಳೆಯಿತು. ಮೊನ್ನೆ ನಾನು ಬೆಂಗಳೂರಿಗೆ ಬಂದಿದ್ದೆ. ನಿಮ್ಮ ಅನಂತಣ್ಣನ ಮನೆ ಬೀಗ ಹಾಕಿತ್ತು. ಅಕ್ಕನ ಮನೆಗೆ ಹೋಗಿದ್ದೆ. ಅಲ್ಲೇ ಹತ್ತಿರದಲ್ಲಿರುವ ನಿಮ್ಮ ಅತ್ತಿಗೆಯ ತವರು ಮನೆಯಲ್ಲಿ ನಿಮ್ಮ ಅತ್ತಿಗೆಯ ಭೇಟಿ ಆಯಿತು. ನೀನು ನಿಮ್ಮ ತಂದೆಯ ಅನಾರೋಗ್ಯದ ಸಲುವಾಗಿ ಕಾಶಿಗೆ ಹೋಗಿದ್ದು ತಿಳಿಯಿತು. ವಿಜಯ ನನ್ನನ್ನು ಬಿಟ್ಟು ಎಲ್ಲೆಲ್ಲಿ ತಿರುಗುತ್ತಾ ಇದ್ದಿ ? ನಿಮ್ಮಪ್ಪ ನಟಿಸ್ತಾರೆ ಎಂದು ಮೊದಲು ಪತ್ರಿಕೆಗಳಲ್ಲಿ ಪ್ರಚಾರ ಬರುತ್ತಿತ್ತು. ಆ ಚಿತ್ರ ಮೊನ್ನೆ ಮೈಸೂರಲ್ಲಿ ಬಂದಿತ್ತು. ಅದರಲ್ಲಿ ನಿಮ್ಮ ತಾಯಿ ನಟಿಸಿಯೆ ಇಲ್ಲ. ಸುಪ್ರಸಿದ್ಧ ಹಾಸ್ಯ ನಟ ಲಂಬೋದರ ನಟಿಸಿದ್ದಾನೆ.

ನಿಮ್ಮಣ್ಣಾ ಏನಾದರೂ, ಆರಾಮತ್ತು ನಡೆಸಿರಬಹುದು. ಒಟ್ಟಿನಲ್ಲಿ ಜನರಿಂದ ಅನಾವಶ್ಯಕ ಪ್ರಶ್ನೆಗಳು ತಪ್ಪಿತು. ನಮ್ಮೆಲ್ಲರ ಮನಸು ಹಗುರವಾಯಿತು.

ವಿಜಿ ನಮ್ಮಿಬ್ಬರ ಸಮಾಚಾರ ಏನು? ನೀನು ಯಾವಾಗ ಬರುತ್ತಿ? ನಿನ್ನ ಮನಸ್ಸಿನಲ್ಲಿ ಏನಿದೆ? ಕಾಗದ ಬರಿ. ನಿನ್ನ ಮನಸ್ಸಿನ ಭಾವನೆಗಳ ಹಾಗೆ ನಾನು ವರ್ತಿಸುತ್ತೇನೆ. ಇಬ್ಬರು ಒಂದು ಒಮ್ಮತ ಸಮ್ಮತಕ್ಕೆ ಬರೋಣ, ವಿಜಿ ಇನ್ನು ಬಹಳ ದಿನ ಕಾಯಿಸಬೇಡಾ.

ಇಂತಿ ನಿನ್ನ ಪ್ರೀತಿಯ,
ಸುರೇಶಾ.

ವಿಜಯ ಗಂಡನ ಕಾಗದಕ್ಕೆ ಉತ್ತರ ಬರೆಯಲು ನಿರ್ಧರಿಸಿದಳು.

ಪ್ರೀತಿಯ ಸುರೇಶ್ ನಿಮ್ಮೊಡನೆ ಸಂಸಾರ ಮಾಡಲು ನನಗೆ ಆಶೆಯಿದೆ. ನಾನು ಈ ತವರು ಮನೆಯನ್ನೇ ನೆಚ್ಚಿ ಕೂತಿಲ್ಲ. ನಿಮ್ಮ ಬಳಿ ಬಂದು ಸಂಸಾರ ಮಾಡಬೇಕೆಂದು ಆಶೆಯಿದೆ. ಆದರೆ ನನ್ನ ಮನಸ್ಸಿಗೆ ಅಪ್ರಿಯವಾದ ಕೆಲವು ಸನ್ನಿವೇಶಗಳನ್ನು ಹೇಳುತ್ತೇನೆ.

ಮೊದಲನೆಯದಾಗಿ ನಮ್ಮಿಬ್ಬರ ವಾಸಕ್ಕೆ ಒಂದು ಚಿಕ್ಕ ಮನೆ ಗೊತ್ತು ಮಾಡಿ, ಒಂದು ಹಾಲು, ಒಂದು ಬೆಡ್ ರೂಂ, ಅಡಿಗೆ ಮನೆ, ಬಚ್ಚಲು ಮನೆ, ಶೌಚಗೃಹಾ ಇರುವ ಸಣ್ಣ ಮನೆ ಸಾಕು, ಮುನ್ನೂರು ರೂ.ಗಳ ಬಾಡಿಗೆ ಒಳಗೆ ಅಂಥಾ ಮನೆಗಳು ಸಿಗಬಹುದಲ್ಲವೆ?

ದೊಡ್ಡ ಕಾಂಪೌಂಡ್, ವರಾಂಡಾ ಹಜಾರ ಡ್ರಾಯಿಂಗ್ ರೂಂ, ಬೆಡ್ ರೂಂ ಹೊಂದಿರುವ ಈ ಎಂಟು ನೂರು ರೂ.ಗಳ ಮನೆ ನಾನು ಖಂಡಿತಾ ಮಾಡಲಾರೆ. ಕೆಲಸಗಾರರು ಅಷ್ಟು ದೊಡ್ಡ ಮನೆ ನೋಡಿದೊಡನೆ ನೂರೂ, ಇನ್ನೂರು ಕೇಳುತ್ತಾರೆ. ಅಷ್ಟು ಕೊಡಲು ನಾನು ಸಿದ್ಧವಿಲ್ಲ. ಅರವತ್ತು ಎಪ್ಪತ್ತು ಕೊಟ್ಟು, ಇಟ್ಟು ಕೊಂಡರೂ ಒಂದು ತಿಂಗಳಲ್ಲಿ ಬಿಟ್ಟು ಬಿಡುತ್ತಾರೆ. ಆ ದೊಡ್ಡ ಮನೆ ಮಾಡಲಾರದೆ, ವರ್ಷದಲ್ಲಿ ಎಳೆಂಟು ತಿಂಗಳು ಕೆಲಸಗಾರರಿಲ್ಲದೆ ಆ ಮನೆ ನಾನೇ ಏಗುವುದು ನನ್ನ ಕೈಲಿ ಆಗದ ಮಾತು. ಇನ್ನು ನಿಮ್ಮ ಕಾಲೇಜಿನ ಪಾರ್ಟಿ, ಕೂಟಗಳನ್ನು ಮನೆಯಲ್ಲಿ ಖಂಡಿತಾ

ಏರ್ಪಡಿಸಬಾರದು. ಹತ್ತು ಹನ್ನೆರಡು ಜನಕ್ಕೆ ನಾನು ಮೂಗೆತ್ತಿನಂತೆ ದುಡಿಯಲಾರೆ.

ಪುಟ್ಟದಾದ ಮನೆ ನೋಡಿ, ನೀರು ಹಾಗು ಬೇರೆ ಎಲ್ಲಾ ಸೌಲಭ್ಯವಿರುವ ಮನೆ ನೋಡಿ, ಅಕಸ್ಮಾತ್ ಕಾರಣಾಂತರದಿಂದ ನಿಮ್ಮ ನಾಲ್ಕು ಜನ ಸಹೋದ್ಯೋಗಿಗಳು ಬಂದರೆ ಕಾಫಿ. ಬಿಸ್ಕತ್ ಮಾತ್ರ ಆತಿಥ್ಯ ಮಾಡುತ್ತೇನೆ.

ತೀರಾ ಆತ್ಮೀಯರಾದ ಒಂದಿಬ್ಬರನ್ನು ತಿಂಗಳಲ್ಲಿ ಒಂದು ಭಾನುವಾರ ಆಹ್ವಾನಿಸಿ, ಏನಾದರೂ ಸ್ಪೆಷಲ್ ಅಡಿಗೆ ತಿಂಡಿ ಮಾಡಿದ್ದರೆ ಅವರಿಗೆ ಅದರ ರುಚಿ ತೋರಿಸುವೆ.

ಇನ್ನು ನಿಮ್ಮ ಮಹಿಳಾ ಸಹೋದ್ಯೋಗಿಗಳು. ಕಾರಣವಿಲ್ಲದೆ ಗಂಟೆಗಟ್ಟಲೆ ಬಂದು ಹರಟುತ್ತಾ ಕೂಡುವ ನಿಮ್ಮ ಬೌದ್ಧಿಕ ಸಂಗಾತಿಗಳನ್ನು ನಾನು ದ್ವೇಷಿಸುತ್ತೇನೆ. ಹೆಂಡತಿ ಎಂದರೆ ಅಡಿಗ ಮನೆಯ ಪ್ರಾಣಿ, ಎಂಬಂತೆ ನನ್ನನ್ನಿಟ್ಟು, ಬೇರೆ ಹುಡುಗಿಯರನ್ನು ಬೌದ್ಧಿಕ ಸಂಗಾತಿ ಎಂದು ಆರಿಸಿಕೊಳ್ಳಬೇಡಿ.

ನಾನು ವಿದ್ಯಾವತಿಯೆ ಇದ್ದೇನೆ. ಪ್ರಸಕ್ತ ಸಾಲಿನ, ರಾಜಕೀಯ, ವೈಜ್ಞಾನಿಕ ಸಾಹಿತ್ಯ ಮುಂತಾದ ವಿಷಯಗಳನ್ನು ಚರ್ಚಿಸಲು ನನಗೂ ವೈಚಾರಿಕತೆ ಇದೆ. ನನ್ನ ಮೆದುಳು ಚುರುಕಿದೆ, ಏನಾದರೂ ಚರ್ಚೆ ಮಾಡಬೇಕಾದರೆ ನನ್ನೊಡನೆಯೆ ಮಾಡಿ.

ಏನಪ್ಪಾ ಇಷ್ಟು ಧಿಗ್ಬಂದನ ಮಾಡುತ್ತಾಳೆಯೇ ? ಎಂದು ನಿಮಗನಿಸಿರಬಹುದು.

ಪ್ರೀತಿಯ ಸುರೇಶ್... ಆದರೆ ಕೊಂಚ ತಾಳ್ಮೆಯಿಂದ ಯೋಚಿಸಿ ನೀವು ಆಫೀಸಿಂದ ಮನೆಗೆ ಬರುವ ಹೊತ್ತಿಗೆ ನಾನು ಒಬ್ಬ ತರುಣನ ಜೊತೆ ಬೌದ್ಧಿಕ ಸಾಂಗತ್ಯ ಎಂದು ಹರಟುತ್ತ ಕುಳಿತರೆ ನಿಮಗೆ ಸಹಿಸಲು ಸಾಧ್ಯವಿದೆಯೆ ? ಬ್ರಾಡ್‌ಮೈಂಡೆಡ್ ಆಗಿರು ಸಂಶಯ ಪಡುವಂತಹ ಕೆಲಸ ನಾನೇನು ಮಾಡಿಲ್ಲ ಎನ್ನುತ್ತೀರಿ. ಆದರೆ ಇಂಥಾ ವಿಷಯಗಳಲ್ಲಿ ಬ್ರಾಡ್ ಮೈಂಡೆಡ್ ಆಗಿರಲು ನನಗೆ ಸಾಧ್ಯವಿಲ್ಲ. ನಿಮ್ಮ ಮಹಿಳಾ ಮಣಿಗಳ ಸ್ನೇಹ ಕಾಲೇಜಿನ ಸ್ಟಾಫ್ ರೂಂ ಮಟ್ಟಿಗೆ ಸೀಮಿತವಾಗಿರಲಿ, ಮನೆಯವರೆಗು

ಅವರನ್ನು ಕರೆತಂದು, ಅವರೊಡನೆ ಹರಟುತ್ತಾ, ನಗುತ್ತಾ ಕೂಡಬೇಡಿ. ಒಬ್ಬ ಗೃಹಿಣಿಯಾಗಿ ನನಗೂ ನನ್ನದೇ ಆದ ಅಧಿಕಾರಗಳಿವೆ. ಇನ್ನು ಮೇಲೆ ಆ ಅಧಿಕಾರ ಚಲಾಯಿಸಿ ನನ್ನದಾದ ಕೆಲವು ಆಶೆ ಆಕಾಂಕ್ಷೆ ಬಿತ್ತರಿಸುತ್ತೇನೆ.

ಪ್ರೀತಿಯ ಸುರೇಶ್ ಅವರೇ, ನೀವೇನೊ ಮಿಸ್ ಸುಲಭಳನ್ನು ಹಾಯಾಗಿ ನಿಮ್ಮ ಸ್ಕೂಟರ್‌ನಲ್ಲಿ ಮನೆಗೆ ಕರೆತರುತ್ತೀರಿ. ನನ್ನ ಭಾವನೆಗಳನ್ನದುಮಿ ನಾನೇನೊ ಆಕೆಯನ್ನು ನಗೆಮುಖದಿಂದ ಸ್ವಾಗತಿಸುತ್ತೇನೆ. ಕಾಫಿ ತಿಂಡಿ ಕೊಡುತ್ತೇನೆ. ನಿಮ್ಮಿಬ್ಬರ ಹರಟೆ, ನಗೆ, ಗಂಟೆಗಟ್ಟಲೆ ನಡೆವರೂ, ಕಂಡೂ ಕಾಣದಂತೆ ಮನೆಗೆಲಸದಲ್ಲಿ ಮಗ್ನಳಾಗಿರುತ್ತೇನೆ. ಆದರೆ ಸುರೇಶ್ ಆ ಸಮಯದಲ್ಲಿ ನನ್ನ ಹೃದಯದಲ್ಲಿ ಒಂದು ಜ್ವಾಲಾಮುಖಿ ಹೊಗೆಯಾಡುತ್ತಿರುತ್ತದೆ. ಮೇಲ್ನೋಟಕ್ಕೆ ಶಾಂತವಾಗಿರುವಂತೆ ನಾನು ಕಾಣುತ್ತೇನೆ.

ನಾನು ಕೊಂಚ ಅಸಹನೆಯಿಂದ ಸಿಡುಕಾಡಿದರೆ ಏಕಂಥಾ ಸಂಶಯದ ಸ್ವಭಾವಾ? ಎಂದು ನೀವು ನನ್ನ ಬಾಯಿ ಮುಚ್ಚಿಸಬಹುದು. ಆದರೆ ನೀವು ಅವಳ ಜೊತೆ ಸಾಕಷ್ಟು ಹರಟೆ, ಎಂಟು ಗಂಟೆಯ ಮೇಲೆ ನಿಮ್ಮ ಸ್ಕೂಟರಲ್ಲಿ ಅವಳನ್ನು ಮನೆಗೆ ಕರೆದೊಯ್ಯುತ್ತೀರಿ. ಹಿಂದೆಯೆ ಶೈಲಜಾ ಹಾಜರಾಗುತ್ತಾರೆ. ನೂರು ಕೆಲಸ ಬಿಟ್ಟು ಬಂದ ಶೈಲಜಾ ಅವರ ಕಣ್ಣಲ್ಲಿ ನೂರು ಪ್ರಶ್ನೆಗಳು ಕುಣಿಯುತ್ತಿರುತ್ತದೆ.

"ಆಕೆಗಿನ್ನು ಮದುವೇ ಇಲ್ಲೇನ್ರಿ? ಆಕೇಗೆ ತಂದೆ ತಾಯಿ ಯಾರು ಇಲ್ಲದೆ ಒಂಟಿಯಾಗಿ ಇದ್ದಾಳೇನ್ರಿ?" ಆಕೆ ನಿಮ್ಮ ಯಜಮಾನರಿಗೆ ನೆಂಟಸ್ತಿಕೆಯಲ್ಲಿ ಏನಾದರೂ ಸಂಬಂಧಿಕಳಾಗಬೇಕಾ?" ಮೇಲ್ನೊಟಕ್ಕೆ ಅವರು ಕೇಳುವ ಪ್ರಶ್ನೆಗಳಿವು. ಆದರೆ ಅವರ ಕಣ್ಣಲ್ಲಿ ನನ್ನ ಬಗ್ಗೆ ತುಂಬಿದ ಅನುಕಂಪಾ, ಅವರ ಮಾತುಗಳ ಒಳಭಾಗದಲ್ಲಿ ಸಂದೇಹಾ ನನ್ನ ಹೃದಯಾ ಕೊರೆಯುತ್ತದೆ.

ಮೇಲ್ನೋಟಕ್ಕೆ ಸುಖಿಗೃಹಿಣಿ, ಸರಸ ಸುಂದರ ದಾಂಪತ್ಯ. ಸಂತೋಷದ ಬದುಕು. ಆದರೆ ಅಂತರಂಗದಲ್ಲಿ ಕುದಿಯುವ ಜ್ವಾಲಾಮುಖಿ. ಕಡೆಗೆ ನಾನೊಂದು ತೀರ್ಮಾನಕ್ಕೆ ಬಂದಿದ್ದೇನೆ ಸುರೇಶ್. ನೀವು ಈ ಹವ್ಯಾಸಗಳನ್ನಾದರೂ ಬಿಡಬೇಕು. ಇಲ್ಲ ನಾನೇ ನಿಮ್ಮನ್ನು ಬಿಡಬೇಕು ಸುರೇಶ್,

ನೀವು ಯೋಚಿಸಿ ಪತ್ರ ಬರೆಯಿರಿ, ನಿಮ್ಮ ರೂಪ, ವಿದ್ಯಾ, ನಿಮ್ಮ ಒಳ್ಳೆಯ ಉದ್ಯೋಗ ಎಲ್ಲಾ ನನ್ನ ಪಾಲಿಗೆ ಹೆಮ್ಮೆಯ ವಿಷಯ. ಆದರೆ ನಿಮ್ಮ ಪರಸ್ತ್ರೀ ಲೋಲುಪತೆ ಹಾಗು ಪರರನ್ನು ಮೆಚ್ಚಿಸಲು 'ಹೆಂಡತಿಯ ಪ್ರಾಣ ಹಿಂಡುವಿಕೆ ನನಗೆ ದೈಹಿಕ ಹಾಗು ಮಾನಸಿಕ ಹಿಂಸೆಯ ವಿಷಯ. ಸಣ್ಣ ಮನೆ ಮಾಡಿ, ಮನೆ ಒಪ್ಪವಾಗಿಟ್ಟು, ನಿಮ್ಮ ನಾಲಿಗೆ ತಣಿಸುವ ಸೊಗಸಾದ ಅಡಿಗೆ, ತಿಂಡಿ ಮಾಡಿ ಹಾಕುತ್ತೇನೆ. ಆದರೆ ದೊಡ್ಡ ಮನೆ ಆಗಾಗ ಅದರ ಸಮಗ್ರ ಅಲಂಕರಣಾ......ಹತ್ತಾರು ಜನರಿಗೆ ತಿಂಡಿ ತೀರ್ಥ ಇದೆಲ್ಲಾ ನನ್ನ ಕೈಲಿ ಸಾಧ್ಯವಿಲ್ಲ. ನಾಲ್ಕಾರು ಜನ ಆಳುಕಾಳಿದ್ದರೆ ಇಂಥವೆಲ್ಲಾ ಸಾಧ್ಯ. ಕೈಲಿ ಹಣ ಇಲ್ಲದಿದ್ದರೂ ಹೆಂಡತಿಯ ಒಡವೆಯನ್ನು ಅಡವಿಟ್ಟು, ಸಾಲಾ ಕೊಡುವುದು, ಹಾಗು ಮನೆಯಲ್ಲಿ ನಾಲ್ಕಾರು ಆಳು ಕಾಳು ಇಲ್ಲದಿದ್ದರೂ ಹೆಂಡತಿಯ ಜೀವ ಹಿಂಡುವ ಪಾರ್ಟಿ ಹಾಗು ಸಂತೋಷ ಕೂಟ ಏರ್ಪಡಿಸುವುದು ಇದು ಒಳ್ಳೆಯದಲ್ಲ. ನನ್ನ ಮನಸ್ಸಿನ ನಿಚ್ಛಳ ಅಭಿಪ್ರಾಯ ತಿಳಿಸಿ ಕಾಗದ ಬರೆದಿದ್ದೇನೆ. ಮಿಸ್|| ಸುಲಭಾ ಇದುವರೆಗೆ ಒಂದು ಪೈಸೆ ಸಹ ಸಾಲಾ ಹಿಂತಿರುಗಿಸಿಲ್ಲವೆಂದು ಗೊತ್ತಾಗಿದೆ. ಆಕೆಯ ಮುದ್ದು ಮುಖಕ್ಕೆ ಮರುಳಾಗಿ ಕೊಟ್ಟ ಸಾಲಾ ಅಲ್ಲವೆ? ಆಕೆಯ ಮುಖದ ಅಂದಾ ಹೀರುವುದೊಂದೆ ನಿಮಗಾದ ಲಾಭ? ಹಾಳಾದದ್ದು ನನ್ನ ಹಣ ಅಲ್ಲವೆ?

ಇಂತಿ|| ನಿಮ್ಮ ಪ್ರೀತಿಯ ವಿಜಯ.

ವಿಜಯಳಿಗೆ ಕಾಗದ ಹಾಕಿ ಒಂದು ವಾರವಾಗಿತ್ತು. ನಾಲ್ಕು ತಿಂಗಳಷ್ಟು ದೀರ್ಘಕಾಲ ಅವಳಿಲ್ಲದೆ ಅವನಿಗೆ ಬದುಕು ಶೂನ್ಯವೆನಿಸಿತ್ತು.

ಅವನ ಕಿಡಿಗೇಡಿ ಗೆಳೆಯರಲ್ಲಿ ಮೋಹನ ಎಂಬಾತ ಒಂದು ಸುದ್ದಿ ಬೇರೆ ಹಬ್ಬಿಸಿದ್ದ. ಸುಲಭಾ ಹಾಗು ಸುರೇಶರ ಅತಿ ಸಲಿಗೆ, ಸ್ನೇಹಕ್ಕೆ ಮುನಿದು ವಿಜಯಾ ಅವನನ್ನು ಬಿಟ್ಟು ಹೋಗಿದ್ದಾಳೆ.

ಒಮ್ಮೆ ಡಾ|| ಕಾಮಾಕ್ಷಿ ಕೇಳಿದ್ದರು, "ಏನು ವಿಶಾದರೂ ವಿಶೇಷ ಸಮಾಚಾರ ಇದೆಯಾ? ಸುರೇಶ್? ಮಗನ ತಂದೆ ಆಗ್ತಿದ್ದೀರಾ? ಮಿಸೆಸ್ ಅವರನ್ನ ಏತಕ್ಕೆ ತವರು ಮನೆಗೆ ಕಳಿಸಿದ್ದೀರಿ?" ಎಂದರು,

"ಏನಿಲ್ಲ ಮೇಡಂ, ಸುಮ್ಮನೆ ತವರಿಗೆ ಹೋಗಿದ್ದಾಳೆ" ಎಂದ

ಏಕೋ ಆ ಹಿರಿಯ ಸಹೋದ್ಯೋಗಿ ಎದುರು ಅವನ ಮುಖ ಪೆಚ್ಚಾಗಿತ್ತು. ವಿಜಯ ಸುರೇಶರ ಜೋಡಿಯನ್ನು ನೋಡಿ ಎಲ್ಲರಿಗಿಂತ ಸಂತೋಷಿಸಿದವರು ಅವರು, ಅವನ ವಯಸ್ಸಿನ ಮಗ ಸಹ ಇದ್ದರಾಕೆಗೆ."

"ಒಳ್ಳೆ ರಾಧಾಕೃಷ್ಣರ ಜೋಡಿ ನಿಮ್ಮಿಬ್ಬರದು" ಎಂದು ಆಕೆ ಆಗಾಗ ಹೊಗಳಿದ್ದರು.

ನಿಜಕ್ಕೂ ವಿಜಯ ತಾನು ಮೆಚ್ಚಿ ಆರಾಧಿಸಿದ ಹುಡುಗಿ. ಮದುವೆಯಾಗಿ ಒಂದು ವರ್ಷದಲ್ಲಿ ಹೆಂಡತಿ ಮುನಿದು ಓಡಿ ಹೋದಳೆನ್ನುವುದು ತನ್ನ ಪಾಲಿಗೆ ಅಪಮಾನದ ಸಂಗತಿ.

ವಿಜಯ ಇಷ್ಟು ಮೆತ್ತಗಿದ್ದವಳು ಎಲ್ಲಾ ಸಹಿಸುತ್ತಿದ್ದವಳು ಒಮ್ಮೆಲೆ ಹೀಗೇಕೆ ಮಾಡಿದಳು. ತನಗೆ ಬೇಡದೆ ಇದ್ದ ವಿಷಯಗಳನ್ನು ಪ್ರತಿಭಟಿಸಬಹುದಾಗಿತ್ತು. ಮಳ್ಳಿಯಂತೆ ಸುಮ್ಮನೆ ಇದ್ದು ಒಮ್ಮೆಲೆ ಓಡಿ ಹೋಗುವುದೇ ?

ಈ ಮಧ್ಯೆ ಸುಲಭಳ ವಿವಾಹವಾಗಿತ್ತು. ಒಂದು ಹಳ್ಳಿಯಲ್ಲಿ ಮದುವೆ, "ಬಸ್ ರೂಟ್ ಹೇಳಿ ... ಯಾವ ಹಳ್ಳಿ ಎಲ್ಲಿದೆ ಇದು ?" ಎಂದ ಸುರೇಶ್. ಸುಲಭಾ ಚುಟುಕಾಗಿ—

"ನಮ್ಮ ಸೋದರ ಮಾವ ಸುಮ್ಮನೆ ದೇವಸ್ಥಾನದಲ್ಲಿ ಒಂದು ಮದುವೆ ಶಾಸ್ತ್ರ ಮಾಡ್ತಿದ್ದಾರೆ. ಗಂಡಿನವರಿಗೇ ಜಾಸ್ತಿ ಜನ ಬರಬೇಡೀಂತ ಅಂದಿದ್ದಾರೆ. ಹೀಗಾಗಿ ಊರಿಗೆ ಬಂದ ಮೇಲೆ ನಾನು ಕಾಲೇಜಿನಲ್ಲಿ ಒಂದು ಪಾರ್ಟಿ ಇಟ್ಕೊಂಡು ನಿಮ್ಮನ್ನೆಲ್ಲಾ ಆಹ್ವಾನಿಸ್ತೀನೆ" ಎಂದಳು.

"ಅಂತು ನಾವು ಬರಬಾರದೂಂತ ಸೂಚನೆ ಕೊಡ್ತಾ ಇದ್ದೀರಿ" ಎಂದ.

ಸುಲಭಾ ವಿವಾಹ ಮುಗಿಸಿಕೊಂಡು ಬಂದು ಪಾರ್ಟಿ ಕೊಟ್ಟಾಗಲು ಸುರೇಶನನ್ನು ಗುಂಪಿನಲ್ಲಿ ಗೋವಿಂದಾ ಎನ್ನುವಂತೆ ಪರಿಚಯ ಮಾಡಿಸಿದಳು. ಡಾ|| ಕಾಮಾಕ್ಷಿಯನ್ನು ಪರಿಚಯ ಮಾಡಿಕೊಡುವಾಗ ಮಾತ್ರ.....

"ಇವರು ನನ್ನ ಸ್ವಂತ ಹಿರಿಯಕ್ಕನ ಹಾಗೆ, ಹೊಸಬಳಾಗಿ ಇಲ್ಲಿ ಬಂದು ಸೇರಿದಾಗ ನನಗೆ ತುಂಬಾ ಗೈಡ್ ಮಾಡಿದವರು" ಎಂದು ಅವರನ್ನು ಬಹಳ ಹೊಗಳಿದಳು.

ಇನ್ನೊಬ್ಬ ಹಿರಿಯ ಪ್ರಾಧ್ಯಾಪಕರನ್ನು "ಇವರು ಇಂದುಧರ್ ಅಂತ ಬಹಳ ಒಳ್ಳೆಯವರು, ತುಂಬಾ ಕೋ ಆಪರೇಟೀವ್ ನೇಚರ್" ಎಂದು ಏನೇನೊ ಹೊಗಳಿದಳು, ಹದಿನೈದು ಸಾವಿರ ಸಾಲಾ ಕೊಟ್ಟು ಸುರೇಶಾ ಇಂಗು ತಿಂದ ಮಂಗನಂತೆ ದೂರ ಎಲ್ಲೋ ಕುಳಿತಿದ್ದ.

ತೀರ ಅಪರಿಚಿತಳಂತೆ ತನಗೆ ಸಂಬಂಧವೇ ಇಲ್ಲದಂತೆ ಅವಳು ವರ್ತಿಸು ವುದನ್ನು ಸುರೇಶಾ ಹದಿನೈದು ದಿನ ಸಹಿಸಿದ.

ಒಂದು ದಿನ ಸುರೇಶಾ ಅವಳ ಬಳಿ ತಾನಾಗಿ ಹೋಗಿ "ಮೇಡಂ. ಸಾಲಾ ಕೊಟ್ಟು ಆರು ತಿಂಗಳಾಯಿತು. ಒಂದು ಪೈಸೆ ನೀವು ಹಿಂತಿರುಗಿಸಿಲ್ಲ" ಎಂದ.

"ನೋಡಿ ತಪ್ಪು ತಿಳಿದುಕೊಳ್ಳಬೇಡಿ. ನನ್ನನ್ನು ಅನಾವಶ್ಯಕವಾಗಿ ಮಾತಾಡಿಸಿಕೊಂಡು ಬರಬೇಡಿ. ನಮ್ಮ ಹಸ್ಬೆಂಡ್ ತುಂಬ ಸಂಶಯ ಸ್ವಭಾವದವರು. ನೀವು ಸಾಲದ ವಿಷಯ ನಮ್ಮ ತಮ್ಮನ ಹತ್ತಿರ ವಿಚಾರಿಸಿ ಕೊಳ್ಳಿ" ಎಂದಳು.

ಸುರೇಶನಿಗೆ ಅಪಮಾನದೊಂದಿಗೆ ಕೋಪ ಉಕ್ಕೇರಿತು. "ನಾನು ಅನವ್ಯಕವಾಗಿ ನಿಮ್ಮನ್ನು ಏಕೆ ಮಾತಾಡಿಸಲಿ ? ನಾನು ಸಾಲ ಕೊಟ್ಟದ್ದು ನಿಮಗೆ ನಿಮ್ಮ ತಮ್ಮನಿಗಲ್ಲ" ಸುಲಭಾ ಮಾತಾಡದೆ ಹೊರಟು ಹೋದಳು.

ಸುರೇಶಾ ತಾನು ಗೆದ್ದೆ ಎಂದು ಭಾವಿಸಿದ. ಆದರೆ ಆ ಸಂಜೆ ಪ್ರಿನ್ಸಿಪಾಲ್‌ರು ಸುರೇಶನಿಗೆ ಹೇಳಿ ಕಳಿಸಿದರು.

ಪ್ರಿನ್ಸಿಪಾಲರ ಕೊಠಡಿಯಲ್ಲಿ ಮಿಸೆಸ್ ಸುಲಭಾ ಅವಳ ತಮ್ಮ ಶ್ಯಾಮ ಸುಂದರ್ ನಿಂತಿದ್ದರು. "ಬನ್ನಿ ಮಿ|| ಸುರೇಶಾ......ನಿಮಗೆ ಒಂದು ವಿಷಯ ಹೇಳ್ಬೇಕಿತ್ತು" ಎಂದರು.

"ಏನು ವಿಷಯ ಸಾರ್ ?" ಎಂದ ಸುರೇಶನ ಮಾತು ಉದ್ವೇಗದಿಂದ ಕಂಪಾಗಿತ್ತು.

"ನೀವು ಇವರಿಗೇನೊ ಹದಿನೈದು ಸಾವಿರ ರೂ. ಸಾಲ ಕೊಟ್ಟಿದ್ದೀರಂತೆ ಈ ಲೇವಾದೇವಿ ವ್ಯವಹಾರಕ್ಕೆ ನಿಮಗೆ ಹಣ ಎಲ್ಲಿಂದ ಬರುತ್ತೆ ?"

ಸುರೇಶಾ ಉದ್ವೇಗದಿಂದ—

"ಹದಿನೈದು ಸಾವಿರ ರೂ. ಕಾಣಲಾಗದ ಬಡಪನಲ್ಲ ಸಾರ್ ನಾನು. ನಮ್ಮ ತಂದೆಗೆ ಇಪ್ಪತ್ತು ಎಕ್ಕರೆ ನೀರಾವರಿ ಭೂಮಿ ಗದ್ದೆ ಇದೆ" ಎಂದ.

ಪ್ರಿನ್ಸಿಪಾಲ್ ಸಮಾಧಾನವಾಗಿ—

"ಸಾಲಾ ಕೊಟ್ಟಿದ್ದೀರಿ ಸರಿ ಆದರೆ ಅದಕ್ಕಾಗಿ ಮಿಸೆಸ್ ಸುಲಭಾ ಅವರನ್ನು ಪೀಡಿಸಬೇಡಿ. ಆಕೆಗೆ ತೊಂದರೆ ಆಗತ್ತೆ. ಈ ವ್ಯವಹಾರ ಬರಿ ಗಂಡಸರಲ್ಲಿ ಇರಲಿ ಅಂತ ಅವರ ತಾಯಿಯೂ ಅಪೇಕ್ಷಿಸ್ತಾರೆ. ನೀವು ಸಾಲಾ ಹಿಂತಿರುಗಿಸೋ ಬಗ್ಗೆ ಮಿ|| ಶಾಮಸುಂದರ್ ಅವರ ಬಳಿ ವ್ಯವಹರಿಸಿ."

"ಆದರೆ ಸಾರ್......" ಎಂದು ಸುರೇಶಾ ಏನೋ ಹೇಳಲು ಹೋದ.

"ನನಗೆ ಎದುರು ಹೇಳಬೇಡಿ; ನಾನು ಹೇಳಿದಷ್ಟು ಕೇಳಿ. ನೀವು ಒಳ್ಳೆ ಗೃಹಸ್ಥ ಒಳ್ಳೆ ನಡವಳಿಕೆಯುಳ್ಳವರೆಂತ ನಂಬಿದ್ದೇನೆ. ನನ್ನ ನಂಬಿಕೆ ಸುಳ್ಳು ಮಾಡಬೇಡಿ. ನಿಮಗೆ ಸಾಲಾ ಕೊಟ್ಟಿದ್ದೀನಿ. ನನ್ನ ನಾಟಕದಲ್ಲಿ ಅಭಿನಯಿಸು ಅಂತ ಒತ್ತಾಯಿಸೋದೂ ಹಾಗು ಹೆಣ್ಣು ಮಕ್ಕಳು ಅಭಿನಯಿಸಲು ನಾಚೋಂಥಾ ಪ್ರೇಮ ಸನ್ನಿವೇಶಗಳನ್ನು ನಾಟಕಗಳಲ್ಲಿ ತುರುಕೋದು ಮಾಡಬೇಡಿ ನಾಟಕಗಳಲ್ಲಿ ವೈಚಾರಿಕತೆ ಹಾಗು ಬೌದ್ಧಿಕತೆ ಇರಲಿ. ನಿಮ್ಮ ವೈಯುಕ್ತಿಕ ಆಸೆ, ಅಪೇಕ್ಷೆಗಳನ್ನು ಕೆವಲಗಳನ್ನು ನಾಟಕಗಳಲ್ಲಿ ತುರುಕಬೇಡಿ" ಎಂದರು. ಸುರೇಶನಿಗೆ ಚಪ್ಪಲಿಯಲ್ಲಿ ಹೊಡೆಸಿ ಕೊಂಡಂತಾಯಿತು. ಕೆಲಸಕ್ಕೆ ಸೇರಿದ ಆರು ವರ್ಷಗಳಲ್ಲಿ ಮೊಟ್ಟ ಮೊದಲ ಭಾರಿ ಪ್ರಿನ್ಸಿಪಾಲರಿಂದ ವಿಚಾರಣೆ ಎದುರಿಸಬೇಕಾಗಿ ಬಂದಿತ್ತು.

ಪ್ರಿನ್ಸಿಪಾಲರು ಕೂತ್ಕೊ ಎಂದು ಸಹಾ ಹೇಳದೆ ಅವನು ನಿಂತಿದ್ದಂತೆಯೆ ಇಷ್ಟು ಸಂಭಾಷಣೆ ಹೇಳಿದ್ದರು.

"ಒಟ್ಟಿನಲ್ಲಿ ನಿಮ್ಮ ಸಾಲದ ಇನ್ಸ್‌ಸ್ಟಾಲ್‌ಮೆಂಟ್ ಮಿ|| ಶಾಮಸುಂದರ್ ಅವರನ್ನೇ ಕೇಳಿ, ಮಿಸೆಸ್|| ಸುಲಭಾ ಅವರನ್ನು ಹಿಂಸೆ ಮಾಡಬೇಡಿ" ಎಂದು ಕಡೆಯದಾಗಿ ಹೋಗುವಾಗ ಒಂದು ಬುದ್ಧಿವಾದ ಹೇಳಿ ಕಳಿಸಿದರು.

ಪ್ರಿನ್ಸಿಪಾಲರ ಚೇಂಬರಿನಿಂದ ಹೊರಬಂದ ಸುರೇಶನ ಮೈ ಉರಿಯುತ್ತಿತ್ತು. ತಾನು ವಿದ್ಯಾರ್ಥಿಯಾದಾಗಿನಿಂದ ಇಂತಹ ಸಂದರ್ಭಗಳಿಗೆ ಸಿಕ್ಕಿ ಹಾಕಿ ಕೊಂಡಿರಲಿಲ್ಲ.

ಎಲ್ಲರೊಂದಿಗೆ ಗೌರವ ಪೂರಿತವಾಗಿಯೇ ವರ್ತಿಸುತ್ತಿದ್ದ. ಆದರೆ ಮಿಸ್ ಸುಲಭಾಳ ಸ್ನೇಹಾ. ಆಕೆ ಈ ಕಾಲೇಜಿಗೆ ಬಂದು ಎರಡು ವರ್ಷಗಳಾಗಿತ್ತು. ಎಲ್ಲರ ಜೊತೆ ಸಲಿಗೆಯಾಗಿ ಇದ್ದವಳು ಅವಳೆ.

ವಿಜಯಳಿಂದ ವಧುಪರೀಕ್ಷೆಯ ಆ ಸಮಯದಲ್ಲಿ ತಿರಸ್ಕೃತನಾದಾಗ ಆ ದಿನಗಳಲ್ಲಿ ಏನೋ ಕಾರಣಕ್ಕೆ ಸುಲಭಳ ಸ್ನೇಹಾ ಮಾಡಿದ್ದ. ಆ ದಿನಗಳಲ್ಲಿ ಸ್ನೇಹದ ವ್ಯಾಪ್ತಿ ಮೀರಿ ಅತಿಯಾದ ಸಲಿಗೆ ತೋರಿದ್ದು ಅವಳೆ. ಮನೆಗೆ ಆಹ್ವಾನಿಸುತ್ತಿದ್ದದ್ದು, ಬಂದರೆ ಊಟಾ ಮಾಡಿ ಹೋಗಿ, ಎಂದು ಒಂಭತ್ತು ಗಂಟೆಯವರಿಗೆ ರಾತ್ರಿ ಇರಿಸಿ ಕೊಳ್ಳುತ್ತಿದ್ದದ್ದು ಎಲ್ಲಾ ನೆನಪಿಗೆ ಬಂತು. ವಿವಾಹಿತನಾದ ಮೇಲೆ ತಾನು ಕೊಂಚ ದೂರವಿದ್ದ. ಆದರೆ ತನ್ನಿಂದಾ ಹದಿನೈದು ಸಾವಿರ ರೂ. ಸಾಲಾ ಪಡೆದ ಮೇಲೆ ಅವಳೇ ಅತಿಯಾದ ಸಲಿಗೆ ತೋರಿದ್ದು ತನ್ನ ಭುಜದ ಸೊಂಕಿನಲ್ಲಿಯೇ ಇರುತ್ತಿದ್ದಳು. ನಾಟಕ ತಾನು ಬರೆಯುವಾಗಲೂ ಅವಳೇ ಉತ್ಸಾಹವನ್ನು ತೋರಿದ್ದು. ಆದರೆ ಆ ನಾಟಕ ರಿಹರ್ಸಲ್ ಮಾಡುವ ವೇಳೆಗೆ ಅವಳ ಜೀವನದಲ್ಲಿ ಒಂದು ತಿರುವು ನಡೆದಿತ್ತು.

ಆ ತಮ್ಮಣ್ಣಾ ಎಂಬ ವ್ಯಕ್ತಿ ಅವಳಿಗೆ ಒಂದು ವರಾ ತೋರಿಸಿದ್ದ. ಆ ವರಾ ಅವಳನ್ನು ವಿವಾಹವಾಗಲು ಒಪ್ಪಿದ. ಆಗಲೆ ಅವಳು ತನ್ನಿಂದಾ ವಿಮುಖಳಾದದ್ದು. ಮೊದಲು ನಾಟಕದಲ್ಲಿ ಅಭಿನಯಿಸಲು ನಿರಾಕರಿಸಿದಳು. ಅವನಿಗೆ ತುಂಬಾ ನಿರಾಶೆಯಾಗಿತ್ತು. ಆದರೂ ಸೋಶಿಯಲ್ ನೆಪದಲ್ಲಿ ಕೊಂಚ ಅತಿರೇಕ ಎನಿಸುವಷ್ಟು ಸಲಿಗೆಯಲ್ಲಿದ್ದಳು.

ಕೈ ಹಿಡಿದ ಪತ್ನಿಯನ್ನು ಲಕ್ಷಿಸದೇ ಅವಳೊಡನೆ ಆತ್ಮೀಯವಾಗಿದ್ದ. ವಿಜಯ ಮುನಿದು ಓಡಿ ಹೋದಳು. ತನ್ನ ಸಂಸಾರದಲ್ಲಿ ಒಂದು ಬಿರುಕು ಉಂಟಾಯಿತು. ಆದರೆ ಇವಳು ಮಾತ್ರ ವಿವಾಹವಾದ ಮೇಲೆ ಗರತಿ ಗೌರಮ್ಮ.

ಪ್ರಿನ್ಸಿಪಾಲರಿಂದ ತನಗೆ ಬುದ್ಧಿವಾದ ಹೇಳಿಸಿ ತನ್ನನ್ನು ದೂರಾ ಇಡುವಷ್ಟು ತಾನು ಕುಖ್ಯಾತನೆ ? ಒಬ್ಬ ಗೂಂಡಾ ಅಥವ ಒಬ್ಬ ಕಾಮಣ್ಣ ನಿಂದ ರಕ್ಷಣೆ ಪಡೆದಂತೆ ತನ್ನಿಂದಾ ದೂರಾ ಇರಲು ಪ್ರಿನ್ಸಿಪಾಲರ ರಕ್ಷಣೆ ಪಡೆಯುತ್ತಿದ್ದಾಳೆ.

ವಿಹ್ವಲತೆ, ಅಪಮಾನದಿಂದ ಅವನು ಕುದಿಯುತ್ತಿದ್ದ ಆ ದಿನಗಳಲ್ಲಿ ವಿಜಯಳ ಪತ್ರ ಬಂತು, ಆ ಸಂದರ್ಭದಲ್ಲಿ ವಿಜಯಳ ಪತ್ರದ ಅಕ್ಷರ, ಅಕ್ಷರವೂ ನ್ಯಾಯ ಎನಿಸಿತು.

ಯಾರನ್ನೋ ಮೆಚ್ಚಿಸಲು, ಯಾರಿಂದಲೊ ಒಂದು ಒಳ್ಳೆ ಮಾತು ಕೇಳಲು ತಾನು ಹೆಂಡತಿಯನ್ನು ಶೋಷಿಸಿದೆ ಎನಿಸಿ ಅವನಿಗೆ ತುಂಬ ಪಶ್ಚಾತಾಪವಾಯಿತು. ಮೊದಲು ತನ್ನ ಕೆಲಸಕ್ಕೆ ಒಂದು ತಿಂಗಳು ರಜಾ ಹಾಕಿದ. ತಾವು ಉಪಾಧ್ಯಾಯರು ಅಭಿನಯಿಸುತ್ತಿದ್ದ ನಾಟಕ ಕ್ಯಾನ್ಸಲ್ ಮಾಡಿಸಿ ; ವಿದ್ಯಾರ್ಥಿ ಸೆಕ್ರೆಟರಿ ರಾಮಾನುಜಮ್‌ಗೆ ತಿಳಿಸಿ "ಮರ್ಚಂಟ್ ಆಫ್‌ವೆನಿಸ್" ನಾಟಕ ಸಿದ್ಧ ಪಡಿಸಲು ತಿಳಿಸಿದ. ರಾಮಾನುಜಮ್ ಆನಂದದಿಂದ ಆ ಕಾರ್ಯಭಾರ ಹೊತ್ತ. ಪ್ರತಿಭಾವಂತರಾದ ವಿದ್ಯಾರ್ಥಿ ಹಾಗು ವಿದ್ಯಾರ್ಥಿನಿಯರನ್ನು ಆರಿಸಿ ಅವನು ಅವರಿಗೆ ಮರ್ಚೆಂಟ್ ಆಫ್ ವೆನ್ನಿಸ್. ಅಭ್ಯಾಸ ಮಾಡಿಸತೊಡಗಿದ.

ಒಂದು ತಂಡ ವಿದ್ಯಾರ್ಥಿಗಳು ಈಗ ಸುರೇಶನಿಗೆ ತೃಪ್ತರಾಗಿದ್ದರು. ಅವರ ಸಹಾಯದಿಂದ ಎಂಟೇ ದಿನಗಳಲ್ಲಿ ಒಂದು ಒಳ್ಳೆಯ ಮನೆ ಸಿಕ್ಕಿತು. ಮನೆ ಬಾಡಿಗೆ ನಾನ್ನೂರು: ಆದರೆ ಮನೆ ಪುಟ್ಟದಾಗಿ ಅಚ್ಚು ಕಟ್ಟಾಗಿತ್ತು.

ಪ್ರವೇಶಿಸುತ್ತಲೆ ಹಜಾರ, ಹಜಾರದ ಎಡಬಡಿಗೆ ಎರಡು ಕೋಣೆ. ಬಲಬದಿಗೆ ಎರಡು ಕೋಣೆ.

ಹಜಾರದ ಎಡ ಬದಿಯ ಕೋಣೆಗಳಲ್ಲಿ ಮೊದಲನೆಯದು ಬೆಡ್ ರೂಂ. ಎರಡನೆಯದು ಅಡಿಗೆ ಮನೆ. ಬಲಭಾಗದ ಮೊದಲ ಕೋಣೆ ಸ್ಟೋರ್ ರೂಂ ಅಥವಾ ಅತಿಥಿಗಳು ಬಂದರೆ ಮಲಗುವ ವ್ಯವಸ್ಥೆ ಇತ್ತು. ಇನ್ನೊಂದು ವಿಶಾಲವಾದ ಬಚ್ಚಲು ಮನೆ. ಬಚ್ಚಲು ಮನೆಯ ಎದುರು ಗೋಡೆಗೆ ಬಾಗಿಲು. ಆ ಬಾಗಿಲು ತೆರೆದರೆ ಒಂದು ಸಣ್ಣ ಶೌಚ ಗೃಹ. ಬಾವಿಗೆ ಪೈಪ್ ಹಾಕಿ ನಳಾ ಜೋಡಿಸಿದ್ದರಿಂದ ಇಪ್ಪತ್ನಾಲ್ಕು ಗಂಟೆ ನೀರಿನ ಸರಬರಾಜು ಇತ್ತು.

ಮನೆಗೆ ಮೂರು ತಿಂಗಳ ಅಡ್ವಾನ್ಸ್ ಕೊಟ್ಟು ಮನೆ ತನ್ನ ಅಧೀನಕ್ಕೆ ತೆಗೆದುಕೊಂಡ. ಇಬ್ಬರು ವಿದ್ಯಾರ್ಥಿಗಳ ಸಹಾಯ ತೆಗೆದುಕೊಂಡು ಎಲ್ಲಾ

ಸಾಮಾನು ಸಾಗಿಸಿ ಹೊಸ ಮನೆ ವಾಸಕ್ಕೆ ಸಿದ್ಧತೆ ಗೊಳಿಸಿದ. ಮನೆಯನ್ನು ತಾನೇ ಕೈಯಾರೆ ಸಿದ್ಧ ಮಾಡಿದ. ಹಜಾರದ ಒಂದು ಬದಿಗೆ ಸೋಫಾಸೆಟ್ ಹಾಕಿ, ಅದರ ಎದುರಿಗೆ ಟಿ.ವಿ. ಸ್ಟ್ಯಾಂಡ್ ಇಟ್ಟು ಟಿ.ವಿ. ಜೋಡಿಸಿದ. ಬೆಡ್ ರೂಮಲ್ಲಿ ಜೋಡಿಮಂಚಗಳು ಒಂದು ಬದಿಗೆ, ಎದುರಿಗೆ ಗಾಡ್ರೇಜ್ ಅಲಮಾರು ಜೋಡಿಸಿದ. ಅಡಿಗೆ ಮನೆಯಲ್ಲಿ ಅಂದವಾಗಿ ಅಡಿಗೆ ಮನೆ ಸಾಮಾನು ಜೋಡಿಸಿದ. ಎರಡು ದಿನದ ನಂತರ ವಿಜಯಳಿಗೆ ಕಾಗದ ಬರೆದ.

ಪ್ರೀತಿಯ ವಿಜಿ......

ನಿನ್ನ ಹಿಂದಿನ ಕಾಗದಕ್ಕೆ ಹದಿನೈದು ದಿನಗಳ ನಂತರ ಉತ್ತರ ಕೊಡುತ್ತಿದ್ದೇನೆ. ನೀನು ಕಾಗದದಲ್ಲಿ ಬರೆದ ಪ್ರತಿಯೊಂದಕ್ಕು ಪ್ರತಿವಾಕ್ಯಕ್ಕು ಬದ್ಧನಾಗಿದ್ದೇನೆ. ನೀನು ಹೇಳಿದಂತೆ ಕೇಳುತ್ತೇನೆ.

ಪುರಾಣಗಳಲ್ಲಿ ಸತ್ಯಾಭಾಮ ವ್ರತಾ ಎಂದು ಶ್ರೀ ಕೃಷ್ಣನನ್ನು ಬಣ್ಣಿಸುತ್ತಾರಲ್ಲವೆ ವಿಜಿ, ನಾನು ವಿಜಯಭಾಮ ವ್ರತನಾಗಿರುತ್ತೇನೆ. ವಿಜಿ ನಿನಗೆ ತುಂಬ ಸೋತಿದ್ದೇನೆ. ಇನ್ನು ಜಾಸ್ತಿ ದಿನ ಕಾಯಿಸ ಬೇಡಾ ನಾಲ್ಕುವರೆ ತಿಂಗಳಾಯಿತು.

ವಿ|| ಸುಲಭಾ ಈಗ ಮಿಸೆಸ್ ಸುಲಭಾ ಆಗಿದ್ದಾಳೆ. ಅವಳ ಸ್ನೇಹದಿಂದ ಈಗ ದೂರವಾಗಿದ್ದೇನೆ. ಅವಳ ತಮ್ಮ ಈಗ ಪ್ರತಿ ತಿಂಗಳು ಐನೂರು ರೂ. ಕೊಡುತ್ತಿದ್ದಾನೆ.

ಯಾವುದೋ ಮುರ್ಖತನದಿಂದ ದೊಡ್ಡಸ್ತಿಕೆಯಿಂದ ಸಾಲಾ ಕೊಟ್ಟದು ತಪ್ಪಾಯಿತು ವಿಜಿ.

ಇರಲಿ ನಿನ್ನ ಚೈನ್ ಹಾಗು ನಿನ್ನ ತವರಿನ ಬಾಬತ್ತು ಐದು ಸಾವಿರ ರೂ.ಗಳು ನಿನಗೆ ಒಂದು ವರ್ಷದಲ್ಲಿ ತಲುಪಿಸುವ ಭಾರ ನನ್ನದು. ವಿಜಿ ಈಗ ನೀನು ಹೇಳಿದಂತೆ ಒಂದು ಚಿಕ್ಕಮನೆ ಗೊತ್ತು ಮಾಡಿದ್ದೇನೆ.

ಮನೆ ಚಿಕ್ಕದಾದರೂ ಅಚ್ಚುಕಟ್ಟಾಗಿದೆ. ಒಬ್ಬ ಕೆಲಸದವಳನ್ನು ಸಹ ಗೊತ್ತು ಮಾಡಿದ್ದೇನೆ. ಕಾಲೇಜಿನ ವಾರ್ಷಿಕ ಚುನಾವಣೆ

ಬಂದೊಡನೆ ಸೆಕ್ರೆಟರಿ ಕೆಲಸಕ್ಕೆ ರಾಜಿನಾಮೆ ಕೊಡುತ್ತೇನೆ. ಅಸೋಸಿಯೇಷನ್ಸ್ ಮೀಟಿಂಗ್ ಇನ್ನು ಮುಂದಿನ ಎರಡು ತಿಂಗಳು ಎಷ್ಟು ಭಾರಿ ಮಾತ್ರ ನಡೆಯಲಿದೆ. ಅದನ್ನು ಕಾಲೇಜಿನಲ್ಲಿಯೆ ಮಾಡಿ ಮುಗಿಸುತ್ತೇನೆ. ಮನೆಯಲ್ಲಿ ಮಾಡಿ ವೃಥಾ ನಿನಗೆ ತೊಂದರೆ ಕೊಡುವುದಿಲ್ಲ.

ವಿಜಿ ನಾನು ನಿನ್ನವನು. ಈ ಮನೆ ನಿನ್ನದು. ನಿನಗಾಗಿ ಕಾಯುತ್ತಿದ್ದೇನೆ. ಈ ಕಾಗದ ತಲುಪಿದೊಡನೇ ನೀನು ಬಾ. ಬಂದು ಕರೆದುಕೊಂಡು ಹೋಗಿ ಎಂದು ನೀನು ಆಜ್ಞೆ ವಿಧಿಸಿದರೆ ಬರಲು ನಾನು ಸಿದ್ಧ.

ಇಂತಿ॥ ನಿನ್ನ ಪ್ರೀತಿಯ
ಸುರೇಶ.

* * * * *

ತನ್ನ ಕಾಗದ ಬಂದ ಹದಿನೈದು ದಿನದ ಮೇಲೆ ಸುರೇಶನ ಉತ್ತರ ಬಂದಿತು. ಸುರೇಶನ ಈ ಸಲದ ಕಾಗದ ನೋಡಿ ಅವಳಿಗೆ ಸಂಪೂರ್ಣ ತೃಪ್ತಿ ಆಯಿತು, ತಕ್ಷಣವೇ ತಾನೇ ಉತ್ತರ ಬರೆದಳು.

ಪ್ರೀತಿಯ ಸುರೇಶ್,

ನಿಮ್ಮ ಕಾಗದ ತಲುಪಿತು. ನಾಳಿದ್ದು ಬುಧವಾರ ತವರಿನ ಬಳುವಳಿಗಳೊಂದಿಗೆ ನಾನು ಕಾರಿನಲ್ಲಿ ನೀವು ಹೇಳಿದ ಹೊಸ ಮನೆಗೆ ಬರುತ್ತೇನೆ. ನನ್ನನ್ನು ಬಿಡಲು ನಮ್ಮ ತಾಯಿತಂದೆಯರೇ ಬರುತ್ತಾರೆ. ನನಗೆ ಈಗ ನಿಮ್ಮ ಮೇಲೆ ಯಾವ ಬಗೆಯ ವಿರಸಾ ಅಥವಾ ಕೋಪಗಳಿಲ್ಲ. ಸಂಸಾರ ಎಂದ ಮೇಲೆ ಗಂಡ ಹೆಂಡತಿ ಇಬ್ಬರೂ ಒಬ್ಬರ ಮನಸು ಒಬ್ಬರು ಅರಿತು ನಡೆಯ ಬೇಕಲ್ಲವೆ?

ನೀವು ವಿಜಿಯಭಾಮ ವ್ರತರಾಗಿದ್ದೀರೆಂದು ಸಂತೋಷವಾಯಿತು. ಆದರೆ ನಿಮ್ಮ ಒಳ್ಳೆಯತನ ದುರುಪಯೋಗ ಪಡಿಸಿಕೊಂಡು ನಿಮ್ಮನ್ನು ಕೈಗೊಂಬೆಯಂತೆ ಕುಣಿಸುವುದಿಲ್ಲ.

ನಾನು ಸಹ ನಿಮ್ಮ ಮನಸ್ಸಿನ ಅಪೇಕ್ಷೆಯಂತೆ ನಡೆಯುತ್ತೇನೆ. ಇಬ್ಬರು ಮನಸು ಒಂದಾಗಿ ಸಂಸಾರದಲ್ಲಿ ಹಾಲು ಜೇನು ಸುರಿಯಲಿ ನಮ್ಮ ಬದುಕು ಬಂಗಾರವಾಗಲಿ" ಎಂದು ಹಾರೈಸುತ್ತೇನೆ.

ಇಂತಿ॥ ನಿಮ್ಮ ಪ್ರೀತಿಯ
ವಿಜಯ

ಕಾಗದ ಪೋಸ್ಟ್ ಮಾಡಿದ ಮೇಲೆ ಅವಳ ಮನಸು ಶಾಂತವಾಯಿತು.

ತಾಯಿತಂದೆಯರ ಜೀವನ ಈಗ ಸುಂದರವಾಗಿ ಸುಖಮಯವಾಗಿತ್ತು. ಇಬ್ಬರು ತುಂಬ ಅನ್ಯೋನ್ಯವಾಗಿದ್ದರು. ರಾಯರು ಮಗನ ಆಫೀಸಿನಲ್ಲಿಯೆ ಒಂದು ಮುಖ್ಯ ಉದ್ಯೋಗವನ್ನು ನಿರ್ವಹಿಸುತ್ತಿದ್ದರು.

ಮ್ಯಾನೇಜರ್ ಎಂದು ಆ ಹುದ್ದೆಯ ಹೆಸರು. ಆಫೀಸಿನಲ್ಲಿ ಇಬ್ಬರು ಗುಮಾಸ್ತರು. ಇಬ್ಬರು ಟೈಪಿಸ್ಟ್, ಇಬ್ಬರು ಜವಾನರಿದ್ದರು.

ಮಗನಿಗೆ ಬಂದ ಫೋನ್ ಕಾಲ್‌ಗಳಿಗೆ ಉತ್ತರಿಸುವುದು. ಬಂದ ಮುಖ್ಯ ಕಾಗದ ಪತ್ರಗಳನ್ನು ಪರಿಶೀಲಿಸುವುದು ಅವರ ಕೆಲಸ. ಶನಿವಾರ ಭಾನುವಾರ ಪತ್ನಿಯೊಡನೆ ದೇವಸ್ಥಾನ, ಲಾಲ್‌ಬಾಗ್, ಕಬ್ಬನ್‌ಪಾರ್ಕ್ ಎಲ್ಲಾ ಕಡೆ ತಿರುಗಾಡಲು ಹೋಗುತ್ತಿದ್ದರು. ತಾವು ದೊಡ್ಡ ಮಗ ಕೃಷ್ಣನ ಬಳಿಯೆ ಇರಲು ತಾಯಿಯೂ ಅಪೇಕ್ಷಿಸಿದ್ದರಿಂದ ತಂದೆ ಆಕೆಯ ಮಾತಿಗೆ ಬೆಲೆ ಕೊಟ್ಟು ಅಲ್ಲೇ ನೆಲೆಸಿದರು. ಮಹಡಿಯ ಮೇಲೆ ತಂದೆ ತಾಯಿಯರ ಸಾಮ್ರಾಜ್ಯ. ಅಂಜಮ್ಮನ ಹೊರತು ಉಳಿದೆಲ್ಲಾ ಆಳುಕಾಳುಗಳು, ಅಡಿಗೆಯವರು ಮೊದಲಿನಂತೆ ಇದ್ದರು. ಇಂದಿರಮ್ಮ ಈಗ ಮಗನ ಕಾಲದಲ್ಲಿ ರಾಣಿ ವೈಭೋಗ ಅನುಭವಿಸುತ್ತ ಸುಖವಾಗಿದ್ದರು.

ತಾಯಿ ತಂದೆಯರೊಡನೆ ಆರಾಮವಾಗಿ ಹದಿನೈದುದಿನ ತೌರಿನ ಸುಖ ಅನುಭವಿಸಿದ ಮೂರು ದಿನಗಳ ನಂತರ ಬುಧವಾರ ತಾನು ಮೈಸೂರಿಗೆ ಹೊರಡಲಿರುವುದು ಪ್ರಕಟಿಸಿದಳು.

"ಅಂತು ನೀನು ಬಂದು ಎಲ್ಲಾ ಕಾರ್ಯ ಜಯಗಳಿಸಿದೆ. ಈಗ ಅಪ್ಪಾ ಅಮ್ಮ ಸುಖವಾಗಿದ್ದಾರೆ. ತವರೂಂತ ಆಗಾಗ ಬರ್ತೀರಮ್ಮಾ" ಎಂದು ಕೃಷ್ಣ ಹಾರ್ಧಿಕವಾಗಿ ನುಡಿದು, ತಂದೆ ತಾಯಿಗಳ ಜೊತೆ ಅವಳನ್ನು ಕಾರಿನಲ್ಲಿ ಮೈಸೂರಿಗೆ ಕಳಿಸಿಕೊಡಲು ಒಪ್ಪಿದ.

ವಿಜಯ ಆದಿನ ಸಂಜೆ ತಾಯಿಯೊಡನೆ ತೋಟದಲ್ಲಿ ಕುಳಿತಿದ್ದರು. ಹಸಿರು ರೇಶ್ಮೆಯ ಸೀರೆಯುಟ್ಟು, ಮಗ ಮಾಡಿಸಿದ ವಜ್ರದವಾಲೆ ತೊಟ್ಟು, ತುರುಬಿಗೆ ಮಲ್ಲಿಗೆ ದಂಡೆ ಮುಡಿದ ತಾಯಿ ಅಗಲವಾದ ಕುಂಕುಮ ಹಣೆಯಲ್ಲಿ ನಗುತ್ತಿರಲು ವನದೇವತೆಯಂತೆ ಕಂಗೊಳಿಸಿದರು.

ಆಕಾಶದಲ್ಲಿ ಹೊಂಬಣ್ಣ ಎರಚಾಡಿತ್ತು. "ಬಾನಲ್ಲಿ ಬಂಗಾರ ಎರಚಾಡಿದೆ...... ಎದೆಯಲ್ಲಿ ಸಂತೋಷ ಹರಿದಾಡಿದೆ. ಮನದಲ್ಲಿ ಉಲ್ಲಾಸಾ ತಾ...... ತುಂಬಿದೆ...... ನಮ್ಮ ಬದುಕೆಲ್ಲಾ...... ಬಂಗಾರವಾಗಿದೆ...... ಬಂಗಾರವಾಗಿದೆ......"

ಎಂದು ವಿಜಯ ಸಣ್ಣ ಧನಿಯಲ್ಲಿ ಇಂಪಾಗಿ ಹಾಡಿದಳು. ಇಂದಿರಮ್ಮನ ಮುಖದಲ್ಲಿ ತೃಪ್ತಿ ತುಂಬಿತು. ಅವರು ಸಂತಸದಿಂದ ತಲೆ ಎತ್ತಿ ಆಕಾಶ ನೋಡುತ್ತಾ....

"ಹೌದು ! ವಿಜಿ....ಬಾನಲ್ಲಿ ಬಂಗಾರ ಹರಡಿದೆ" ಎಂದು ಹೃದಯ ತುಂಬಿ ನುಡಿದಾಗ ವಿಜಯ [illegible]

DEPARTMENT OF PUBLIC LIBRARIES
STATE CENTRAL LIBRARY, BANGALORE
COPY RIGHT BUREAU




ಕೀರ್ತಿ ಪ್ರಕಾಶನ

2. ಎಸ್.ಡಿ.ಎಂ. ಲೇನ್.

ಮನವರ್ತಿಪೇಟೆ. ಬೆಂಗಳೂರು-53